ಗುರುವಾರ, ಜೂನ್ 19, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 169 | ಪುಟ 16
prajavani.net prajavani
www.prajavani.net

ಕಂಗನಾ ಪ್ರಚಾರ ರಾಯಭಾರಿ

ಸೆಪ್ಟೆಂಬರ್ 26ರಿಂದ ನವದೆಹಲಿಯಲ್ಲಿ ನಡೆಯಲಿರುವ ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನ ಪ್ರಚಾರ ರಾಯಭಾರಿಯನ್ನಾಗಿ ನಟ–ಸಂಸದೆ ಕಂಗನಾ ರನೌತ್ ಅವರನ್ನು ನೇಮಕ ಮಾಡಲಾಗಿದೆ



ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಪ್ರಯೋಗಾಲಯದ ವಿರುದ್ಧ ಎಫ್‌ಐಆರ್

ತೆಲಂಗಾಣದ ಮೆಹಬೂಬ್‌ನಗರ ಜಿಲ್ಲೆಯ ಪಲಮುರು ಬಯೋಸೈನ್ಸಸ್ ಸಂಸ್ಥೆ ವಿರುದ್ಧ ಪೊಲೀಸರು ಪ್ರಾಣಿಹಿಂಸೆ ಆರೋಪದ ಪ್ರಕರಣ ದಾಖಲಿಸಿದ್ದಾರೆ.



ಸೆನ್ಸೆಕ್ಸ್ 81,444 | ನಿಫ್ಟಿ 24,812 | $/₹ 86.43 | ಚಿನ್ನ (Std. 10g) ₹1.04 ಲಕ್ಷ (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1.16 ಲಕ್ಷ (ಬೆಂಗಳೂರು)

ಭಾರತ ಮಧ್ಯಸ್ಥಿಕೆ ಒಪ್ಪಲ್ಲ: ಮೋದಿ

ಮಾತುಕತೆ ಬೆನ್ನಲ್ಲೇ 'ಸಂಘರ್ಷ ನಿಲ್ಲಿಸಿದ್ದು ನಾನೇ' ಎಂದು ಟ್ರಂಪ್ ಪುನರುಚ್ಚಾರ



ಅಮೆರಿಕ ಅಧ್ಯಕ್ಷ ಟ್ರಂಪ್– ಭಾರತದ ಪ್ರಧಾನಿ ಮೋದಿ (ಸಂಗ್ರಹ ಚಿತ್ರ)

ಮುಖ್ಯಾಂಶಗಳು

- ಉಭಯ ನಾಯಕರ ಮಧ್ಯೆ 35 ನಿಮಿಷ ದೂರವಾಣಿ ಮಾತುಕತೆ
- ಕದನ ವಿರಾಮ ಕುರಿತ 'ಸಂಕಥನ' ನಿರಾಕರಿಸಿದ ಮೋದಿ
- ಸಂಭಾಷಣೆ ವಿಷಯವಾಗಿ ಬಿಜೆಪಿ– ಕಾಂಗ್ರೆಸ್ ಜಟಾಪಟಿ

ಕೆನಾನಸ್ಕಿಸ್ (ಕೆನಡಾ)/ ನವದೆಹಲಿ (ಪಿಟಿಐ): 'ಕಳೆದ ತಿಂಗಳು ಭಾರತ ಹಾಗೂ ಪಾಕಿಸ್ತಾನ ಸೇನೆಗಳ ನಡುವೆ ನೇರ ಮಾತುಕತೆ ನಡೆಸಿದ ನಂತರವೇ ಸೇನಾ ಸಂಘರ್ಷಕ್ಕೆ ವಿರಾಮ ಘೋಷಿಸಲಾಗಿತ್ತು. ಈ ವಿಚಾರದಲ್ಲಿ ಅಮೆರಿಕದ ಮಧ್ಯಸ್ಥಿಕೆ ಇರಲಿಲ್ಲ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಸ್ಪಷ್ಟ ಮಾತುಗಳಲ್ಲಿ ಹೇಳಿದ್ದಾರೆ.

ಈ ಮೂಲಕ ಮೋದಿ ಅವರು, 'ಭಾರತ ಮತ್ತು ಪಾಕಿಸ್ತಾನ ನಡುವೆ ನಾನು ಮಧ್ಯಸ್ಥಿಕೆ ವಹಿಸಿ, ಉಭಯ ದೇಶಗಳ ನಡುವಿನ ಸಂಘರ್ಷ ಶಮನ ಮಾಡಿದೆ' ಎಂಬ ಟ್ರಂಪ್ ಅವರ 'ಸಂಕಥನ'ವನ್ನು ಸಾರಾಸಗಟಾಗಿ ಅಲ್ಲಗಳೆದಿದ್ದಾರೆ.

ಟ್ರಂಪ್ ಅವರೊಂದಿಗೆ ಬುಧವಾರ ದೂರವಾಣಿ ಮೂಲಕ 35 ನಿಮಿಷ ಮಾತನಾಡಿದ ಮೋದಿ ಈ ಮಾತುಗಳನ್ನು ದೃಢವಾಗಿ ಹೇಳಿದ್ದಾರೆ ಎಂದು ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ ಹೇಳಿದ್ದಾರೆ.

'ಭಾರತವು ಎಂದಿಗೂ ಮಧ್ಯಸ್ಥಿಕೆಯನ್ನು ಒಪ್ಪಿಕೊಂಡಿಲ್ಲ, ಒಪ್ಪಿಕೊಳ್ಳುವುದೂ ಇಲ್ಲ. ಪಾಕಿಸ್ತಾನದ ಮನವಿ ಮೇರೆಗೆ ಸಂಘರ್ಷ ಶಮನ ಕುರಿತಂತೆ ಉಭಯ ದೇಶಗಳ ಮಿಲಿಟರಿ ಅಧಿಕಾರಿಗಳ ಮಟ್ಟದಲ್ಲಿ ಚರ್ಚೆ ನಡೆಯಿತು ಎಂಬುದಾಗಿ ಮೋದಿ ಹೇಳಿದ್ದಾರೆ' ಎಂದು ಮಿಸ್ರಿ ತಿಳಿಸಿದ್ದಾರೆ.

'ಭಯೋತ್ಪಾದನೆಯನ್ನು ಭಾರತ ಯುದ್ಧವೆಂದೇ ಪರಿಗಣಿಸುತ್ತದೆ. ಅಲ್ಲದೇ, ಆಪರೇಷನ್ ಸಿಂಧೂರ ಇನ್ನೂ ಮುಂದುವರಿಯುವುದಾಗಿ ಮೋದಿ ಹೇಳಿದ್ದಾರೆ' ಎಂದೂ ಅವರು ವಿವರಿಸಿದ್ದಾರೆ.

> **ತಾನು ಎದುರಿಸುವ ಸಮಸ್ಯೆಗಳ ಕುರಿತು ಭಾರತ ಯಾರ ಮಧ್ಯಸ್ಥಿಕೆಯನ್ನೂ ಒಪ್ಪುವುದಿಲ್ಲ. ಈ ಬಗ್ಗೆ ನಮ್ಮಲ್ಲಿ ಸಂಪೂರ್ಣ ರಾಜಕೀಯ ಒಮ್ಮತ ಇದೆ**
> **ನರೇಂದ್ರ ಮೋದಿ,** ಪ್ರಧಾನಿ

ಮೋದಿ ಅವರೊಂದಿಗೆ ದೂರವಾಣಿ ಸಂವಾದ ನಡೆಸಿದ ಕೆಲವೇ ಗಂಟೆಗಳಲ್ಲಿ ಟ್ರಂಪ್, 'ಭಾರತ ಮತ್ತು ಪಾಕಿಸ್ತಾನ ನಡುವಿನ ಸಂಘರ್ಷವನ್ನು ನಾನೇ ನಿಲ್ಲಿಸಿದೆ' ಎಂದು ಪುನರುಚ್ಚರಿಸಿದ್ದಾರೆ. ಅವರು ಹೀಗೆ ಹೇಳುತ್ತಿರುವುದು ಇದು ಹತ್ತನೇ ಬಾರಿಯಾಗಿದೆ.

'ನಾನು ಪಾಕಿಸ್ತಾನವನ್ನು ಪ್ರೀತಿಸುತ್ತೇನೆ. ಮೋದಿ ಒಬ್ಬ ಅದ್ಭುತ ವ್ಯಕ್ತಿ. ಕಳೆದ ರಾತ್ರಿ ನಾನು ಮೋದಿಯೊಂದಿಗೆ ಮಾತನಾಡಿದ್ದೇನೆ. ಅಮೆರಿಕ ಮತ್ತು ಭಾರತ ಶೀಘ್ರವೇ ವ್ಯಾಪಾರ ಒಪ್ಪಂದ ಮಾಡಿಕೊಳ್ಳಲಿವೆ. ಎರಡೂ ದೇಶಗಳ ನಡುವಿನ ಸಂಘರ್ಷ ನಿಲ್ಲಿಸಿದ್ದು ನಾನೇ' ಎಂದು ಅವರು ಹೇಳಿದ್ದಾರೆ.


▶9
ಇನ್ನಷ್ಟು ಸುದ್ದಿಗಳು ▶9

ಚಿನಕುರುಳಿ ಪ್ರಕಾಶ್ ಶೆಟ್ಟಿ



ಆರ್. ದಿಲೀಪ್, ಶಿವಲಿಂಗಪ್ಪಗೆ ಸಾಹಿತ್ಯ ಅಕಾಡೆಮಿ ಪುರಸ್ಕಾರ

ಪ್ರಜಾವಾಣಿ ವಾರ್ತೆ



ದಿಲೀಪ್ ಕುಮಾರ್



ಶಿವಲಿಂಗಪ್ಪ ಹಂದಿಹಾಳು

ನವದೆಹಲಿ: ಕೇಂದ್ರ ಸಾಹಿತ್ಯ ಅಕಾಡೆಮಿಯ 2025ನೇ ಸಾಲಿನ 'ಯುವ ಪುರಸ್ಕಾರ'ವು ಯುವ ಲೇಖಕ ಆರ್. ದಿಲೀಪ್ ಕುಮಾರ್ ಅವರ 'ಪಚ್ಚೆಯ ಜಗುಲಿ' ವಿಮರ್ಶಾ ಸಂಕಲನಕ್ಕೆ ಹಾಗೂ 'ಬಾಲ ಸಾಹಿತ್ಯ ಪುರಸ್ಕಾರ'ವು ಲೇಖಕ ಕೆ.ಶಿವಲಿಂಗಪ್ಪ ಹಂದಿಹಾಳು ಅವರ 'ನೋಟ್ ಬುಕ್' ಮಕ್ಕಳ ಕಥಾಸಂಕಲನಕ್ಕೆ ಲಭಿಸಿದೆ. ಪ್ರಶಸ್ತಿ ಪುರಸ್ಕೃತರು ತಲಾ ₹50 ಸಾವಿರ ನಗದು ಹಾಗೂ ಫಲಕಗಳನ್ನು ಪಡೆಯಲಿದ್ದಾರೆ. ಪ್ರಶಸ್ತಿ ಪ್ರದಾನ ಸಮಾರಂಭ ಶೀಘ್ರ ನಡೆಯಲಿದೆ ಎಂದು ಅಕಾಡೆಮಿ ತಿಳಿಸಿದೆ.

▶7

ಫಾಸ್ಟ್‌ಟ್ಯಾಗ್ ಪಾಸ್

ಪ್ರಜಾವಾಣಿ ವಾರ್ತೆ



ನವದೆಹಲಿ: ಫಾಸ್ಟ್‌ಟ್ಯಾಗ್ ಆಧಾರಿತ ವಾರ್ಷಿಕ ಪಾಸ್ ವ್ಯವಸ್ಥೆಯನ್ನು ಕೇಂದ್ರ ಸರ್ಕಾರ ರೂಪಿಸಿದೆ. ವಾರ್ಷಿಕ ಪಾಸ್‌ನ ಮೌಲ್ಯ ₹3,000. ರಾಷ್ಟ್ರೀಯ ಹೆದ್ದಾರಿಗಳನ್ನು ಬಳಸಲು ವಾಣಿಜ್ಯೇತರ ವಾಹನಗಳಿಗೆ ಇದು ಅನುವು ಮಾಡಿಕೊಡಲಿದೆ.

ಈ ಪಾಸ್ ಪಡೆದವರು ತಮ್ಮ ಫಾಸ್ಟ್‌ಟ್ಯಾಗ್‌ಅನ್ನು ಮತ್ತೆ ಮತ್ತೆ ರೀಚಾರ್ಜ್ ಮಾಡಿಸುವ ಅಥವಾ ಹೆದ್ದಾರಿ ಶುಲ್ಕ ವಸೂಲಿ ಕೇಂದ್ರಗಳಲ್ಲಿ ಶುಲ್ಕ ಪಾವತಿಸುವ ಅಗತ್ಯ ಇರುವುದಿಲ್ಲ ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಹೇಳಿದ್ದಾರೆ. 200 ಟ್ರಿಪ್‌ಗಳವರೆಗೆ ಈ ಪಾಸ್ ಬಳಸಬಹುದು. ಅಷ್ಟು ಟ್ರಿಪ್ ಪೂರ್ಣಗೊಂಡ ನಂತರ ಪಾಸ್‌ಗಳನ್ನು ಮತ್ತೆ ರೀಚಾರ್ಜ್ ಮಾಡಿಕೊಳ್ಳಬಹುದು. ವಾಹನಗಳಲ್ಲಿ ಫಾಸ್ಟ್‌ಟ್ಯಾಗ್ ಇರುವವರು ಹೊಸದಾಗಿ ಖರೀದಿಸುವ ಅಗತ್ಯ ಇಲ್ಲ.

ಇನ್ನಷ್ಟು ವಿವರ ▶12

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು



ಸಹಕಾರ ಕ್ಷೇತ್ರದ ಅಭಿವೃದ್ಧಿಯ ಹರಿಕಾರ,

"ಸಹಕಾರ ರತ್ನ"

ಮಾನ್ಯ ಸಹಕಾರ ಸಚಿವರು ಮತ್ತು ಹಾಸನ ಜಿಲ್ಲಾ ಉಸ್ತುವಾರಿ ಸಚಿವರಾದ

ಶ್ರೀ ಕೆ.ಎನ್. ರಾಜಣ್ಣ ರವರ



75ನೇ ಜನ್ಮದಿನದ ಅಮೃತ ಮಹೋತ್ಸವ ಮತ್ತು ಅಭಿನಂದನಾ ಗ್ರಂಥ ಲೋಕಾರ್ಪಣೆ

ದಿನಾಂಕ: 21.06.2025, ಶನಿವಾರ ಬೆಳಿಗ್ಗೆ 10.00 ಗಂಟೆಗೆ

ಸ್ಥಳ: ಜೂನಿಯರ್ ಕಾಲೇಜು ಮೈದಾನ, ಬಿ.ಹೆಚ್.ರಸ್ತೆ, ತುಮಕೂರು

ಶುಭ ಕೋರುವವರು

ಸಂಯುಕ್ತ ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು
ಸಿಬ್ಬಂದಿವರ್ಗ ಹಾಗೂ ರಾಜ್ಯದ ಸಮಸ್ತ ಸೌಹಾರ್ದ ಸಹಕಾರಿಗಳು
ಶಿಕ್ಷಣ ನಿಧಿ ಸಲಹಾ ಸಮಿತಿ ಸದಸ್ಯರು





ಸಹಕಾರ ಕ್ಷೇತ್ರದ ವಿಶ್ವಾಸಾರ್ಹತೆ ಹೆಚ್ಚಿಸುವಲ್ಲಿ ಸಂಯುಕ್ತ ಸಹಕಾರಿಯ ದಿಟ್ಟ ಹೆಜ್ಜೆ ಮತ್ತು ಸಾಧನೆಗಳು

ಸೌಹಾರ್ದ ಸಹಕಾರಿ ಕಾಯ್ದೆಯ ರಜತಮಹೋತ್ಸವ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ರೂಪುಗೊಂಡ ಹಾದಿ...

ದೇಶವು ಸರ್ವತೋಮುಖ ಪ್ರಗತಿ ಸಾಧಿಸಬೇಕಿದ್ದಲ್ಲಿ ಪ್ರತಿ ಗ್ರಾಮಕ್ಕೊಂದು ಪಂಚಾಯಿತಿ, ಶಾಲೆ ಹಾಗೂ ಸಹಕಾರ ಸಂಘ ಇವುಗಳೇ ಜನ ಸಮುದಾಯ ಅಭಿವೃದ್ಧಿಯ ಮೂರು ಆಧಾರ ಸ್ತಂಭಗಳಾಗಿರುವ ಹಿನ್ನಲೆಯಲ್ಲಿ ಸ್ವಾತಂತ್ರ್ಯಾ ನಂತರ ಕೇಂದ್ರ ರಾಜ್ಯ ಸರ್ಕಾರಗಳು ಈ ಕ್ಷೇತ್ರಕ್ಕೆ ಅಪಾರ ಪ್ರಮಾಣದ ಅನುದಾನಗಳನ್ನು ನೀಡಿ ಉತ್ತೇಜಿಸಿದೆ.

ಸಹಕಾರ ಕ್ಷೇತ್ರದ ಮೂಲಕ ಇನ್ನೂ ಹೆಚ್ಚಿನ ಪ್ರಗತಿ ಸಾಧ್ಯ ಎನ್ನುವುದನ್ನು ಮನಗಂಡ ಕೇಂದ್ರ ಸರ್ಕಾರ, ಹಿರಿಯ ಸಹಕಾರ ಮುಖಂಡರ ಸಲಹೆ, ಸೂಚನೆ, ಅಭಿಪ್ರಾಯಗಳ ಹಿನ್ನಲೆಯಲ್ಲಿ 1987ರಲ್ಲಿ ಶ್ರೀ ಅರ್ಧನಾರೀಶ್ವರನ್ ಅವರ ಅಧ್ಯಕ್ಷತೆಯಲ್ಲಿ ಅಧ್ಯಯನ ಸಮಿತಿಯೊಂದನ್ನು ರಚಿಸಿತು. ಅದು ತನ್ನ ವರದಿಯಲ್ಲಿ, ಈ ಕ್ಷೇತ್ರದ ಮೇಲಿನ ಬಾಹ್ಯ ಹಸ್ತಕ್ಷೇಪವನ್ನು ಮುಖ್ಯವಾಗಿ ಪ್ರಸ್ತಾಪಿಸಿ, ಇದನ್ನು ನಿವಾರಿಸುವ ಸಲುವಾಗಿ ಕೆಲವು ಉಪಯುಕ್ತ ಸಲಹೆಗಳನ್ನು ನೀಡಿತು.

ಇದರ ಹಿನ್ನಲೆಯಲ್ಲಿ, ಸಹಕಾರ ಆಂದೋಲನ ಮುಕ್ತವಾಗಿ ಕಾರ್ಯಾಚರಣೆ ಸಹಕಾರ ಸಂಘ-ಸಂಸ್ಥೆಗಳ ಸದಸ್ಯರಿಗೆ ಹೆಚ್ಚಿನ ಅಧಿಕಾರ ನೀಡುವ ಹಾಗೂ ಅವರ ಸಹಭಾಗಿತ್ವ ಹೆಚ್ಚಿಸುವ ಮುಕ್ತ ವಾತಾವರಣ ನಿರ್ಮಿಸುವಂತಹ ಮಾದರಿ ಸಹಕಾರಿ ಕಾಯ್ದೆಯನ್ನು ರೂಪಿಸಲು ಚೌಧರಿ ಬ್ರಹ್ಮ ಪ್ರಕಾಶರ ನೇತೃತ್ವದಲ್ಲಿ 1990ರಲ್ಲಿ ಇನ್ನೊಂದು ಸಮಿತಿ ನೇಮಿಸಿತು. ಸಮಿತಿ ಸದಸ್ಯರಾಗಿ ನಮ್ಮ ರಾಜ್ಯದ ಹಿರಿಯ ರಾಜಕಾರಣಿ ಮತ್ತು ಸಹಕಾರ ಕ್ಷೇತ್ರದ ಮುತ್ಸದ್ಧಿ ನಾಯಕ ಶ್ರೀ ಆರ್. ವಿ. ದೇಶಪಾಂಡೆ ಅವರು ಇದ್ದರು.

ಈ ವರದಿಯನ್ನು ಅಂದಿನ ಪ್ರಧಾನ ಮಂತ್ರಿಗಳಾದ ಶ್ರೀ ಪಿ. ವಿ. ನರಸಿಂಹರಾವ್ ಅವರ ಅಧ್ಯಕ್ಷತೆಯಲ್ಲಿ ಕೇಂದ್ರ ಯೋಜನ ಆಯೋಗವು ಸಹಕಾರ ಆಂದೋಲನದ ಅಭಿವೃದ್ಧಿಗೆ, ಪ್ರಗತಿಗೆ ಪೂರಕವಾದ ಸಹಕಾರಿ ಕಾಯ್ದೆಯನ್ನು ರೂಪಿಸಿ, ಅಳವಡಿಸಿಕೊಳ್ಳಲು ಸಲಹೆ ನೀಡಿ ಎಲ್ಲ ರಾಜ್ಯ ಸರ್ಕಾರಗಳಿಗೆ ಕಳುಹಿಸಿತು.

ಅಂದಿನ ಮುಖ್ಯಮಂತ್ರಿಗಳಾಗಿದ್ದ ಶ್ರೀ ಜೆ. ಹೆಚ್ ಪಟೇಲ್ ಹಾಗೂ ಅಂದಿನ ಸಹಕಾರ ಸಚಿವರಾದ ಶ್ರೀ ಎಸ್. ಎಸ್. ಪಾಟೀಲ ಅವರುಗಳು ಇದರ ಮಹತ್ವಕಾಂಕ್ಷೆಯಂತೆ ವಿಧಾನಮಂಡಲದಲ್ಲಿ ಅನುಮೋದಿತವಾಗಿ, ರಾಜ್ಯಪಾಲರ ಮತ್ತು ರಾಷ್ಟ್ರಪತಿಗಳ ಅಂಕಿತದೊಂದಿಗೆ ಅಂದಿನ ಮುಖ್ಯಮಂತ್ರಿಗಳಾಗಿದ್ದ ಶ್ರೀ ಎಸ್. ಎಂ ಕೃಷ್ಣರವರು ಹಾಗೂ ಅಂದಿನ ಸಹಕಾರ ಸಚಿವರಾಗಿದ್ದ ಶ್ರೀ ಡಿ. ಕೆ. ಶಿವಕುಮಾರ ಅವರ ಅವಧಿಯಲ್ಲಿ 01.01.2001 ರಂದು ಜಾರಿಗೆ ಬಂದ ಕಾಯ್ದೆಯೇ **ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ.**

ಈ ಕಾಯ್ದೆಯ ಅಡಿಯಲ್ಲಿ 50 ಸೌಹಾರ್ದ ಸಹಕಾರಿಗಳು ನೊಂದಣಿಗೊಂಡು ತರುವಾಯ ರಾಜ್ಯದಲ್ಲಿ ಒಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ರಚನೆಯಾಗಬೇಕೆಂಬ ಕಾಯ್ದೆಯ ಆಶಯದೊಂದಿಗೆ **"ಸಂಯುಕ್ತ ಸಹಕಾರಿ"** ದಿ:04.01.2002 ರಲ್ಲಿ ನೊಂದಣಿಗೊಂಡು ಕಾರ್ಯ ಪ್ರಾರಂಭಿಸಿತು.



ಸೇವಾ ಚಟುವಟಿಕೆಗಳು:

ರಾಷ್ಟ್ರದಲ್ಲಿ ಸಹಕಾರಿ ಕ್ಷೇತ್ರದ ಮೂಲಕ ಪ್ರಪ್ರಥಮವಾಗಿ ಇ-ಸ್ಟಾಂಪಿಂಗ್ ವ್ಯವಹಾರ ಆರಂಭಿಸಿದ ಹೆಗ್ಗಳಿಕೆ ಸೌಹಾರ್ದ ಸಹಕಾರಿ ಕ್ಷೇತ್ರದ್ದಾಗಿದೆ. ಪ್ರಸ್ತುತ ರಾಜ್ಯದಾದ್ಯಂತ 1704ಕ್ಕೂ ಹೆಚ್ಚು ಇ-ಸ್ಟಾಂಪಿಂಗ್ ಕೇಂದ್ರಗಳನ್ನು ಹೊಂದಿ ಸಾರ್ವಜನಿಕರಿಗೆ ಒಟ್ಟು 71.31ಲಕ್ಷಕ್ಕೂ ಹೆಚ್ಚು ಇ-ಸ್ಟಾಂಪ್ ಪೇಪರ್‌ಗಳನ್ನು ನೀಡಿದೆ. ಕಳೆದ ಆರ್ಥಿಕ ವರ್ಷದಲ್ಲಿ ರೂ.305.56 ಕೋಟಿಗೂ ಹೆಚ್ಚು ರಾಜಸ್ವವನ್ನು ಸಂಗ್ರಹಿಸಿ Stock Holding Services Limited ಮೂಲಕ ರಾಜ್ಯ ಸರ್ಕಾರಕ್ಕೆ ಜಮಾ ಮಾಡಲಾಗಿದೆ.

ಸೌಹಾರ್ದ ಸಹಕಾರಿಗಳ ಬಾಗಿಲಿಗೆ ಶಿಕ್ಷಣ ಹಾಗೂ ತರಬೇತಿ

ರಾಜ್ಯಾದ್ಯಂತ 10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿ, 7 ದಿನಗಳ ಬೇಸಿಕ್ ಬ್ಯಾಂಕಿಂಗ್ ಮೂಲ ಮಾಹಿತಿ ತರಬೇತಿ, ಆಡಳಿತ ಪರಿಣಿತಿ ತರಬೇತಿಗಳು, ಕಾರ್ಯದಕ್ಷತೆ ಅಭಿವೃದ್ಧಿ ಶಿಬಿರ, ಸೌಹಾರ್ದ ಸಹಕಾರಿ ಪ್ರವೇಶ ತರಬೇತಿ, ಸೌಹಾರ್ದ ಸಹಕಾರಿಗಳ ಗುಣಮಟ್ಟ ನಿರ್ವಹಣೆ ತರಬೇತಿ, ಸಾಲವನ್ನು ಲಾಭದಾಯಕವಾಗಿಸುವುದು ಹೇಗೆ ಎನ್ನುವ ತರಬೇತಿ, ಮುಖ್ಯ ಕಾರ್ಯನಿರ್ವಾಹಕರುಗಳು ತಿಳಿದಿರಬೇಕಾದ ಕಾನೂನು ವಿಷಯಗಳು ಮತ್ತು ಶಾಸನಬದ್ದವಾಗಿ ನಿರ್ವಹಿಸಬೇಕಾಗುವ ಕಾರ್ಯಗಳು, ಪಟ್ಟಣ ಬ್ಯಾಂಕುಗಳಿಗಾಗಿ ಪ್ರತ್ಯೇಕ ತರಬೇತಿ, ಅನೇಕ ವಿಧವಾದ ಸಂಪರ್ಕ ಹಾಗೂ ಸಮಾಲೋಚನಾ ಸಭೆಗಳು, ಪ್ರತೀ ಜಿಲ್ಲೆಗಳಲ್ಲಿ ಪತ್ರಿಕಾಗೋಷ್ಠಿಗಳನ್ನು ನಡೆಸುವುದರ ಮೂಲಕ ರಾಜ್ಯದಾದ್ಯಂತ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ಪ್ರಯತ್ನಿಸಲಾಗುತ್ತಿದೆ. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ಶಾಸನಬದ್ಧವಾಗಿ ರಚನೆಗೊಂಡು, ಅರೆನ್ಯಾಯಿಕ ಅಧಿಕಾರವನ್ನು ಹೊಂದಿ, ಸೌಹಾರ್ದ ಸಹಕಾರಿಗಳ ಮಾತೃ ಸಂಸ್ಥೆಯಾಗಿ ರಾಜ್ಯಾದ್ಯಂತ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಯ ಜೊತೆಗೆ ರಾಜ್ಯದ ಸೌಹಾರ್ದ ಸಹಕಾರಿಗಳ ಅಭಿವೃದ್ಧಿಗೆ ಪೂರಕವಾಗುವಂತಹ ಹಲವಾರು ತರಬೇತಿ ಕಾರ್ಯಕ್ರಮಗಳನ್ನು ರಾಜ್ಯಾದ್ಯಂತ ಹಮ್ಮಿಕೊಳ್ಳುತ್ತ ಬಂದಿದೆ.

"ಸ್ವಾಯತ್ತತೆ ಸ್ವಯಂ ಆಡಳಿತ ಹಾಗೂ ಸ್ವಯಂ ನಿಯಂತ್ರಣ"

2002ರಲ್ಲಿ ಸ್ವಾಯತ್ತತೆ, ಸ್ವಯಂ ಆಡಳಿತ ಹಾಗೂ ಸ್ವಯಂ ನಿಯಂತ್ರಣ ಧ್ಯೇಯವನ್ನಾಗಿಸಿಕೊಂಡ ಸಂಯುಕ್ತ ಸಹಕಾರಿ ನೊಂದಣಿಯಾಗಿ ಕಾರ್ಯನಿರ್ವಹಿಸುತ್ತಿದೆ. ಜನವರಿ 2025ಕ್ಕೆ ಸೌಹಾರ್ದ ಸಹಕಾರಿ ಕಾಯ್ದೆ ಜಾರಿಗೆ ಬಂದು 25 ವರ್ಷಗಳಾಗಿದೆ. ಸರ್ಕಾರದ, ಸಹಕಾರಿಗಳ ಹಾಗೂ ಸಾರ್ವಜನಿಕರ ಮನ್ನಣೆಯ ಮೂಲಕ ಕಾರ್ಯಕ್ಷೇತ್ರವನ್ನು ವಿಸ್ತರಿಸುತ್ತಾ, ಪ್ರಗತಿ ಪಥದಲ್ಲಿ ಮುನ್ನೆಡೆದಿದೆ.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು, ಸೌಹಾರ್ದ ಸಹಕಾರಿಗಳ ಮೇಲ್ವಿಚಾರಣೆ, ಉಸ್ತುವಾರಿ, ನಿಯಂತ್ರಣ ಹಾಗೂ ಜವಾಬ್ದಾರಿಯನ್ನು ನಿರ್ವಹಿಸುವ ಮಾತೃ ಸಂಸ್ಥೆಯಾಗಿದೆ. ಸದಸ್ಯರಿಂದಲೇ ಆಯ್ಕೆಗೊಳ್ಳುವ, ಪ್ರತಿನಿಧಿಗಳಿರುವ ಆಡಳಿತ ಮಂಡಳಿ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳಿಗೆ ಅಗತ್ಯವಾದ ಶಾಸನಬದ್ಧ ಮಾರ್ಗದರ್ಶನಗಳನ್ನು ನೀಡುವ ದೇಶದ ವಿನೂತನ ಶಾಸನಬದ್ಧ ಸಂಸ್ಥೆಯಾಗಿದೆ

ಜವಾಬ್ದಾರಿ ಹಾಗೂ ಕರ್ತವ್ಯಗಳ ನಿರ್ವಹಣೆ

- ಸೌಹಾರ್ದ ಸಹಕಾರಿ ಕ್ಷೇತ್ರದ ಪ್ರಗತಿ: ರಾಜ್ಯದಲ್ಲಿ 6514 ಸೌಹಾರ್ದ ಸಹಕಾರಿಗಳು ನೋಂದಣಿಯಾಗಿದ್ದು, ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ 72 ಲಕ್ಷಕ್ಕೂ ಹೆಚ್ಚು ಸದಸ್ಯರು ತೊಡಗಿಸಿಕೊಂಡಿದ್ದಾರೆ.
- ಸರಕಾರದ ಆರ್ಥಿಕ ನೆರವಿಲ್ಲದೆ ತಮ್ಮ ಸದಸ್ಯರುಗಳಿಂದ ಸಂಗ್ರಹಿಸಿದ ಷೇರುಗಳಿಂದ ಹಾಗೂ ಠೇವಣಿಗಳಿಂದ ಸಹಕಾರಿಗಳು ಕಾರ್ಯ ನಿರ್ವಹಿಸುತ್ತವೆ.
- ಸದಸ್ಯರೇ ಸಂಪೂರ್ಣ ಒಡೆತನ ಹೊಂದಿರುವ, ನಿರ್ವಹಿಸುವ ಮತ್ತು ನಿಯಂತ್ರಿಸುವ ಸ್ವಸಹಾಯ ಮತ್ತು ಪರಸ್ಪರ ನೆರವಿನ ಮೇಲೆ ಆಧರಿತವಾದ ಸಹಕಾರಿ ತತ್ವಗಳಿಂದ ಮಾರ್ಗದರ್ಶನ ಪಡೆದ, ಜವಾಬ್ದಾರಿಯುತ, ಸ್ಪರ್ಧಾತ್ಮಕ, ಸ್ವಾವಲಂಬಿ ಆರ್ಥಿಕ ಉದ್ಯಮಗಳಾದ ಸಹಕಾರಿಗಳಿಗೆ ಮಾನ್ಯತೆ ಮತ್ತು ಅವುಗಳ ಸ್ವಯಂ ರಚನೆಗೆ ಪ್ರೋತ್ಸಾಹ ನೀಡುವುದಕ್ಕೆ ಮತ್ತು ಅದಕ್ಕೆ ಸಂಬಂಧಿಸಿದ ಇತರ ವಿಷಯಗಳಿಗೆ ಉಪಬಂಧ ಕಲ್ಪಿಸುವ ಅಧಿನಿಯಮ ಇದಾಗಿದೆ.
- ಸಹಕಾರಿಗಳಿಗೆ ಆರ್ಥಿಕ ಉದ್ದಿಮೆಯ ಸ್ಥಾನ, ಸಹಕಾರಿ ತತ್ವಗಳನ್ನು ಕಾನೂನಿನಲ್ಲಿ ಅಳವಡಿಸಿ ಮಾರ್ಗದರ್ಶನ ವ್ಯವಸ್ಥೆ.
- ಸಹಕಾರಿಗಳ ಮೇಲ್ವಿಚಾರಣೆ, ಉಸ್ತುವಾರಿ, ನಿಯಂತ್ರಣ ಇತ್ಯಾದಿಗಳ ಜವಾಬ್ದಾರಿಯನ್ನು ಸಹಕಾರಿಗಳಿಂದಲೇ ಶಾಸನಬದ್ಧವಾಗಿ ರಚಿತವಾಗಿರುವ ಸಂಯುಕ್ತ ಸಹಕಾರಿಗೆ ವಹಿಸಲಾಗಿದೆ.
- ಸೌಹಾರ್ದ ಸಹಕಾರಿಗಳ ಲೆಕ್ಕಪರಿಶೋಧನೆಯನ್ನು ವೃತ್ತಿಪರ ಸನ್ನದು ಲೆಕ್ಕ ಪರಿಶೋಧಕರಿಂದ ನಿರ್ವಹಿಸುವುದು.
- **ಡಿಸಿಬಿಎಂ ಕೋರ್ಸ್** : ಸಹಕಾರಿಗಳ ಸಿಬ್ಬಂದಿಗಳಿಗಾಗಿ ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ ಕೋರ್ಸ್‌ನ್ನು ಸಂಯುಕ್ತ ಸಹಕಾರಿ ಮತ್ತು ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯಿತ್ ರಾಜ್ ವಿಶ್ವವಿದ್ಯಾಲಯದ ಸಹಭಾಗಿತ್ವದಲ್ಲಿ ಯುಜಿಸಿಯಿಂದ ಮಾನ್ಯತೆ ಪಡೆದು ಡಿಸಿಬಿಎಂ ಕೋರ್ಸ್‌ನ್ನು ಪ್ರಾರಂಭಿಸಲಾಗಿದೆ. ಎಲ್ಲ ಸಹಕಾರಿಗಳಿಗೆ ಹಾಗೂ ಯುವಕರಿಗೆ ಪ್ರವೇಶ ಪಡೆಯಲು ಮುಕ್ತ ಅವಕಾಶ.
- **ಸದಸ್ಯ ಶಿಕ್ಷಣ ಯೋಜನೆ:** ರಾಜ್ಯದ ಸೌಹಾರ್ದ ಸಹಕರಿಗಳ ಸದಸ್ಯರುಗಳಿಗಾಗಿ ಸೌಹಾರ್ದ ಸಹಕಾರಿಗಳ ಸ್ಥಳದಲ್ಲಿಯೇ ಸದಸ್ಯರಿಗಾಗಿ ಸದಸ್ಯ ಶಿಕ್ಷಣ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ.

ರಾಜ್ಯದಲ್ಲಿ ಒಟ್ಟು 6514 ಸೌಹಾರ್ದ ಸಹಕಾರಿಗಳು ಆರ್ಥಿಕ ಅಂಕಿ ಅಂಶಗಳನ್ನು ಗಮನಿಸಿದಾಗ ಹೆಮ್ಮೆಪಡುವ ರೀತಿಯಲ್ಲಿ ಪ್ರಗತಿ ಹೊಂದಿರುವುದು ಕಂಡು ಬರುತ್ತದೆ.

31/03/2025 ಇರುವಂತೆ ಸೌಹಾರ್ದ ಸಹಕಾರಿ ಕ್ಷೇತ್ರದ ಪ್ರಗತಿಯನೋಟ

ಸಹಕಾರಿಗಳ ಸಂಖ್ಯೆ	6514
ಶೇರು ಬಂಡವಾಳ	1630
ಠೇವಣಿ	44,793
ನೀಡಿದ ಸಾಲಗಳು	135.747
ಕಾಯ್ದಿಟ್ಟ ನಿಧಿಗಳು	3,992
ದುಡಿಯುವ ಬಂಡವಾಳ	51,064
ಲಾಭ	735
ಉದ್ಯೋಗದಲ್ಲಿರುವವರು	75,000
ಇ-ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ	1710
ಸದಸ್ಯರ ಸಂಖ್ಯೆ	72

ಸೌಹಾರ್ದ ಸಹಕಾರಿಗಳ ಹಲವು ವಿಶೇಷತೆಗಳು

- ಸೌಹಾರ್ದ ಸಹಕಾರಿ ಕ್ಷೇತ್ರದ ಪ್ರಗತಿ: ರಾಜ್ಯದಲ್ಲಿ 6514 ಸೌಹಾರ್ದ ಸಹಕಾರಿಗಳು ನೋಂದಣಿಯಾಗಿದ್ದು, ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ 72 ಲಕ್ಷಕ್ಕೂ ಹೆಚ್ಚು ಸದಸ್ಯರು ತೊಡಗಿಸಿಕೊಂಡಿದ್ದಾರೆ.
- ಸರಕಾರದ ಆರ್ಥಿಕ ನೆರವಿಲ್ಲದೆ ತಮ್ಮ ಸದಸ್ಯರುಗಳಿಂದ ಸಂಗ್ರಹಿಸಿದ ಷೇರುಗಳಿಂದ ಹಾಗೂ ಠೇವಣಿಗಳಿಂದ ಸಹಕಾರಿಗಳು ಕಾರ್ಯ ನಿರ್ವಹಿಸುತ್ತವೆ.
- ಸದಸ್ಯರೇ ಸಂಪೂರ್ಣ ಒಡೆತನ ಹೊಂದಿರುವ, ನಿರ್ವಹಿಸುವ ಮತ್ತು ನಿಯಂತ್ರಿಸುವ ಸ್ವಸಹಾಯ ಮತ್ತು ಪರಸ್ಪರ ನೆರವಿನ ಮೇಲೆ ಆಧರಿತವಾದ ಸಹಕಾರಿ ತತ್ವಗಳಿಂದ ಮಾರ್ಗದರ್ಶನ ಪಡೆದ, ಜವಾಬ್ದಾರಿಯುತ, ಸ್ಪರ್ಧಾತ್ಮಕ, ಸ್ವಾವಲಂಬಿ ಆರ್ಥಿಕ ಉದ್ಯಮಗಳಾದ ಸಹಕಾರಿಗಳಿಗೆ ಮಾನ್ಯತೆ ಮತ್ತು ಅವುಗಳ ಸ್ವಯಂ ರಚನೆಗೆ ಪ್ರೋತ್ಸಾಹ ನೀಡುವುದಕ್ಕೆ ಮತ್ತು ಅದಕ್ಕೆ ಸಂಬಂಧಿಸಿದ ಇತರ ವಿಷಯಗಳಿಗೆ ಉಪಬಂಧ ಕಲ್ಪಿಸುವ ಅಧಿನಿಯಮ ಇದಾಗಿದೆ.
- ಸಹಕಾರಿಗಳಿಗೆ ಆರ್ಥಿಕ ಉದ್ದಿಮೆಯ ಸ್ಥಾನ, ಸಹಕಾರಿ ತತ್ವಗಳನ್ನು ಕಾನೂನಿನಲ್ಲಿ ಅಳವಡಿಸಿ ಮಾರ್ಗದರ್ಶನ ವ್ಯವಸ್ಥೆ.
- ಸಹಕಾರಿಗಳ ಮೇಲ್ವಿಚಾರಣೆ, ಉಸ್ತುವಾರಿ, ನಿಯಂತ್ರಣ ಇತ್ಯಾದಿಗಳ ಜವಾಬ್ದಾರಿಯನ್ನು ಸಹಕಾರಿಗಳಿಂದಲೇ ಶಾಸನಬದ್ಧವಾಗಿ ರಚಿತವಾಗಿರುವ ಸಂಯುಕ್ತ ಸಹಕಾರಿಗೆ ವಹಿಸಲಾಗಿದೆ.
- ಸೌಹಾರ್ದ ಸಹಕಾರಿಗಳ ಲೆಕ್ಕಪರಿಶೋಧನೆಯನ್ನು ವೃತ್ತಿಪರ ಸನ್ನದು ಲೆಕ್ಕ ಪರಿಶೋಧಕರಿಂದ ನಿರ್ವಹಿಸುವುದು.
- **ಡಿಸಿಬಿಎಂ ಕೋರ್ಸ್** : ಸಹಕಾರಿಗಳ ಸಿಬ್ಬಂದಿಗಳಿಗಾಗಿ ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ ಕೋರ್ಸ್‌ನ್ನು ಸಂಯುಕ್ತ ಸಹಕಾರಿ ಮತ್ತು ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯಿತ್ ರಾಜ್ ವಿಶ್ವವಿದ್ಯಾಲಯದ ಸಹಭಾಗಿತ್ವದಲ್ಲಿ ಯುಜಿಸಿಯಿಂದ ಮಾನ್ಯತೆ ಪಡೆದು ಡಿಸಿಬಿಎಂ ಕೋರ್ಸ್‌ನ್ನು ಪ್ರಾರಂಭಿಸಲಾಗಿದೆ. ಎಲ್ಲ ಸಹಕಾರಿಗಳಿಗೆ ಹಾಗೂ ಯುವಕರಿಗೆ ಪ್ರವೇಶ ಪಡೆಯಲು ಮುಕ್ತ ಅವಕಾಶ.
- **ಸದಸ್ಯ ಶಿಕ್ಷಣ ಯೋಜನೆ:** ರಾಜ್ಯದ ಸೌಹಾರ್ದ ಸಹಕರಿಗಳ ಸದಸ್ಯರುಗಳಿಗಾಗಿ ಸೌಹಾರ್ದ ಸಹಕಾರಿಗಳ ಸ್ಥಳದಲ್ಲಿಯೇ ಸದಸ್ಯರಿಗಾಗಿ ಸದಸ್ಯ ಶಿಕ್ಷಣ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ.

ದಾವಾ ಪಂಚಾಯ್ತಿ ನ್ಯಾಯಾಲಯ ಸೌಹಾರ್ದ ಸಹಕಾರಿಗಳ ವ್ಯಾಜ್ಯ ಶೀಘ್ರ ವಿಲೇವಾರಿ

ಸೌಹಾರ್ದ ಸಹಕಾರಿಗಳ ಬೇಡಿಕೆಯನ್ನು ಪರಿಗಣಿಸಿ ಕರ್ನಾಟಕ ರಾಜ್ಯ ಸರ್ಕಾರವು ಸೌಹಾರ್ದ ಸಹಕಾರಿಗಳ ನ್ಯಾಯಾಲಯ ಸ್ಥಾಪಿಸಿದೆ. ವ್ಯಾಜ್ಯಗಳನ್ನು ಶೀಘ್ರವಾಗಿ ಇತ್ಯರ್ಥಗೊಳಿಸಲು ನಿ.441 ಅಡಿಯಲ್ಲಿ ಸೌಹಾರ್ದ ಸಹಕಾರಿಗಳ ನ್ಯಾಯಾಲಯ ಇದುವರೆಗೆ ಇತ್ಯರ್ಥಗೊಳಿಸಿದ ದಾವೆಗಳ ಸಂಖ್ಯೆ 33460. ಹಾಗೂ ಗೌರವ ಮಧ್ಯಸ್ಥದಾರರಿಂದ ಪ್ರಕರಣಗಳು ಶೀಘ್ರ ವಿಲೇವಾರಿ ಯಾಗುತ್ತಿರುವುದು ಹಾಗೂ 2024-25ನೇ ಸಾಲಿನಲ್ಲಿ ಸೌಹಾರ್ದ ಸಹಕಾರಿ ದಾವಾ ಪಂಚಾಯ್ತಿ ನ್ಯಾಯಾಲಯ ದಿಂದ ರಾಜ್ಯ ಸರ್ಕಾರಕ್ಕೆ ರೂ.1.80 ಕೋಟಿಗೂ ಹೆಚ್ಚು ರಾಜಸ್ವ ನೀಡಿತ್ತಿರುವುದು ಹೆಮ್ಮೆಯ ವಿಷಯ.

ಶಾಸನಾತ್ಮಕ ಕಾರ್ಯಚಟುವಟಿಕೆಗಳು:

ಕಾರ್ಯನಿರ್ವಹಣೆಯಲ್ಲಿ ಸೌಹಾರ್ದ ಸಹಕಾರಿಗಳಿಗೆ ಸಂಯುಕ್ತ ಸಹಕಾರಿಯು

» ಕಾನೂನು ನೆರವು » ಸಲಹೆ ಮತ್ತು ಮಾರ್ಗದರ್ಶನ » ಪರಿವೀಕ್ಷಣೆ ಬೇಟಿಗಳು » ಶಾಖಾ ಅನುಮತಿ » ಸಮಾಪನೆ ಶಿಫಾರಸ್ಸು » ನಿರ್ದೇಶಕರ ಅನರ್ಹತೆ » ದೂರುಗಳ ಪರಿಶೀಲನೆ ಮತ್ತು ವಿಲೇವಾರಿ » ಸಂಯುಕ್ತ ಸಹಕಾರಿಯಿಂದ ವಿವಿಧ ಪ್ರಾಧಿಕಾರಗಳಿಗೆ ಅಗತ್ಯ ಮಾಹಿತಿ ನೀಡುವುದು » ಟಾಸ್ಕ್‌ಫೋರ್ಸ್ ವಿಭಾಗದಿಂದ ಸಮಸ್ಯಾತ್ಮಕ ಸಹಕಾರಿಗಳ ನಿರ್ವಹಣೆ. » ಸರಕಾರ ಹಾಗೂ ಸಹಕಾರ ಇಲಾಖೆಯೊಂದಿಗೆ ಉತ್ತಮ ಸಂಬಂಧ ಬೆಳೆಸುವುದು





ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು, ಸೌಹಾರ್ದ ಸಹಕಾರಿ ಕಾಯ್ದೆಯ ರಜತ ಮಹೋತ್ಸವದ ಸಂದರ್ಭದಲ್ಲಿ ಸೌಹಾರ್ದ ಸಹಕಾರಿ ದಿನದಂದು ಜನವರಿ 1, 2025 ರಂದು ಕರ್ನಾಟಕ ರಾಜ್ಯದಾದ್ಯಂತ 2025 ಸ್ಥಳಗಳಲ್ಲಿ ಸೆವೆನ್ ಕಲರ್ಸ್ ಕೋ ಆಪರೇಟಿವ್ ಧ್ವಜವನ್ನು ಹಾರಿಸಿದ್ದಕ್ಕಾಗಿ ಅಧಿಕೃತವಾಗಿ "ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್" ಗೆ ಸೇರಿದೆ.

ಹವಾಮಾನ ಮುನ್ಸೂಚನೆ: ನಗರದಲ್ಲಿ ಇಂದು ಮೋಡ ಕವಿದ ವಾತಾವರಣ ಇರಲಿದ್ದು, ಅಲ್ಲಲ್ಲಿ ಹಗುರ ಮಳೆಯಾಗುವ ಸಾಧ್ಯತೆ ಇದೆ.

‘2 ಕೋಟಿ ಜನರಿಗೆ ಕುಡಿಯುವ ನೀರು’

ಕಾವೇರಿ 6ನೇ ಹಂತ ಯೋಜನೆ ಅನುಷ್ಠಾನಕ್ಕೆ ಕ್ರಮ: ಡಿ.ಕೆ.ಶಿವಕುಮಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೆಂಗಳೂರಿನ ಎರಡು ಕೋಟಿ ಜನರಿಗೆ ಕುಡಿಯುವ ನೀರು ಪೂರೈಸುವ ಗುರಿ ಹೊಂದಿದ್ದು, ಇದಕ್ಕಾಗಿ ಕಾವೇರಿ 6ನೇ ಹಂತದ ಯೋಜನೆ ಅನುಷ್ಠಾನವಾಗಲಿದೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಬೆಂಗಳೂರು ಜಲಮಂಡಳಿ ಜಲ ಸಂರಕ್ಷಣೆ ಜಾಗೃತಿಗಾಗಿ ಪಡೆದ ‘ಗಿನ್ನಿಸ್ ವರ್ಲ್ಡ್ ರೆಕಾರ್ಡ್’ ಪ್ರಮಾಣ ಪತ್ರವನ್ನು ಬುಧವಾರ ಸ್ವೀಕರಿಸಿ ಅವರು ಮಾತನಾಡಿದರು.

‘ನಗರದಲ್ಲಿ 1.40 ಕೋಟಿ ಜನಸಂಖ್ಯೆ ಇದ್ದು, ಆನೇಕಲ್ ಹಾಗೂ ಇತರೆ ಭಾಗದಲ್ಲಿ 50 ಲಕ್ಷ ಜನಸಂಖ್ಯೆ ಇದೆ. ಬೆಂಗಳೂರಿಗೆ ಹೊಸದಾಗಿ ಸೇರಿದ 110 ಹಳ್ಳಿಗಳಿಗೆ ಕುಡಿಯುವ ನೀರು ಪೂರೈಸುತ್ತಿದ್ದೇವೆ. ಹೀಗಾಗಿ ಹೊಸ ಯೋಜನೆಗಳು ಅಗತ್ಯ’ ಎಂದರು.

‘ಬೆಂಗಳೂರು ಯೋಜಿತ ನಗರವಲ್ಲ. ಬಹಳ ದೊಡ್ಡದಾಗಿ ಬೆಳೆದಿದೆ. ಹೀಗಾಗಿ ಇಲ್ಲಿ ಗ್ರೇಟರ್ ಬೆಂಗಳೂರನ್ನು ಘೋಷಣೆ ಮಾಡಿ, ಮತ್ತಷ್ಟು ಪ್ರದೇಶವನ್ನು ಮುಂದಿನ ದಿನಗಳಲ್ಲಿ ಬೆಂಗಳೂರಿನ ವ್ಯಾಪ್ತಿಗೆ ಸೇರಿಸಿಕೊಳ್ಳಲಾಗುತ್ತಿದೆ. ಇದರ ವ್ಯಾಪ್ತಿಯಲ್ಲಿ ಎಷ್ಟು ಪಾಲಿಕೆ ರಚಿಸಬೇಕು ಎಂದು ಚರ್ಚೆ ಮಾಡುತ್ತಿದ್ದೇವೆ’ ಎಂದು ಹೇಳಿದರು.

‘ದೆಹಲಿ ಸೇರಿದಂತೆ ಬೇರೆ ನಗರಗಳಲ್ಲಿ ಕುಡಿಯುವ ನೀರಿನ ಸಂಪರ್ಕವೇ ಬೇರೆ, ದಿನಬಳಕೆ ಉದ್ದೇಶಕ್ಕೆ ಬಳಸುವ ನೀರಿನ ಸಂಪರ್ಕವೇ ಬೇರೆ ಇದೆ. ಆದರೆ ನಮ್ಮಲ್ಲಿ ಕುಡಿಯಲು, ವಾಹನ ತೊಳೆಯಲು, ಗಿಡಗಳಿಗೆ ಹಾಕಲು ಎಲ್ಲದಕ್ಕೂ ಕುಡಿಯುವ ನೀರನ್ನೇ ಬಳಸಲಾಗುತ್ತಿದೆ. ಶೇಕಡ 35ರಷ್ಟು ಜನ ಕುಡಿಯುವ ನೀರಿನ ಬಿಲ್ ಕಟ್ಟುತ್ತಿಲ್ಲ’ ಎಂದು ತಿಳಿಸಿದರು.

‘ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆಯಾದಂತೆ ಬಸ್, ರೈಲು ಪ್ರಯಾಣ ದರ ಹಾಗೂ ಅಗತ್ಯ ವಸ್ತುಗಳ ಬೆಲೆ ಏರಿಕೆಯಾಗುತ್ತದೆ. ಹತ್ತು ವರ್ಷಗಳಿಂದ ನೀರಿನ ದರ ಏರಿಕೆ ಮಾಡಿರಲಿಲ್ಲ. ಇದರಿಂದ ಬೆಂಗಳೂರು ಜಲಮಂಡಳಿ ವಾರ್ಷಿಕವಾಗಿ ₹400 ಕೋಟಿಯಿಂದ ₹500 ಕೋಟಿ ನಷ್ಟ ಅನುಭವಿಸುತ್ತಿತ್ತು. ಒಂದು ದಾಖಲೆ ಪ್ರಕಾರ, ₹1,000 ಕೋಟಿ ನಷ್ಟವಾಗುತ್ತಿದೆ. ದರ ಪರಿಷ್ಕರಣೆಯಿಂದ ₹500 ಕೋಟಿ ನಷ್ಟ ಕಡಿತವಾಗಿದೆ. ಮುಂದಿನ ದಿನಗಳಲ್ಲಿ ಸಾರಿಗೆ ಇಲಾಖೆ ಮಾದರಿಯಲ್ಲಿ ದರ ಪರಿಷ್ಕರಣೆ ಮಾಡಲಾಗುತ್ತದೆ’ ಎಂದು ಹೇಳಿದರು.

ಮುಖ್ಯಾಂಶಗಳು

- ಸಾರಿಗೆ ಇಲಾಖೆ ಮಾದರಿಯಲ್ಲಿ ನೀರಿನ ದರ ಪರಿಷ್ಕರಣೆ
- ನೀರಿನ ದರ ಪರಿಷ್ಕರಣೆ-ಯಿಂದ ₹500 ಕೋಟಿ ನಷ್ಟ ಕಡಿಮೆ
- ನೀರು ಪಡೆಯುತ್ತಿರುವ ಶೇ 35ರಷ್ಟು ಜನರು ಶುಲ್ಕ ಪಾವತಿಸುತ್ತಿಲ್ಲ


ಸ್ವಪ್ನಿಲ್ ಡಂಗರಿಕರ್ ಅವರು ಡಿ.ಕೆ. ಶಿವಕುಮಾರ್ ಅವರಿಗೆ ಗಿನ್ನೆಸ್ ವಿಶ್ವ ದಾಖಲೆ ಪ್ರಮಾಣ ಪತ್ರ ಪ್ರದಾನ ಮಾಡಿದರು. ರಾಮ್‌ಪ್ರಸಾತ್ ಮನೋಹರ್ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಜಲಮಂಡಳಿಗೆ ಗಿನ್ನಿಸ್ ದಾಖಲೆ ಪ್ರಮಾಣ ಪತ್ರ

ಬೆಂಗಳೂರು ಜಲಮಂಡಳಿ ನಡೆಸಿದ ಜಲ ಸಂರಕ್ಷಣೆ ಅಭಿಯಾನ ಸಪ್ತಾಹದಲ್ಲಿ 5,33,642 ಜನರು ಪ್ರತಿಜ್ಞೆ ಸ್ವೀಕರಿಸಿದ್ದರು. ಜಲ ಸಂರಕ್ಷಣೆಯ ಈ ಪ್ರತಿಜ್ಞೆಗೆ ಗಿನ್ನಿಸ್ ದಾಖಲೆ ಪ್ರಮಾಣ ಪತ್ರ ಪ್ರದಾನ ಮಾಡಲಾಯಿತು.

‘ಮಾರ್ಚ್ 21ರಿಂದ 28ರವರೆಗೆ ನಡೆದ ಜಲ ಸಂರಕ್ಷಣೆ ಅಭಿಯಾನ ಸಪ್ತಾಹದಲ್ಲಿ ಒಂದು ಲಕ್ಷ ಜನರು ಪ್ರತಿಜ್ಞೆ ಸ್ವೀಕರಿಸುತ್ತಾರೆ ಎಂದು ಅಂದಾಜಿಸಲಾಗಿತ್ತು. ಆದರೆ ಅದು 5 ಲಕ್ಷ ಮೀರಿ ಗಿನ್ನಿಸ್ ದಾಖಲೆ ಬರೆದಿದೆ’ ಎಂದು ಜಲಮಂಡಳಿ ಅಧ್ಯಕ್ಷ ರಾಮ್‌ಪ್ರಸಾತ್ ಮನೋಹರ್ ತಿಳಿಸಿದರು.

‘ಕಾವೇರಿ ಆರತಿ: 1,500 ಸ್ಥಳೀಯರಿಗೆ ಉದ್ಯೋಗ ದೊರೆಯಲಿದೆ’

‘ಶ್ರೀರಂಗಪಟ್ಟಣದಲ್ಲಿ ನಡೆಯುವ ಕಾವೇರಿ ಆರತಿ ಬಗೆಗಿನ ಅನುಮಾನಗಳನ್ನು ಪರಿಹರಿಸಲು ರೈತ ಮುಖಂಡರೊಂದಿಗೆ ಸಭೆ ನಡೆಸಲಾಗುತ್ತದೆ. ಕಾವೇರಿ ಆರತಿ ಜೊತೆಗೆ ನಮ್ಮ ಸಂಸ್ಕೃತಿಯ ಪ್ರದರ್ಶನವೂ ಆಗಲಿದೆ. ಸುಮಾರು 1,500 ಸ್ಥಳೀಯರಿಗೆ ಉದ್ಯೋಗ ಲಭ್ಯವಾಗಲಿದೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು. ‘ನೀರಿಗೆ ಜಾತಿ, ಭಾಷೆ, ಧರ್ಮ ಇಲ್ಲ. ಕುಡಿಯಲು, ವ್ಯವಸಾಯಕ್ಕೆ, ಕೈಗಾರಿಕೆ ಎಲ್ಲದಕ್ಕೂ ನೀರು ಅಗತ್ಯ. ನೀರಿಗಾಗಿ, ಉತ್ತಮ ಮಳೆಗಾಗಿ ಪ್ರಾರ್ಥನೆ ಮಾಡುವುದಕ್ಕೆ ತೊಂದರೆ ಏನು? ಕಾವೇರಿ ತುಂಬಿ ಹರಿಯದಿದ್ದರೆ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ’ ಎಂದರು.

‘ಹೆಪಟೈಟಿಸ್ ಬಿ’ ಲಸಿಕೆ ಒದಗಿಸಿ

ಬೆಂಗಳೂರು: ರಾಷ್ಟ್ರೀಯ ವೈರಲ್ ಹೆಪಟೈಟಿಸ್ ನಿಯಂತ್ರಣ ಕಾರ್ಯಕ್ರಮದಡಿ ಆರೋಗ್ಯ ಕಾರ್ಯಕರ್ತರಿಗೆ ‘ಹೆಪಟೈಟಿಸ್ ಬಿ’ ಲಸಿಕೆ ಒದಗಿಸುವಂತೆ ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ಆರೋಗ್ಯ ಇಲಾಖೆ ಸೂಚನೆ ನೀಡಿದೆ. ಈ ಸಂಬಂಧ ರಾಜ್ಯ ಲಸಿಕಾ ಉಗ್ರಾಣಕ್ಕೆ ಲಸಿಕೆ ಪೂರೈಸಲಾಗಿದ್ದು, ಅಗತ್ಯಕ್ಕೆ ಅನುಗುಣವಾಗಿ ಜಿಲ್ಲಾ ಔಷಧ ಉಗ್ರಾಣಗಳಿಗೆ ಸರಬರಾಜು ಮಾಡಲಾಗುವುದು.

‘ಜಿಬಿಎ ಕಾಯ್ದೆ: ಸಕಾರಾತ್ಮಕ ಪರಿಣಾಮ’

‘ಆಲ್ಟರ್ನೇಟೀವ್–25: ಸುಸ್ಥಿರ ಗ್ರೇಟರ್ ಬೆಂಗಳೂರು’ ಸಮೀಕ್ಷೆಯ ವರದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗ್ರೇಟರ್ ಬೆಂಗಳೂರು ಕಾಯ್ದೆ’ ನಗರದಲ್ಲಿ ಸಕಾರಾತ್ಮಕ ಪರಿಣಾಮ ಬೀರಲಿದೆ ಎಂದು ಸಮೀಕ್ಷೆಯಲ್ಲಿ ಭಾಗವಹಿಸಿದ್ದ ಶೇಕಡ 70ರಷ್ಟು ಯುವಕರು ಅಭಿಪ್ರಾಯಪಟ್ಟಿದ್ದಾರೆ ಎಂದು ವಿಮೋವೆ ಫೌಂಡೇಷನ್‌ನ ಸಮೀಕ್ಷೆ ತಿಳಿಸಿದೆ.

ಸಾಮಾಜಿಕ ಕಾರ್ಯಕರ್ತ ವಿನಯ್ ಸಿಂಧೆ ಅವರು ಸ್ಥಾಪಿಸಿರುವ ‘ವಿಮೋವೆ ಫೌಂಡೇಷನ್’ ವತಿಯಿಂದ ‘ಆಲ್ಟರ್ನೇಟೀವ್–25: ಸುಸ್ಥಿರ ಗ್ರೇಟರ್ ಬೆಂಗಳೂರು’ ಸಮೀಕ್ಷೆ ನಡೆಸಲಾಗಿದೆ. ಒಂದು ತಿಂಗಳು ಆನ್‌ಲೈನ್‌ನಲ್ಲಿ ಸಮೀಕ್ಷೆ ನಡೆದಿದ್ದು, ‘ಗ್ರೇಟರ್ ಬೆಂಗಳೂರು’ (ಜಿಬಿಎ) ಕಾಯ್ದೆಯ ಬಗ್ಗೆ ಬೆಂಗಳೂರಿನಲ್ಲಿ ನೆಲಸಿರುವ ನಾಗರಿಕರ ಅಭಿಪ್ರಾಯ ಸಂಗ್ರಹಿಸಲಾಗಿದೆ.

ನಗರದಲ್ಲಿ ಸಾರ್ವಜನಿಕ ಸಾರಿಗೆ, ಸ್ವಚ್ಛ ಗಾಳಿ ಹಾಗೂ ತ್ಯಾಜ್ಯ ನಿರ್ವಹಣೆಯಲ್ಲಿ ಹಲವು ರೀತಿಯ ಕೊರತೆ ಇದ್ದು, ಕ್ರಮ ಕೈಗೊಳ್ಳುವ ಅಗತ್ಯವಿದೆ ಎಂದು ಸಮೀಕ್ಷೆಯಲ್ಲಿ ಭಾಗವಹಿಸಿದ್ದವರು ಅಭಿಪ್ರಾಯಪಟ್ಟಿದ್ದಾರೆ.

ಸಮೀಕ್ಷೆಯಲ್ಲಿ ಭಾಗವಹಿಸಿದ್ದ ಶೇ 50ರಷ್ಟು ಯುವಕರು, ಸ್ವಯಂ ಸೇವಕರಾಗಿ ಸರ್ಕಾರದೊಂದಿಗೆ ಕಾರ್ಯ ನಿರ್ವಹಿಸುವುದಾಗಿ ಹೇಳಿದ್ದಾರೆ. ಶೇ 15ರಷ್ಟು ಮಂದಿ ಮುಂದಿನ ದಿನಗಳಲ್ಲಿ ಸ್ವಯಂ ಸೇವಕರಾಗುವುದಾಗಿ ತಿಳಿಸಿದ್ದಾರೆ.

‘ವಿಮೋವೆ ಫೌಂಡೇಷನ್ ‘ಆಲ್ಟರ್ನೇಟೀವ್-25: ಸುಸ್ಥಿರ ಗ್ರೇಟರ್ ಬೆಂಗಳೂರು’ ವಿಷಯವಾಗಿ, ಸಮೀಕ್ಷೆ, ಚರ್ಚೆ, ನಮ್ಮ ಅರ್ಥ್ ಪ್ರಶಸ್ತಿ, ಇಕೊ ಫ್ಯಾಷನ್ ವಾಕ್, ಇಂಪ್ಯಾಕ್ಟಾಥಾನ್‌ಗಳನ್ನು ಆಯೋಜಿಸಿತ್ತು. ರೇವಾ ವಿಶ್ವವಿದ್ಯಾಲಯದಲ್ಲಿ ಗ್ರ್ಯಾಂಡ್ ಫಿನಾಲೆ ನಡೆಯಿತು. ಸಮೀಕ್ಷೆಯ ವರದಿಯನ್ನು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ನೀಡಲಾಗಿದ್ದು, ಇದರಿಂದ ಗ್ರೇಟರ್ ಬೆಂಗಳೂರು ಪ್ರಾಧಿಕಾರ ಕಾಯ್ದೆ ಅನುಷ್ಠಾನದಲ್ಲಿ ನಾಗರಿಕರ ಅಭಿಪ್ರಾಯಗಳನ್ನು ಕಾರ್ಯಗತಗೊಳಿಸಬಹುದಾಗಿದೆ’ ಎಂದು ವಿಮೋವೆ ಫೌಂಡೇಷನ್ ಸಂಸ್ಥಾಪಕ ವಿನಯ್ ಸಿಂಧೆ ತಿಳಿಸಿದರು.

ಸಮೀಕ್ಷೆಯಲ್ಲಿನ ಪ್ರಮುಖ ಅಂಶಗಳು

- ಸಮೀಕ್ಷೆಯಲ್ಲಿ ಪಾಲ್ಗೊಂಡವರಲ್ಲಿ ಶೇ 80ರಷ್ಟು ಜನರು ವೃತ್ತಿಪರರು
- ಪ್ರತಿಕ್ರಿಯಿಸಿದವರಲ್ಲಿ ಶೇ 77ರಷ್ಟು ಜನರು 25 ವರ್ಷದೊಳಗಿನವರು
- ಪ್ರತಿಕ್ರಿಯೆಯಲ್ಲಿ ಪುರುಷ ಹಾಗೂ ಮಹಿಳೆಯರು ಸಮ ಸಂಖ್ಯೆಯಲ್ಲಿದ್ದಾರೆ
- ಶೇ 40ರಷ್ಟು ಮಂದಿಗೆ ಜಿಬಿಎ ಕಾಯ್ದೆ ಬಗ್ಗೆ ಸ್ವಲ್ಪ ಅರಿವಿದೆ
- ಶೇ 30ರಷ್ಟು ಜನರು ಜಿಬಿಎ ಕಾಯ್ದೆ ಬಗ್ಗೆ ಕೇಳಿದ್ದಾರೆ
- ಶೇ 30ರಷ್ಟು ಮಂದಿಗೆ ಜಿಬಿಎ ಕಾಯ್ದೆ ಗೊತ್ತಿಲ್ಲ
- ಶೇ 53ರಷ್ಟು ಮಂದಿಗೆ ಜಿಬಿಎಗೆ ಮುಖ್ಯಮಂತ್ರಿ ಅಧ್ಯಕ್ಷರು ಎಂಬ ಮಾಹಿತಿ ಇದೆ
- ಶೇ 64ರಷ್ಟು ಜನರಿಂದ ಕೇಂದ್ರೀಕೃತ ಪ್ರಾಧಿಕಾರದಿಂದ ಆಡಳಿತ ಉತ್ತಮವಾಗುವ ಅಭಿಪ್ರಾಯ
- ಶೇ 67ರಷ್ಟು ಮಂದಿಗೆ ವಾರ್ಡ್ ಮಟ್ಟದ ಅಧಿಕಾರದಿಂದ ನಾಗರಿಕರಿಗೆ ಶಕ್ತಿ ಬರಲಿದೆ ಎಂಬ ಭಾವನೆ
- ಶೇ 57ರಷ್ಟು ಜನರು ಜೀವನವೆಚ್ಚ ಹೆಚ್ಚಾಗಲಿದ್ದರೂ, ಉತ್ತಮ ಜೀವನಕ್ಕೆ ಸಹಕಾರಿಯಾಗಲಿದೆ ಎಂದಿದ್ದಾರೆ



ಸಂಕ್ಷಿಪ್ತ ಸುದ್ದಿ

‘ಸುರಂಗ ರಸ್ತೆ: ಎರಡು ವಾರದಲ್ಲಿ ಟೆಂಡರ್’

ಬೆಂಗಳೂರು: ಸುರಂಗ ರಸ್ತೆ ನಿರ್ಮಾಣಕ್ಕೆ ಟೆಂಡರ್ ದಾಖಲೆಗಳನ್ನು ಅಂತಿಮಗೊಳಿಸುತ್ತಿದ್ದು, ಎರಡು ವಾರಗಳಲ್ಲಿ ಕಾಮಗಾರಿಗೆ ಟೆಂಡರ್ ಆಹ್ವಾನಿಸಲಾಗುತ್ತದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಎಂ. ಮಹೇಶ್ವರ್ ರಾವ್ ತಿಳಿಸಿದರು.


ಮಹೇಶ್ವರ್ ರಾವ್

‘ಅಭಿವೃದ್ಧಿ, ಕಾರ್ಯಾಚರಣೆ, ವರ್ಗಾವಣೆ (ಬಿಒಟಿ) ಆಧಾರದಲ್ಲಿ ಕೆಲವು ಪ್ರಕ್ರಿಯೆಗಳನ್ನು ಸೇರಿಸುವ ಕಾರ್ಯ ಪ್ರಗತಿಯಲ್ಲಿದೆ. ಇದೆಲ್ಲವನ್ನೂ ಮುಗಿಸಿ ಗರಿಷ್ಠ 15 ದಿನದೊಳಗೆ ಟೆಂಡರ್ ಕರೆಯುತ್ತೇವೆ’ ಎಂದು ಸುದ್ದಿಗಾರರಿಗೆ ಮಾಹಿತಿ ನೀಡಿದರು.

‘ಮರಗಳ ಗಣತಿ ಪ್ರಕ್ರಿಯೆ ನಡೆಯುತ್ತಿದ್ದು, ಈವರೆಗೆ ಸುಮಾರು ಆರು ಲಕ್ಷ ಮರಗಳ ಗಣತಿಯಾಗಿದೆ. ಇನ್ನು ಆರು ತಿಂಗಳಲ್ಲಿ ಗಣತಿ ಪ್ರಕ್ರಿಯೆ ಮುಗಿಯಲಿದೆ’ ಎಂದರು.

‘ಕೆಂಪೇಗೌಡ ದಿನಾಚರಣೆ ಜೂನ್ 27ರಂದು ನಡೆಯಲಿದೆ. ದೊಡ್ಡ ಪ್ರಮಾಣದಲ್ಲಿ ಕಾರ್ಯಕ್ರಮ ನಡೆಯಲಿದ್ದು, ಎಲ್ಲರೂ ಭಾಗವಹಿಸಲು ಅನುಕೂಲವಾಗುವಂತೆ ಆಯೋಜಿಸಲಾಗುತ್ತದೆ’ ಎಂದು ತಿಳಿಸಿದರು.

‘ಕೆ.ಆರ್. ಮಾರುಕಟ್ಟೆಯಲ್ಲಿ ಹಲವು ಕಡೆ ಕೆಟ್ಟ ಪರಿಸ್ಥಿತಿ ಇದೆ. ನೆಲ ಅಂತಸ್ತಿನಲ್ಲಿ ಒಳಚರಂಡಿ ನೀರು ತುಂಬಿರುತ್ತದೆ. ಈ ಮಾರುಕಟ್ಟೆಯನ್ನು ಸಮಗ್ರವಾಗಿ ಅಭಿವೃದ್ಧಿ ಮಾಡುವ ಬಗ್ಗೆ ಯೋಜನೆ ರೂಪಿಸಲಾಗುವುದು’ ಎಂದರು.

ಹೆನ್ನಾಗರ: ನಾಳೆ ಯಲ್ಲಮ್ಮ ದೇಗುಲ ಕುಂಭಾಭಿಷೇಕ

ಆನೇಕಲ್: ಜಿಗಣಿ ಹೋಬಳಿ ಹೆನ್ನಾಗರ ಗ್ರಾಮದ ಯಲ್ಲಮ್ಮ ದೇವಾಲಯದ ಜೀರ್ಣೋದ್ಧಾರ ಕುಂಭಾಭಿಷೇಕ, ಮೂಲ ದೇವರ ಮತ್ತು ನೂತನ ಶಿಲಾ ವಿಗ್ರಹ ಹಾಗೂ ವಿಮಾನ ಗೋಪುರ ಕಳಶ ಪ್ರತಿಷ್ಠಾಪನೆಯನ್ನು ಶ್ರೀಶೈಲದ ಡಾ.ಚನ್ನಸಿದ್ದರಾಮ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಉದ್ಘಾಟಿಸಲಿದ್ದಾರೆ.

ಕುಂಭಾಭಿಷೇಕದ ಪ್ರಯುಕ್ತ ಬುಧವಾರದಿಂದಲೇ ದೇವಸ್ಥಾನದಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮ ಆರಂಭವಾಗಿದ್ದು ಎರಡು ದಿನ ನಡೆಯಲಿವೆ. ದೇವಾಲಯ ಆವರಣದಲ್ಲಿ ಯಾಗ ಶಾಲೆ ಸ್ಥಾಪಿಸಲಾಗಿದೆ. ದೇವಾಲಯವನ್ನು ಪುಷ್ಪಗಳಿಂದ ಅಲಂಕರಿಸಲಾಗಿದೆ ಎಂದು ದೇವಾಲಯದ ಪ್ರಚಾರ ಸಮಿತಿ ಅಧ್ಯಕ್ಷ ಆರ್.ಕೆ.ಕೇಶವರೆಡ್ಡಿ ಬುಧವಾರ ತಿಳಿಸಿದರು. ಶ್ರೀಶೈಲದ ಚನ್ನಸಿದ್ದರಾಮ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಸಾನಿಧ್ಯ ವಹಿಸಲಿದ್ದಾರೆ. ಗುಮ್ಮಳಾಪುರ ಮಠದ ಶಿವಾನಂದ ಶಿವಾಚಾರ್ಯ ಸ್ವಾಮೀಜಿ, ನೆರಳೂರು ದಿನೇಶ್ ಶರ್ಮ ಗುರೂಜಿ ಪಾಲ್ಗೊಳ್ಳಲಿದ್ದಾರೆ ಎಂದ ದೇವಾಲಯ ಸೇವಾ ಟ್ರಸ್ಟ್ ಅಧ್ಯಕ್ಷ ಜಿ.ಸುರೇಶ್ ತಿಳಿಸಿದರು.

ಮಾಹಿತಿ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಪ್ರಚಾರ ಸಮಿತಿಯ ಮುಖ್ಯಸ್ಥ ಜಿ.ಮುನಿರಾಜು, ದೇವಾಲಯ ಸಮಿತಿಯ ಪ್ರಧಾನ ಕಾರ್ಯದರ್ಶಿ ನಾಗೇಶ್ ಜ್ಯೋತಯ್ಯ, ಖಜಾಂಚಿ ಎನ್.ರಮೇಶ್ ಇದ್ದರು.

21ಕ್ಕೆ ‘ಯಕ್ಷ ಸಿಂಧೂರ’ ಯಕ್ಷಗಾನ ಪ್ರದರ್ಶನ

ಬೆಂಗಳೂರು: ಟೀಮ್ ಕದಳಿ ಸಂಘಟನೆಯು ‘ಯಕ್ಷ ಸಿಂಧೂರ’ ಶೀರ್ಷಿಕೆಯಡಿ ಇದೇ 21ರಂದು ರಾತ್ರಿ 10 ಗಂಟೆಗೆ ಪೌರಾಣಿಕ ಯಕ್ಷಗಾನ ಪ್ರದರ್ಶನ ಹಮ್ಮಿಕೊಂಡಿದೆ.

ಕೊಳಗಿ ಕೇಶವ ಹೆಗಡೆ ಅವರ ಭಾಗವತಿಕೆಯಲ್ಲಿ ‘ಶ್ರೀರಾಮ ಪಟ್ಟಾಭಿಷೇಕ’ ಯಕ್ಷಗಾನ ಪ್ರದರ್ಶನ ಕಾಣಲಿದ್ದು, ಮುಮ್ಮೇಳದಲ್ಲಿ ಬಳ್ಕೂರು ಕೃಷ್ಣ ಯಾಜಿ (ದಶರಥ), ಸುಧೀರ್ ಉಪ್ಪೂರು (ಕೈಕೆ), ಸಿದ್ದಾಪುರ ಅಶೋಕ ಭಟ್ (ಮಂಥರೆ), ಗಣಪತಿ ಹೆಗಡೆ ತೋಟಿಮನೆ (ರಾಮ), ಪ್ರಕಾಶ್ ಕಿರಾಡಿ (ಲಕ್ಷ್ಮಣ), ನಾಗರಾಜ್ ದೇವಲ್ಕುಂದ (ಸೀತೆ) ಹಾಗೂ ಪ್ರಶಾಂತ್ ಹೆಗಡೆ (ವಸಿಷ್ಠ) ಪಾತ್ರಧಾರಿಗಳಾಗಿ ಬಣ್ಣ ಹಚ್ಚಲಿದ್ದಾರೆ.


ಬಳ್ಕೂರು ಕೃಷ್ಣ ಯಾಜಿ

‘ಸುದರ್ಶನ ವಿಜಯ’ ಪ್ರಸಂಗದ ಹಿಮ್ಮೇಳದಲ್ಲಿ ರಾಮಕೃಷ್ಣ ಹೆಗಡೆ ಹಿಲ್ಲೂರು, ಶ್ರೇಯಾ ಆಚಾರ್ಯ ಅಲಂಕಾರು ಭಾಗವಹಿಸಲಿದ್ದು, ಮುಮ್ಮೇಳದಲ್ಲಿ ಜಯಪ್ರಕಾಶ್ ಪೆರ್ಮುದೆ (ವಿಷ್ಣು), ಸಂತೋಷ್ ಹಿಲಿಯಾಣ (ಲಕ್ಷ್ಮೀ), ವಿದ್ಯಾಧರ ಜಲವಳ್ಳಿ (ಸುದರ್ಶನ), ವಿಶ್ವನಾಥ ಹೆನ್ನಾಬೈಲ್ (ಶತ್ರುಪ್ರಸೂದನ) ಹಾಗೂ ಪ್ರಜ್ವಲ್ ಕುಮಾರ್ (ದೇವೇಂದ್ರ) ಭಾಗವಹಿಸುತ್ತಾರೆ.

‘ರುಕ್ಮಿಣಿ ಕಲ್ಯಾಣ’ ಪ್ರಸಂಗಕ್ಕೆ ಸುರೇಶ ಶೆಟ್ಟಿ ಶಂಕರ ನಾರಾಯಣ ಅವರ ಭಾಗವತಿಕೆ ಇರಲಿದ್ದು, ಮುಮ್ಮೇಳದಲ್ಲಿ ಸುನಿಲ್ ಹೊಲಾಡು (ಭೀಷ್ಮಕ), ಸುಬ್ರಹ್ಮಣ್ಯ ಚಿಟ್ಟಾಣಿ (ರುಕ್ಮ), ಗೋಪಾಲ ಆಚಾರ್ (ಕೃಷ್ಣ), ನಾಗರಾಜ್ ದೇವಲ್ಕುಂದ (ರುಕ್ಮಿಣಿ), ಶೇಖರ ಶೆಟ್ಟಿ ಎಳಬೇರು (ಬ್ರಾಹ್ಮಣ ಹಾಗೂ ಕ್ಷೌರಿಕ) ಮತ್ತು ಪ್ರಶಾಂತ್ ಹೆಗಡೆ (ಶಿಶುಪಾಲ) ಪಾಲ್ಗೊಳ್ಳುತ್ತಾರೆ.

ಮುಂಗಡ ಟಿಕೆಟ್‌ಗಳಿಗೆ: ಮೊ.9036963626 ಅಥವಾ 9972368637

‘ಜುಲೈನಿಂದ ಇ- ಖಾತಾ ದಾಖಲೆ ವಿತರಣೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜುಲೈ ಒಂದರಿಂದ ಇಡೀ ತಿಂಗಳು ಆಸ್ತಿಯ ಇ-ಖಾತಾ ದಾಖಲೆಗಳನ್ನು ಜನರ ಮನೆ ಬಾಗಿಲಿಗೆ ತಲುಪಿಸುವ ಕೆಲಸ ಮಾಡಲಾಗುವುದು’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಬೆಂಗಳೂರು ಅಭಿವೃದ್ಧಿ, ವಿವಿಧ ಸಮಸ್ಯೆಗಳಿಗೆ ಪರಿಹಾರ, ನಂಬಿಕೆ ನಕ್ಷೆ, ಇ- ಖಾತಾ ವಿತರಣೆ, ಹಸಿರು ಬೆಂಗಳೂರು ಮತ್ತಿತರ ವಿಷಯಗಳ ಕುರಿತು ಬೆಂಗಳೂರು ವ್ಯಾಪ್ತಿಯ ಸಚಿವರು ಮತ್ತು ಕಾಂಗ್ರೆಸ್ ಶಾಸಕರ ಜತೆ ಬುಧವಾರ ಅವರು ಸಭೆ ನಡೆಸಿದರು.

ಬಳಿಕ ಮಾತನಾಡಿದ ಶಿವಕುಮಾರ್, ‘ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರ ಕ್ಷೇತ್ರದಲ್ಲಿ ಜುಲೈ ತಿಂಗಳಿನಿಂದ ಪ್ರಾಯೋಗಿಕವಾಗಿ ಇ- ಖಾತಾ ವಿತರಿಸಲಾಗುವುದು. 25 ಸಾವಿರ ಆಸ್ತಿಗಳ ಖಾತಾ ದಾಖಲೆಗಳು ಸಿದ್ಧಗೊಂಡಿವೆ’ ಎಂದರು.

‘ಬೆಂಗಳೂರಿನಲ್ಲಿ 25 ಲಕ್ಷ ಆಸ್ತಿಗಳಿವೆ. ಈ ಪೈಕಿ 5 ಲಕ್ಷ ಮಂದಿ ದಾಖಲೆಗಳನ್ನು ಅಪ್‌ಲೋಡ್ ಮಾಡಿದ್ದಾರೆ. 20 ಲಕ್ಷ ಆಸ್ತಿಗಳ ದಾಖಲೆಗಳ ಅಪ್‌ಲೋಡ್ ಬಾಕಿ ಇದೆ’ ಎಂದು ತಿಳಿಸಿದರು.

‘ಜುಲೈ 1ರಿಂದ ಇ- ಖಾತಾ ಆಂದೋಲನ ನಡೆಸಲಾಗುವುದು. ಆಸ್ತಿ ಮಾಲೀಕರು ತಮ್ಮ ದಾಖಲೆಗಳನ್ನು ನೀಡಿ ಇ- ಖಾತಾ ಮಾಡಿಸಿಕೊಳ್ಳಲು ಒಂದು ತಿಂಗಳ ಕಾಲ ಆಂದೋಲನ ಹಮ್ಮಿಕೊಳ್ಳಲಾಗುವುದು. ಈ ಕುರಿತು ಪ್ರತಿ ಮನೆಗೆ ತೆರಳಿ ಮಾಹಿತಿ ನೀಡಲಾಗುವುದು. ಅಲ್ಲದೆ, ಜಾಹೀರಾತು ಮೂಲಕವೂ ಪ್ರಚಾರ ಮಾಡಲಾಗುವುದು’ ಎಂದರು.

‘ನಗರದಲ್ಲಿ ವೈಟ್ ಟಾಪಿಂಗ್ ಕೆಲಸ ನಡೆಯುತ್ತಿದೆ. ಅನೇಕ ಕಡೆಗಳಲ್ಲಿ ಕಾಮಗಾರಿ ಗುಣಮಟ್ಟವನ್ನು ನಾನು ತಪಾಸಣೆ ಮಾಡಿದ್ದೇನೆ. ಕೆಲವು ಕಡೆ ಕಾಮಗಾರಿಗಳು ಪ್ರಗತಿಯಲ್ಲಿವೆ’ ಎಂದರು.

‘ಬಿ ಖಾತಾ ನೀಡುವ ವಿಚಾರವಾಗಿ ಸಚಿವ ಸಂಪುಟ ಸಭೆಯಲ್ಲಿ ಚರ್ಚೆ ಮಾಡಲಾಗಿದೆ. ಕಾನೂನು ಆಯಾಮಗಳ ಕುರಿತು ಚರ್ಚಿಸಿ ಅಧಿಕೃತವಾಗಿ ಘೋಷಣೆ ಮಾಡಲಾಗುವುದು’ ಎಂದು ತಿಳಿಸಿದರು.

ಸಚಿವರಾದ ಕೆ.ಜೆ. ಜಾರ್ಜ್, ಜಮೀರ್ ಅಹಮದ್ ಖಾನ್, ಕೃಷ್ಣ ಬೈರೇಗೌಡ, ಬೈರತಿ ಸುರೇಶ್, ಶಾಸಕರಾದ ರಿಜ್ವಾನ್ ಅರ್ಷದ್, ಎಂ. ಕೃಷ್ಣಪ್ಪ, ಪ್ರಿಯ ಕೃಷ್ಣ, ಆನೇಕಲ್ ಶಿವಣ್ಣ, ಎಂ.ಸಿ. ಶ್ರೀನಿವಾಸ್, ಬಿಜೆಪಿಯ ಉಚ್ಚಾಟಿತ ಶಾಸಕ ಎಸ್.ಟಿ. ಸೋಮಶೇಖರ್ ಸಭೆಯಲ್ಲಿದ್ದರು.

‘ಪಾಲಿಕೆ ರಚನೆ: ಚರ್ಚಿಸಿ ತೀರ್ಮಾನ’

‘ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯಲ್ಲಿ ಎಷ್ಟು ಪಾಲಿಕೆ ರಚನೆ ಮಾಡಬೇಕು ಎಂಬ ವಿಚಾರವಾಗಿ ಪಕ್ಷದ ಎಲ್ಲ ನಾಯಕರ ಜತೆ ಚರ್ಚೆ ಮಾಡಿದ್ದೇನೆ. ವಿರೋಧ ಪಕ್ಷದ ನಾಯಕರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು, ಚರ್ಚೆ ನಡೆಸಿದ ಬಳಿಕ ತೀರ್ಮಾನ ಮಾಡಲಾಗುವುದು’ ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

‘ಸ್ವಚ್ಛ ಬೆಂಗಳೂರು ಕಾರ್ಯಕ್ರಮದಡಿ ಬೆಂಗಳೂರಿನಲ್ಲಿ ಕಸ ವಿಲೇವಾರಿಗೆ ಸಹಾಯವಾಣಿ ಸಂಖ್ಯೆಯನ್ನು ಬಿಡುಗಡೆ ಮಾಡಲಾಗಿದೆ. ಸಾರ್ವಜನಿಕರು ಕಸವಿರುವ ಜಾಗದ ಫೋಟೊ ತೆಗೆದು ಈ ಸಂಖ್ಯೆಗೆ ರವಾನಿಸಿದರೆ ಒಂದು ವಾರದಲ್ಲಿ ಆ ಜಾಗದಲ್ಲಿರುವ ಕಸ ವಿಲೇವಾರಿ ಮಾಡಲಾಗುವುದು’ ಎಂದರು.

‘ತಮ್ಮ ಕ್ಷೇತ್ರಗಳಲ್ಲಿ ರಸ್ತೆ ಗುಂಡಿ ಮುಚ್ಚುವ ವಿಚಾರವಾಗಿ ಶಾಸಕರು ಗಮನಹರಿಸುವಂತೆ ಸೂಚನೆ ನೀಡಿದ್ದೇನೆ. ರಸ್ತೆ ಕಾಮಗಾರಿಗೆ ಅನುದಾನವನ್ನೂ ನೀಡಲಾಗುವುದು’ ಎಂದು ಮಾಹಿತಿ ನೀಡಿದರು.

ಚಟಿಕೆ ಸುದ್ದಿ

₹10 ಲಕ್ಷ ಲಂಚ ಬಿಬಿಎಂಪಿ ಇಇ ಬಂಧನ

ಬೆಂಗಳೂರು: ಗುತ್ತಿಗೆದಾರರೊಬ್ಬರ ಬಿಲ್ ಪಾಸು ಮಾಡಲು ₹10 ಲಕ್ಷ ಲಂಚ ಪಡೆಯುತ್ತಿದ್ದ ವೇಳೆ ಬಿಬಿಎಂಪಿಯ ಕಾರ್ಯಪಾಲಕ ಎಂಜಿನಿಯರ್ ಎಚ್.ವಿ.ಯರಪ್ಪ ರೆಡ್ಡಿ ಅವರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

'ಗುತ್ತಿಗೆದಾರ ಹೇಮಂತ್ ಜಿ.ಎಂ. ಅವರು ಬಿಬಿಎಂಪಿಯ ಸಿ.ವಿ.ರಾಮನ್ ನಗರ ವಿಭಾಗದಲ್ಲಿ ಹಲವು ಕಾಮಗಾರಿಗಳನ್ನು ನಡೆಸಿದ್ದು, ಬಿಲ್ ಪಾವತಿ ಬಾಕಿ ಇದೆ. ಬಿಲ್ ಪಾವತಿಗೆ ಕ್ರಮ ತೆಗೆದುಕೊಳ್ಳುವಂತೆ ಕಾರ್ಯಪಾಲಕ ಎಂಜಿನಿಯರ್ ಯರಪ್ಪ ರೆಡ್ಡಿ ಅವರನ್ನು ಭೇಟಿ ಮಾಡಿದಾಗ, ₹10 ಲಕ್ಷ ಲಂಚ ನೀಡುವಂತೆ ಬೇಡಿಕೆ ಸಲ್ಲಿಸಿದ್ದರು' ಎಂದು ಲೋಕಾಯುಕ್ತದ ಪ್ರಕಟಣೆ ತಿಳಿಸಿದೆ. ಹೇಮಂತ್ ಅವರು ಬುಧವಾರ ಯರಪ್ಪ ರೆಡ್ಡಿ ಅವರನ್ನು ಭೇಟಿ ಮಾಡಿ ₹10 ಲಕ್ಷ ನೀಡಿದ್ದರು. ಆಗ ದಾಳಿ ನಡೆಸಿ, ಅವರನ್ನು ಬಂಧಿಸಲಾಯಿತು' ಎಂದು ಮಾಹಿತಿ ನೀಡಿದೆ.

'ಲೋಕಾಯುಕ್ತ ಡಿವೈಎಸ್‌ಪಿ ಬಿ.ಎಲ್. ಶ್ರೀನಿವಾಸಮೂರ್ತಿ, ನೇತೃತ್ವದಲ್ಲಿ ಕಾರ್ಯಾಚರಣೆ ನಡೆಯಿತು.

ಮೂವರು ಪುತ್ರಿಯರ ಜೊತೆ ತಾಯಿ ಆತ್ಮಹತ್ಯೆ

ಕುರುಗೋಡು (ಬಳ್ಳಾರಿ ಜಿಲ್ಲೆ): ಇಲ್ಲಿನ ದಮ್ಮೂರು ಗ್ರಾಮದ ಜಮೀನಿನಲ್ಲಿ ಕೃಷಿ ಹೊಂಡಕ್ಕೆ ಬಿದ್ದು ಕುರಿಗಾಹಿ ಕುಟುಂಬದ ಮಹಿಳೆ, ಮೂವರು ಪುತ್ರಿಯರ ಜೊತೆಗೆ ಆತ್ಮಹತ್ಯೆ ಮಾಡಿ ಕೊಂಡಿದ್ದಾರೆ.

ಸಿದ್ದವ್ವ ಅಲಿಯಾಸ್ ಲಕ್ಷ್ಮಿ (29), ಪುತ್ರಿಯರಾದ ಅಭಿಜ್ಞಾ (7) ಅವನಿ (5) ಮತ್ತು ಆರಾಧ್ಯ (3) ಮೃತರು. ಮಹಾರಾಷ್ಟ್ರದ ಕೊಲ್ಲಾಪುರ ಜಿಲ್ಲೆಯ ಗ್ರಾಮದಲ್ಲಿ ಕುಟುಂಬ ಬೀಡುಬಿಟ್ಟಿತ್ತು.

ಮಂಗಳವಾರ ಸಿದ್ದವ್ವ ಪುತ್ರಿಯರೊಂದಿಗೆ ಕಾಣೆಯಾಗಿದ್ದರು. ಬುಧವಾರ ಬೆಳಿಗ್ಗೆ ಕೃಷಿಹೊಂಡದಲ್ಲಿ ಮೃತದೇಹಗಳು ಪತ್ತೆಯಾಗಿವೆ. ಬೆಳಗಾವಿ ಜಿಲ್ಲೆಯ ಹೊಸೂರ ಗ್ರಾಮದ ಸಿದ್ದವ್ವ ಮತ್ತು ಸಂಜಯ ಹತ್ತು ವರ್ಷದ ಹಿಂದೆ ವಿವಾಹವಾಗಿದ್ದರು.

'ಪತಿಯ ಕಿರುಕುಳ ಆತ್ಮಹತ್ಯೆಗೆ ಕಾರಣವೆಂದು ಸಿದ್ದವ್ವ ತಾಯಿ ರೇಣುಕಾ ದೂರು ನೀಡಿದ್ದಾರೆ. ಸಂಜಯನನ್ನು ವಶಕ್ಕೆ ಪಡೆಯಲಾಗಿದೆ' ಎಂದು ಕುರುಗೋಡು ಠಾಣೆ ಸರ್ಕಲ್ ಇನ್‌ಸ್ಪೆಕ್ಟರ್ ವಿಶ್ವನಾಥ ಹಿರೇಗೌಡರ್ ತಿಳಿಸಿದ್ದಾರೆ.

ಬಾಗೇಪಲ್ಲಿಗೆ 'ಭಾಗ್ಯನಗರ'ದ ಭಾಗ್ಯ?

ಈಡೇರಲಿದೆಯೇ ವರನಟನ ಆಶಯ • ಸಚಿವ ಸಂಪುಟದ ಮುಂದೆ ಟಿಪ್ಪಣಿ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ಈ ಬಾಗೇಪಲ್ಲಿ ಭಾಗ್ಯನಗರವಾಗಲಿ. ಎಲ್ಲ ಭಾಗ್ಯವೂ ಇಲ್ಲಿ ತುಂಬಿಕೊಳ್ಳಲಿ...

–1987ರ ಸೆ.9ರಂದು ಬಾಗೇಪಲ್ಲಿಯ ಬಾಲಕಿಯರ ಸರ್ಕಾರಿ ಶಾಲೆ ಆವರಣದಲ್ಲಿ ಕನ್ನಡ ಕಲಾ ಸಂಘ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ವರನಟ ರಾಜ್‌ಕುಮಾರ್ ಅವರು ಹೀಗೆ ಆಶಿಸಿದ್ದರು. ಅವರ ಆಶಯ ಮೂರು ಮುಕ್ಕಾಲು ದಶಕದ ನಂತರ ಈಡೇರುವ ನಿರೀಕ್ಷೆ ಕಾಣುತ್ತಿದೆ.

ಬಾಗೇಪಲ್ಲಿ ಹೆಸರನ್ನು ಭಾಗ್ಯನಗರ ಎಂದು ಬದಲಿಸಲು ಸಚಿವ ಸಂಪುಟ ಸಭೆಯಲ್ಲಿ ನಿರ್ಣಯಿಸಲು ಬಾಗೇಪಲ್ಲಿ ಶಾಸಕ ಎಸ್.ಎನ್. ಸುಬ್ಬಾರೆಡ್ಡಿ ಸರ್ಕಾರಕ್ಕೆ ಕೋರಿದ್ದರು. ಗುರುವಾರ ನಂದಿ ಬೆಟ್ಟದಲ್ಲಿ ನಡೆಯಬೇಕಿದ್ದ ಸಚಿವ ಸಂಪುಟ ಸಭೆಯಲ್ಲಿ 'ಭಾಗ್ಯನಗರ' ಎಂದು ಬದಲಿಸುವ ಸಂಬಂಧ ಕಂದಾಯ ಇಲಾಖೆಯು ಟಿಪ್ಪಣಿ ಲಗತ್ತಿಸಿದೆ. ಸಚಿವ ಸಂಪುಟದ ಕಾರ್ಯಸೂಚಿ ಪಟ್ಟಿಯಲ್ಲಿ ಈ ವಿಷಯವೂ ಅಡಕವಾಗಿದೆ. ಈಗ ಸಂಪುಟ ಸಭೆ ಬೆಂಗಳೂರಿಗೆ ಸ್ಥಳಾಂತರವಾಗಿದ್ದು, ಕಾರ್ಯಸೂಚಿಯಲ್ಲಿ ಯಾವುದೇ ಬದಲಾವಣೆ ಆಗಿಲ್ಲ.

ಆಂಧ್ರಪ್ರದೇಶದ ಗಡಿಗೆ ಹೊಂದಿಕೊಂಡಿರುವ ಬಾಗೇಪಲ್ಲಿಯಲ್ಲಿ ತೆಲುಗು ಭಾಷೆಯ ದಟ್ಟ ಪ್ರಭಾವವಿದೆ. ಹೆಸರು ಬದಲಾವಣೆಗೆ ಆಗ್ರಹಿಸಿ ಹಲವು ದಶಕಗಳಿಂದ ಗಡಿ ತಾಲ್ಲೂಕಿನಲ್ಲಿ ಹೋರಾಟಗಳು ನಡೆದಿವೆ. ಭಾಗ್ಯನಗರ ಹೋರಾಟ ಸಮಿತಿ ಸಹ ಅಸ್ತಿತ್ವಕ್ಕೆ ಬಂದಿತ್ತು.

2021ರಲ್ಲಿ ಹೆಸರು ಬದಲಾವಣೆ ಸಂಬಂಧ ಶಾಸಕರು ಸರ್ಕಾರಕ್ಕೆ ಮನವಿ ಸಲ್ಲಿಸಿದ್ದರು. 'ಬಾಗೇಪಲ್ಲಿಯನ್ನು ಭಾಗ್ಯನಗರ ಮಾಡಲು ಕ್ರಮ ಕೈಗೊಳ್ಳಬೇಕು' ಎಂದು ರಾಜ್ಯ ಸರ್ಕಾರದ ಅಧೀನ ಕಾರ್ಯದರ್ಶಿ 2021ರ ಜನವರಿಯಲ್ಲಿ ಜಿಲ್ಲಾಧಿಕಾರಿಗೆ ಪತ್ರ ಬರೆದಿದ್ದರು.

ಆದರೆ, ಆ ನಂತರ ಯಾವುದೇ ಪ್ರಕ್ರಿಯೆಗಳೂ ನಡೆಯಲಿಲ್ಲ. ಸರ್ಕಾರದಿಂದ ಅಧಿಕೃತ ಆದೇಶವೂ ಹೊರ ಬೀಳಲಿಲ್ಲ. ಈಗ ಸಚಿವ ಸಂಪುಟ ಸಭೆ ಐತಿಹಾಸಿಕ ನಿರ್ಣಯ ತೆಗೆದುಕೊಳ್ಳಲಿದೆ ಎನ್ನುವ ಆಶಾಭಾವನೆ ಬಾಗೇಪಲ್ಲಿ ಜನರಲ್ಲಿದೆ.

ಮುಖ್ಯಾಂಶಗಳು

- ಭಾಗ್ಯನಗರವಾಗಲಿ ಎಂದು 1987ರಲ್ಲಿ ಆಶಿಸಿದ್ದ ವರನಟ
- ಹೆಸರು ಬದಲಾವಣೆಗೆ 2021ರಲ್ಲಿ ಶಾಸಕರಿಂದ ಮನವಿ
- ಗರಿಗೆದರಿದ ನಿರೀಕ್ಷೆ

ಅರ್ಧದಷ್ಟು ಗ್ರಾಮಗಳು 'ಪಲ್ಲಿ'ಗಳೇ

ಬಾಗೇಪಲ್ಲಿ ತಾಲ್ಲೂಕಿನ ಅರ್ಧಕ್ಕಿಂತ ಹೆಚ್ಚು ಹಳ್ಳಿಗಳ ಹೆಸರುಗಳು 'ಪಲ್ಲಿ' ಯಿಂದಲೇ ಕೊನೆಗೊಳ್ಳುತ್ತವೆ. ತೆಲುಗಿನಲ್ಲಿ 'ಪಲ್ಲಿ' ಎಂದರೆ 'ಹಳ್ಳಿ' ಎಂದರ್ಥ. ಸದ್ಯ ಬಾಗೇಪಲ್ಲಿಗೆ ಮಾತ್ರ ಹೆಸರು ಬದಲಾವಣೆ 'ಭಾಗ್ಯ' ದೊರೆಯುವ ಸಾಧ್ಯತೆ ಇದೆ.

ಸ್ಮಾರ್ಟ್ ಮೀಟರ್ ಅಳವಡಿಕೆಗೆ ಚಿಂತನೆ

ಆರ್‌ಡಿಎಸ್‌ಎಸ್: ಪ್ರಸ್ತಾವ ಮಂಡಿಸಲು ಪ್ರಾಥಮಿಕ ಚರ್ಚೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರ ರೂಪಿಸಿರುವ ರೀ–ಮ್ಯಾಪ್ಡ್ ಡಿಸ್ಟ್ರಿಬ್ಯೂಷನ್ ಸೆಕ್ಟರ್ ಸ್ಕೀಂ (ಆರ್‌ಡಿಎಸ್‌ಎಸ್) ಯೋಜನೆಯ ಮೂಲಕ ಮುಂಬರುವ ದಿನಗಳಲ್ಲಿ ಎಲ್ಲ ಪ್ರಕಾರದ ಗ್ರಾಹಕರಿಗೂ ಸ್ಮಾರ್ಟ್ ಮೀಟರ್ ಅಳವಡಿಸಲು ರಾಜ್ಯ ಸರ್ಕಾರ ಚಿಂತನೆ ನಡೆಸಿದೆ. ಈ ಕುರಿತಂತೆ ಸಚಿವ ಸಂಪುಟ ಸಭೆಗೆ ಪ್ರಸ್ತಾವ ಮಂಡಿಸಲು ಇಂಧನ ಇಲಾಖೆ ಮುಂದಾಗಿದೆ.

'ಆರ್‌ಡಿಎಸ್‌ಎಸ್ ಯೋಜನೆಯನ್ನು ಕೇಂದ್ರ ಸರ್ಕಾರ ಇನ್ನೂ ಎರಡು ವರ್ಷ ವಿಸ್ತರಿಸುವ ಸಾಧ್ಯತೆ ಇದೆ. ಈ ಕಾರಣಕ್ಕೆ ರಾಜ್ಯದಲ್ಲಿ ಹಂತ-ಹಂತವಾಗಿ ಯೋಜನೆ ಜಾರಿಗೆ ಉದ್ದೇಶಿಸಲಾಗಿದೆ. ಆದರೆ, ಯೋಜನೆ ಬಗ್ಗೆ ಸಂಪುಟ ಸಭೆ ನಿರ್ಧಾರ ತೆಗೆದುಕೊಳ್ಳಲಿದೆ. ಯೋಜನೆ ಜಾರಿಯಾದರೆ ಎಲ್ಲ ಗ್ರಾಹಕರಿಗೂ ಸ್ಮಾರ್ಟ್ ಮೀಟರ್ ಬರಲಿದೆ' ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ತಿಳಿಸಿದರು.

ಸುದ್ದಿಗಾರರ ಜೊತೆ ಬುಧವಾರ ಸಂವಾದ ನಡೆಸಿದ ಅವರು, 'ಈ ಕುರಿತ ಪ್ರಸ್ತಾವ ಇನ್ನೂ ಪ್ರಾಥಮಿಕ ಹಂತದಲ್ಲಿದೆ' ಎಂದರು.

'ಸರ್ಕಾರದ ಅಂಗಸಂಸ್ಥೆಗಳು ಸುಮಾರು ₹15 ಸಾವಿರ ಕೋಟಿ ವಿದ್ಯುತ್ ಬಿಲ್ ಬಾಕಿ ಉಳಿಸಿಕೊಂಡಿವೆ. ಹೀಗಾಗಿ, ಆರ್‌ಡಿಎಸ್‌ಎಸ್ ಜಾರಿಗೊಳಿಸಲು ಸಾಧ್ಯವಾಗಿಲ್ಲ. ಈಗ ಕೇಂದ್ರ ಇಂಧನ ಸಚಿವರ ನಿರ್ದೇಶನದ ಮೇರೆಗೆ ಆರಂಭದಲ್ಲಿ ಸರ್ಕಾರಿ ಕಚೇರಿಗಳು, ನಂತರ ಸ್ಥಳೀಯ ಸಂಸ್ಥೆಗಳಿಗೆ ಸ್ಮಾರ್ಟ್ ಮೀಟರ್ ಜಾರಿಗೆ ಉದ್ದೇಶಿಸಲಾಗಿದೆ. ಸ್ಥಳೀಯ ಸಂಸ್ಥೆಗಳಿಗೆ ಶೇ 2ರಷ್ಟು ಸೆಸ್ ವಿಧಿಸಿ, ಆ ಮೂಲಕ ಬಾಕಿ ಸಂಗ್ರಹಿಸುವ ಚಿಂತನೆ ಇದೆ' ಎಂದರು.

ಕೆಪಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕ ಪಂಕಜ್ ಕುಮಾರ್ ಪಾಂಡೆ ಮಾತನಾಡಿ, 'ರಾಜ್ಯದಲ್ಲಿ ವಿದ್ಯುತ್ ಪ್ರಸರಣ ಮಾರ್ಗದ ಸಾಮರ್ಥ್ಯವನ್ನು 35 ಸಾವಿರ ಮೆಗಾವಾಟ್‌ಗೆ ಹೆಚ್ಚಿಸುವ ಗುರಿ ಇತ್ತು. ಈಗ ಅದನ್ನು 50 ಸಾವಿರ ಮೆಗಾವಾಟ್ ಸಾಮರ್ಥ್ಯಕ್ಕೆ ತಲುಪಿಸುವ ಗುರಿಯೊಂದಿಗೆ ಯೋಜನೆ ರೂಪಿಸುತ್ತಿದ್ದೇವೆ. ಈ ಸಂಬಂಧ ಏಪ್ರಿಲ್‌ನಲ್ಲೇ ಅಧ್ಯಯನ ನಡೆದಿದ್ದು, ರಾಜ್ಯದ ಉತ್ತರ, ದಕ್ಷಿಣ ಮತ್ತು ಕೇಂದ್ರ ಭಾಗದಲ್ಲಿ ಮೂರು 765 ಕೆ.ವಿ. ಸಾಮರ್ಥ್ಯದ ಉಪಕೇಂದ್ರಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ' ಎಂದರು.

ಇಂಧನ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ, ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಎನ್. ಶಿವಶಂಕರ್ ಇದ್ದರು.

'ಜೆಸಿಬಿ, ಲಾರಿಯಿಂದ ಸಮಸ್ಯೆ ಇಲ್ಲವೇ?'



'ಶರಾವತಿ ವಿದ್ಯುದಾಗರದಿಂದ ಸಾವಿರ ಮೆಗಾವಾಟ್ ವಿದ್ಯುತ್ ಉತ್ಪಾದನೆ ಆಗುತ್ತಿದೆ. ಪಂಪ್ಡ್ ಸ್ಟೋರೇಜ್ ಅನುಷ್ಠಾನಗೊಂಡರೆ ಉತ್ಪಾದನೆ ಸಾಮರ್ಥ್ಯ ಮೂರು ಪಟ್ಟು, ಅಂದರೆ 3 ಸಾವಿರ ಮೆಗಾವಾಟ್ ಆಗಲಿದೆ. ಆದರೆ, ಇದಕ್ಕೆ ವಿರೋಧ ವ್ಯಕ್ತಪಡಿಸುವುದು ಸರಿ ಅಲ್ಲ' ಎಂದು ಕೆ.ಜೆ ಜಾರ್ಜ್ ಹೇಳಿದರು.

'ಪಶ್ಚಿಮಘಟ್ಟ ಪ್ರದೇಶದಲ್ಲಿ ಈ ಯೋಜನೆ ಅನುಷ್ಠಾನಗೊಳ್ಳುವುದರಿಂದ ಪಶ್ಚಿಮಘಟ್ಟ ಮತ್ತು ಅಲ್ಲಿನ ಪ್ರಾಣಿಗಳಿಗೆ ತೊಂದರೆ ಆಗುವುದಿಲ್ಲವೇ' ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸಚಿವರು, 'ಅಲ್ಲಿ ಜೆಸಿಬಿ ಮತ್ತು ಲಾರಿಗಳು ಸಂಚರಿಸುತ್ತವೆ. ಅದರಿಂದ ಅಲ್ಲಿನ ಪ್ರಾಣಿಗಳಿಗೆ ಸಮಸ್ಯೆ ಆಗುವುದಿಲ್ಲವೇ? ಯೋಜನೆಯಿಂದಲೇ ಸಮಸ್ಯೆ ಆಗುತ್ತದೆಯೇ? ಅಷ್ಟಕ್ಕೂ ಪೈಪ್‌ಲೈನ್ ಅಳವಡಿಕೆ ಸಂದರ್ಭದಲ್ಲಿ ಸ್ವಲ್ಪ ತೊಂದರೆ ಆಗಬಹುದು. ನಂತರ ಯಥಾಸ್ಥಿತಿಗೆ ತರಲಾಗುವುದು' ಎಂದರು.

ಮುಖ್ಯಾಂಶಗಳು

- ಆರ್‌ಡಿಎಸ್‌ಎಸ್ ಯೋಜನೆ ಇನ್ನೂ 2 ವರ್ಷ ವಿಸ್ತರಣೆ ಸಾಧ್ಯತೆ
- ಸರ್ಕಾರಿ ಸಂಸ್ಥೆಗಳಿಂದ ₹15 ಸಾವಿರ ಕೋಟಿ ವಿದ್ಯುತ್ ಬಿಲ್ ಬಾಕಿ

ಪ್ರಿಯಾಂಕ್ ಖರ್ಗೆ ಅಮೆರಿಕ ಪ್ರವಾಸಕ್ಕೆ ಸಿಗದ ಅನುಮತಿ

ಬೆಂಗಳೂರು: 'ನಾನು ಅಧಿಕೃತ ಪ್ರವಾಸದ ಮೇಲೆ ಅಮೆರಿಕಕ್ಕೆ ತೆರಳಲು ವಿದೇಶಾಂಗ ವ್ಯವಹಾರಗಳ ಸಚಿವಾಲಯವು ಅನುಮತಿ ನಿರಾಕರಿಸಿದೆ' ಎಂದು ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.

ಪ್ಯಾರಿಸ್‌ನಲ್ಲಿ ನಡೆಯುತ್ತಿರುವ 'ವೈವಾಟೆಕ್–2025', 'ಪ್ಯಾರಿಸ್ ಏರ್ ಶೋ'ನಲ್ಲಿ ಭಾಗಿಯಾಗಿದ್ದ ಅವರು ಅಲ್ಲಿಂದಲೇ ಅಮೆರಿಕದ ಸ್ಯಾನ್‌ಫ್ರಾನ್ಸಿಸ್ಕೊಗೆ ತೆರಳಬೇಕಿತ್ತು. ಆದರೆ ವಿದೇಶಾಂಗ ಸಚಿವಾಲಯವು ಅನುಮತಿ ನಿರಾಕರಿಸಿದೆ ಎಂದು ಅವರು ಹೇಳಿದ್ದಾರೆ.



ಪ್ರಿಯಾಂಕ್ ಖರ್ಗೆ

ಈ ಕುರಿತು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಪ್ರಿಯಾಂಕ್, 'ನಾನು ಈಗ ಯಾವುದೇ ಹೇಳಿಕೆ ನೀಡುವುದಿಲ್ಲ. ಬೆಂಗಳೂರಿಗೆ ಬಂದ ನಂತರ, ಅನುಮತಿ ನಿರಾಕರಣೆಗೆ ಕಾರಣಗಳೇನು ಎಂದು ಸಚಿವಾಲಯದಿಂದ ವಿವರಣೆ ಕೇಳುತ್ತೇನೆ' ಎಂದಿದ್ದಾರೆ.

'ಪ್ರಿಯಾಂಕ್ ಖರ್ಗೆ ಅವರು ಮಾನ್ಯತೆ ಇರುವ ವೀಸಾ ಹೊಂದಿದ್ದಾರೆ. ಜತೆಗೆ ಅಧಿಕೃತ ಕಾರ್ಯಕ್ರಮದಲ್ಲಿ ರಾಜ್ಯ ಸರ್ಕಾರದ ಪ್ರತಿನಿಧಿಯಾಗಿ ಭಾಗಿಯಾಗುತ್ತಿದ್ದಾರೆ. ಯಾವ ಕಾರಣಕ್ಕಾಗಿ ಅನುಮತಿ ನಿರಾಕರಿಸಲಾಗಿದೆ ಎಂಬುದು ಗೊತ್ತಿಲ್ಲ' ಎಂದು ಮೂಲಗಳು ಹೇಳಿವೆ.

ಎತ್ತಿನ ಬಂಡಿ ಉತ್ಸವ...

ಚಿತ್ರ: ಮಾಲತೇಶ ಇಚ್ಚಂಗಿ



ಹಾವೇರಿ ತಾಲ್ಲೂಕಿನ ಕರ್ಜಗಿ ಗ್ರಾಮದಲ್ಲಿ ಬುಧವಾರ ಬ್ರಹ್ಮಲಿಂಗೇಶ್ವರ ಜಾತ್ರೆ ಪ್ರಯುಕ್ತ ಎತ್ತಿನ ಬಂಡಿ ಉತ್ಸವ ಜರುಗಿತು

ವಾಣಿಜ್ಯ ಸಂಸ್ಥೆಗಳ ಕಾಯ್ದೆ ತಿದ್ದುಪಡಿಗಾಗಿ ನಡೆದ ಸಭೆ

ದುಡಿಮೆ ಅವಧಿ ಹೆಚ್ಚಳಕ್ಕೆ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾರ್ಮಿಕರ ದುಡಿಮೆಯ ಅವಧಿಯನ್ನು 10 ಗಂಟೆಗೆ ಹೆಚ್ಚಿಸುವ ರಾಜ್ಯ ಸರ್ಕಾರದ ಪ್ರಸ್ತಾವಕ್ಕೆ ಕಾರ್ಮಿಕ ಸಂಘಟನೆಗಳು ತೀವ್ರ ವಿರೋಧ ವ್ಯಕ್ತಪಡಿಸಿವೆ. ಆದರೆ, ಸರ್ಕಾರದ ಈ ಚಿಂತನೆಯನ್ನು ಕೈಗಾರಿಕೋದ್ಯಮಿಗಳ ಸಂಘಟನೆಗಳು ಸ್ವಾಗತಿಸಿವೆ.

ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆಗೆ ತಿದ್ದುಪಡಿ ಮಾಡುವ ಕುರಿತು ಕಾರ್ಮಿಕ ಇಲಾಖೆಯ ಕಾರ್ಯದರ್ಶಿ ರೋಹಿಣಿ ಸಿಂಧೂರಿ ಅಧ್ಯಕ್ಷತೆಯಲ್ಲಿ ಕೈಗಾರಿಕೋದ್ಯಮಿಗಳು ಮತ್ತು ಕಾರ್ಮಿಕ ಸಂಘಟನೆಗಳ ಪ್ರತಿನಿಧಿಗಳ ಜತೆ ಬುಧವಾರ ಸಭೆ ನಡೆಯಿತು.

ದುಡಿಮೆಯ ಅವಧಿ ಹೆಚ್ಚಿಸುವ ಸಂಬಂಧ ಕಾಯ್ದೆ ತಿದ್ದುಪಡಿಗೆ ಮುಂಬರುವ ಅಧಿವೇಶನದಲ್ಲಿ ಮಸೂದೆ ಮಂಡಿಸಲು ಕಾರ್ಮಿಕ ಇಲಾಖೆ ಮುಂದಾಗಿದೆ. ಇದರ ಜತೆಗೆ ಕಾರ್ಮಿಕರ ಕನಿಷ್ಠ ವೇತನ ಕಾಯ್ದೆ ತಿದ್ದುಪಡಿ ಬಗ್ಗೆಯೂ ಚರ್ಚೆ ಆರಂಭವಾಗಿದೆ ಎಂದು ಇಲಾಖೆಯ ಮೂಲಗಳು ತಿಳಿಸಿವೆ.

ಮುಖ್ಯಾಂಶಗಳು

- ದುಡಿಮೆ ಅವಧಿ ಹೆಚ್ಚಿಸಿದ್ದಾಗ ವಿರೋಧಿಸಿದ್ದ ಕಾಂಗ್ರೆಸ್
- ಫಲಪ್ರದವಾಗದೇ ಕೊನೆಗೊಂಡ ಸಭೆ

ಏನಿದು ಪ್ರಸ್ತಾವ?: 20ಕ್ಕಿಂತ ಹೆಚ್ಚು ಕಾರ್ಮಿಕರನ್ನು ಹೊಂದಿರುವ ಉತ್ಪಾದನಾ ಘಟಕಗಳಲ್ಲಿ ದಿನದ ಕೆಲಸದ ಅವಧಿಯನ್ನು 8ರಿಂದ 10 ಗಂಟೆಗೆ ಹೆಚ್ಚಿಸುವ ಬಗ್ಗೆ ಕೇಂದ್ರ ಸರ್ಕಾರ ಈಗಾಗಲೇ ಕಾಯ್ದೆ ರೂಪಿಸಿದೆ. ಅದಕ್ಕೆ ಪೂರಕವಾಗಿ ರಾಜ್ಯಗಳು ಕಾನೂನು ತಿದ್ದುಪಡಿ ಮಾಡಬೇಕಿದೆ. ರಾಜ್ಯದಲ್ಲಿಯೂ ಕಾಯ್ದೆಗೆ ತಿದ್ದುಪಡಿ ತರುವ ಉದ್ದೇಶದಿಂದ ಕಾರ್ಮಿಕ ಇಲಾಖೆಯು ಸಭೆ ಆಯೋಜಿಸಿತ್ತು. ಆದರೆ, ಈ ತಿದ್ದುಪಡಿಗೆ ಕಾರ್ಮಿಕ ಸಂಘಟನೆಗಳು ಬಲವಾಗಿ ವಿರೋಧ ವ್ಯಕ್ತಪಡಿಸಿದ ಕಾರಣ ಮತ್ತೊಮ್ಮೆ ಚರ್ಚೆ ನಡೆಸಲು ತೀರ್ಮಾನಿಸಲಾಗಿದೆ.

'ಕಾಯ್ದೆ ತಿದ್ದುಪಡಿ ಮಾಡಿದರೆ ಕಾರ್ಮಿಕರ ಶೋಷಣೆ ಆಗಲಿದೆ. ಯಾವುದೇ ಕಾರಣಕ್ಕೂ ಕಾರ್ಮಿಕ ಕಾಯ್ದೆಗೆ ತಿದ್ದುಪಡಿ ಮಾಡಬಾರದು. ಒಂದು ಸಂಸ್ಥೆಯಲ್ಲಿ 10 ಮತ್ತು ಅದಕ್ಕಿಂತ ಕಡಿಮೆ ಕಾರ್ಮಿಕರು ಇದ್ದಾಗ ಕಾರ್ಮಿಕ ನಿಯಮಾವಳಿಯಿಂದ ಹೊರಗಿಡಬೇಕು ಎಂಬುದನ್ನು ಒಪ್ಪಲು ಸಾಧ್ಯವಿಲ್ಲ' ಎಂದು ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿಯ ವರಲಕ್ಷ್ಮೀ ಮತ್ತು ಇತರರು ಆಗ್ರಹಿಸಿದರು. 'ಇದು ಕಾರ್ಮಿಕರ ಪರವಾಗಿದೆ. ಈ ತಿದ್ದುಪಡಿಗಳನ್ನು ಸ್ವಾಗತಿಸುತ್ತೇವೆ' ಎಂದು ಕೈಗಾರಿಕೆಗಳು ಮತ್ತು ವಾಣಿಜ್ಯ ಸಂಸ್ಥೆಗಳ ಮಾಲೀಕರ ಪರವಾಗಿ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಪಿ.ಸಿ.ರಾವ್ ತಿಳಿಸಿದರು.

ಇಂಟಕ್, ಎಐಟಿಯುಸಿ, ಎಚ್‌ಎಂಎಸ್, ಸಿಐಟಿಯು, ಎಐಯುಟಿಯುಸಿ, ಎಐಸಿಸಿಟಿಯು, ಟಿಯುಸಿಸಿ, ಎಚ್‌ಎಂಕೆಪಿ ಸಂಘಟನೆ ಮುಖಂಡರು, ಎಫ್‌ಕೆಸಿಸಿಐ, ಬಿಸಿಐಸಿ, ಕೆಇಎ, ಕ್ಲಾತ್ ಮರ್ಚೆಂಟ್ ಅಸೋಸಿಯೇಶನ್, ಗ್ರೇಟರ್ ಬೆಂಗಳೂರು ಎಂಪ್ಲಾಯೀಸ್ ಅಸೋಸಿಯೇಶನ್ ಸಹಿತ ವಿವಿಧ ಸಂಸ್ಥೆಗಳ ಪದಾಧಿಕಾರಿಗಳು ಇದ್ದರು.

₹500 ಲಂಚ; 30 ವರ್ಷಗಳ ಬಳಿಕ ಶಿಕ್ಷೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಅಣ್ಣ– ತಮ್ಮಂದಿರ ಹೆಸರಿಗೆ ಜಮೀನು ಖಾತೆ ಮಾಡಿಕೊಡಲು ₹500 ಲಂಚ ಪಡೆದಿದ್ದ ಗ್ರಾಮಲೆಕ್ಕಿಗನಿಗೆ (ವಿಲೇಜ್ ಅಕೌಂಟಂಟ್) 30 ವರ್ಷಗಳ ಬಳಿಕ ಜೈಲು ಶಿಕ್ಷೆ ಆಗಿದೆ. ಸುಪ್ರೀಂ ಕೋರ್ಟ್ ಈ ಕುರಿತು ತೀರ್ಪು ನೀಡಿದೆ.

'ಬೆಳಗಾವಿ ತಾಲ್ಲೂಕಿನ ಕಡೋಲಿ ಗ್ರಾಮ ಲೆಕ್ಕಿಗ ನಾಗೇಶ ದೊಂಡು ಶಿವಂಗೇಕರ ಬಂಧಿತ. ಸುಪ್ರೀಂಕೋರ್ಟ್ ಆದೇಶದಂತೆ ಬುಧವಾರ ಬಂಧಿಸಿ, ಹಿಂಡಲಗಾ ಜೈಲಿಗೆ ಕಳುಹಿಸಲಾಗಿದೆ' ಎಂದು ಲೋಕಾಯುಕ್ತ ಎಸ್ಪಿ ಹನುಮಂತರಾಯ ತಿಳಿಸಿದ್ದಾರೆ.

ಪ್ರಕರಣ ಏನು?: 1995ರಲ್ಲಿ ಕಡೋಲಿ ರೈತ ಲಕ್ಷ್ಮಣ ರುಕ್ಕಣ್ಣ ಕಟಾಂಬಳೆ ಜಮೀನು ಹಂಚಿಕೆ (ವಾಟ್ನಿ) ಮಾಡಿ ಉತಾರ ಕೊಡಲು ಅರ್ಜಿ ಸಲ್ಲಿಸಿದ್ದರು. ಅದಕ್ಕೆ ಗ್ರಾಮಲೆಕ್ಕಿಗ ₹500 ಲಂಚ ಕೇಳಿದ್ದರು. ದೂರು ಆಧರಿಸಿ, ಲಂಚ ಪಡೆಯುವಾಗ ಲೋಕಾಯುಕ್ತ ಅಧಿಕಾರಿಗಳು ಬಂಧಿಸಿದ್ದರು.

ವಿಶೇಷ ನ್ಯಾಯಾಲಯವು 2006ರ ಜೂನ್ 14ರಂದು ನಾಗೇಶಗೆ ಒಂದು ವರ್ಷ ಕಠಿಣ ಶಿಕ್ಷೆ ಹಾಗೂ ₹1,000 ದಂಡ ವಿಧಿಸಿತ್ತು. ಇದನ್ನು ಪ್ರಶ್ನಿಸಿ ನಾಗೇಶ ಹೈಕೋರ್ಟ್‌ನಲ್ಲಿ ಪ್ರಶ್ನಿಸಿದ್ದರು. 2012ರ ಮಾರ್ಚ್‌ನಲ್ಲಿ ಹೈಕೋರ್ಟ್, ನಾಗೇಶ ನಿರಪರಾಧಿ ಎಂದು ಹೇಳಿತ್ತು.

ಚೇತನ್‌ಗೆ ಗುಪ್ತಚರ ಇಲಾಖೆ ಹೊಣೆ

ಬೆಂಗಳೂರು: ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಆಯುಕ್ತ, ಡಿಐಜಿ ಆರ್.ಚೇತನ್ ಅವರಿಗೆ ಗುಪ್ತಚರ ಇಲಾಖೆಯ ಹೆಚ್ಚುವರಿ ಹೊಣೆಗಾರಿಕೆ ನೀಡಿ ಸರ್ಕಾರ ಆದೇಶ ಹೊರಡಿಸಿದೆ.

ರಾಜ್ಯದಲ್ಲಿ 3.37 ಕೋಟಿ ವಾಹನಗಳು

ಸಾರಿಗೆ ಇಲಾಖೆಗೆ 40 ಬೊಲೆರೊ ಹಸ್ತಾಂತರಿಸಿದ ಸಚಿವ ರಾಮಲಿಂಗಾರೆಡ್ಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಮೇ ಅಂತ್ಯದ ವರೆಗೆ ಒಟ್ಟು 3.37 ಕೋಟಿ ವಾಹನಗಳು ನೋಂದಣಿಯಾಗಿವೆ. ಅದರಲ್ಲಿ ಬೆಂಗಳೂರು ನಗರದಲ್ಲಿಯೇ 1.24 ಕೋಟಿಯಷ್ಟಾಗಿವೆ' ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ಸಾರಿಗೆ ಇಲಾಖೆಗೆ ವಾಹನ ತಪಾಸಣೆಗಾಗಿ 40 ಮಹಿಂದ್ರಾ ಬೊಲೆರೊ ವಾಹನಗಳನ್ನು ಬುಧವಾರ ಹಸ್ತಾಂತರ ಮಾಡಿದ ಅವರು ಮಾತನಾಡಿದರು.

'ವಾಹನಗಳ ಸಂಖ್ಯೆ ಹೆಚ್ಚುತ್ತಿರುವುದರಿಂದ ಮೋಟಾರು ವಾಹನ ನಿರೀಕ್ಷಕರ ಸಂಖ್ಯೆಯೂ ಹೆಚ್ಚಳವಾಗಬೇಕು. ಅದಕ್ಕಾಗಿ ಈಗಾಗಲೇ 129 ನಿರೀಕ್ಷಕರನ್ನು ನೇಮಕ ಮಾಡಿಕೊಳ್ಳಲಾಗಿದೆ' ಎಂದು ಅವರು ವಿವರಿಸಿದರು.

ರಸ್ತೆ ಸುರಕ್ಷತೆ ಮತ್ತು ಪ್ರವರ್ತನ ಚಟುವಟಿಕೆಯನ್ನು ಚುರುಕುಗೊಳಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರ ಸೂಚನೆಗಳನ್ನು ನೀಡಿವೆ. ಜನಸ್ನೇಹಿ ಕಾರ್ಯಕ್ರಮಗಳನ್ನು ಜಾರಿಗೊಳಿಸಬೇಕು ಎಂದು ತಿಳಿಸಿವೆ. ಅದಕ್ಕೆ ಅನುಗುಣವಾಗಿ ಕೆಲಸ ಮಾಡಲು ವಾಹನ ಖರೀದಿಸಲಾಗಿದೆ ಎಂದರು.

ಸುಪ್ರೀಂ ಕೋರ್ಟ್ ಆದೇಶದ ಮೇರೆಗೆ ರಚನೆಯಾಗಿರುವ ರಸ್ತೆ ಸುರಕ್ಷತಾ ಸಮಿತಿಯು ನೀಡಿರುವ ಸೂಚನೆಯಂತೆ ರಸ್ತೆ ಅಪಘಾತಗಳನ್ನು ನಿಯಂತ್ರಿಸಲು ಕ್ರಮ ಕೈಗೊಳ್ಳಬೇಕಾಗಿದೆ. ಸುರಕ್ಷತಾ ಮಾನದಂಡಗಳನ್ನು ಅಳವಡಿಸಿಕೊಳ್ಳದ ವಾಹನಗಳಿಗೆ ದಂಡ ಹಾಕಬೇಕು. ಚಾಲಕರು, ಮಾಲೀಕರ ವಿರುದ್ಧ ಕ್ರಮ ಕೈಗೊಳ್ಳಬೇಕು. ರಾತ್ರಿ ಸಂಚಾರದ ವೇಳೆ ಟೈಲ್ ಲ್ಯಾಂಪ್, ಇಂಡಿಕೇಟರ್‌ಗಳು ಸುಸ್ಥಿತಿಯಲ್ಲಿ ಇವೆಯೇ ಎಂದು ಪರಿಶೀಲಿಸಬೇಕು ಎಂದು ಸಲಹೆ ನೀಡಿದರು.

ಪೊಲೀಸ್, ಆರೋಗ್ಯ, ಲೋಕೋಪಯೋಗಿ, ಶಿಕ್ಷಣ ಇಲಾಖೆಯ ಸಹಯೋಗ ಪಡೆದುಕೊಂಡು ರಸ್ತೆ ಸುರಕ್ಷತಾ ಪ್ರಾಧಿಕಾರವು ಹೆಚ್ಚು ಅಪಘಾತ ಉಂಟಾಗುವ ಸ್ಥಳಗಳನ್ನು ಗುರುತಿಸಬೇಕು. ಅಪಘಾತ ಕಡಿಮೆ ಮಾಡಲು ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು.

ಸಾರಿಗೆ ಮತ್ತು ರಸ್ತೆ ಸುರಕ್ಷತೆ ಆಯುಕ್ತ ಎ.ಎಂ. ಯೋಗೀಶ್, ಹೆಚ್ಚುವರಿ ಆಯುಕ್ತರಾದ ಸಿ. ಮಲ್ಲಿಕಾರ್ಜುನ, ಉಮಾಶಂಕರ್ ಉಪಸ್ಥಿತರಿದ್ದರು.



ಮಹಿಂದ್ರಾ ಬೊಲೆರೊ ವಾಹನಗಳಿಗೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹಸಿರು ನಿಶಾನೆ ತೋರಿದರು – ಪ್ರಜಾವಾಣಿ ಚಿತ್ರ

ಅಂಕಿ ಅಂಶಗಳು

₹15,000 ಕೋಟಿ
ಸಾರಿಗೆ ಇಲಾಖೆಯು 2025–26ನೇ ಸಾಲಿನಲ್ಲಿ ಸಂಗ್ರಹಿಸಬೇಕಾದ ರಾಜಸ್ವ

4,01,595
2024–25ರಲ್ಲಿ ದಾಖಲಾದ ಸಾರಿಗೆ ನಿಯಮ ಉಲ್ಲಂಘನೆಯ ಪ್ರಕರಣಗಳು

₹197.5 ಕೋಟಿ
2024–25ರಲ್ಲಿ ವಸೂಲಿ ಮಾಡಲಾದ ದಂಡ

ಸುದ್ದಿ 2 ನಿಮಿಷ


ಧಾನ್ಯ ಸಾಗಾಣಿಕೆ ಬಿಲ್ ಪಾವತಿಸದಿದ್ದರೆ ಜುಲೈ 1ರಿಂದ ಧರಣಿ

ಬೆಂಗಳೂರು: ಅನ್ನಭಾಗ್ಯ ಹಾಗೂ ಎನ್‌ಎಫ್‌ಎಸ್‌ಎ ಯೋಜನೆಗಳ ಬಾಕಿಯಿರುವ ಆಹಾರ ಧಾನ್ಯ ಸಾಗಣೆ ವೆಚ್ಚದ ಬಿಲ್ ಕೂಡಲೇ ಪಾವತಿಸಬೇಕು. ಇಲ್ಲದೇ ಇದ್ದರೆ ಜುಲೈ 1ರಿಂದ ಅನಿರ್ದಿಷ್ಟಾವಧಿ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ರಾಜ್ಯ ಪಡಿತರ ಆಹಾರ ಧಾನ್ಯಗಳ ಸಗಟು ಹಾಗೂ ಚಿಲ್ಲರೆ ಸಾಗಾಣಿಕೆ ಗುತ್ತಿಗೆದಾರರ ಸಂಘ ಎಚ್ಚರಿಸಿದೆ.

ಫೆಬ್ರುವರಿಯಿಂದ ಜೂನ್ ವರೆಗೆ 'ಅನ್ನಭಾಗ್ಯ ಯೋಜನೆ' ಹಾಗೂ ಏಪ್ರಿಲ್, ಮೇ ಮತ್ತು ಜೂನ್ ತಿಂಗಳ ಎನ್‌ಎಫ್‌ಎಸ್‌ಎ ಯೋಜನೆಯಡಿಯಲ್ಲಿ ಆಹಾರ ಧಾನ್ಯ ಸಾಗಣೆಗೆ ಮಾಡಿರುವ ವೆಚ್ಚ ಪಾವತಿಯಾಗಿಲ್ಲ ಎಂದು ಸಂಘದ ಅಧ್ಯಕ್ಷ ಜಿ.ಆರ್. ಷಣ್ಮುಗಪ್ಪ ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಟೆಂಡರ್‌ಗಳಲ್ಲಿ ಭಾಗವಹಿಸುವಾಗ ನೀಡಿದ್ದ ಇಎಂಡಿ ಮೊತ್ತವನ್ನು ಬ್ಯಾಂಕ್ ಗ್ಯಾರಂಟಿ ನೀಡಿದ ನಂತರವೂ ಗುತ್ತಿಗೆದಾರರಿಗೆ ಮರುಪಾವತಿ ಮಾಡಿಲ್ಲ. ಆಯ್ಕೆಯಾಗದ ಬಿಡ್‌ದಾರರಿಗೂ ಇಎಂಡಿ ಹಣ ಹಿಂತಿರುಗಿಸಿಲ್ಲ ಎಂದು ಆರೋಪಿಸಿದರು. 2025ರ ಜುಲೈ ತಿಂಗಳ ಆಹಾರ ಧಾನ್ಯ ಹಂಚಿಕೆಯ ಆದೇಶವು ಬರುವ ಹಂತದಲ್ಲಿದೆ. ಹಸ್ತಾಂತರ ಮತ್ತು ಸಾಗಣೆ ಕಾರ್ಯ ನಿರ್ವಹಿಸಲು ಹಣಕಾಸಿನ ಮುಗ್ಗಟ್ಟು ಉಂಟಾಗಲಿದೆ. ಬಾಕಿ ಹಣ ಪಾವತಿಸದೇ ಇದ್ದರೆ ಜುಲೈಯಿಂದ ಆಹಾರ ಧಾನ್ಯ ಸಾಗಾಟ ನಿಲ್ಲಿಸುವುದು ಅನಿವಾರ್ಯವಾಗಲಿದೆ ಎಂದು ತಿಳಿಸಿದರು.

ರಾಜ್ಯ ಕೆಎಫ್‌ಸಿಎಸ್‌ಸಿ ಗೋದಾಮು ಹಾಗೂ ಅನ್ನಭಾಗ್ಯ ಯೋಜನೆಯಲ್ಲಿ ಕೆಲಸ ಮಾಡುತ್ತಿರುವ ಲೋಡಿಂಗ್ ಮತ್ತು ಅನ್ ಲೋಡಿಂಗ್ ಕಾರ್ಮಿಕರಿಗೆ ನೀಡಬೇಕಿರುವ ಇಎಸ್‌ಐ, ಇಪಿಎಫ್, ಗ್ರಾಚ್ಯುಟಿಯಲ್ಲಿ ಗೊಂದಲ ಉಂಟಾಗಿದೆ. ಈ ಬಗ್ಗೆ ಲೋಡಿಂಗ್ ಅನ್ ಲೋಡಿಂಗ್ ಲೇಬರ್ಸ್ ಯೂನಿಯನ್ ಅಧ್ಯಕ್ಷರೊಂದಿಗೆ ಆಹಾರ ನಾಗರಿಕ ಸರಬರಾಜು ಗ್ರಾಹಕರ ವ್ಯವಹಾರಗಳ ಇಲಾಖೆ ಸಭೆ ನಡೆಸಿ ಸಮಸ್ಯೆ ಪರಿಹರಿಸಬೇಕು ಎಂದು ಲೋಡಿಂಗ್ ಅನ್ ಲೋಡಿಂಗ್ ಲೇಬರ್ಸ್ ಯೂನಿಯನ್ ಅಧ್ಯಕ್ಷರನ್ನು ಸಂಘದ ಕೆ. ಪಂಪಾವತಿ ಪಾಟೀಲ ಒತ್ತಾಯಿಸಿದರು.



ಡಿಎನ್‌ಎ ಸಿಬ್ಬಂದಿ ಹೇಳಿಕೆ ದಾಖಲು

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸಂಭವಿಸಿದ ಕಾಲ್ತುಳಿತ ಪ್ರಕರಣದ ತನಿಖೆ ನಡೆಸುತ್ತಿರುವ ವಿಚಾರಣಾಧಿಕಾರಿಯಾಗಿರುವ ಬೆಂಗಳೂರು ನಗರ ಜಿಲ್ಲಾಧಿಕಾರಿ ಜಿ.ಜಗದೀಶ್ ಅವರು ಬುಧವಾರ ಡಿಎನ್‌ಎ ಮ್ಯಾನೇಜ್‌ಮೆಂಟ್ (ಇವೆಂಟ್ ಮ್ಯಾನೇಜ್‌ಮೆಂಟ್) ಸಿಬ್ಬಂದಿ ಕಿರಣ್ ಅವರನ್ನು ವಿಚಾರಣೆಗೆ ಒಳಪಡಿಸಿ, ಹೇಳಿಕೆ ದಾಖಲಿಸಿಕೊಂಡಿದ್ದಾರೆ.

ಕಿರಣ್ ಅವರು ತಮ್ಮ ವಕೀಲರೊಂದಿಗೆ ಹಾಜರಾಗಿ ಜಿಲ್ಲಾಧಿಕಾರಿ ಮುಂದೆ ಹೇಳಿಕೆ ದಾಖಲಿಸಿದರು. ಕಾರ್ಯಕ್ರಮ ಆಯೋಜನೆಯಲ್ಲಿ ಡಿಎನ್‌ಎ ಪಾತ್ರ, ತುರ್ತು ಸೇವೆಗೆ ಆಂಬುಲೆನ್ಸ್‌ಗಳ ವ್ಯವಸ್ಥೆ ಸೇರಿ ಮಾಧ್ಯಮ ಪ್ರಕಟಣೆ ನೀಡಿರುವ ಕುರಿತು ವಿಚಾರಣೆ ನಡೆಸಲಾಯಿತು.

ಸುಮಾರು ಎರಡೂವರೆ ತಾಸು ವಿಚಾರಣೆ ನಡೆಸಲಾಯಿತು. ಕಾರ್ಯಕ್ರಮ ಆಯೋಜನೆಗೆ ಕೈಗೊಂಡಿರುವ ಮಾಹಿತಿಗಳನ್ನು ಲಿಖಿತ ರೂಪದಲ್ಲಿ ನೀಡುವಂತೆ ತನಿಖಾಧಿಕಾರಿ ತಿಳಿಸಿದರು.

ಕಾಲ್ತುಳಿತ ಪ್ರಕರಣವನ್ನು ಮ್ಯಾಜಿಸ್ಟೀರಿಯಲ್ ತನಿಖೆಗೆ ವಹಿಸಿದ್ದ ರಾಜ್ಯ ಸರ್ಕಾರ 15 ದಿನದಲ್ಲಿ ವರದಿ ನೀಡುವಂತೆ ನೀಡಿದ್ದ ಗಡುವು ಜೂನ್ 18ಕ್ಕೆ ಮುಕ್ತಾಯಗೊಳ್ಳಲಿದೆ. ನೋಟಿಸ್ ನೀಡಿರುವ ಕಾರಣ ಇನ್ನೂ ಹಲವರ ವಿಚಾರಣೆ ಬಾಕಿ ಇದೆ. ತನಿಖೆ ಪೂರ್ಣಗೊಳ್ಳದ ಕಾರಣ ಇನ್ನೂ 3 ವಾರ ಕಾಲಾವಕಾಶ ಕೋರಿ ಸರ್ಕಾರಕ್ಕೆ ಮನವಿ ಸಲ್ಲಿಸಲಿದ್ದಾರೆ ಎಂದು ಗೊತ್ತಾಗಿದೆ.

ಸವಾರ ಅಕ್ಷಯ್ ಮಿದುಳು ನಿಷ್ಕ್ರಿಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮರದ ಕೊಂಬೆ ಬಿದ್ದು ಗಂಭೀರವಾಗಿ ಗಾಯಗೊಂಡಿದ್ದ ಬೈಕ್ ಸವಾರ ಅಕ್ಷಯ್ ಅವರ ಮಿದುಳು ಸಂಪೂರ್ಣ ನಿಷ್ಕ್ರಿಯಗೊಂಡಿದೆ ಎಂದು ವೈದ್ಯರು ತಿಳಿಸಿದ್ದಾರೆ.

ಭಾನುವಾರ ಜೋರು ಗಾಳಿಗೆ ಮರದ ಕೊಂಬೆ ಮುರಿದು, ಅಕ್ಷಯ್ (29) ತಲೆ ಮೇಲೆ ಬಿದ್ದಿತ್ತು. ರಕ್ತದ ಮಡುವಿನಲ್ಲಿ ಒದ್ದಾಡುತ್ತಿದ್ದ ಅವರನ್ನು ಸ್ಥಳೀಯರು ಆಸ್ಪತ್ರೆಗೆ ದಾಖಲಿಸಿದ್ದರು.

ತಲೆ ಬುರುಡೆಯಲ್ಲಿ ಹತ್ತಕ್ಕೂ ಅಧಿಕ ಕಡೆ ಗಾಯವಾಗಿತ್ತು. ವೈದ್ಯರು ಶಸ್ತ್ರ ಚಿಕಿತ್ಸೆ ಮಾಡಿದ್ದರು. ಆದರೆ, ಶಸ್ತ್ರ ಚಿಕಿತ್ಸೆ ನಡೆದು 60 ತಾಸು ಕಳೆದ ಬಳಿಕವೂ ಮಿದುಳು ಸ್ಪಂದಿಸದ ಕಾರಣ, ಮಿದುಳು ನಿಷ್ಕ್ರಿಯಗೊಂಡಿದೆ ಎಂದು ಪರಿಗಣಿಸಿರುವುದಾಗಿ ವೈದ್ಯರು ಹೇಳಿದ್ದಾರೆ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಅಕ್ಷಯ್ ಅವರ ವೈದ್ಯಕೀಯ ಚಿಕಿತ್ಸಾ ವೆಚ್ಚದ ಬಿಲ್ ₹ 4.6 ಲಕ್ಷವನ್ನು ಬಿಬಿಎಂಪಿ ಅಧಿಕಾರಿಗಳು ಪಾವತಿ ಮಾಡಿದ್ದಾರೆ.

ಆಸ್ಪತ್ರೆಯಲ್ಲಿ ಜೀವನ್ಮರಣದ ಹೋರಾಟ ನಡೆಸುತ್ತಿರುವ ಅಕ್ಷಯ್ ಬದುಕಿ ಬರಲಿ ಎಂದು ಸುಬ್ರಹ್ಮಣ್ಯ ಸ್ವಾಮಿ ದೇವಾಲಯದಲ್ಲಿ ಕುಟುಂಬ ಸದಸ್ಯರು ಪೂಜೆ ಸಲ್ಲಿಸಿದರು.

ನಿಂಗಪ್ಪ ಸಾವಂತ್ ವಿರುದ್ಧದ ಎಫ್‌ಐಆರ್‌ಗೆ ತಡೆ

ಪ್ರಜಾವಾಣಿ ವಾರ್ತೆ


ಬೆಂಗಳೂರು: ಲೋಕಾಯುಕ್ತ ಅಧಿಕಾರಿಗಳ ಹೆಸರಿನಲ್ಲಿ ನಡೆಯುತ್ತಿದ್ದ ಸುಲಿಗೆ ದಂಧೆಯಲ್ಲಿ ಭಾಗಿಯಾದ ಆರೋಪದಡಿ ಬಂಧನಕ್ಕೊಳಗಾಗಿರುವ ಲೋಕಾಯುಕ್ತದ ನಿವೃತ್ತ ಹೆಡ್ ಕಾನ್‌ಸ್ಟೆಬಲ್ ನಿಂಗಪ್ಪ ಸಾವಂತ್ ವಿರುದ್ಧದ ಎಫ್‌ಐಆರ್ ಮತ್ತು ಮುಂದಿನ ನ್ಯಾಯಿಕ ಪ್ರಕ್ರಿಯೆಗೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಈ ಸಂಬಂಧ ಹೊಳಲ್ಕೆರೆ ತಾಲ್ಲೂಕು ತಾಳಿಕಟ್ಟೆಯ ನಿಂಗಪ್ಪ ಜಿ.ಅಲಿಯಾಸ್ ನಿಂಗಪ್ಪ ಸಾವಂತ್ (45) ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಆರ್.ಕೃಷ್ಣಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ನಿಂಗಪ್ಪ ಪರ ಹೈಕೋರ್ಟ್ ವಕೀಲ ವೆಂಕಟೇಶ ಪಿ.ದಳವಾಯಿ ಮಂಡಿಸಿದ ವಾದ ಪುರಸ್ಕರಿಸಿದ ನ್ಯಾಯಪೀಠ, ಎಫ್‌ಐಆರ್ ಮತ್ತು ವಿಶೇಷ ನ್ಯಾಯಾಲಯದ ನ್ಯಾಯಿಕ ಪ್ರಕ್ರಿಯೆಗೆ ಮುಂದಿನ ವಿಚಾರಣೆ ತನಕ ಮಧ್ಯಂತರ ತಡೆ ನೀಡಿ ಆದೇಶಿಸಿತು. ಪ್ರತಿವಾದಿ ಲೋಕಾಯುಕ್ತ ಪೊಲೀಸ್ ಪರ ವಿಶೇಷ ಪ್ರಾಸಿಕ್ಯೂಟರ್‌ಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆಯನ್ನು ಜುಲೈ 15ಕ್ಕೆ ಮುಂದೂಡಿತು.

'ಭ್ರಷ್ಟ ಅಧಿಕಾರಿಗಳ ವಿರುದ್ಧ ನಡೆಸಲಾಗುವ ದಾಳಿಗಳ ಕುರಿತಂತೆ ಸರ್ಕಾರಿ ಅಧಿಕಾರಿಗಳನ್ನು ಬ್ಲ್ಯಾಕ್‌ಮೇಲ್ ಮಾಡುವ ಮೂಲಕ ಮತ್ತು ದಾಳಿಗಳ ಬಗ್ಗೆ ಮುಂಗಡ ಮಾಹಿತಿಯನ್ನು ನಿಂಗಪ್ಪ ಸೋರಿಕೆ ಮಾಡುತ್ತಿದ್ದರು' ಎಂದು ಎಫ್‌ಐಆರ್‌ನಲ್ಲಿ ದಾಖಲಿಸಲಾಗಿದ್ದು, ಅವರ ವಿರುದ್ಧ ಭ್ರಷ್ಟಾಚಾರ ನಿಗ್ರಹ ಕಾಯ್ದೆ–1988ರ ವಿವಿಧ ಕಲಂಗಳಡಿ ನ್ಯಾಯಿಕ ಪ್ರಕ್ರಿಯೆಗೆ ಕ್ರಮ ಜರುಗಿಸಲಾಗಿತ್ತು.

ಮತ್ತೊಂದು ಅರ್ಜಿ?



'ನಿಂಗಪ್ಪ ಅವರನ್ನು ಪೊಲೀಸರು 2025ರ ಮೇ 31ರಂದು ಹೊಸದುರ್ಗದಲ್ಲಿ ಬಂಧಿಸಿದ್ದಾರೆ. ಆದರೆ, ದಾಖಲೆಗಳಲ್ಲಿ ಬಂಧನವನ್ನು 2025ರ ಜೂನ್ 2ರಂದು ಬೆಂಗಳೂರಿನ ರಾಜಾಜಿ ನಗರದ ಮಾರುತಿ ಮೈದಾನದಲ್ಲಿ ಎಂದು ತೋರಿಸಲಾಗಿದೆ. ಈ ಬಂಧನ ಅಕ್ರಮವಾಗಿದ್ದು, ಪೊಲೀಸರು ಬಂಧನಕ್ಕೂ ಮುನ್ನ ಆರೋಪಿಗೆ ನೀಡಬೇಕಾದ ಸೂಕ್ತ ಆಧಾರಗಳನ್ನು ಒದಗಿಸಿಲ್ಲ. ಆದ್ದರಿಂದ, ಅವರನ್ನು ಕೂಡಲೇ ಬಿಡುಗಡೆ ಮಾಡಲು ಆದೇಶಿಸಬೇಕು' ಎಂದು ಕೋರಿ ಅವರ ಪತ್ನಿ ಜಿ.ಕೆ.ಚಂದ್ರಕಲಾ ಹೈಕೋರ್ಟ್‌ನಲ್ಲಿ ಪ್ರತ್ಯೇಕ ರಿಟ್ ಅರ್ಜಿ ಸಲ್ಲಿಸಿದ್ದಾರೆ.

ಈ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್.ಆರ್.ಕೃಷ್ಣಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ, ಅರ್ಜಿಗೆ ಸಂಬಂಧಿಸಿದಂತೆ ಪ್ರತಿವಾದಿ ಲೋಕಾಯುಕ್ತ ಪೊಲೀಸರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆ ಮುಂದೂಡಿದೆ.

ನ್ಯೂ ಮೈಕೋ ಲೇಔಟ್‌ನಲ್ಲಿ ತಲೆ ಬುರುಡೆ, ಮೂಳೆ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನ್ಯೂ ಮೈಕೋ ಲೇಔಟ್‌ನ ಕ್ರೆಡೆನ್ಸ್ ಫ್ಲೋರಾ ಅಪಾರ್ಟ್‌ಮೆಂಟ್‌ನ ವಾಹನ ನಿಲುಗಡೆ ಸ್ಥಳದ ಇಂಗುಗುಂಡಿಯಲ್ಲಿ ಮನುಷ್ಯನ ತಲೆ ಬುರುಡೆ ಹಾಗೂ ಮೂಳೆಗಳು ಪತ್ತೆಯಾಗಿವೆ.

ಕ್ರೆಡೆನ್ಸ್ ಫ್ಲೋರಾ ಅಪಾರ್ಟ್‌ಮೆಂಟ್ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಸ್ಕರಿಯಾ ಜಾನ್ ದೂರಿನ ಮೇರೆಗೆ ಬೇಗೂರು ಪೊಲೀಸ್ ಠಾಣೆಯಲ್ಲಿ ಯುಡಿಆರ್ (ಅಸಹಜ ಸಾವು) ಪ್ರಕರಣ ದಾಖಲಾಗಿದೆ.

'ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಲಾಗಿದ್ದು, ಪತ್ತೆಯಾಗಿರುವುದು ಮನುಷ್ಯನ ತಲೆ ಬುರುಡೆ ಮತ್ತು ಮೂಳೆ ಎಂಬುದು ಗೊತ್ತಾಗಿದೆ. ಇವುಗಳನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ವ್ಯಕ್ತಿಯನ್ನು ಕೊಲೆ ಮಾಡಲಾಗಿದೆಯೋ ಅಥವಾ ಸಹಜ ಸಾವು ಎಂಬುದನ್ನು ತಿಳಿಯಲು ವರದಿ ಬರುವ ವರೆಗೂ ಕಾಯಬೇಕು. ಬಳಿಕ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಎಂ.ಎನ್ ಕ್ರೆಡೆನ್ಸ್ ಫ್ಲೋರಾ ಅಪಾರ್ಟ್‌ಮೆಂಟ್‌ನಲ್ಲಿ ಮಳೆ ನೀರು ಸಂಗ್ರಹಕ್ಕಾಗಿ ತೆರೆದಿದ್ದ ಇಂಗುಗುಂಡಿಯನ್ನು 2012ರಿಂದಲೂ ಸ್ವಚ್ಛ ಮಾಡಿರಲಿಲ್ಲ. 16 ಇಂಗು ಗುಂಡಿಗಳನ್ನು ಸ್ವಚ್ಛಗೊಳಿಸಲು ಅನ್ಬಳಗನ್ ಎಂಬುವರಿಗೆ ವಹಿಸಲಾಗಿತ್ತು. ಅವರು ಕೆಲಸ ಆರಂಭಿಸಿದ್ದರು' ಎಂದು ಸ್ಕರಿಯಾ ಜಾನ್ ದೂರಿನಲ್ಲಿ ತಿಳಿಸಿದ್ದಾರೆ.

'ಜೂನ್ 16ರಂದು ಫ್ಲ್ಯಾಟ್ ಸಂಖ್ಯೆ 221 ಮತ್ತು 321ರ ಬಳಿಯ ವಾಹನ ನಿಲುಗಡೆ ಸ್ಥಳದಲ್ಲಿರುವ ಇಂಗು ಗುಂಡಿ ಸ್ವಚ್ಛಗೊಳಿಸುವ ವೇಳೆ ತಲೆಬುರುಡೆ ಮತ್ತು ಮೂಳೆ ಪತ್ತೆಯಾಗಿದೆ. ಹಾಗಾಗಿ ಈ ಬಗ್ಗೆ ಮುಂದಿನ ತನಿಖೆ ಕೈಗೊಳ್ಳಬೇಕು' ಎಂದು ಅವರು ಮನವಿ ಮಾಡಿದ್ದಾರೆ.

ಕನ್ನಡಪರ ಸಂಘಟನೆಗಳ ನಾಯಕರಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಮಿಳುನಟ ಕಮಲ್ ಹಾಸನ್ ಅವರ 'ಥಗ್ ಲೈಫ್' ಚಲನಚಿತ್ರ ಬಿಡುಗಡೆ ಪ್ರಯುಕ್ತ ಮುನ್ನೆಚ್ಚರಿಕೆ ಕ್ರಮವಾಗಿ ಕನ್ನಡಪರ ಸಂಘಟನೆಗಳ ನಾಯಕರಿಗೆ ಪೊಲೀಸರು ನೋಟಿಸ್ ಜಾರಿ ಮಾಡಿದ್ದಾರೆ.

ಸುಪ್ರೀಂ ಕೋರ್ಟ್ ತೀರ್ಪಿನ ಹಿನ್ನೆಲೆಯಲ್ಲಿ ಥಗ್ ಲೈಫ್ ಬಿಡುಗಡೆಗೆ ಸಿದ್ಧತೆಗಳು ನಡೆದಿವೆ. ಯಾವುದೇ ಅಹಿತಕರ ಘಟನೆಗಳು ನಡೆಯಬಾರದು ಎಂಬ ಕಾರಣಕ್ಕಾಗಿ ಪೊಲೀಸರು ಮುಂಜಾಗ್ರತಾ ಕ್ರಮ ಕೈಗೊಂಡಿದ್ದಾರೆ.

'ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಹೋರಾಟಕ್ಕೆ ಅವಕಾಶವಿದೆ. ಅದಕ್ಕೆ ಹೊರತಾಗಿ ಬೇರೆ ರೀತಿಯ ಪ್ರತಿಭಟನೆಗಳಿಗೆ ಅವಕಾಶ ಇಲ್ಲ. ಕೋರ್ಟ್ ಆದೇಶ ಉಲ್ಲಂಘಿಸಿದರೆ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗುವುದು' ಎಂದು ನೋಟಿಸ್‌ನಲ್ಲಿ ತಿಳಿಸಲಾಗಿದೆ.

ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯ ಘಟಕದ ಅಧ್ಯಕ್ಷ ಪ್ರವೀಣ್ ಶೆಟ್ಟಿ ಅವರ ಮನೆಗೆ ಪೊಲೀಸರು ನೋಟಿಸ್ ಅಂಟಿಸಿದ್ದಾರೆ.

'ಯಾರಾದರೂ ಚಿತ್ರಮಂದಿರಕ್ಕೆ ಬೆಂಕಿ ಹಚ್ಚಿದರೆ ನಾವು ಹೊಣೆಯಾಗಲು ಸಾಧ್ಯವೇ? ನಾನು ನೋಟಿಸ್ ತೆಗೆದುಕೊಳ್ಳುವುದಿಲ್ಲ. ಕಾನೂನು ಪ್ರಕಾರ ಕಾಂಪೌಂಡ್‌ಗೆ ನೋಟಿಸ್ ಅಂಟಿಸಿರುವುದಕ್ಕೆ ನನ್ನ ವಿರೋಧವಿಲ್ಲ' ಎಂದು ಪ್ರವೀಣ್ ಶೆಟ್ಟಿ ಹೇಳಿದ್ದಾರೆ.


ಬನ್ನೇರುಘಟ್ಟಕ್ಕೆ ಚಿಂಪಾಂಜಿ, ಚೀತಾ, ಜಾಗ್ವಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬನ್ನೇರುಘಟ್ಟ ಜೈವಿಕ ಉದ್ಯಾನಕ್ಕೆ ಚಿಂಪಾಂಜಿ, ಬೇಟೆ ಚೀತಾ, ಜಾಗ್ವಾರ್ ಸೇರಿ ವಿದೇಶಿ ಮೂಲದ 10 ಅಪರೂಪದ ವನ್ಯಜೀವಿಗಳನ್ನು ಸೇರ್ಪಡೆಗೊಳಿಸಲು ತೀರ್ಮಾನಿಸಲಾಗಿದೆ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ತಿಳಿಸಿದರು.

ದೇಶದ ಪ್ರಥಮ ವಿದ್ಯುತ್ ಚಾಲಿತ ಸಫಾರಿ ಬಸ್‌ನ ಪ್ರಾಯೋಗಿಕ ಸಂಚಾರವನ್ನು ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ ಆರಂಭಿಸಲಾಗಿದ್ದು, ಈ ಉಪಕ್ರಮಕ್ಕೆ ವಿಕಾಸಸೌಧದಿಂದ ಬುಧವಾರ ವರ್ಚುವಲ್ ಮೂಲಕ ಚಾಲನೆ ನೀಡಿದ ಖಂಡ್ರೆ ಅವರು, ಬಳಿಕ ಮಾತನಾಡಿದರು.

'ಮುಂದಿನ ನಾಲ್ಕು– ಐದು ತಿಂಗಳಲ್ಲಿ ಬೇಟೆ ಚೀತಾ, ಕ್ಯಾಪಚಿನ್ ಕೋತಿಗಳು ದಕ್ಷಿಣ ಅಮೆರಿಕಾದಿಂದ ಬರಲಿವೆ. ಮುಂದಿನ ವರ್ಷ ಚಿಂಪಾಂಜಿ, ಜಾಗ್ವಾರ್, ಪೂಮಾ (ಉತ್ತರ ಅಮೆರಿಕಾ ಸಿಂಹ) ಸೇರಿ ಒಟ್ಟು 10 ವಿದೇಶಿ ವನ್ಯಜೀವಿಗಳನ್ನು ತರಲಾಗುವುದು. ಇದರಿಂದ ಬನ್ನೇರುಘಟ್ಟ ಉದ್ಯಾನದ ಆಕರ್ಷಣೆ ಹೆಚ್ಚಲಿದೆ' ಎಂದು ಖಂಡ್ರೆ ಹೇಳಿದರು.



ವಿದ್ಯುತ್ ಚಾಲಿತ ವಾಹನ: ಬನ್ನೇರುಘಟ್ಟದಲ್ಲಿರುವ ವನ್ಯಜೀವಿ ಸಫಾರಿಯಲ್ಲಿ ಹುಲಿ, ಸಿಂಹ, ಕರಡಿಗಳ ವೀಕ್ಷಣೆಗೆ ಡೀಸೆಲ್ ವಾಹನಗಳನ್ನು ಬಳಸಲಾಗುತ್ತಿದೆ. ಈ ವಾಹನಗಳಿಂದ ಹೊರ ಹೊಮ್ಮುವ ಇಂಗಾಲದ ಪ್ರಮಾಣ ತಗ್ಗಿಸುವ ಉದ್ದೇಶದಿಂದ ದೇಶದಲ್ಲಿ ಮೊದಲ ಬಾರಿಗೆ ಪ್ರಾಯೋಗಿಕವಾಗಿ ವಿದ್ಯುತ್‌ಚಾಲಿತ ವಾಹನ ಪರಿಚಯಿಸಲಾಗುತ್ತಿದೆ ಎಂದು ಅವರು ಹೇಳಿದರು.

ವಿದ್ಯುತ್ ಚಾಲಿತ ಬಸ್ 22 ಆಸನಗಳನ್ನು ಹೊಂದಿದ್ದು, 100 ಕೆ.ವಿ.ಬ್ಯಾಟರಿ ಸಾಮರ್ಥ್ಯ ಹೊಂದಿದೆ. ಎರಡು ಗಂಟೆ ಚಾರ್ಜ್ ಮಾಡಿದರೆ 160 ಕಿ.ಮೀ ನಷ್ಟು ಅಂದರೆ ಎಂಟು ಟ್ರಿಪ್ ಸಂಚರಿಸಲಿದೆ. ಈಗ ಒಂದು ವಿದ್ಯುತ್ ಚಾಲಿತ ಬಸ್ ಮಾತ್ರವೇ ಕಾರ್ಯಾರಂಭ ಮಾಡುತ್ತಿದೆ. 2027ರೊಳಗೆ ಬನ್ನೇರುಘಟ್ಟ ಉದ್ಯಾನವನ್ನು (ಟ್ರ್ಯಾಕ್ಟರ್ ಇತ್ಯಾದಿ ಉಪಯೋಗಿ ವಾಹನ ಹೊರತುಪಡಿಸಿ) ಪಳೆಯುಳಿಕೆ ಇಂಧನ ರಹಿತ ವಾಹನ ವಲಯವಾಗಿ ಪರಿವರ್ತಿಸಲಾಗುವುದು ಎಂದು ಖಂಡ್ರೆ ಹೇಳಿದರು.

ಬನ್ನೇರುಘಟ್ಟಕ್ಕೆ ವಾರಾಂತ್ಯದಲ್ಲಿ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿರುವ ಕಾರಣ, ಇಲ್ಲಿ ಸ್ಮಾರ್ಟ್ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಲು ತೀರ್ಮಾನಿಸಲಾಗಿದೆ. ಇದಕ್ಕಾಗಿ ಶೀಘ್ರವೇ ಟೆಂಡರ್ ಕರೆಯಲಾಗುವುದು. ಮೇ ತಿಂಗಳಿನಲ್ಲಿ ಸುಮಾರು 2.85 ಲಕ್ಷ ಪ್ರವಾಸಿಗರು ಬಂದಿದ್ದರು. ಇದು ದಾಖಲೆಯಾಗಿದ್ದು, ಚಿರತೆ ಸಫಾರಿ ಈಗ ಜನಾಕರ್ಷಣೆಯ ಕೇಂದ್ರ ಬಿಂದುವಾಗಿದೆ ಎಂದು ಹೇಳಿದರು.

ಜೀಬ್ರಾ ಸಾವಿನ ತನಿಖೆ: 'ಇತ್ತೀಚೆಗೆ ಜೀಬ್ರಾ ಮತ್ತು ನೀಲಗಾಯ್‌ಗಳು ಸಾವಿಗೀಡಾಗಿವೆ. ಈ ಬಗ್ಗೆ ತನಿಖೆ ನಡೆಸಿ ವರದಿ ನೀಡಲು ಸಿಸಿಎಫ್ ಅವರಿಗೆ ಸೂಚನೆ ನೀಡಲಾಗಿದೆ. ವರದಿ ಬಂದ ನಂತರ ಮುಂದಿನ ಕ್ರಮಕೈಗೊಳ್ಳಲಾಗುವುದು. ಇನ್ನು ಮುಂದೆ ಮೃಗಾಲಯದಲ್ಲಿ ಮತ್ತು ಜೈವಿಕ ಉದ್ಯಾನದಲ್ಲಿ ಯಾವುದೇ ವನ್ಯಜೀವಿ ಅಸಹಜವಾಗಿ ಮೃತಪಡದಂತೆ ಎಚ್ಚರ ವಹಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ' ಎಂದು ಖಂಡ್ರೆ ತಿಳಿಸಿದರು.

ಕಲಬುರಗಿಯಲ್ಲಿ ನೂತನವಾಗಿ ಮೃಗಾಲಯ ನಿರ್ಮಿಸಲಾಗುತ್ತಿದ್ದು, ಡಿಸೆಂಬರ್ ವೇಳೆಗೆ ಮೃಗಾಲಯ ಸಿದ್ಧವಾಗಲಿದೆ ಎಂದರು.

ಬೃಹತ್ ಮತ್ಸ್ಯಾಗಾರ ಯೋಜನೆ

ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ ಬೃಹತ್ ಮತ್ಸ್ಯಾಗಾರ ನಿರ್ಮಿಸಲು ಉದ್ದೇಶಿಸಲಾಗಿದೆ ಎಂದು ಸಚಿವ ಈಶ್ವರ ಖಂಡ್ರೆ ತಿಳಿಸಿದರು.

ಇದಕ್ಕಾಗಿ ವಿಸ್ತೃತ ಯೋಜನಾ ವರದಿ ಸಿದ್ಧಪಡಿಸಿ ಟೆಂಡರ್ ಕರೆಯಲಾಗುವುದು. ಉದ್ಯಾನದ ವ್ಯಾಪ್ತಿಯಲ್ಲಿ ಏಳು ಕೆರೆಗಳಿವೆ. ಅಲ್ಲದೇ ಬೆಂಗಳೂರು ಜಲ ಮಂಡಳಿಯಿಂದಲೂ ನೀರು ಪಡೆಯಲಾಗುತ್ತಿದೆ. ಇದರಿಂದ ಮತ್ಸ್ಯಾಗಾರಕ್ಕೆ ನೀರಿನ ಕೊರತೆ ಆಗುವುದಿಲ್ಲ ಎಂದು ಹೇಳಿದರು.

'ಡೆತ್ ಆಡಿಟ್' ತಂಡ ಪುನರ್ ರಚನೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಕೋವಿಡ್ 'ಸಾವಿನ ಲೆಕ್ಕಗಳ ವರದಿ' (ಡೆತ್ ಆಡಿಟ್) ತಯಾರಿಕೆ ತಂಡವನ್ನು ಪುನರ್ ರಚಿಸಿ ಆರೋಗ್ಯ ಇಲಾಖೆ ಆದೇಶ ಹೊರಡಿಸಿದೆ.

ರಾಜೀವ್‌ಗಾಂಧಿ ಎದೆ ರೋಗಗಳ ಆಸ್ಪತ್ರೆ ನಿರ್ದೇಶಕ ಡಾ.ಬಿ.ಎಲ್. ಶಶಿಭೂಷಣ್ ಅಧ್ಯಕ್ಷತೆಯಲ್ಲಿ ರಚನೆಯಾದ ತಂಡವು 14 ಸದಸ್ಯರನ್ನು ಒಳಗೊಂಡಿದೆ. ಈ ತಂಡವು ವಿವಿಧ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳ ವೈದ್ಯಕೀಯ ತಜ್ಞರನ್ನು ಒಳಗೊಂಡಿದೆ.

ಈ ತಂಡವು ರಾಜ್ಯ ಮಟ್ಟದಲ್ಲಿ ಕೋವಿಡ್ ಮರಣಗಳಿಗೆ ಕಾರಣಗಳು, ರೋಗ ಲಕ್ಷಣಗಳು, ಸಹ ರೋಗಗಳು, ಲಸಿಕಾಕರಣ, ಆಸ್ಪತ್ರೆಗೆ ದಾಖಲಾದ ದಿನಗಳ ವಿಶ್ಲೇಷಣೆ, ದಾಖಲಾತಿ ಮತ್ತು ವರದಿಯಲ್ಲಿ ವಿಳಂಬ ಮುಂತಾದ ಅಂಶಗಳನ್ನು ಪರಿಶೀಲಿಸಿ, ವಿಶ್ಲೇಷಣೆ ನಡೆಸಲಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ರೌಡಿಶೀಟರ್ ಕೊಲೆ: ಮತ್ತಿಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೌಡಿಶೀಟರ್ ವಿಜಯ್ ಎಂಬಾತನ ಕೊಲೆ ಮಾಡಿ ತಲೆಮರೆಸಿಕೊಂಡಿದ್ದ ಮತ್ತಿಬ್ಬರು ಆರೋಪಿಗಳನ್ನು ಜೆ.ಜೆ.ನಗರ ಪೊಲೀಸರು ಬಂಧಿಸಿದ್ದಾರೆ.

ಸಂತೋಷ್ ಮತ್ತು ಅಪ್ಪ ಅಲಿಯಾಸ್ ಅಣ್ಣಿ ಸೆರೆಯಾದ ಆರೋಪಿಗಳು.

ನಗರದ ಜನತಾ ಕಾಲೊನಿಯಲ್ಲಿ ಜೂನ್ 14ರ ರಾತ್ರಿ ವಿಜಯ್ (26) ಎಂಬ ರೌಡಿಯನ್ನು ಕೊಲೆ ಮಾಡಿ ಪರಾರಿಯಾಗಿದ್ದರು. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು, ಕಾರ್ಯಾಚರಣೆ ವೇಳೆ ನಾಲ್ವರು ಆರೋಪಿಗಳು ಪೊಲೀಸರ ಮೇಲೆ ಮಾರಾಕಾಸ್ತ್ರಗಳಿಂದ ಹಲ್ಲೆಗೆ ಮುಂದಾಗಿದ್ದರು. ಈ ವೇಳೆ ಪರಾರಿಯಾಗುತ್ತಿದ್ದ ಇಬ್ಬರ ಕಾಲಿಗೆ ಗುಂಡು ಹಾರಿಸಿ ಬಂಧಿಸಿದ್ದರು.

ಬಂಧಿತ ಅರುಣ್ ಹಾಗೂ ದೀಪು ಹೇಳಿಕೆ ಆಧರಿಸಿ ಇನ್ನಿಬ್ಬರನ್ನು ಬಂಧಿಸಲಾಗಿದೆ. ದಾಳಿ ವೇಳೆ ಜೆ.ಜೆ.ನಗರ ಠಾಣೆ ಎಎಸ್‌ಐ ಕುಮಾರ್ ಮತ್ತು ಕಾನ್‌ಸ್ಟೆಬಲ್ ಕರೀಂ ಸಾಬ್ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನಗರದಲ್ಲಿ ಇಂದು

'ಬಿ.ಟಿ. ಕಾಯ್ದೆ–1949 ರದ್ಧತಿ, ಬುದ್ಧಗಯಾ ಮಹಾಬೋಧಿ ಮಹಾವಿಹಾರ ಮುಕ್ತಿಗಾಗಿ' ಕರ್ನಾಟಕ ಬೌದ್ಧರ ಸಮಾವೇಶ: ಅತಿಥಿಗಳು: ಆಕಾಶ್ ಲಾಮಾ, ಚಂದ್ರಕೀರ್ತಿ, ಚಂದ್ರಬೋಧಿ ಪಾಟೀಲ್, ಭಿಕ್ಕು ಬೋಧಿದತ್ತ, ಭಿಕ್ಕುಣಿ ಬುದ್ಧಮ್ಮ, ದೇವೇಂದ್ರ ಹೆಗ್ಡೆ, ಸಿದ್ಧರಾಜು, ಮಾವಳ್ಳಿ ಶಂಕರ್, ಆರ್. ಮೋಹನ್‌ರಾಜ್, ಹ.ರಾ. ಮಹೇಶ್, ಆಯೋಜನೆ: ಭಾರತೀಯ ಬೌದ್ಧ ಮಹಾಸಭಾ, ಸ್ಥಳ: ನಾಗಸೇನಾ ಬುದ್ಧ ವಿಹಾರ, ಸದಾಶಿವನಗರ, ಬೆಳಿಗ್ಗೆ 11

ಇಂಡಿಯಾ ಗ್ರೀನ್ ಎನರ್ಜಿ ಎಕ್ಸ್‌ಪೊ: ಅತಿಥಿಗಳು: ಡಿ.ಕೆ. ಶಿವಕುಮಾರ್, ರಹೀಂ ಖಾನ್, ರಾಜೇಗೌಡ, ಗೌರವ್ ಗುಪ್ತ, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಪ್ರದರ್ಶನ ಕೇಂದ್ರ, ತುಮಕೂರು ರಸ್ತೆ, ಬೆಳಿಗ್ಗೆ 11.30

ವಿಕಾಸ್ ಆರ್. ಮೌರ್ಯ ಅವರ 'ಕುದಿವ ಕಣ್ಣೀರು', ಎಸ್. ಮಂಜುನಾಥ ಅವರ 'ಹೆಬ್ಬಿರುಳಿನ ನಿಬ್ಬೆರಗು' ಪುಸ್ತಕಗಳ ಬಿಡುಗಡೆ: ಕೆ.ಎ. ದಯಾನಂದ, ಅಧ್ಯಕ್ಷತೆ: ರಘುನಾಥ ಚ.ಹ., ಪುಸ್ತಕಗಳ ಕುರಿತು: ರವಿಕುಮಾರ್ ಬಾಗಿ, ವನಿತಾ ಪಿ., ಉಪಸ್ಥಿತಿ: ಕೆ.ಎನ್. ಮಮತಾ, ಅಕ್ಷತಾ ಹುಂಚದಕಟ್ಟೆ, ಆಯೋಜನೆ: ತಮಟೆ ಮೀಡಿಯಾ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಸಂಜೆ 5

ದಾಸವಾಣಿ: ಗಾಯನ: ಕಿರಣ್ ರಾಘವೇಂದ್ರ ರಾವ್, ಹಾರ್ಮೋನಿಯಂ: ಹರೀಶ್ಂ ಕರಣಂ, ತಬಲಾ: ಕಿಶೋರ್ ಯು. ಕುಲಕರ್ಣಿ, ತಾಳ: ಮಾಧವರಾವ್ ಮುಂಡೇವಾಡಿ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಐದನೇ ಬಡಾವಣೆ, ಜಯನಗರ, ಸಂಜೆ 5.15

'ದಾಸ ಶೃತಿ' ಗಾಯನ: ಶ್ರೀರಕ್ಷಾ ಶಾನಬೋಗ್, ರಶ್ಮಿ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಪವಮಾನಪುರ, ಆರನೇ ಹಂತ, ಬನಶಂಕರಿ, ಸಂಜೆ 7

ಯುವ ಸಂಗೀತೋತ್ಸವ: ಪಿಟೀಲು: ಮಿಹಿರ್ ರಾಜೀವ್, ಮೃದಂಗ: ಸಮ್ವಿತ್ ಆರ್.ಎಸ್., ಸ್ಕಂದ ಮಂಜುನಾಥ್, ಗಾಯನ: ವಿಷ್ಣು ಶಾಸ್ತ್ರಿ ಎಚ್.ಕೆ., ಪಿಟೀಲು: ಅಮೃತಾ ವರ್ಷಿಣಿ ಕೆ.ಎಸ್., ಮೃದಂಗ: ಪ್ರಜ್ವಲ್ ಭಾರದ್ವಾಜ್, ಅರ್ನವ್ ವಿ. ಗೋಪಾಲನ್, ಆಯೋಜನೆ ಮತ್ತು ಸ್ಥಳ: ಬೆಂಗಳೂರು ಗಾಯನ ಸಮಾಜ, ಕೆ.ಆರ್. ರಸ್ತೆ, ಸಂಜೆ 5.30ರಿಂದ

ಶ್ರೀ ಯಲ್ಲಮ್ಮದೇವಿ ಹಾಗೂ ಗದ್ದಿಗೆ ಜ್ಯೋತಿಲಿಂಗ ಸ್ವಾಮಿಗಳ ದೇವಾಲಯ

ಹೆನ್ನಾಗರ, ಜಿಗಣಿ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು–562 106

ಶ್ರೀ ಯಲ್ಲಮ್ಮದೇವಿ ದೇವಾಲಯದ ಜೀರ್ಣೋದ್ಧಾರ ಕುಂಭಾಭಿಷೇಕ ಮೂಲ ದೇವರ ಮತ್ತು ನೂತನ ಶಿಲಾ ವಿಗ್ರಹ ಹಾಗೂ ವಿಮಾನ ಗೋಪುರ ಬ್ರಹ್ಮ ಕಳಶ ಅಷ್ಟಬಂಧನ ಪ್ರತಿಷ್ಠಾಪನೆ

ದಿನಾಂಕ: 18–06–2025 ಬುಧವಾರದಿಂದ 20–06–2025ನೇ ಶುಕ್ರವಾರದ ವರೆಗೆ



ಶ್ರೀ ಯಲ್ಲಮ್ಮದೇವಿ ಪ್ರಸನ್ನ



ಶ್ರೀ ಮೈಲಾರಲಿಂಗಸ್ವಾಮಿ



ಶ್ರೀ ಗದ್ದಿಗೆ ಜ್ಯೋತಿಲಿಂಗಸ್ವಾಮಿಗಳು

ದಿವ್ಯ ಸಾನಿಧ್ಯ



ಶ್ರೀಶೈಲ ಜಗದ್ಗುರುಗಳು ಶ್ರೀಮದ್ ಗಿರಿರಾಜ ಸೂರ್ಯ ಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ 1008 ಜಗದ್ಗುರು **ಡಾ. ಚೆನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು** ಶ್ರೀಮದ್ ಶ್ರೀಶೈಲ ಮಹಾಪೀಠ



ಶ್ರೀ ಗುಮ್ಮಳಾಪುರ ಸಂಸ್ಥಾನ ಹಿರೇ ಮಠದ ಮಠಾಧ್ಯಕ್ಷರಾದ **ವೇ.ಬ್ರ. ಶ್ರೀ ಶ್ರೀ ಶ್ರೀ ಡಾ. ಶಿವಾನಂದ ಶಿವಾಚಾರ್ಯ ಸ್ವಾಮಿಗಳು** ಗುಮ್ಮಳಾಪುರ ಸಂಸ್ಥಾನ ಮಠ



ಪ್ರಧಾನ ಆಚಾರ್ಯತ್ವ **ವೇ. ಬ್ರ. ಶ್ರೀ ದಿನೇಶ ಶರ್ಮಾ ಗುರುಗಳು** ಛಾಯಾಪುರಿ ಕ್ಷೇತ್ರ –ನೆರಳೂರು

ನೂತನ ದೇವಾಲಯದ ಒಂದು ನೋಟ









ಬೆಂಗಳೂರು ನಗರ ಜಿಲ್ಲೆ ಆನೇಕಲ್ ತಾಲ್ಲೂಕು, ಜಿಗಣಿ ಹೋಬಳಿ, ಹೆನ್ನಾಗರ ಗ್ರಾಮದಲ್ಲಿ ಸುಮಾರು 275 ವರ್ಷಗಳ ಇತಿಹಾಸವಿರುವ ಮಹಾಕಾಳಿ, ಮಹಾಲಕ್ಷ್ಮೀ, ಮಹಾ ಸರಸ್ವತಿ ಶ್ರೀ ಜನನ್ಮಾತೆ ಪಾರ್ವತಿ ಸ್ವರೂಪಿಯಾದ ಶ್ರೀ ಯಲ್ಲಮ್ಮದೇವಿಯಾಗಿ ನೆಲಸಿ ಶ್ರೀ ಗದ್ದಿಗೆ ಜ್ಯೋತಿಲಿಂಗಸ್ವಾಮಿ ವಂಶಸ್ಥರ, ಭಕ್ತರ, ಗ್ರಾಮಸ್ಥರ, ಸುತ್ತಮುತ್ತಲಿನ ರಾಜ್ಯಗಳ ಭಕ್ತರುಗಳಿಂದ ಪೂಜಾ ಕೈಂಕಾರ್ಯಗಳನ್ನು ಸ್ವೀಕರಿಸಿ ಅವರವರ ಅಭಿಷ್ಠಗಳನ್ನು ನೆರವೇರಿಸುತ್ತಿದ್ದು, ಈ ದೇವಿಯ ನೂತನ ದೇವಾಲಯವನ್ನು ನಿರ್ಮಾಣ ಮಾಡಲು ತಾಯಿಯ ಪ್ರೇರಣೆಯಾಗಿ ಭಕ್ತರ ದಾನಿಗಳ ಕುಲಸ್ಥರ ಸಹಾಯ ಸಹಯೋಗದಿಂದ ಬಹಳ ಸುಂದರ ದೇವಾಲಯವು ಆಗಮ ಶಾಸ್ತ್ರದ ಪ್ರಕಾರವಾಗಿ ನಿರ್ಮಾಣಗೊಂಡು ತತ್ಸಂಬಂಧವಾದ ದೇವತಾ ಪ್ರತಿಷ್ಠಾಪನಾ ಕಾರ್ಯಕ್ರಮಗಳನ್ನು ಸ್ವಸ್ತೀಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ವರ್ಷ 1947ಕ್ಕೆ ಸರಿಯಾಗಿ ಶ್ರೀ ವಿಶ್ವಾವಸು ನಾಮ ಸಂವತ್ಸರ ಜೇಷ್ಠಮಾಸ, ಕೃಷ್ಣಪಕ್ಷ ಸಪ್ತಮಿಯ ದಿನಾಂಕ: 18–06–2025 ನೇ ಬುಧವಾರದಿಂದ ಜ್ಯೇಷ್ಠಮಾಸ, ಕೃಷ್ಣಪಕ್ಷ ನವಮಿ–ದಶಮಿ ದಿನಾಂಕ 20–06–2025 ನೇ ಶುಕ್ರವಾರದವರೆಗೆ ಶ್ರೀ ಯಲ್ಲಮ್ಮದೇವಿಯ ಮೂಲ ವಿಗ್ರಹ ಪ್ರತಿಷ್ಠಾಪನೆ ಹಾಗೂ ದೇವಾಲಯ ಜೀರ್ಣೋದ್ಧಾರದ ನೂತನ ಶಿಲಾ ವಿಗ್ರಹಗಳ ಮತ್ತು ವಿಮಾನ ಗೋಪುರ ಬ್ರಹ್ಮಕಳಶ, ಅಷ್ಟಬಂಧನಾ ಪ್ರತಿಷ್ಠಾಪನಾ ಕುಂಭಾಬಿಷೇಕವನ್ನು ಆಗಮೋಕ್ತ ಪ್ರಕಾರವಾಗಿ ನೆರವೇರಿಸಲು ಭಗವತಿಯ ಪ್ರೇರಣೆಯಾಗಿರುವುದರಿಂದ ತಾವುಗಳು ಬಂಧು–ಮಿತ್ರಸಪರಿವಾರದೊಂದಿಗೆ ಈ ಶುಭದೇವತಾ ಕಾರ್ಯದಲ್ಲಿ ಪಾಲ್ಗೊಂಡು ದೇವಿಯ ಕೃಪಾಕಟಾಕ್ಷಕ್ಕೆ ಪಾತ್ರರಾಗಬೇಕಾಗಿ ಕೋರುತ್ತೇವೆ.


ದಿನಾಂಕ 19–06–2025ನೇ ಗುರುವಾರ 7:00 ಗಂಟೆಗೆ ವೇದ ಪಾರಾಯಣ, ಕಳಸಸ್ಥಾಪನೆ, ಚಂಡಿಕಾ ಪಾರಾಯಣ, ಜಲಕ್ಷೀರಾಧಿವಾಸಗಳು, ಮಹಾ ಗಣಪತಿ ಹೋಮ, ನವಗ್ರಹ ಹೋಮ, ಪ್ರತಿಷ್ಠಾಪನಾಂಗ ಹೋಮಗಳ, ಮಹಾ ಮಂಗಳಾರತಿ ಮಧ್ಯಾಹ್ನ 3:00 ಗಂಟೆಯಿಂದ ಲಲಿತ ಸಹಸ್ರನಾಮ, ಸಂಜೆ 5:00 ರಿಂದ ಕಳಸಾರಾಧನೆ, ಚಂಡಿ ಪಾರಾಯಣ, ಚಕ್ರಾರಾಧನೆ, ದೇವಿಹೋಮ, ಪ್ರತಿಷ್ಠಾಪನಾಂಗ ಹೋಮಗಳು, ಧಾನ್ಯ, ಫಲ, ಪುಷ್ಪ ರತ್ನಾಧಿವಾಸ ಶಯ್ಯಾಧಿವಾಸಗಳು, ಕ್ರಮಾರ್ಚನೆ, ಸಹಸ್ರನಾಮಾರ್ಚನೆ, ಮಹಾ ಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ.

ದಿನಾಂಕ 20–06–2025 ನೇ ಶುಕ್ರವಾರ ಬೆಳಿಗ್ಗೆ 6:30 ಗಂಟೆಗೆ ವೇದಪಾರಾಯಣ, ಕಳಶಾರಾಧನೆ, ಚಂಡಿಕಾ ಪಾರಾಯಣ, ಪ್ರತಿಷ್ಠಾಪನಾಂಗ ಹೋಮಗಳು, ಪ್ರಾಣಪ್ರತಿಷ್ಠೆ, ನಾಡಿ ಸಂಧಾನ, ಪೂರ್ವಾಕ, ಕಳಾವಾಹನೆ, ಕಳಾಹೋಮ, ಚಂಡಿಹೋಮ, ಮಹಾ ನೀರೀಕ್ಷಣೆ, ಗೋಪೂಜೆ, ಮಹಾ ಪೂರ್ಣಾಹುತಿ ಬೆಳಿಗ್ಗೆ 10:30 ರಿಂದ 11:30 ಗಂಟೆಯೊಳಗೆ ಸಲ್ಲುವ ಶುಭ ಲಗ್ನದಲ್ಲಿ ಮಹಾ ಕುಂಭಾಭಿಷೇಕ ಪಂಚಾಮೃತ ಅಭಿಷೇಕ, ಅರ್ಚನೆ ಮಧ್ಯಾಹ್ನ 12:00 ಗಂಟೆಗೆ ಮಹಾ ಮಂಗಳಾರತಿ ತೀರ್ಥ ಪ್ರಸಾದ ವಿನಿಯೋಗ ಮಹಾ ಪ್ರಸಾದ ಅನ್ನ ಸಂತರ್ಪಣೆ ನಂತರ ಭಜನಾ ಕಾರ್ಯಕ್ರಮ.


ಶ್ರೀ ಯಲ್ಲಮ್ಮದೇವಿ ದೇವಸ್ಥಾನದ ಅಭಿವೃದ್ಧಿ ಸಮಿತಿ

ಶ್ರೀ ಜಿ. ಸುರೇಶ್ ರವರು ಸಮಿತಿ ಅಧ್ಯಕ್ಷರು
ಶ್ರೀ ಎಂ. ಮಹೇಶ್ ರೆಡ್ಡಿರವರು ಉಪಾಧ್ಯಕ್ಷರು
ಶ್ರೀ ನಾಗೇಶ್ ಜ್ಯೋತಯ್ಯ ರವರು ಕಾರ್ಯದರ್ಶಿ
ಶ್ರೀ ಕೇಶವ ರೆಡ್ಡಿ ರವರು ಜಂಟಿ ಕಾರ್ಯದರ್ಶಿ
ಶ್ರೀ ರಮೇಶ್ ಎನ್ ರವರು ಖಜಾಂಚಿ
ಶ್ರೀ ಸಿದ್ದೇಶ್ ಜೆ. ರವರು ಜಂಟಿ ಖಜಾಂಚಿ
ಶ್ರೀ ಶ್ಯಾಮ್‌ಕುಮಾರ್ ಎಂ ರವರು ಸದಸ್ಯರು
ಶ್ರೀ ಪ್ರಸಾದ್ ಎಂ ರವರು ಸದಸ್ಯರು
ಶ್ರೀ ಕಾರ್ತಿಕ್ ಎಸ್. ರವರು ಸದಸ್ಯರು
ಶ್ರೀ ಹೆಚ್. ಆರ್. ಮಧುಸೂಧನ ರೆಡ್ಡಿರವರು ಸದಸ್ಯರು
ಶ್ರೀ ವಿ.ಕೆ. ವೇಣುಗೋಪಾಲರವರು ಸದಸ್ಯರು
ಶ್ರೀ ಶೇಷಚಲಪತಿ ರವರು ಸದಸ್ಯರು
ಶ್ರೀ ಎಸ್. ಎಂ. ಮಂಜುನಾಥ ರವರು ಸದಸ್ಯರು
ಶ್ರೀ ನಾಗರಾಜು ರವರು ಸಾಂಸ್ಕೃತಿಕ ಸಮಿತಿ ಸದಸ್ಯರು
ಶ್ರೀ ಪ್ರಭಾಕರ ರೆಡ್ಡಿ ರವರು ಸದಸ್ಯರು
ಶ್ರೀ ಮಧು ಎನ್. ರವರು ಸದಸ್ಯರು
ಶ್ರೀ ಜಿ. ಮುನಿರಾಜು ರವರು ಸದಸ್ಯರು
ಶ್ರೀ ಸುರೇಶ್ ಹೆಚ್.ಜಿ. ರವರು ಸದಸ್ಯರು
ಶ್ರೀ ವೆಂಕಟೇಶ್ ಹೆಚ್. ವಿ. ರವರು ಸದಸ್ಯರು
ಶ್ರೀ ಲಕ್ಷ್ಮಯ್ಯ ಆರ್ ರವರು ಸದಸ್ಯರು
ಶ್ರೀ ಬಿ.ಎಸ್. ಶ್ರೀನಿವಾಸ್ ರೆಡ್ಡಿ ರವರು ದಾಸೋಹ ಸಮಿತಿ ಅಧ್ಯಕ್ಷರು
ಶ್ರೀ ಬಿ.ಎಸ್. ಉಮಾಶಂಕರ್ ರವರು ಸದಸ್ಯರು
ಶ್ರೀ ವಿಜಯರೆಡ್ಡಿ ಎನ್ ರವರು ಸದಸ್ಯರು
ಶ್ರೀ ಧರ್ಮವೀರ್ ಎಂ. ರವರು ಸದಸ್ಯರು
ಶ್ರೀ ಮರಿಲಿಂಗಪ್ಪ ಎಚ್ ವಿ. ರವರು ಸದಸ್ಯರು
ಶ್ರೀ ಸತೀಶ್ ಚಂದ್ರ ವೈ. ಎಸ್. ರವರು ಪೂಜಾ ಸಮಿತಿ ಅಧ್ಯಕ್ಷರು
ಶ್ರೀ ಎಂ. ರಾಮರೆಡ್ಡಿ ರವರು ಸದಸ್ಯರು
ಶ್ರೀ ಜೆ. ನಾಗೇಶ್ವರಪ್ಪ ರವರು ಸದಸ್ಯರು
ಶ್ರೀ ಬಸವರಾಜು ಎಲ್ ರವರು ಸದಸ್ಯರು
ಶ್ರೀ ಸೋಮಶೇಖರ್ ರೆಡ್ಡಿ ರವರು ಸದಸ್ಯರು
ಶ್ರೀ ವೆಂಕಟಸ್ವಾಮಿ ರೆಡ್ಡಿ ರವರು ಸದಸ್ಯರು
ಶ್ರೀ ಸುದರ್ಶನ್. ವೈ. ರವರು ಇಂಜಿನೀಯರ್

ಶುಭ ಕೋರುವವರು




ಶ್ರೀ ಆರ್. ಕೆ. ರಮೇಶ್, ನಿರ್ದೇಶಕರು ಬಮುಲ್, ಬೆಂಗಳೂರು



ಶ್ರೀ ಜಿ. ಸುರೇಶ್, ಅಧ್ಯಕ್ಷರು ಶ್ರೀ ಯಲ್ಲಮ್ಮ ದೇವಿ ದೇವಸ್ಥಾನ ಅಭಿವೃದ್ಧಿ ಸಮಿತಿ



ಶ್ರೀ ನಾಗೇಶ್ ಜ್ಯೋತಯ್ಯ ಕಾರ್ಯದರ್ಶಿಗಳು, ಶ್ರೀ ಯಲ್ಲಮ್ಮ ದೇವಿ ದೇವಸ್ಥಾನ ಅಭಿವೃದ್ಧಿ ಸಮಿತಿ




ಶ್ರೀ ರಮೇಶ್ ಎನ್ ಖಜಾಂಚಿ

ಸರ್ವರಿಗೂ ಆದರದ ಸುಸ್ವಾಗತ



ಶ್ರೀ ಆರ್.ಕೆ. ಕೇಶವರೆಡ್ಡಿ



ಶ್ರೀ ಜಿ. ಮುನಿರಾಜು

ಅಧ್ಯಕ್ಷರು ಮತ್ತು ಸದಸ್ಯರು, ಪ್ರಚಾರ ಸಮಿತಿ ಶ್ರೀ ಯಲ್ಲಮ್ಮ ದೇವಿ ಮತ್ತು ಶ್ರೀ ಗದ್ದಿಗೆ ಜ್ಯೋತಿಲಿಂಗ ಸ್ವಾಮಿಗಳ ಸೇವಾ ಟ್ರಸ್ಟ್ (ರಿ)

ಶ್ರೀ ಯಲ್ಲಮ್ಮ ದೇವಿ ಮತ್ತು ಶ್ರೀ ಗದ್ದಿಗೆ ಜ್ಯೋತಿಲಿಂಗ ಸ್ವಾಮಿಗಳ ಸೇವಾ ಟ್ರಸ್ಟ್ (ರಿ)

ಸಹಕಾರ : ಹೆನ್ನಾಗರ ಗ್ರಾಮ ಪಂಚಾಯಿತಿ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು, ಹಾಲಿ ಸದಸ್ಯರು, ಮಾಜಿ ಅಧ್ಯಕ್ಷರುಗಳು ಮತ್ತು ಹೆನ್ನಾಗರ ಸುತ್ತಮುತ್ತ ಗ್ರಾಮಗಳ ಗ್ರಾಮಸ್ಥರು

ನಮ್ಮ ಮೆಟ್ರೊದಲ್ಲಿ ಅಮೂಲ್ ಮಳಿಗೆ: ಹಲವರ ವಿರೋಧ

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ನಮ್ಮ ಮೆಟ್ರೊ' 10 ನಿಲ್ದಾಣಗಳಲ್ಲಿ 'ಅಮೂಲ್ ಕಿಯೊಸ್ಕ್' ಮಳಿಗೆ ಆರಂಭಿಸಲು ಬಿಎಂಆರ್‌ಸಿಎಲ್ ಮತ್ತು ಗುಜರಾತ್ ಕೋ-ಆಪರೇಟಿವ್ ಮಿಲ್ಕ್ ಮಾರ್ಕೆಟಿಂಗ್ ಫೆಡರೇಶನ್ ಒಪ್ಪಂದ ಮಾಡಿಕೊಂಡಿವೆ. ನಂದಿನಿ ಇರುವಾಗ ಅಮೂಲ್‌ಗೆ ಅವಕಾಶ ನೀಡಿರುವುದಕ್ಕೆ ಸಾಮಾಜಿಕ ಜಾಲತಾಣಗಳಲ್ಲಿ ಅನೇಕರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಪಟ್ಟಂದೂರು ಅಗ್ರಹಾರ, ಇಂದಿರಾನಗರ, ಬೆನ್ನಿಗಾನಹಳ್ಳಿ, ಬೈಯಪ್ಪನಹಳ್ಳಿ, ಟ್ರಿನಿಟಿ, ಸರ್.ಎಂ ವಿಶ್ವೇಶ್ವರಯ್ಯ ನಾಡಪ್ರಭು ಕೆಂಪೇಗೌಡ ನಿಲ್ದಾಣ ಮೆಜೆಸ್ಟಿಕ್, ನ್ಯಾಷನಲ್ ಕಾಲೇಜು, ಜಯನಗರ ಮತ್ತು ಬನಶಂಕರಿ ನಿಲ್ದಾಣಗಳಲ್ಲಿ 'ಅಮೂಲ್ ಕಿಯೋಸ್ಕ್' ಸ್ಥಾಪಿಸಲು ಒಪ್ಪಂದ ಮಾಡಿಕೊಳ್ಳಲಾಗಿತ್ತು. ಅದರಂತೆ ಬೈಯಪ್ಪನಹಳ್ಳಿ ಮತ್ತು ಬೆನ್ನಿಗಾನ ಹಳ್ಳಿಯಲ್ಲಿ ಮಳಿಗೆಗಳು ಆರಂಭವಾಗಿವೆ. ಉಳಿದ 8 ನಿಲ್ದಾಣಗಳಲ್ಲಿ ಆರಂಭಿಸುವ ಪ್ರಕ್ರಿಯೆ ನಡೆಯುತ್ತಿದೆ.

> **ಒಪ್ಪಂದ ಆಗಿರುವುದರಿಂದ ಏನೂ ಮಾಡಲು ಸಾಧ್ಯವಿಲ್ಲ. ಕೆಎಂಎಫ್ ಕೂಡಾ ಈಗ ಆಸಕ್ತಿ ತೋರಿಸಿದೆ. ಸರ್ಕಾರದ ತೀರ್ಮಾನದಂತೆ ಕ್ರಮ ಕೈಗೊಳ್ಳಲಾಗುವುದು**
> **ಎಂ. ಮಹೇಶ್ವರ ರಾವ್**
> ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ

ಅಮೂಲ್‌ನ ಡೇರಿಯ ವಿವಿಧ ಉತ್ಪನ್ನಗಳನ್ನು ಈ ಮಳಿಗೆಯಲ್ಲಿ ಮಾರಾಟ ಮಾಡಲಾಗುತ್ತದೆ. ಚಾಕೊಲೇಟ್–ಆಲೂಗಡ್ಡೆ ಆಧಾರಿತ ತಿಂಡಿಗಳು, ಐಸ್‌ಕ್ರೀಂ, ಸಾವಯವ ಮತ್ತು ಕರಿದ ಉತ್ಪನ್ನಗಳು ಇದರಲ್ಲಿ ಸೇರಿವೆ. ಪ್ರಯಾಣಿಕರಿಗೆ ಅನುಕೂಲವಾಗುವಂತೆ ವಿವಿಧ ಉಪಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಬಿಎಂಆರ್‌ಸಿಎಲ್ ತನ್ನ ಮಾಸಿಕ ಸುದ್ದಿಪತ್ರಿಕೆ 'ಮೆಟ್ರೊ ಇನ್‌ಸೈಟ್'ನಲ್ಲಿ ತಿಳಿಸಿತ್ತು.

ಇದಕ್ಕೆ ಸಾಮಾಜಿಕ ಜಾಲತಾಣಗಳಲ್ಲಿ ವಿರೋಧ ವ್ಯಕ್ತವಾಗಿತ್ತು. 'ನಮ್ಮ ನಂದಿನಿ ಪದಾರ್ಥಗಳನ್ನು ಬಿಟ್ಟು ಹೊರ ರಾಜ್ಯದ ಅಮೂಲ್‌ಗೆ ಅವಕಾಶ ನೀಡಲಾಗಿದೆ. ಇದರ ವಿರುದ್ಧ ಹೋರಾಟ ಮಾಡುವವರು ಯಾರೂ ಇಲ್ವ' ಎಂದು ಒಬ್ಬರು ಪ್ರಶ್ನಿಸಿದ್ದಾರೆ. 'ನಂದಿನಿ ನಮ್ಮ ಹೆಮ್ಮೆ' ಎಂದು ಇನ್ನೊಬ್ಬರು ಬರೆದುಕೊಂಡಿದ್ದಾರೆ. 'ನಂದಿನಿ ನಮ್ಮ ಬ್ರ್ಯಾಂಡ್. ಬಿಟ್ಟುಕೊಡುವ ಪ್ರಶ್ನೆಯೇ ಇಲ್ಲ' ಎಂದು ಮತ್ತೊಬ್ಬರು ಅಭಿಮಾನ ವ್ಯಕ್ತಪಡಿಸಿದ್ದಾರೆ. 'ನಂದಿನಿ ಅಮೂಲ್‌ಗೆ ಮಾರಿ ರೈತರಿಗೆ ಮೋಸ ಮಾಡುತ್ತಾರೆ ಎಂದು ಬಿಜೆಪಿ ಆಡಳಿತದ ಸಮಯದಲ್ಲಿ ಗಲಾಟೆ ಮಾಡಿದವರೇ ಈಗ ಅಮೂಲ್‌ಗೆ ಶರಣಾಗಿದ್ದಾರೆ' ಎಂದು ಕುಟುಕಿದ್ದಾರೆ.

'ಹೀಗೆಯೇ ಗುಜರಾತಿಗಳು ತಮ್ಮ ಉತ್ಪನ್ನಗಳನ್ನು ನಮ್ಮ ಮೇಲೆ ಹೇರಿ ಮಾರುಕಟ್ಟೆಯನ್ನು ವಶಪಡಿಸಿಕೊಳ್ಳುತ್ತಿದ್ದಾರೆ' ಎಂದು ಮತ್ತೊಬ್ಬರು ಆತಂಕ ವ್ಯಕ್ತಪಡಿಸಿದ್ದಾರೆ.

ಸುದ್ದಿ 2 ನಿಮಿಷ

ಆದಿಚುಂಚನಗಿರಿ ವಿ.ವಿ ಬೆಂಗಳೂರು ಕ್ಯಾಂಪಸ್‌ನ ಉದ್ಘಾಟನೆ ನಾಳೆ

ಬೆಂಗಳೂರು: 'ಮಂಡ್ಯ ಜಿಲ್ಲೆಯ ಬಿ.ಜಿ. ನಗರದಲ್ಲಿರುವ ಆದಿಚುಂಚನಗಿರಿ ವಿಶ್ವವಿದ್ಯಾಲಯವು ಬೆಂಗಳೂರಿನ ನಗರೂರಿನಲ್ಲಿರುವ ಬಿಜಿಎಸ್ ಎಂಸಿಎಚ್ ಆವರಣದಲ್ಲಿ ಜೂನ್ 20ರಂದು ವಿ.ವಿ.ಯ ನೂತನ ಕ್ಯಾಂಪಸ್ ಆರಂಭಿಸಲಿದೆ' ಎಂದು ವಿಶ್ವವಿದ್ಯಾಲಯದ ಕುಲಪತಿ ಎಂ.ಎ. ಶೇಖರ್ ತಿಳಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕೇಂದ್ರ ಗೃಹ ಸಚಿವ ಅಮಿತ್ ಶಾ ಈ ಕ್ಯಾಂಪಸ್ ಉದ್ಘಾಟಿಸಲಿದ್ದಾರೆ. ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ, ರಾಜ್‌ಕೋಟ್‌ನ ಅರ್ಶ ವಿದ್ಯಾಮಂದಿರದ ಪರಮಾತ್ಮಾನಂದ ಸ್ವಾಮೀಜಿ, ಚಿತ್ರದುರ್ಗದ ಮಾದಾರ ಚನ್ನಯ್ಯ ಗುರುಪೀಠದ ಮಾದಾರ ಚನ್ನಯ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ' ಎಂದು ಹೇಳಿದರು.

'ನೂತನ ಬಿಜಿಎಸ್ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ಎಂಬಿಬಿಎಸ್‌ನ 150, ಬಿ.ಎಸ್ಸಿ. ನರ್ಸಿಂಗ್‌ನ 250, ಫಿಸಿಯೋಥೆರಪಿಯ 60, ಅಲೈಡ್ ಹೆಲ್ತ್ ಸೈನ್ಸ್‌ನ 80 ಸೀಟ್‌ಗಳು ಇರಲಿವೆ' ಎಂದು ಮಾಹಿತಿ ನೀಡಿದರು. 'ಕೇಂದ್ರ ಸಚಿವರಾದ ಎಚ್‌.ಡಿ.ಕುಮಾರಸ್ವಾಮಿ, ವಿ.ಸೋಮಣ್ಣ, ರಾಜ್ಯದ ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ ಪಾಟೀಲ, ವಿರೋಧ ಪಕ್ಷದ ನಾಯಕ ಆರ್.ಅಶೋಕ, ಸಂಸದ ಡಾ.ಕೆ.ಸುಧಾಕರ್, ಶಾಸಕರಾದ ಎಸ್.ಆರ್.ವಿಶ್ವನಾಥ್, ಎನ್.ಶ್ರೀನಿವಾಸಯ್ಯ ಭಾಗವಹಿಸಲಿದ್ದಾರೆ' ಎಂದರು.

ಪಿಇಎಸ್: ₹ 30 ಲಕ್ಷ ನೆರವು



ಬೆಂಗಳೂರು: ಪಿಇಎಸ್ ವಿಶ್ವವಿದ್ಯಾಲಯದ 8ನೇ ಸೆಮಿಸ್ಟರ್‌ನ ಕಂಪ್ಯೂಟರ್ ಸೈನ್ಸ್ ಮತ್ತು ಎಂಜಿನಿಯರಿಂಗ್ ವಿಭಾಗದ ವಿದ್ಯಾರ್ಥಿಗಳು ತಮ್ಮ ನವೋದ್ಯಮಕ್ಕೆ 'ಸ್ಟಾರ್ಟ್ ಅಪ್ ಇಂಡಿಯಾ'ದಡಿ ₹30 ಲಕ್ಷ ನೆರವು ಪಡೆದಿದ್ದಾರೆ.

ವಿದ್ಯಾರ್ಥಿಗಳಾದ ಓಂಕಾರ್ ಜೋಯಿಸ್, ಅಚಿಂತ್ಯ ಕೃಷ್ಣ ಮತ್ತು ಅನುಪ್ ಪ್ರಕಾಶ್ ಅವರು 'ಪಾಕೇಟ್‌ಕೋಚ್ ಟೆಕ್ನಾಲಜೀಸ್' ನವೋದ್ಯಮ ಪ್ರಾರಂಭಿಸಿದ್ದು, ಇದು ಬಾಸ್ಕೆಟ್‌ಬಾಲ್ ಸಂಬಂಧಿತ ನವೋದ್ಯಮವಾಗಿದೆ.

ಐಐಎಂ ಬೆಂಗಳೂರು ಆಯೋಜಿಸಿದ್ದ ಸ್ಪರ್ಧಾತ್ಮಕ ಕ್ಯಾಂಪಸ್ ಸ್ಪರ್ಧೆಯಲ್ಲಿ 30 ಕಾಲೇಜುಗಳ ನವೋದ್ಯಮಗಳು ಭಾಗವಹಿಸಿದ್ದವು. ಹಲವು ಸುತ್ತಿನ ವಿಮರ್ಶೆಗಳ ಬಳಿಕ, ಪಿಇಎಸ್ ವಿಶ್ವವಿದ್ಯಾಲಯದ ನವೋದ್ಯಮವನ್ನು ಆಯ್ಕೆ ಮಾಡಿ, ನೆರವು ಒದಗಿಸಲಾಗಿದೆ.

ವಿದ್ಯಾರ್ಥಿಗಳ ಈ ಆವಿಷ್ಕಾರವನ್ನು ಪಿಇಎಸ್ ವಿಶ್ವವಿದ್ಯಾಲಯದ ಕುಲಾಧಿಪತಿ ಪ್ರೊ. ಜವಾಹರ್ ದೊರೆಸ್ವಾಮಿ ಮತ್ತು ಕುಲಪತಿ ಪ್ರೊ.ಜೆ. ಸೂರ್ಯಪ್ರಸಾದ್ ಅಭಿನಂದಿಸಿದ್ದಾರೆ.

ಸಂತೋಷ್‌ಗೆ 89ನೇ ರ‍್ಯಾಂಕ್

ಬೆಂಗಳೂರು: 'ಕೇಂದ್ರ ಸಶಸ್ತ್ರ ಪೊಲೀಸ್ ಪಡೆಯ ಸಹಾಯಕ ಕಮಾಂಡರ್ ಹುದ್ದೆಯ ಪರೀಕ್ಷೆಯಲ್ಲಿ ಯುನಿವರ್ಸಲ್ ಗ್ರೂಪ್ ಆಫ್ ಅಡ್ಮಿನಿಸ್ಟ್ರೇಷನ್ ಸಂಸ್ಥೆಯಲ್ಲಿ ತರಬೇತಿ ಪಡೆದಿದ್ದ ಸಂತೋಷ್ ಎಚ್.ಎಂ., ಅಖಿಲ ಭಾರತ ಮಟ್ಟದಲ್ಲಿ 89ನೇ ರ‍್ಯಾಂಕ್ ಪಡೆದಿದ್ದಾರೆ' ಎಂದು ಸಂಸ್ಥೆಯ ಅಧ್ಯಕ್ಷ ಆರ್. ಉಪೇಂದ್ರ ಶೆಟ್ಟಿ ತಿಳಿಸಿದರು. ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಮ್ಮ ಸಂಸ್ಥೆಯಲ್ಲಿ ತರಬೇತಿ ಪಡೆದ 8,036ಕ್ಕೂ ಹೆಚ್ಚು ಅಭ್ಯರ್ಥಿಗಳು ಕೇಂದ್ರ–ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ' ಎಂದರು.

ಚುಟುಕೆ ಸುದ್ದಿ

ವಂಚನೆ ಪ್ರಕರಣ: ಸಿಐಡಿ ತನಿಖೆಗೆ


ಐಶ್ವರ್ಯಾ ಗೌಡ

ಬೆಂಗಳೂರು: ಚಿನ್ನದ ವ್ಯಾಪಾರಿಗೆ ವಂಚನೆ ಹಾಗೂ ಹಣ ಅಕ್ರಮ ವರ್ಗಾವಣೆ ಕುರಿತು ಐಶ್ವರ್ಯಾ ಗೌಡ ವಿರುದ್ಧ ದಾಖಲಾಗಿದ್ದ ವಂಚನೆ ಪ್ರಕರಣಗಳ ಸಮಗ್ರ ತನಿಖೆ ನಡೆಸುವಂತೆ ಸಿಐಡಿಗೆ ಪೊಲೀಸ್ ಇಲಾಖೆಯು ಆದೇಶಿಸಿದೆ.

ಚಂದ್ರಾಲೇಔಟ್, ಆರ್.ಆರ್. ನಗರ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ನಾಲ್ಕು ಪ್ರಕರಣಗಳು ಹಾಗೂ ಮಂಡ್ಯದಲ್ಲಿ ದಾಖಲಾಗಿದ್ದ ಎರಡು ಪ್ರಕರಣ ಸೇರಿದಂತೆ ಒಟ್ಟು ಆರು ಪ್ರಕರಣಗಳ ತನಿಖೆ ನಡೆಸುವಂತೆ ಆದೇಶಿಸಲಾಗಿದೆ.

ರಾಜಕೀಯ ನಾಯಕರ ಪರಿಚಯವಿದೆ ಎಂದು ಹೇಳಿ ಸಾಲದ ರೂಪದಲ್ಲಿ ₹9.82 ಕೋಟಿ ಮೌಲ್ಯದ ಚಿನ್ನ ಪಡೆದು ವಂಚಿಸಿದ ಆರೋಪದಡಿ ಕಳೆದ ವರ್ಷ ವಾರಾಹಿ ವರ್ಲ್ಡ್ ಆಫ್ ಗೋಲ್ಡ್ ಚಿನ್ನದಂಗಡಿಯ ಮಾಲೀಕರಾದ ವನಿತಾ ಎಸ್. ಐತಾಳ್ ಅವರು ನೀಡಿದ್ದ ದೂರಿನನ್ವಯ ಐಶ್ವರ್ಯಾ ವಿರುದ್ಧ ಪ್ರಕರಣ ದಾಖಲಾಗಿತ್ತು. ಇದೇ ಪ್ರಕರಣದಲ್ಲಿ ಚಿತ್ರನಟ ಧರ್ಮೇಂದ್ರ ವಿರುದ್ದವೂ ಎಫ್‌ಐಆರ್ ದಾಖಲಾಗಿತ್ತು.

ಅಧ್ಯಕ್ಷರಾಗಿ ಮೋಹನ ಕೊಂಡಜ್ಜಿ ನೇಮಕ



ಬೆಂಗಳೂರು: ಇಲ್ಲಿನ ರಾಷ್ಟ್ರಕವಿ ಡಾ.ಜಿ. ಎಸ್. ಶಿವರುದ್ರಪ್ಪ ಪ್ರತಿಷ್ಠಾನಕ್ಕೆ ವಿಧಾನ ಪರಿಷತ್ ಮಾಜಿ ಸದಸ್ಯ ಮೋಹನ ಕೊಂಡಜ್ಜಿ ಅವರನ್ನು ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಈ ಪ್ರತಿಷ್ಠಾನಕ್ಕೆ ಕಾರ್ಯಕಾರಿ ಸಮಿತಿ ರಚಿಸಿ ಆದೇಶ ಹೊರಡಿಸಿದೆ. ಜಿ. ಗುಂಡಣ್ಣ ಚಿಕ್ಕಮಗಳೂರು, ಎಂ.ಎಸ್. ಆಶಾದೇವಿ, ಜಾಣಗೆರೆ ವೆಂಕಟರಾಮಯ್ಯ, ಚಂದ್ರಶೇಖರ ನಂಗಲಿ, ಮೂಡ್ನಾಕೂಡು ಚಿನ್ನಸ್ವಾಮಿ, ಸಾಸ್ವೆಹಳ್ಳಿ ಸತೀಶ್, ಸಿರಾಜ್ ಅಹ್ಮದ್ ಮತ್ತು ಆರ್.ಜಿ.ಹಳ್ಳಿ ನಾಗರಾಜ್ ಅವರು ಪ್ರತಿಷ್ಠಾನದ ಸದಸ್ಯರಾಗಿ ನೇಮಕಗೊಂಡಿದ್ದಾರೆ.

ಬಾಲ್ಯ ವಿವಾಹ ಪ್ರಕರಣ ದಾಖಲು

ಹೂವಿನಹಡಗಲಿ (ವಿಜಯನಗರ ಜಿಲ್ಲೆ): ತಾಲ್ಲೂಕಿನ ಬನ್ನಿಮಟ್ಟಿ ಗ್ರಾಮದ ಬಾಲಕಿಗೆ ಬಾಲ್ಯ ವಿವಾಹ ನಡೆಸಿರುವುದು, ಆಕೆ ಆಸ್ಪತ್ರೆಗೆ ಹೆರಿಗೆಗೆಂದು ದಾಖಲಾದಾಗ ಗೊತ್ತಾಗಿದೆ. ಬ್ಯಾಲಹುಣ್ಸೆ ಗ್ರಾಮದ ವ್ಯಕ್ತಿಯೊಬ್ಬರ ಜೊತೆ ವಿವಾಹ ಮಾಡಲಾಗಿತ್ತು. ಬಾಲಕಿಯನ್ನು ಗದಗ ಜಿಲ್ಲಾ ಆಸ್ಪತ್ರೆಗೆ ಹೆರಿಗೆಗೆ ಕರೆತಂದಿದ್ದು, ಆಕೆಗೆ 17 ವರ್ಷ ಎಂದು ಹೇಳಲಾಗಿದೆ. ವಿಷಯ ತಿಳಿದು ಆಸ್ಪತ್ರೆಯಿಂದ ಸಿಡಿಪಿಒ ಕಚೇರಿಗೆ ಕರೆ ಬಂದಿದ್ದು, ಸ್ಥಳೀಯ ಅಂಗನವಾಡಿ ಕಾರ್ಯಕರ್ತೆ ಮೂಲಕ ಸಿಡಿಪಿಒ ದೂರು ನೀಡಿದ್ದಾರೆ. ಹಿರೇಹಡಗಲಿ ಠಾಣೆಯಲ್ಲಿ ಪೋಕ್ಸೊ ಮತ್ತು ಬಾಲ್ಯ ವಿವಾಹ ತಡೆ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಾಗಿದೆ.

ಅಮೂಲ್–ನಂದಿನಿ: ರಾಜಕೀಯ

ರಾಜ್ಯದಲ್ಲಿ ಈ ಹಿಂದೆ ಬಿಜೆಪಿ ಸರ್ಕಾರ ಇದ್ದಾಗ ಅಮೂಲ್ ಜತೆ ಕೆಎಂಎಫ್ ವಿಲೀನಗೊಳಿಸುವುದಾಗಿ ಕೇಂದ್ರ ಸಹಕಾರ ಸಚಿವ ಅಮಿತ್ ಶಾ ಅವರು ಹೇಳಿದ್ದಾರೆ ಎಂದು ಕಾಂಗ್ರೆಸ್ ಪಕ್ಷ ವಿವಾದ ಸೃಷ್ಟಿಸಿತ್ತು. ಈ ಬಗ್ಗೆ ಟೀಕೆಗಳು ಎದುರಾಗಿದ್ದವು. ಬೆಂಗಳೂರಿನ 'ನಮ್ಮ ಮೆಟ್ರೊ' ರೈಲು ನಿಲ್ದಾಣಗಳಲ್ಲಿ ಅಮೂಲ್ ಮಳಿಗೆ ತೆರೆಯಲು ಅವಕಾಶ ನೀಡಲಾಗಿದೆ. ಇದು ಪರ–ವಿರೋಧ ಚರ್ಚೆಗೆ ಕಾರಣವಾಗಿದೆ. ಸಾಮಾಜಿಕ ಜಾಲತಾಣದಲ್ಲೂ ಚರ್ಚೆಗೆ ಗ್ರಾಸವಾಗಿದೆ



'ಕಮಿಷನ್ ಆಸೆಗೆ ಸ್ವಾಭಿಮಾನ ಮಾರಾಟ'

'ಚುನಾವಣೆಗೂ ಮುನ್ನ 'ಸೇವ್ ನಂದಿನಿ, ಕನ್ನಡಿಗರ ಆತ್ಮಗೌರವ ಮಾರಾಟಕ್ಕಿಲ್ಲ' ಎಂದು ಡಿ.ಕೆ.ಶಿವಕುಮಾರ್ ಹೇಳುತ್ತಿದ್ದರು. ಈಗ ಕಮಿಷನ್ ಆಸೆಗೆ ಸ್ವಾಭಿಮಾನ ಮಾರಿಕೊಂಡಿದ್ದಾರೆ. ಮೆಟ್ರೊ ನಿಲ್ದಾಣಗಳಲ್ಲಿ ಹೊರರಾಜ್ಯದ ಹಾಲಿನ ಉತ್ಪನ್ನಗಳ ಮಾರಾಟಕ್ಕೆ ಮಣೆ ಹಾಕಿದ್ದಾರೆ' ಎಂದು ಜೆಡಿಎಸ್ ತನ್ನ ಅಧಿಕೃತ 'ಎಕ್ಸ್' ಖಾತೆಯಲ್ಲಿ ಪೋಸ್ಟ್ ಮಾಡಿದೆ.

'ಬೆಂಗಳೂರಿನ 10ಕ್ಕೂ ಹೆಚ್ಚು ಮೆಟ್ರೊ ನಿಲ್ದಾಣಗಳಲ್ಲಿ ಹೊರ ರಾಜ್ಯದ ಹಾಲಿನ ಉತ್ಪನ್ನಗಳ ಮಾರಾಟ ಮಳಿಗೆಗಳ ಸ್ಥಾಪನೆಗೆ ಅವಕಾಶ ನೀಡಿದ್ದಾರೆ. ನಮ್ಮ ರೈತರ ಮತ್ತು ಕನ್ನಡಿಗರ ಸ್ವಾಭಿಮಾನದ ಸಂಕೇತವಾಗಿರುವ ನಂದಿನಿ ಬ್ರ್ಯಾಂಡ್ ಅನ್ನು ತನ್ನ ಪ್ರಚಾರಕ್ಕೆ ಬಳಸಿಕೊಂಡ ಕಾಂಗ್ರೆಸ್, ಅಧಿಕಾರಕ್ಕೆ ಬಂದ ಬಳಿಕ ನಂದಿನಿಯನ್ನು ಮರೆತಿದೆ' ಎಂದಿದೆ.

'ನಂದಿನಿ ಉತ್ಪನ್ನಗಳಿಗೆ ಸ್ಪರ್ಧಾತ್ಮಕವಾದ ಮಾರುಕಟ್ಟೆ ಸೃಷ್ಟಿಸುವಲ್ಲಿ ಕಾಂಗ್ರೆಸ್ ಸರ್ಕಾರ ವಿಫಲವಾಗಿದ್ದು, ಕನ್ನಡಿಗರ ಬ್ರ್ಯಾಂಡ್‌ನ ಹಿತಾಸಕ್ತಿಗೆ ಧಕ್ಕೆ ತರುತ್ತಿದೆ' ಎಂದಿದೆ.

ಟೆಂಡರ್‌ನಲ್ಲಿ ಕೆಎಂಎಫ್ ಭಾಗವಹಿಸಿಲ್ಲ: ಡಿ.ಕೆ.ಶಿವಕುಮಾರ್



'ಬಿಎಂಆರ್‌ಸಿಎಲ್ ಕರೆದಿದ್ದ ಟೆಂಡರ್‌ನಲ್ಲಿ ಅಮೂಲ್‌ನವರು ಮಾತ್ರ ಅರ್ಜಿ ಹಾಕಿ ಎರಡು ಕಡೆ ಮಳಿಗೆ ತೆರೆದಿದ್ದಾರೆ. ಈ ಮಳಿಗೆಗಳನ್ನು ಮುಚ್ಚಿಸುವುದು ಸರಿಯಲ್ಲ. ಇತರ ಎಂಟು ಸ್ಥಳಗಳಲ್ಲಿ ಕೆಎಂಎಫ್ ಮಳಿಗೆಗೆ ಅವಕಾಶ ನೀಡಲು ಹೇಳಿದ್ದೇನೆ' ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ಮೆಟ್ರೊ ನಿಲ್ದಾಣಗಳಲ್ಲಿ ಅಮೂಲ್ ತನ್ನ ಮಳಿಗೆ ತೆರೆಯುತ್ತಿರುವ ಬಗ್ಗೆ ಸುದ್ದಿಗಾರರು ಕೇಳಿದಾಗ ಪ್ರತಿಕ್ರಿಯಿಸಿದ ಅವರು 'ಮೆಟ್ರೊ ನಿಲ್ದಾಣಗಳಲ್ಲಿ ಮಳಿಗೆ ತೆರೆಯುವ ಸಂಬಂಧ ಬಿಎಂಆರ್‌ಸಿಎಲ್‌ಗೆ ಅರ್ಜಿ ಹಾಕಲು ಕೆಎಂಎಫ್‌ಗೆ ಸೂಚನೆ ನೀಡಿದ್ದೇನೆ' ಎಂದರು.

'ಟೆಂಡರ್ ಆಹ್ವಾನಿಸಿದಾಗ ಅಮೂಲ್ ಹೊರತಾಗಿ ಬೇರೆ ಯಾರೂ ಮಳಿಗೆಗಳಿಗೆ ಅರ್ಜಿ ಹಾಕಿಲ್ಲ. ಕೆಎಂಎಫ್ ಕೂಡ ಅರ್ಜಿ ಹಾಕಿರಲಿಲ್ಲ' ಎಂದರು.

ಕೆಎಂಎಫ್‌ಗೂ 10 ಮಳಿಗೆ

'ಮೆಟ್ರೊ ನಿಲ್ದಾಣಗಳಲ್ಲಿ ನಂದಿನಿ ಮಳಿಗೆ ಆರಂಭಿಸುವ ಬಗ್ಗೆ ಕೆಎಂಎಫ್ ಮತ್ತು ಬಿಎಂಆರ್‌ಸಿಎಲ್ ನಡುವೆ ಮಾತುಕತೆ ನಡೆಯುತ್ತಿತ್ತು. 10 ನಿಲ್ದಾಣಗಳಲ್ಲಿ ಆರಂಭಿಸುವ ಕುರಿತು ಚರ್ಚೆಯಾಗಿ ಅಂತಿಮ ಹಂತಕ್ಕೆ ಬಂದಿತ್ತು' ಎಂದು ಕೆಎಂಎಫ್ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

'ಬಾಡಿಗೆ ದರ ಅಂತಿಮಗೊಳಿಸಿ ಶೀಘ್ರದಲ್ಲಿ ನಂದಿನಿ ಮಳಿಗೆ ಆರಂಭ ಮಾಡಲು ಸಿದ್ಧತೆ ನಡೆದಿದೆ. ಅಷ್ಟು ಹೊತ್ತಿಗೆ ಅಮೂಲ್ ವಿವಾದ ಎದ್ದುಬಿಟ್ಟಿದೆ' ಎಂದು ಅವರು ಹೇಳಿದ್ದಾರೆ.

> **ಮಳಿಗೆಗಳನ್ನು ಆರಂಭಿಸಲು ಜಾಗತಿಕ ಟೆಂಡರ್ ಅಲ್ಲ, ಸಾಮಾನ್ಯ ಟೆಂಡರ್ ಕರೆಯಲಾಗಿತ್ತು. ಟೆಂಡರ್‌ನಲ್ಲಿ 10 ಮಳಿಗೆಗಳನ್ನು ಅಮೂಲ್‌ನವರು ಪಡೆದುಕೊಂಡಿದ್ದಾರೆ. ಕೆಎಂಎಫ್‌ನವರು ಭಾಗವಹಿಸಿರಲಿಲ್ಲ**
> **ಬಿಎಂಆರ್‌ಸಿಎಲ್**

'ನಂದಿನಿ' ಬ್ರ್ಯಾಂಡ್ ನಾಶಕ್ಕೆ ಕಾಂಗ್ರೆಸ್ ಯತ್ನ'



ನಂದಿನಿ ಬ್ರ್ಯಾಂಡ್ ಹೆಸರನ್ನು ಚುನಾವಣಾ ಪ್ರಚಾರಕ್ಕೆ ಬಳಸಿಕೊಂಡಿದ್ದ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದ ಮೇಲೆ ನಂದಿನಿ ಬ್ರ್ಯಾಂಡ್ ಸರ್ವನಾಶ ಮಾಡಲು ಹೊರಟಿದೆ ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ ಟೀಕಿಸಿದ್ದಾರೆ.

ಈ ಕುರಿತು 'ಎಕ್ಸ್' ಮಾಡಿರುವ ಅವರು, ಒಂದು ಕಡೆ ಹಾಲು ಉತ್ಪಾದಕರಿಗೆ ನೂರಾರು ಕೋಟಿ ಬಾಕಿ ಉಳಿಸಿಕೊಂಡಿದೆ. ಮತ್ತೊಂದು ಕಡೆ ಅತ್ಯಂತ ಬೇಡಿಕೆ ಇರುವ ರೆಡಿಮೇಡ್ ಇಡ್ಲಿ, ದೋಸೆ ಹಿಟ್ಟು ಸೇರಿ ಅನೇಕ ಹೊಸ ಉತ್ಪನ್ನಗಳ ಮೂಲಕ ನಂದಿನಿ ಬ್ರ್ಯಾಂಡ್ ಮಾರುಕಟ್ಟೆ ವಿಸ್ತರಿಸಲು ಉತ್ಸಾಹ ಮತ್ತು ಬದ್ಧತೆ ತೋರಿದ್ದ ದಕ್ಷ ಅಧಿಕಾರಿಯನ್ನು ದಿಢೀರ್ ವರ್ಗಾವಣೆ ಮಾಡಿತ್ತು ಎಂದಿದ್ದಾರೆ.

'ಮೆಟ್ರೊ ನಿಲ್ದಾಣಗಳಲ್ಲಿ ಡೈರಿ ಮಳಿಗೆಗಳನ್ನು ಸ್ಥಾಪಿಸಲು ಕರೆದಿದ್ದ ಟೆಂಡರ್‌ನಲ್ಲಿ ಭಾಗವಹಿಸಲು ಕೆಎಂಎಫ್ ಆಸಕ್ತಿ ತೋರಿಲ್ಲ. ನಮ್ಮ ನಾಡಿನ ರೈತರು, ನಿಷ್ಠಾವಂತ ಗ್ರಾಹಕರು ಕಷ್ಟಪಟ್ಟು ಕಟ್ಟಿರುವ ನಂದಿನಿ ಬ್ರ್ಯಾಂಡ್ ಅನ್ನು ಸರ್ವನಾಶ ಮಾಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಶಪಥ ಮಾಡಿದಂತಿದೆ' ಎಂದು ಅಶೋಕ ಹೇಳಿದ್ದಾರೆ.

'ಆರೋಗ್ಯಕರ ಸ್ಪರ್ಧೆ ಇರಲಿ'



'ನಂದಿನಿ ಮತ್ತು ಅಮೂಲ್ ಎರಡೂ ರೈತರ ಸಂಸ್ಥೆಗಳು. ಒಂದು ರಾಜ್ಯ ಸಂಸ್ಥೆಯಾದರೆ ಮತ್ತೊಂದು ದೇಶದ ಸಂಸ್ಥೆ. ಈ ವಿಷಯವಾಗಿ ನಾನು ರಾಜಕೀಯ ಮಾಡುವುದಿಲ್ಲ. ಎರಡೂ ಸಂಸ್ಥೆಗಳ ನಡುವೆ ಆರೋಗ್ಯಕರ ಸ್ಪರ್ಧೆ ಇರಬೇಕು' ಎಂದು ವಿಧಾನಪರಿಷತ್‌ನ ಬಿಜೆಪಿ ಸದಸ್ಯ ಸಿ.ಟಿ. ರವಿ ಹೇಳಿದ್ದಾರೆ.

ನಿಲ್ಲದ ಮಳೆ: ತೆರವಾಗದ ಸೇತುವೆ

ಪ್ರಜಾವಾಣಿ ವಾರ್ತೆ

ಚಿಕ್ಕೋಡಿ (ಬೆಳಗಾವಿ ಜಿಲ್ಲೆ): ಗಡಿ ಜಿಲ್ಲೆಯಲ್ಲಿ ಚಿಕ್ಕೋಡಿ ಉಪ ವಿಭಾಗದ ಕಲ್ಲೋಳ– ಯಡೂರ, ಮಲಿಕವಾಡ– ದತ್ತವಾಡ, ಬಾರವಾಡ– ಕುನ್ನೂರ, ಕಾರದಗಾ– ಭೋಜ ನಡುವಿನ 4 ಸೇತುವೆಗಳು ಬುಧವಾರವೂ ಜಲಾವೃತಗೊಂಡ ಸ್ಥಿತಿಯಲ್ಲಿವೆ.



ಮಹಾರಾಷ್ಟ್ರದ ಕೃಷ್ಣಾ ನದಿಯ ಜಲಾನಯನ ಪ್ರದೇಶ ಹಾಗೂ ಉಪ ವಿಭಾಗದಲ್ಲಿ ಮಳೆ ಮುಂದುವರಿದಿರುವುದು ಇದಕ್ಕೆ ಕಾರಣ.

ಮಹಾರಾಷ್ಟ್ರದ ಕೊಲ್ಹಾಪುರ ಜಿಲ್ಲೆಯ ರಾಜಾಪೂರೆ ಬ್ಯಾರೇಜಿನಿಂದ ಕೃಷ್ಣಾ ನದಿ ಹೊರ ಹರಿವು 62,500 ಕ್ಯೂಸೆಕ್ ಇದ್ದು, ಚಿಕ್ಕೋಡಿ ತಾಲ್ಲೂಕಿನ ಕಲ್ಲೋಳ ಗ್ರಾಮದ ಬಳಿಯಲ್ಲಿ ದೂಧಗಂಗಾ ನದಿಗೆ 16,544 ಕ್ಯೂಸೆಕ್ ಒಳ ಹರಿವು ಇದೆ. ಕಲ್ಲೋಳ–ಯಡೂರ ಸೇತುವೆ ಬಳಿಯಲ್ಲಿ ಕೃಷ್ಣಾ ನದಿಗೆ 79,044 ಕ್ಯೂಸೆಕ್ ಹೊರ ಹರಿವು ದಾಖಲಾಗಿದೆ.

ವಿಜಯಪುರ ಜಿಲ್ಲೆಯ ಆಲಮಟ್ಟಿ ಜಲಾಶಯದ ಒಳಹರಿವು ಬುಧವಾರ ಸಂಜೆ 78,250 ಕ್ಯೂಸೆಕ್‌ಗೆ ಹೆಚ್ಚಿದೆ. ಪ್ರಸಕ್ತ ವರ್ಷ ಮೊದಲ ಬಾರಿಗೆ ಜಲಾಶಯದ 10 ಗೇಟ್ ತೆರೆದು, 70 ಸಾವಿರ ಕ್ಯೂಸೆಕ್ ನೀರು ನದಿಗೆ ಬಿಡಲಾಗಿದೆ.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	113.25	29,368	1,024
ಹಾರಂಗಿ	2,859	2,849.22	7,888	12,166
ಕಬಿನಿ	2,284.00	2,280.90	23,755	25,000
ಹೇಮಾವತಿ	2,922	2,911.35	19,546	1,040
ಲಿಂಗನಮಕ್ಕಿ	1,819	1,771.00	26,150	5,184
ಸೂಪಾ (ಮೀ)	564	530.95	11,426.8	1,849.26
ಮಾಣಿ	595	579.96	4,322	-
ತುಂಗಭದ್ರಾ	1,633	1606.09	15,941	160
ಮಲಪ್ರಭಾ	2,079.5	2,053	3,986	194
ಘಟಪ್ರಭಾ	2175	2,111.60	11,271	120
ಭದ್ರಾ *	186	146.3	8,493	1,272
ಆಲಮಟ್ಟಿ (ಮೀ)	519.6	515.36	45,733	70,000
ನಾರಾಯಣಪುರ (ಮೀ)	492.25	490.46	40,000	40,775

* ನೆಲಮಟ್ಟದಿಂದ

'ಗಗನಚುಕ್ಕಿ'ಗೆ ಜೀವಕಳೆ



ಮಳವಳ್ಳಿ (ಮಂಡ್ಯ ಜಿಲ್ಲೆ): ಜಲಾಯನ ಪ್ರದೇಶದಲ್ಲಿ ಕೆಲ ದಿನಗಳಿಂದ ನಿರಂತರ ಮಳೆ ಹಿನ್ನೆಲೆಯಲ್ಲಿ ತಾಲ್ಲೂಕಿನ ಶಿವನಸಮುದ್ರ ಸಮೀಪದ ವಿಶ್ವವಿಖ್ಯಾತ ಗಗನಚುಕ್ಕಿ ಜಲಪಾತದಲ್ಲಿ ನೀರು ಧುಮ್ಮಿಕ್ಕಿ ಹರಿಯುತ್ತಿದ್ದು, ವೀಕ್ಷಣೆಗೆ ರಮಣೀಯವಾಗಿದೆ.

ಸಾಮಾನ್ಯವಾಗಿ ಜುಲೈ, ಆಗಸ್ಟ್‌ನಲ್ಲಿ ಜಲಪಾತಕ್ಕೆ ಹೆಚ್ಚಿನ ನೀರು ಹರಿದು ಬರುತ್ತಿತ್ತು. ಪ್ರಸ್ತುತ ವರ್ಷ ಜೂನ್ ಮಧ್ಯಭಾಗದಲ್ಲಿಯೇ ಜೀವಕಳೆ ಬಂದಿದ್ದು, ಪ್ರವಾಸಿಗರನ್ನು ಸೆಳೆಯುತ್ತಿದೆ.

ಗೋಕಾಕ ಜಲಧಾರೆ

ಪ್ರಜಾವಾಣಿ ಚಿತ್ರ



ಬೆಳಗಾವಿ ಜಿಲ್ಲೆಯಲ್ಲಿ ಘಟಪ್ರಭಾ ಹಾಗೂ ಮಾರ್ಕಂಡೇಯ ನದಿಗಳ ಪಾತ್ರದಲ್ಲಿ ಸುರಿದ ಮಳೆಯಿಂದ ಗೋಕಾಕ ಜಲಪಾತ ಬುಧವಾರ ಧುಮ್ಮಿಕ್ಕಿ ಹರಿಯಿತು

ಕೆಇಎ ವಿರುದ್ಧ ಉನ್ನತ ಶಿಕ್ಷಣ ಸಚಿವರಿಗೆ ಪತ್ರ

'ಡಿ–ಸಿಇಟಿ ಪರೀಕ್ಷೆ: ಹಲವು ಲೋಪ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎಂಜಿನಿಯರಿಂಗ್ ಪದವಿಯ 3ನೇ ಸೆಮಿಸ್ಟರ್‌ಗೆ ನೇರ ಪ್ರವೇಶ ಕಲ್ಪಿಸಲು ಡಿಪ್ಲೊಮಾ ವಿದ್ಯಾರ್ಥಿ ಗಳಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು (ಕೆಇಎ) ಇದೇ ಮೇ 31ರಂದು ನಡೆಸಿದ್ದ ಡಿ–ಸಿಇಟಿ ಪರೀಕ್ಷೆಯ ಪ್ರಶ್ನೆಪತ್ರಿಕೆ ಮತ್ತು ಕೀ-ಉತ್ತರಗಳಲ್ಲಿ ಹಲವು ಲೋಪಗಳಾಗಿವೆ. ತಾವು ಮಧ್ಯ ಪ್ರವೇಶಿಸಿ ಕ್ರಮ ತೆಗೆದುಕೊಳ್ಳಿ' ಎಂದು ನಿವೃತ್ತ ಎಂಜಿನಿಯರ್ ಒಬ್ಬರು ಉನ್ನತ ಶಿಕ್ಷಣ ಸಚಿವ ಎಂ.ಸಿ.ಸುಧಾಕರ್ ಅವರಿಗೆ ಪತ್ರ ಬರೆದಿದ್ದಾರೆ.

ಖಾಸಗಿ ಕಂಪನಿ ಒಂದರಲ್ಲಿ ಪ್ರಧಾನ ವ್ಯವಸ್ಥಾಪಕರಾಗಿ ನಿವೃತ್ತಿಯಾಗಿರುವ ಸ್ವಾಮಿ ರುದ್ರ ಆರಾಧ್ಯ ಎಂಬವರು ಸಚಿವರಿಗೆ ಪತ್ರ ಬರೆದಿದ್ದು, 'ಮೇ 31ರಂದು ನಡೆದಿದ್ದ ಪರೀಕ್ಷೆಯಲ್ಲಿ ನೀಡಲಾಗಿದ್ದ 'ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್' ವಿಷಯದ ಪ್ರಶ್ನೆ ಪತ್ರಿಕೆಯಲ್ಲಿ ಒಟ್ಟು 20 ಪ್ರಶ್ನೆಗಳಿದ್ದು, ಆ ಪೈಕಿ ಏಳು ಪ್ರಶ್ನೆಗಳನ್ನು ಖಾಸಗಿ ಕಂಪನಿ ಒಂದರ ಜಾಲತಾಣದಿಂದ ಯಥಾವತ್ತಾಗಿ ನಕಲು ಮಾಡಲಾಗಿದೆ. ಆದರೆ ಕೆಇಎ ಪ್ರಕಟಿಸಿದ ಕೀ-ಉತ್ತರದಲ್ಲಿ, ಈ ಏಳೂ ಪ್ರಶ್ನೆಗಳು ಸೇರಿ ಒಟ್ಟು ಎಂಟು ಪ್ರಶ್ನೆಗಳ ಉತ್ತರ ತಪ್ಪಾಗಿದೆ' ಎಂದು ವಿವರಿಸಿದ್ದಾರೆ.

'ಕೀ-ಉತ್ತರಗಳಿಗೆ ಆಕ್ಷೇಪಣೆ ಸಲ್ಲಿಸಲು ಕೆಇಎ ಎರಡು ದಿನಗಳ ಕಾಲಾವಕಾಶ ನೀಡಿತ್ತು. ಆಕ್ಷೇಪಣೆಗಳ ಸ್ಥಿತಿ ಏನು ಎಂದು ತಿಳಿಸುವ ವ್ಯವಸ್ಥೆ ಇಲ್ಲ. ಜೂನ್ 10ರಂದು ಕೆಎಇ ನಾಲ್ಕು ಪ್ರಶ್ನೆಗಳಿಗೆ ಪರಿಷ್ಕೃತ ಕೀ-ಉತ್ತರಗಳನ್ನು ಪ್ರಕಟಿಸಿತು. ಆದರೆ ಆ ನಾಲ್ಕೂ ಉತ್ತರಗಳು ತಪ್ಪಾಗಿವೆ. ಒಂದೇ ಪತ್ರಿಕೆಯಲ್ಲಿ ಒಟ್ಟು 12 ಪ್ರಶ್ನೆಗಳಿಗೆ ತಪ್ಪು ಕೀ-ಉತ್ತರಗಳನ್ನು ಪ್ರಕಟಿಸಿದೆ' ಎಂದು ವಿವರಿಸಿದ್ದಾರೆ.

'21,000ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, ತಪ್ಪು-ಕೀ ಉತ್ತರಗಳನ್ನೇ ಆಧರಿಸಿ ಫಲಿತಾಂಶ ನೀಡಿದರೆ ಸರಿಯಾಗಿ ಉತ್ತರ ಬರೆದಿದ್ದವರಿಗೆ ಅನ್ಯಾಯವಾಗುತ್ತದೆ. ಈ ಸಂಬಂಧ ಕೆಇಇಗೆ ಮಾಡಿದ ಇ-ಮೇಲ್‌ಗೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಸಾರ್ವಜನಿಕ ಸಂಪರ್ಕಾಧಿಕಾರಿಗೆ ಕರೆ ಮಾಡಿದರೆ, ನ್ಯಾಯಾಲಯದಲ್ಲಿ ಅರ್ಜಿ ಹಾಕಿಕೊಳ್ಳಿ ಎನ್ನುತ್ತಾರೆ. ಸಾವಿರಾರು ವಿದ್ಯಾರ್ಥಿಗಳ ಭವಿಷ್ಯದ ಪ್ರಶ್ನೆ ಇದು. ತಾವು ಮಧ್ಯ ಪ್ರವೇಶಿಸಿ, ಲೋಪಗಳನ್ನು ಸರಿಪಡಿಸಲು ಸೂಚಿಸಬೇಕು' ಎಂದು ಕೋರಿದ್ದಾರೆ.

ಸ್ವಾಮಿ ರುದ್ರ ಆರಾಧ್ಯ ಅವರು ಕೆಎಇಗೆ, ಕೆಇಎ ನಿರ್ದೇಶಕರಿಗೆ ಕಳುಹಿಸಿದ ಇ-ಮೇಲ್‌ಗಳನ್ನು, ಪ್ರಶ್ನೆ ಪತ್ರಿಕೆ ಮತ್ತು ಕೀ-ಉತ್ತರಗಳ ಸ್ಕ್ರೀನ್‌ಶಾಟ್‌ಗಳನ್ನು ಸಚಿವರಿಗೆ ಬರೆದ ಪತ್ರದಲ್ಲಿ ಲಗತ್ತಿಸಿದ್ದಾರೆ.

> **ಪಠ್ಯಪುಸ್ತಕದಲ್ಲಿ ಇರುವ ಉತ್ತರಗಳನ್ನು ನಾನು ಪರೀಕ್ಷೆಯಲ್ಲಿ ನಮೂದಿಸಿದ್ದೆ. ನನ್ನ ಹಲವು ಗೆಳೆಯರೂ ಅದೇ ಉತ್ತರಗಳನ್ನು ಬರೆದಿದ್ದಾರೆ. ಆದರೆ ಕೆಇಎ ಕೀ-ಉತ್ತರ ಬೇರೆಯೇ ಇದೆ**
> **ತೇಜಸ್‌ಕುಮಾರ್ ಟಿ.ಪಿ.,** ತುಮಕೂರು

> **ಪಠ್ಯ ಪುಸ್ತಕದ ಪ್ರಕಾರ ನಾನು ಸರಿ ಉತ್ತರ ಬರೆದಿದ್ದೇನೆ. ಕೀ-ಉತ್ತರದ ಪ್ರಕಾರ ಅವೆಲ್ಲಾ ತಪ್ಪಾಗಿವೆ. ಕೆಇಎ ತಪ್ಪಿನಿಂದಾಗಿ ನಾನು ಹಲವು ಅಂಕ ಕಳೆದುಕೊಳ್ಳಬೇಕಾಗಿದೆ**
> **ಎಸ್.ಮನೋಜ್,** ಚನ್ನಸಂದ್ರ

> **ಕೀ-ಉತ್ತರಗಳಿಗೆ ಬಂದಿದ್ದ ಆಕ್ಷೇಪಗಳನ್ನು ತಾಂತ್ರಿಕ ಸಮಿತಿಯ ಅವಗಾಹನೆಗೆ ಸಲ್ಲಿಸಲಾಗಿತ್ತು. ಸಮಿತಿ ನೀಡಿದ ಪರಿಷ್ಕೃತ ಉತ್ತರಗಳನ್ನಷ್ಟೇ ಪ್ರಕಟಿಸಲಾಗಿದೆ**
> **ಎಚ್.ಪ್ರಸನ್ನ,**
> ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ

39 ಸಂಘಟನಾತ್ಮಕ ಜಿಲ್ಲೆಗಳ ಅಧ್ಯಕ್ಷರಿಗೆ ಅಭಿನಂದನೆ

'ಪಕ್ಷ ಕಟ್ಟಿದರಷ್ಟೇ ಸ್ಥಾನಮಾನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೇವಲ ಅಧಿಕಾರಕ್ಕಾಗಿ ಹವಣಿಸುವವರಿಗೆ ಪಕ್ಷದಲ್ಲಿ, ಸಂಘಟನೆಯಲ್ಲಿ ಸ್ಥಾನವಿಲ್ಲ. ಸಂಘಟನೆಗೆ ಒತ್ತು ನೀಡದೆ ಕೇವಲ ರಾಜಕೀಯ, ವ್ಯವಹಾರಗಳನ್ನಷ್ಟೇ ನಡೆಸಿಕೊಂಡು ಇರುತ್ತೇವೆ ಎಂಬುವವರಿಗೆ ಯಾವುದೇ ಅವಕಾಶ ಮತ್ತು ಸ್ಥಾನಮಾನ ಸಿಗುವುದಿಲ್ಲ' ಎಂದು ಆರೆಸ್ಸೆಸ್ ಕ್ಷೇತ್ರೀಯ ಕಾರ್ಯವಾಹ ನಾ.ತಿಪ್ಪೇಸ್ವಾಮಿ ಹೇಳಿದ್ದಾರೆ.

ಜಗನ್ನಾಥ ಭವನದಲ್ಲಿ ಬುಧವಾರ ನಡೆದ 39 ಸಂಘಟನಾತ್ಮಕ ಜಿಲ್ಲೆಗಳ ಅಧ್ಯಕ್ಷರ ಅಭಿನಂದನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಈ ಹಿಂದೆ ಪಕ್ಷದ ಅತ್ಯಂತ ಹಿರಿಯ ನಾಯಕರು ಪಕ್ಷದಲ್ಲಿ ಅಧಿಕಾರದಲ್ಲಿ ಇರಲಿ, ಬಿಡಲಿ ಪಕ್ಷದ ಕೆಲಸದಿಂದ ವಿಮುಖರಾಗುತ್ತಿರಲಿಲ್ಲ. ಪಕ್ಷದ ಸಂಘಟನೆ ಜವಾಬ್ದಾರಿಯೇ ಬಹುದೊಡ್ಡ ಹುದ್ದೆ ಎಂದು ಭಾವಿಸಿದ್ದರು' ಎಂದು ಅವರು ತಿಳಿಸಿದರು.

'ದೇಶದಲ್ಲಿ ಬಿಜೆಪಿಯಿಂದ ಬೆರಳೆಣಿಕೆ ಸಂಸದರು ಗೆಲ್ಲುವ ಸಂದರ್ಭದಲ್ಲೂ ಪಕ್ಷದ ಸಂಘಟನೆಯೇ ಮೂಲ ಕರ್ತವ್ಯ ಎಂದು ವಾಜಪೇಯಿ, ಅಡ್ವಾಣಿ ಅಂತಹವರು ಶ್ರಮಿಸುತ್ತಿದ್ದರು. ಚುನಾವಣೆಯಲ್ಲಿ ಸೋತರೂ ಪಕ್ಷದ ಕೆಲಸದಿಂದ ದೂರ ಸರಿಯಲಿಲ್ಲ. ಅಂತಹ ಹಿರಿಯರ ಶ್ರಮ ಮತ್ತು ಬದ್ಧತೆ ಕಾರಣ ಇಂದು ಬಿಜೆಪಿ ವಿಶ್ವದ ಅತಿ ದೊಡ್ಡ ಪಕ್ಷವಾಗಿದೆ' ಎಂದರು.

ಸಂಘಟನೆಗೆ ಜಿಲ್ಲಾ ಅಧ್ಯಕ್ಷರಿಗೆ ಸೂಚನೆ: ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಪ್ರೀತಂಗೌಡ, ಪಕ್ಷದ ಸಂಘಟನೆಯನ್ನು ಕೆಳಹಂತದಿಂದಲೇ ಸದೃಢಗೊಳಿಸಬೇಕು ಎಂದು ಜಿಲ್ಲಾ ಘಟಕಗಳ ನೂತನ ಅಧ್ಯಕ್ಷರಿಗೆ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಸೂಚನೆ ನೀಡಿದ್ದಾರೆ ಎಂದರು.

ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆ ಸೇರಿ ಎಲ್ಲ ರೀತಿಯ ಸವಾಲುಗಳನ್ನು ಎದುರಿಸುವ ಕುರಿತು ವಿಸ್ತೃತವಾಗಿ ಚರ್ಚೆ ನಡೆಸಲಾಯಿತು. ಇದಕ್ಕಾಗಿ ಬೂತ್ ಮಟ್ಟದಿಂದಲೇ ಸಿದ್ಧತೆ ನಡೆಸಲು ಜಿಲ್ಲಾ ತಂಡಗಳ ಪಾತ್ರ ಯಾವ ರೀತಿ ಇರಬೇಕು ಎಂಬ ಕುರಿತು ಸಲಹೆ ನೀಡಲಾಯಿತು ಎಂದರು.

'ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಎನ್‌ಡಿಎ ಮೈತ್ರಿ ಪಕ್ಷದ ಪ್ರಭಾವಿ ನಾಯಕ. ಜೆಡಿಎಸ್ ಎನ್‌ಡಿಎ ಕೂಟದ ಪ್ರಮುಖ ಅಂಗ ಪಕ್ಷ. ಮೈತ್ರಿ ಮತ್ತಿತರ ವಿಷಯಗಳ ಬಗ್ಗೆ ನಮ್ಮ ಪಕ್ಷದ ವರಿಷ್ಠರು ಮಾತನಾಡುತ್ತಾರೆ. ನಾವು ಇಲ್ಲಿ ರಾಜ್ಯ ಮಟ್ಟದಿಂದ ಬೂತ್ ಮಟ್ಟದವರೆಗೆ ಪಕ್ಷವನ್ನು ಬಲಗೊಳಿಸುವ ಕುರಿತು ಚರ್ಚೆ ಮಾಡಿದ್ದೇವೆ. ದೊಡ್ಡ ವಿಷಯಗಳ ಕುರಿತು ದೊಡ್ಡವರು ಮಾತನಾಡುತ್ತಾರೆ. ಬೆಂಗಳೂರಿನ ಬಿಜೆಪಿ ಅಥವಾ ಜೆಡಿಎಸ್ ಕಚೇರಿಯಲ್ಲಿ ಆಗುವುದಿಲ್ಲ' ಎಂದು ಅವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ರಾಷ್ಟ್ರೀಯ ಅಧ್ಯಕ್ಷರ ತೀರ್ಮಾನ'

ರಾಜ್ಯ ವಿಧಾನಸಭಾ ಚುನಾವಣೆಗೆ ಇನ್ನೂ ಮೂರು ವರ್ಷ ಬಾಕಿ ಇದೆ. ಯಾರು ಯಾವ ಕ್ಷೇತ್ರದಿಂದ ಸ್ಪರ್ಧಿಸಬೇಕು ಎಂಬುದನ್ನು ರಾಷ್ಟ್ರೀಯ ಅಧ್ಯಕ್ಷರು ತೀರ್ಮಾನಿಸುತ್ತಾರೆ ಎಂದು ಪ್ರೀತಂಗೌಡ ಹೇಳಿದರು.

ಇತ್ತೀಚೆಗೆ ಎಚ್.ಡಿ.ಕುಮಾರಸ್ವಾಮಿ ಅವರು ಈಗಿನಿಂದಲೇ ಕ್ಷೇತ್ರಗಳನ್ನು ಗಟ್ಟಿ ಮಾಡಿಕೊಳ್ಳಿ ಎಂದು ಜೆಡಿಎಸ್ ಕಾರ್ಯಕರ್ತರಿಗೆ ಸಲಹೆ ನೀಡಿದ ಕುರಿತ ಪ್ರಶ್ನೆಗೆ ಅವರು ಈ ರೀತಿ ಪ್ರತಿಕ್ರಿಯಿಸಿದರು.

ನಿಧನ ವಾರ್ತೆ

ವೆಂಕಟೇಶನ್


ವೆಂಕಟೇಶನ್

ಬೆಂಗಳೂರು: ದಿ ಪ್ರಿಂಟರ್ಸ್ ಮೈಸೂರು ಪ್ರೈವೇಟ್ ಲಿಮಿಟೆಡ್‌ನ ನಿವೃತ್ತ ಉದ್ಯೋಗಿ ಟಿ.ಎನ್. ವೆಂಕಟೇಶನ್ (79) ಅವರು ಬುಧವಾರ ನಿಧನರಾಗಿದ್ದಾರೆ.

ಅವರಿಗೆ ನಾಲ್ವರು ಮಕ್ಕಳು ಇದ್ದಾರೆ. ಬನಶಂಕರಿಯ ವಿದ್ಯುತ್ ಚಿತಾಗಾರದಲ್ಲಿ ಅಂತ್ಯಕ್ರಿಯೆ ನೆರವೇರಿತು.

ಮಾರುತಿ ಚಿತಂಪಲ್ಲಿ

ಸೊಲ್ಲಾಪುರ (ಪಿಟಿಐ): ಮಹಾರಾಷ್ಟ್ರದಲ್ಲಿ 'ಅರಣ್ಯ ಋಷಿ' ಎಂದೇ ಹೆಸರಾಗಿದ್ದ ಮಾರುತಿ ಚಿತಂಪಲ್ಲಿ (93) ಬುಧವಾರ ನಿಧನರಾದರು.

ವನ್ಯಜೀವಿ ಸಂರಕ್ಷಣೆ, ಸಾಹಿತ್ಯ, ಶಿಕ್ಷಣ ಕ್ಷೇತ್ರದಲ್ಲಿನ ಕೆಲಸಕ್ಕಾಗಿ ಈ ವರ್ಷ 'ಪದ್ಮಶ್ರೀ' ಪ್ರಶಸ್ತಿಗೆ ಭಾಜನರಾಗಿದ್ದರು.

ವಿದರ್ಭ ವಲಯದಲ್ಲಿ ದೀರ್ಘ ಕಾಲ ಅರಣ್ಯ ಸಂರಕ್ಷಣಾಧಿಕಾರಿಯಾಗಿ ಕೆಲಸ ಮಾಡಿದ್ದರು.

ಸಾಮೂಹಿಕ ಅತ್ಯಾಚಾರ: ಬಾಲಕಿಯ ತಂದೆಯಿಂದ ದೂರು ದಾಖಲು

ನೇಣು ಬಿಗಿದ ಸ್ಥಿತಿಯಲ್ಲಿ ಬಾಲಕಿ ಮೃತದೇಹ ಪತ್ತೆ

ಕ್ಯೊಂಝರ್ (ಒಡಿಶಾ) (ಪಿಟಿಐ): ಬಯಲು ಶೌಚಕ್ಕೆ ತೆರಳಿದ್ದ 17 ವರ್ಷ ಬಾಲಕಿಯ ಮೃತದೇಹವು ಮರವೊಂದಕ್ಕೆ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿರುವ ಘಟನೆ ಕೊಂಝರ್ ಜಿಲ್ಲೆಯ ಹರಿಚಂದನ್ ಪುರದಲ್ಲಿ ನಡೆದಿದೆ. ತಮ್ಮ ಮಗಳ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿ ಹತ್ಯೆ ಮಾಡಲಾಗಿದೆ ಎಂದು ತಂದೆ ಆರೋಪಿಸಿದ್ದಾರೆ.

'ಬಾಲಕಿಯು ಸೋಮವಾರ ರಾತ್ರಿ ಶೌಚಕ್ಕಾಗಿ ತೆರಳಿದ್ದಳು. ಆಕೆಯ ಮೊಬೈಲ್ ಸ್ವಿಚ್‌ಆಫ್ ಆಗಿತ್ತು. ಮಾರನೆಯ ದಿನ ಬೆಳಿಗ್ಗೆ ಮರವೊಂದರಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಬಾಲಕಿ ಪತ್ತೆಯಾದಳು. ಆಕೆಯ ದೇಹ ರಕ್ತಸಿಕ್ತವಾಗಿತ್ತು' ಎಂದು ಪೊಲೀಸರು ಮಾಹಿತಿ ನೀಡಿದರು.

ಮರದ ಬಳಿ ಪುರುಷರ ರಕ್ತಸಿಕ್ತ ಬಟ್ಟೆಗಳು ಹಾಗೂ ಕೆಲವು ವಸ್ತುಗಳು ದೊರೆತಿವೆ. 'ಸಾಮೂಹಿಕ ಅತ್ಯಾಚಾರ ನಡೆಸಿ, ಮರಕ್ಕೆ ನೇಣು ಹಾಕಿ, ಇದೊಂದು ಆತ್ಮಹತ್ಯೆ ಎಂದು ಬಿಂಬಿಸಲು ಯತ್ನಿಸಲಾಗಿದೆ' ಎಂದು ಬಾಲಕಿಯ ತಂದೆ ಪೊಲೀಸರಿಗೆ ದೂರು ನೀಡಿದ್ದಾರೆ.

ಗ್ರಾಮದ ಮಹಿಳೆಯರೇ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ದಿನವಿಡೀ ಪ್ರತಿಭಟನೆ ನಡೆಸಿದರು. ಬಾಲಕಿಯ ಮೃತದೇಹವನ್ನು ಪಡೆದುಕೊಳ್ಳಲು ಒಪ್ಪದ ಕುಟುಂಬದವರು ರಸ್ತೆ ತಡೆ ನಡೆಸಿದರು. ಈ ಎಲ್ಲದರ ಬೆನ್ನಲ್ಲೇ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಬಿಎನ್‌ಎಸ್ ಸೆಕ್ಷನ್ 70 (2) (ಸಾಮೂಹಿಕ ಅತ್ಯಾಚಾರ) ಮತ್ತು 103 (1) (ಹತ್ಯೆ) ಜೊತೆಗೆ ಪೋಕ್ಸೊ ಕಾಯ್ದೆ ಅಡಿಯಲ್ಲಿಯೂ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. 'ಪ್ರಕರಣ ಸಂಬಂಧ ಇಬ್ಬರನ್ನು ವಶಕ್ಕೆ ಪಡೆಯಲಾಗಿದೆ' ಎಂದು ಪೊಲೀಸರು ತಿಳಿಸಿದರು.

> ರಾಜ್ಯ 44 ಸಾವಿರ ಮಹಿಳೆಯರು ಮತ್ತು ಮಕ್ಕಳು ಕಳೆದ ಐದು ವರ್ಷದಲ್ಲಿ ಕಾಣೆಯಾಗಿದ್ದಾರೆ ಎಂದು ಖುದ್ದು ಮುಖ್ಯಮಂತ್ರಿಯೇ ಹೇಳುತ್ತಾರೆ. ಮಹಿಳೆಯರ ಸುರಕ್ಷತೆಗೆ ಆದ್ಯತೆ ನೀಡದೇ ಇರುವುದೇ ಮಹಿಳೆಯರ ಮೇಲೆ ಎಸಗುವ ದೌರ್ಜನ್ಯ
>
> **ಪ್ರಿಯಾಂಕಾ ಗಾಂಧಿ ವಾದ್ರಾ**
> ವಯನಾಡ್ ಸಂಸದೆ (ಒಡಿಶಾದ ಗೋಪಾಲಪುರದಲ್ಲಿ ಇತ್ತೀಚೆಗೆ 20 ವರ್ಷದ ಕಾಲೇಜು ವಿದ್ಯಾರ್ಥಿನಿ ಮೇಲೆ ನಡೆದ ಸಾಮೂಹಿಕ ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿ ನೀಡಿದ ಪ್ರತಿಕ್ರಿಯೆ)

ರುದ್ರಪ್ರಯಾಗ: ಭೂಕುಸಿತ, ಇಬ್ಬರ ಸಾವು

ರುದ್ರಪ್ರಯಾಗ (ಉತ್ತರಾಖಂಡ) (ಪಿಟಿಐ): ಕೇದಾರನಾಥದ ಜಂಗಲ್‌ಚಟ್ಟಿ ಘಾಟ್ ಚಾರಣ ಮಾರ್ಗದಲ್ಲಿ ಬುಧವಾರ ಸಂಭವಿಸಿದ ಭೂಕುಸಿತದಲ್ಲಿ, ಜನರನ್ನು ಡೋಲಿಯಲ್ಲಿ ಹೊತ್ತು ಸಾಗುವ ಇಬ್ಬರು ಮೃತಪಟ್ಟಿದ್ದು, ಯಾತ್ರಿಯೊಬ್ಬರು ಸೇರಿ ಮೂವರು ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಜಮ್ಮು ಮತ್ತು ಕಾಶ್ಮೀರದ ದೋಡಾ ಜಿಲ್ಲೆಯ ನಿತಿನ್ ಕುಮಾರ್ ಮತ್ತು ಚಂದ್ರಶೇಖರ್ ಮೃತರು.

ಗುಜರಾತ್‌ನ ಭಾವನಗರದ ಯಾತ್ರಿಕ ಆಕಾಶ್ ಚಿತ್ರಿಯಾ, ಜಮ್ಮು ಮತ್ತು ಕಾಶ್ಮೀರದ ಡೋಲಿ ಹೊರುವ ಸಂದೀಪ್ ಕುಮಾರ್, ನಿತಿನ್ ಮನ್ಹಾಸ್ ಗಾಯಗೊಂಡವರು.

ಬುಧವಾರ ಬೆಳಿಗ್ಗೆ 11.20ರ ಸುಮಾರಿಗೆ ಬೆಟ್ಟ ಪ್ರದೇಶದಿಂದ ಉರುಳಿಬಂದ ಬಂಡೆಗಳು ಅಪ್ಪಳಿಸಿ ದುರಂತ ಸಾವು–ನೋವು ಸಂಭವಿಸಿದೆ.

ಪೊಲೀಸ್ ನಿಗಾದಲ್ಲಿ ಯಾತ್ರೆ ಮುಂದುವರಿದಿದೆ ಎಂದು ರುದ್ರಪ್ರಯಾಗ ಎಸ್‌ಪಿ ಅಕ್ಷಯ್ ಪ್ರಹ್ಲಾದ್ ಕೊಂಡೆ ಅವರು ಮಾಹಿತಿ ನೀಡಿದ್ದಾರೆ.



ರುದ್ರಪ್ರಯಾಗದ ಜಂಗಲ್‌ಚಟ್ಟಿ ಸಮೀಪ ಸಂಭವಿಸಿದ ಭೂಕುಸಿತದ ದೃಶ್ಯ

ಶಿವಲಿಂಗಪ್ಪ, ದಿಲೀಪ್‌ಗೆ ಸಾಹಿತ್ಯ ಅಕಾಡೆಮಿ ಪುರಸ್ಕಾರ

ಒಂದನೇ ಪುಟದಿಂದ...

ಚಾಮರಾಜನಗರದ ದಿಲೀಪ್ ಕುಮಾರ್ ಕವಿ, ವಿಮರ್ಶಕ ಹಾಗೂ ಸಂಶೋಧಕರು. ಅವರು ಜನಿಸಿದ್ದು 1991ರ ಮಾರ್ಚ್ 16ರಂದು. ಮಹಾಕವಿ ಪಂಪನ ಎರಡೂ ಮಹಾ ಕಾವ್ಯಗಳನ್ನು ಕುರಿತು ಅವರು ಸರಣಿ ವಿಮರ್ಶಾ ಲೇಖನಗಳನ್ನು ಬರೆದಿದ್ದಾರೆ. ನಂತರ ಅವರು ವಚನ ಸಾಹಿತ್ಯ ಕುರಿತು ಬರೆದ ಲೇಖನಗಳನ್ನು 'ಶಬ್ದ ಸೋಪಾನ' ಹೆಸರಲ್ಲಿ ಪ್ರಕಟಿಸಿದ್ದಾರೆ. 'ಹಾರುವ ಹಂಸೆ' ಅವರ ಕವನ ಸಂಕಲನ.

ಶಿವಲಿಂಗಪ್ಪ ಹಂದಿಹಾಳು ಅವರು ಬಳ್ಳಾರಿ ಜಿಲ್ಲೆಯ ಹಂದಿ ಹಾಳು ಗ್ರಾಮದವರು. ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸಹ ಶಿಕ್ಷಕರಾಗಿದ್ದಾರೆ. 'ನಾನು ಮತ್ತು ಕನ್ನಡಕ' (ಕವನ ಸಂಕಲನ), 'ಎಳೆಬಿಸಿಲು' (ಮಕ್ಕಳ ಸಾಹಿತ್ಯ ಸಂಪದ), 'ಶಾವೋಲಿನ್' (ಇಂಗ್ಲಿಷ್ ಮೂಲ ಮಕ್ಕಳ ಕತೆಗಳು), 'ಆನಂದಾವಲೋಕನ' (ಭಾರತೀಯ ಮಕ್ಕಳ ಸಾಹಿತ್ಯ ಕುರಿತು), 'ಬಳ್ಳಾರಿಯ ಬೆಡಗು' (ಕಥಾ ಸಂಕಲನ), 'ದಿ ಯಂಗ್ ಸೈಂಟಿಸ್ಟ್' (ಮಕ್ಕಳ ಕಾದಂಬರಿ) ಸೇರಿದಂತೆ ಹಲವು ಕೃತಿಗಳನ್ನು ರಚಿಸಿದ್ದಾರೆ. ಹಲವು ಪ್ರಶಸ್ತಿಗಳನ್ನು ಪಡೆದಿದ್ದಾರೆ. ಕನ್ನಡ ವಿಭಾಗದಲ್ಲಿ ಬಾಲ ಸಾಹಿತ್ಯ ಪುರಸ್ಕಾರಕ್ಕೆ ಲೇಖಕರಾದ ಬಸು ಬೇವಿನಗಿಡದ, ಬೇಲೂರು ರಘುನಂದನ್ ಹಾಗೂ ಎಚ್. ಶಶಿಕಲಾ ತೀರ್ಪುಗಾರರಾಗಿದ್ದರು. ಯುವ ಪುರಸ್ಕಾರಕ್ಕೆ ಲೇಖಕರಾದ ಜಿ.ಎಂ. ಹೆಗಡೆ, ಪ್ರೊ.ವಿಕ್ರಂ ವಿಸಾಜಿ ಹಾಗೂ ವಿಮರ್ಶಕ ಟಿ.ಪಿ. ಅಶೋಕ ತೀರ್ಪುಗಾರರಾಗಿದ್ದರು.

ಮಂಗಳೂರು– ದುಬೈ: ಒಂದು ವಿಮಾನ ರದ್ದು

ಮಂಗಳೂರು: ದುಬೈಗೆ ಇಲ್ಲಿಂದ ನಿತ್ಯ ಸಂಚರಿಸುತ್ತಿದ್ದ ಏರ್ ಇಂಡಿಯಾದ ಎರಡು ವಿಮಾನಗಳಲ್ಲಿ, ಒಂದರ ಸಂಚಾರವನ್ನು ಜೂನ್ 30ರ ವರೆಗೆ ರದ್ದುಪಡಿಸಲಾಗಿದೆ.

ಇಸ್ರೇಲ್, ಇರಾನ್ ವಾಯುಪ್ರದೇಶಗಳ ಬಳಕೆಗೆ ನಿರ್ಬಂಧ ಹೇರಿರುವುದು ಇದಕ್ಕೆ ಕಾರಣ ಎನ್ನಲಾಗಿದೆ. ಇಂಡಿಗೊ ವಿಮಾನಗಳ ನಿರ್ವಹಣೆಯಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ಮೂಲಗಳು ತಿಳಿಸಿವೆ.



ದುಡ್ಡಿನಂಥಾ ಮಾತು

ಶ್ರೀಮಂತ ವ್ಯಕ್ತಿಗಳು ಆಸ್ತಿಗಳನ್ನು ತಮ್ಮದಾಗಿಸಿಕೊಳ್ಳುತ್ತಾರೆ. ಆದರೆ ಬಡವರು ತಾವು ಆಸ್ತಿ ಎಂದು ಭಾವಿಸಿರುವ ಒಂದಿಷ್ಟು ಹೊರೆಗಳನ್ನು ತಮ್ಮದಾಗಿಸಿಕೊಳ್ಳುತ್ತಾರೆ.
ರಾಬರ್ಟ್ ಕಿಯೊಸಾಕಿ, ರಿಚ್ ಡ್ಯಾಡ್ ಪೂರ್ ಡ್ಯಾಡ್ ಕೃತಿಯ ಲೇಖಕ



ಎಂಎಸ್‌ಎಂಇ ಸಾಲಕ್ಕೆ ಅರ್ಹತೆ ಹೆಚ್ಚಿಸಿಕೊಳ್ಳಿ!

ರೆಪೊ ದರ ಇಳಿದಿದೆ. ಸಾಲದ ಮೇಲಿನ ಬಡ್ಡಿ ದರ ತಗ್ಗುತ್ತಿದೆ. ಸಣ್ಣ ಉದ್ದಿಮೆಗಳನ್ನು ನಡೆಸುತ್ತಿರುವವರಿಗೆ ಈ ಸಂದರ್ಭದಲ್ಲಿ ಸಾಲ ಪಡೆಯುವ ಅರ್ಹತೆಯನ್ನು ಹೆಚ್ಚಿಸಿಕೊಳ್ಳಲು ಒಂದಿಷ್ಟು ಕಿವಿಮಾತುಗಳು ಇಲ್ಲಿವೆ



• ಭೂಷಣ್ ಪಡ್ಕಿಲ್

ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಗಾತ್ರದ (ಎಂಎಸ್‌ಎಂಇ) ಉದ್ದಿಮೆಗಳ ಪಾಲಿಗೆ ವಾಣಿಜ್ಯ ಉದ್ದೇಶದ ಸಾಲ ಪಡೆಯುವುದು ದೊಡ್ಡ ಸವಾಲಾಗಿಯೇ ಉಳಿದಿದೆ. ಆ ಉದ್ದಿಮೆಗಳಿಗೆ ಸಾಮರ್ಥ್ಯ ಇಲ್ಲದ್ದಕ್ಕೆ ಹೀಗಾಗುತ್ತಿದೆ ಎನ್ನಲು ಸಾಧ್ಯವಿಲ್ಲ. ಬದಲಿಗೆ, ಅವುಗಳ ಹಣಕಾಸಿನ ದಾಖಲೆಗಳು ಅವುಗಳ ವಹಿವಾಟನ್ನು ಸಮರ್ಥವಾಗಿ ಪ್ರತಿಫಲಿಸದೆ ಇರುವುದು ಇದಕ್ಕೆ ಕಾರಣ. ಎಂಎಸ್‌ಎಂಇ ವಲಯದ ಬಹುತೇಕ ಉದ್ಯಮಿಗಳು ದಿನನಿತ್ಯದ ವಹಿವಾಟುಗಳ ಮೇಲೆ ಹೆಚ್ಚು ಗಮನ ಕೊಡುತ್ತ, ಕೆಲವು ಪ್ರಮುಖ ಕೆಲಸಗಳನ್ನು ಮರೆತುಬಿಟ್ಟಿರುತ್ತಾರೆ.

ಸಾಲ ಕೊಡುವವರು ಸಿಬಿಲ್ ಅಂಕ ಮತ್ತು ಕಂಪನಿಯ ಸಾಲದ ವಿವರವನ್ನು (ಸಿಸಿಆರ್) ಪರಿಶೀಲಿಸುತ್ತಾರೆ. ಉದ್ದಿಮೆಯು ಸಾಲ ಪಡೆಯಲು ಎಷ್ಟರಮಟ್ಟಿಗೆ ಅರ್ಹ ಎಂಬುದನ್ನು ಪರಿಶೀಲಿಸಲು ಇದು ಮುಖ್ಯ. ಎಂಎಸ್‌ಎಂಇ ಉದ್ಯಮದ ಸಾಲ ಮರುಪಾವತಿ ಸಾಮರ್ಥ್ಯ, ಹಣಕಾಸಿನ ವಿಚಾರದಲ್ಲಿ ಅದು ಪಾಲಿಸುತ್ತಿರುವ ಶಿಸ್ತನ್ನು ಅರಿಯಲು ಬ್ಯಾಂಕ್‌ಗಳಿಗೆ ಮತ್ತು ಬ್ಯಾಂಕೇತರ ಹಣಕಾಸು ಕಂಪನಿಗಳಿಗೆ (ಎನ್‌ಬಿಎಫ್‌ಸಿ) ಇವು ನೆರವಾಗುತ್ತವೆ. ಹಣಕಾಸಿನ ಬುನಾದಿಯು ಭದ್ರವಾಗಿ ಇದ್ದಲ್ಲಿ ಸಾಲ ಪಡೆಯಲು ಹೆಚ್ಚು ಅರ್ಹತೆ ಸಿಗುತ್ತದೆ, ಆಕರ್ಷಕ ಬಡ್ಡಿದರಕ್ಕೆ ಸಾಲ ಸಿಗುತ್ತದೆ.

ಹಾಗಾದರೆ, ಸಣ್ಣ ಪ್ರಮಾಣದ ಉದ್ದಿಮೆಗಳು ಸಾಲ ಪಡೆಯುವ ಅರ್ಹತೆಯನ್ನು ಹೇಗೆ ಹೆಚ್ಚು ಮಾಡಿಕೊಳ್ಳಬಹುದು? ಅವು ಸಾಲದಾತ ಕಂಪನಿಗಳ ವಿಶ್ವಾಸವನ್ನು ಗಳಿಸುವುದು ಹೇಗೆ? ಕೆಲವು ಪ್ರಮುಖ ಅಂಶಗಳನ್ನು ಗಮನಿಸೋಣ.

ನಗದು ಹರಿವು, ಶಿಸ್ತು ಇರಲಿ: ನಗದು ಹರಿವು ಯಾವುದೇ ಉದ್ದಿಮೆಯ ಪಾಲಿನ ಜೀವದ್ರವ್ಯ. ದಾಖಲೆಗಳ ಪ್ರಕಾರ ಉದ್ದಿಮೆಯು ಲಾಭದಲ್ಲಿ ಇದ್ದರೂ, ನಗದು ಹರಿವು ಚೆನ್ನಾಗಿ ಇಲ್ಲದಿದ್ದರೆ ಹಣಕಾಸಿನ ಅಸ್ಥಿರತೆ ಎದುರಾಗುತ್ತದೆ. ಆಗ ಉದ್ದಿಮೆಗೆ ಸಾಲ ಪಡೆದುಕೊಳ್ಳುವುದು ಕಷ್ಟವಾಗುತ್ತದೆ. ನಗದು ಹರಿವು ಚೆನ್ನಾಗಿ ಇರಿಸಿಕೊಳ್ಳಲು ಉದ್ದಿಮೆಗಳು ಇನ್ವಾಯ್ಸ್‌ಗಳನ್ನು ಸರಿಯಾಗಿ ನೀಡಬೇಕು, ಹಣದ ಪಾವತಿ ವಿಚಾರವಾಗಿ ಗ್ರಾಹಕರ ಜೊತೆ ಸ್ಪಷ್ಟ ನಿಯಮಗಳನ್ನು ಹೊಂದಿರಬೇಕು, ಹಣದ ಪಾವತಿ ವಿಳಂಬ ಆಗದಂತೆ ನೋಡಿಕೊಳ್ಳಲು ಕಾಲಕಾಲಕ್ಕೆ ವಿಚಾರಿಸುವ ಕೆಲಸವನ್ನೂ ಮಾಡಬೇಕು.

ಒಂದಿಷ್ಟು ಮಿಗತೆ ಹಣವನ್ನು ಇರಿಸಿಕೊಳ್ಳುವುದು ಉತ್ತಮ ಕ್ರಮವಾಗುತ್ತದೆ, ಅನಿರೀಕ್ಷಿತ ವೆಚ್ಚಗಳನ್ನು ನಿಭಾಯಿಸುವುದು ಸಾಧ್ಯವಾಗುತ್ತದೆ. ಅಲ್ಲದೆ ಕಷ್ಟಕಾಲದಲ್ಲಿ ಉದ್ದಿಮೆಯ ವಹಿವಾಟಿಗೆ ಧಕ್ಕೆ ಎದುರಾಗದಂತೆ ನೋಡಿಕೊಳ್ಳಲು ಆಗುತ್ತದೆ.

ನಿಶ್ಚಿತ ವೆಚ್ಚಗಳು ಹಾಗೂ ವ್ಯತ್ಯಾಸವಾಗುವ ವೆಚ್ಚಗಳ ಬಗ್ಗೆ ಗಮನ ಇರಿಸುವುದರಿಂದ ಉದ್ದಿಮೆಗಳಿಗೆ ತಮ್ಮ ಕಾರ್ಯಾಚರಣೆಗಳಿಗೆ ಧಕ್ಕೆ ಆಗದಂತೆ ನೋಡಿಕೊಳ್ಳಲು, ವೆಚ್ಚಗಳನ್ನು ಹೆಚ್ಚು ಪರಿಣಾಮಕಾರಿ ಆಗಿಸಲು ಸಾಧ್ಯವಾಗುತ್ತದೆ. ಸಣ್ಣ ಉದ್ದಿಮೆಗಳನ್ನು ನಡೆಸುವವರು ತಮ್ಮ ವೈಯಕ್ತಿಕ ವೆಚ್ಚ ಹಾಗೂ ಉದ್ದಿಮೆಗೆ ಸಂಬಂಧಿಸಿದ ವೆಚ್ಚಗಳನ್ನು ಪ್ರತ್ಯೇಕವಾಗಿ ಇರಿಸಬೇಕು. ಇಲ್ಲವಾದರೆ ಹಣಕಾಸಿನ ದಾಖಲೆಗಳಲ್ಲಿ ಲೋಪಗಳು ನುಸುಳಬಹುದು. ಉದ್ದಿಮೆಗೆ ಮೀಸಲಾದ ಪ್ರತ್ಯೇಕ ಖಾತೆಯನ್ನು ತೆರೆಯುವುದರಿಂದ ಸಾಲದಾತ ಕಂಪನಿಗಳಲ್ಲಿ ವಿಶ್ವಾಸಾರ್ಹತೆ ಹೆಚ್ಚಾಗುತ್ತದೆ.

ಸಿಬಿಲ್ ರ‍್ಯಾಂಕ್ ಮತ್ತು ಸಿಸಿಆರ್: ಉದ್ದಿಮೆಯ ಸಿಬಿಲ್ ರ‍್ಯಾಂಕ್ ಸಾಲದ ಮಂಜೂರಾತಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. 1ನೇ ರ‍್ಯಾಂಕ್ ಪಡೆದಿರುವ ಉದ್ದಿಮೆಗಳಿಗೆ ಸಾಲ ನೀಡಲು ಯಾವುದೇ ಹಿಂಜರಿಕೆ ಇರುವುದಿಲ್ಲ. 10ನೇ ರ‍್ಯಾಂಕ್‌ನ ಉದ್ದಿಮೆಗಳಿಗೆ ಸಾಲ ನೀಡುವುದು ಅಪಾಯಕಾರಿ ಎಂದು ಪರಿಗಣಿಸಲಾಗುತ್ತದೆ. ಸಿಬಿಲ್ ರ‍್ಯಾಂಕ್ ಚೆನ್ನಾಗಿದ್ದಾಗ ಉದ್ದಿಮೆಯ ಬಗ್ಗೆ ಹೆಚ್ಚು ವಿಶ್ವಾಸ ಮೂಡುತ್ತದೆ, ಅದು ಸುಲಭವಾಗಿ ಸಾಲ ಪಡೆಯಲು ನೆರವು ನೀಡುತ್ತದೆ.

ಸಿಬಿಲ್ ರ‍್ಯಾಂಕ್ ಮೇಲೆ ಕಣ್ಣಿರಲಿ: ಕಂಪನಿಯ ಸಾಲದ ವಿವರಗಳ ವರದಿಯನ್ನು (ಸಿಆರ್‌ಆರ್) ಆಗಾಗ ಪರಿಶೀಲನೆ ನಡೆಸುತ್ತಿರಬೇಕು. ಅದರಲ್ಲಿ ಯಾವುದೇ ಲೋಪಗಳು ಕಂಡುಬಂದರೆ ಸಂಬಂಧಪಟ್ಟವರಿಗೆ ತಕ್ಷಣ ತಿಳಿಸಬೇಕು.

ಸಕಾಲಕ್ಕೆ ಸಾಲದ ಮರುಪಾವತಿ: ಪಡೆದ ಸಾಲವನ್ನು ಸಕಾಲದಲ್ಲಿ ಹಿಂದಿರುಗಿಸಬೇಕು. ಸಾಲದ ಕಂತುಗಳ ಪಾವತಿ ತಪ್ಪಿದರೆ ಸಿಬಿಲ್ ರ‍್ಯಾಂಕ್ ಕುಸಿಯಬಹುದು. ಸ್ವಯಂಚಾಲಿತವಾಗಿ ಪಾವತಿಗಳು ಆಗುವಂತೆ ಮಾಡಿದರೆ ಶಿಸ್ತು ಕಾಪಾಡಿಕೊಳ್ಳಬಹುದು.

ಅನಗತ್ಯವಾಗಿ ಸಾಲದ ಬಗ್ಗೆ ವಿಚಾರಿಸಬೇಡಿ: ಸಾಲ ಕೋರಿ ಬಹಳ ಕಡಿಮೆ ಅವಧಿಯಲ್ಲಿ ಹಲವು ಕಡೆ ಅರ್ಜಿಗಳನ್ನು ಸಲ್ಲಿಸುವುದರಿಂದ ಕ್ರೆಡಿಟ್ ರ‍್ಯಾಂಕ್ ತಗ್ಗುತ್ತದೆ. ಅಗತ್ಯ ಇದ್ದಾಗ ಮಾತ್ರ ಸಾಲಕ್ಕೆ ಅರ್ಜಿ ಸಲ್ಲಿಸಿ, ಸಾಲದಾತರ ಬಗ್ಗೆ ಸರಿಯಾಗಿ ತಿಳಿದು ಅರ್ಜಿ ಸಲ್ಲಿಸಿ.

ವಿಭಿನ್ನ ಬಗೆಯ ಸಾಲ ಇರಲಿ: ಅಲ್ಪಾವಧಿ, ದೀರ್ಘಾವಧಿ ಸಾಲ ಸೇರಿ ಬೇರೆ ಬೇರೆ ಬಗೆಯ ಸಾಲಗಳನ್ನು ಪಡೆದಾಗ, ಉದ್ದಿಮೆಯು ಬೇರೆ ಬೇರೆ ಬಗೆಯ ಸಾಲವನ್ನು ಜವಾಬ್ದಾರಿಯಿಂದ ನಿಭಾಯಿಸಬಲ್ಲದು ಎಂಬ ವಿಶ್ವಾಸವು ಸಾಲದಾತರಲ್ಲಿ ಮೂಡುತ್ತದೆ.

ಹಣಕಾಸಿನ ದಾಖಲೆಗಳಲ್ಲಿ ಪಾರದರ್ಶಕತೆ: ಹಣಕಾಸಿನ ದಾಖಲೆಗಳು ಪೂರ್ತಿಯಾಗಿ ಇಲ್ಲದಿರುವ, ಸುವ್ಯವಸ್ಥಿತವಾಗಿ ಇಲ್ಲದಿರುವ ಕಾರಣದಿಂದಾಗಿ ಎಂಎಸ್‌ಎಂಇ ವಲಯದ ಉದ್ದಿಮೆಗಳಿಗೆ ಸಾಲ ಮಂಜೂರಾತಿಯ ಸಮಸ್ಯೆ ಎದುರಾಗುವುದಿದೆ. ಸಾಲ ನೀಡುವ ಕಂಪನಿಗಳು ಸುವ್ಯವಸ್ಥಿತವಾಗಿ ಇರುವ ಲೆಕ್ಕಪತ್ರಗಳನ್ನು, ಲಾಭ–ನಷ್ಟದ ದಾಖಲೆಗಳನ್ನು ಮತ್ತು ತೆರಿಗೆ ಪಾವತಿ ವಿವರಗಳನ್ನು ಬಯಸುತ್ತವೆ. ಅದನ್ನು ಆಧರಿಸಿ ಅವು ಉದ್ದಿಮೆಯ ಸ್ಥಿತಿಯನ್ನು ಅರಿಯುತ್ತವೆ.

ಜಿಎಸ್‌ಟಿ ವಿವರ ಸಲ್ಲಿಸಿ: ತೆರಿಗೆ ವಿವರಗಳನ್ನು ಕಾಲಕಾಲಕ್ಕೆ ಸರಿಯಾಗಿ ಸಲ್ಲಿಸುವುದರಿಂದ ಉದ್ದಿಮೆಗಳ ವಿಶ್ವಾಸಾರ್ಹತೆ ಹೆಚ್ಚಾಗುತ್ತದೆ, ಅದು ಉದ್ದಿಮೆಗಳು ಹಣಕಾಸಿನ ದೃಷ್ಟಿಯಿಂದ ಸ್ಥಿರವಾಗಿವೆ ಎಂಬ ಸಂದೇಶ ನೀಡುತ್ತವೆ.

ಈಚಿನ ದಾಖಲೆಗಳು ಇರಲಿ: ಸಾಲದಾತರು ನಗದು ಹರಿವಿನ ವಿಶ್ಲೇಷಣೆ ನಡೆಸಲು ಈಚಿನ ಬ್ಯಾಂಕ್ ವಹಿವಾಟು ದಾಖಲೆಗಳನ್ನು ಪರಿಶೀಲಿಸುತ್ತಾರೆ. ಹೀಗಾಗಿ, ಸಾಲಕ್ಕೆ ಅರ್ಜಿ ಸಲ್ಲಿಸುವಾಗ ಕನಿಷ್ಠ 6ರಿಂದ 12 ತಿಂಗಳ ಬ್ಯಾಂಕ್ ವಹಿವಾಟಿನ ವಿವರಗಳನ್ನು ಇಟ್ಟುಕೊಂಡಿರಬೇಕು.

ಸಣ್ಣ ಪ್ರಮಾಣದ ಉದ್ದಿಮೆಗಳಿಗೆ ಹಣಕಾಸಿನ ಸ್ಥಿರತೆಯ ಕಾರ್ಯಾಚರಣೆಯಲ್ಲಿ ಯಶಸ್ಸು ಪಡೆಯುವಷ್ಟೇ ಮುಖ್ಯ. ನಗದು ಹರಿವಿನ ನಿರ್ವಹಣೆಯಲ್ಲಿ ಶಿಸ್ತು ಕಾಯ್ದುಕೊಂಡು, ಹಣಕಾಸಿನ ದಾಖಲೆಗಳನ್ನು ಸರಿಯಾಗಿ ಇರಿಸಿಕೊಂಡು, ಸಾಲವನ್ನು ಜವಾಬ್ದಾರಿಯಿಂದ ಬಳಕೆ ಮಾಡಿಕೊಂಡರೆ ಈ ವಲಯದ ಉದ್ದಿಮೆಗಳು ಸಿಬಿಲ್ ರ‍್ಯಾಂಕ್ ಉತ್ತಮಪಡಿಸಿಕೊಳ್ಳಬಹುದು.

ಲೇಖಕ: ಟ್ರಾನ್ಸ್‌ಯೂನಿಯನ್ ಸಿಬಿಲ್ ಕಂಪನಿಯ ಡಿ2ಸಿ ವಹಿವಾಟುಗಳ ಮುಖ್ಯಸ್ಥ ಮತ್ತು ಹಿರಿಯ ಉಪಾಧ್ಯಕ್ಷ

ಬೆಳವಣಿಗೆಗೆ ಸಾಲ



ಸೂಕ್ತ ಕಾರ್ಯತಂತ್ರ ರೂಪಿಸಿ ಸಾಲ ಪಡೆದರೆ ವಹಿವಾಟು ವಿಸ್ತರಿಸಲು, ಹೊಸ ತಂತ್ರಜ್ಞಾನದಲ್ಲಿ ಹೂಡಿಕೆ ಮಾಡಲು ಮತ್ತು ದುಡಿಯುವ ಬಂಡವಾಳವನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ನೆರವಾಗುತ್ತದೆ. ಸುಲಭವಾಗಿ ತೀರಿಸಲು ಸಾಧ್ಯವಿರುವ ಮೊತ್ತವನ್ನು ಮಾತ್ರ ಸಾಲದ ರೂಪದಲ್ಲಿ ಪಡೆಯುವುದು ಸೂಕ್ತ. ಮಿತಿಯನ್ನು ಮೀರಿ ಸಾಲ ಪಡೆದರೆ ಹಣಕಾಸಿನ ಸ್ಥಿತಿಯ ಮೇಲೆ ನಕಾರಾತ್ಮಕ ಪರಿಣಾಮ ಉಂಟಾಗುತ್ತದೆ, ಸಿಬಿಲ್ ರ‍್ಯಾಂಕ್ ಮೇಲೆ ಕೆಟ್ಟ ಪರಿಣಾಮ ಆಗುತ್ತದೆ.

ಮಾಹಿತಿ ಕಣಜ

ಎಂ.ಎಫ್ ಹಣ ಯಾವ ಷೇರಿನಲ್ಲಿ ವಿನಿಯೋಗ ಆಗಿದೆ?

ನೇರವಾಗಿ ಷೇರುಗಳನ್ನು ಖರೀದಿ ಮಾಡುವಲ್ಲಿ ಹಾಗೂ ಮ್ಯೂಚುವಲ್ ಫಂಡ್‌ಗಳ ಮೂಲಕ ಷೇರುಗಳಲ್ಲಿ ಹಣ ತೊಡಗಿಸುವಲ್ಲಿ ಒಂದು ಪ್ರಮುಖ ವ್ಯತ್ಯಾಸ ಇದೆ. ನೇರವಾಗಿ ಷೇರು ಖರೀದಿಸುವವರಿಗೆ ತಾವು ಯಾವ ಕಂಪನಿಯ ಎಷ್ಟು ಷೇರುಗಳನ್ನು ಹೊಂದಿದ್ದೇವೆ ಎಂಬುದು ಸ್ಪಷ್ಟವಾಗಿ ತಿಳಿದಿರುತ್ತದೆ. ಆದರೆ ಮ್ಯೂಚುವಲ್ ಫಂಡ್‌ಗಳ ಮೂಲಕ ಹೂಡಿಕೆ ಮಾಡುವವರಿಗೆ ಈ ಮಾಹಿತಿಯು ನೇರವಾಗಿ ಸಿಗುವುದಿಲ್ಲ.

ಮ್ಯೂಚುವಲ್ ಫಂಡ್ ಕಂಪನಿಗಳು ಪ್ರತಿ ತಿಂಗಳಿಗೆ ಒಮ್ಮೆ ತಮ್ಮ ಫಂಡ್‌ಗಳ ಪೋರ್ಟ್‌ಫೋಲಿಯೊ ಹೇಗಿದೆ ಎಂಬ ವಿವರವನ್ನು ಹೂಡಿಕೆದಾರರಿಗೆ ಇ–ಮೇಲ್ ಮೂಲಕ ತಿಳಿಸುತ್ತವೆ. ಆ ಮೂಲಕ ಹೂಡಿಕೆದಾರರು ತಮ್ಮ ಹಣವು ಯಾವ ಕಂಪನಿಯ ಷೇರುಗಳಲ್ಲಿ ಎಷ್ಟು ಪ್ರಮಾಣದಲ್ಲಿ ವಿನಿಯೋಗ ಆಗಿದೆ ಎಂಬುದನ್ನು ತಿಳಿಯಬಹುದು.

ಆದರೆ, ಬೇರೆ ಬೇರೆ ಫಂಡ್‌ಗಳಲ್ಲಿ ಹಣ ತೊಡಗಿಸಿರುವವರಿಗೆ ಈ ಮಾಹಿತಿ ಕಲೆಹಾಕುವುದು ಒಂದಿಷ್ಟು ತ್ರಾಸದಾಯಕ ಕೆಲಸ. ಬೇರೆ ಬೇರೆ ಫಂಡ್ ಕಂಪನಿಗಳಿಂದ ಬರುವ ಇ–ಮೇಲ್ ಪರಿಶೀಲಿಸಿ, ಬೇರೆ ಬೇರೆ ಫಂಡ್‌ಗಳು ವಿವಿಧ ಕಂಪನಿಗಳ ಷೇರುಗಳನ್ನು ಎಷ್ಟು ಪ್ರಮಾಣದಲ್ಲಿ ಖರೀದಿಸಿವೆ ಎಂಬುದರ ವಿವರವನ್ನು ಪಡೆಯಬಹುದು. ಈ ಕೆಲಸವನ್ನು ಸುಲಭಗೊಳಿಸುವ ಕೆಲಸವನ್ನು ಮ್ಯೂಚುವಲ್ ಫಂಡ್ ಪೋರ್ಟ್‌ಫೋಲಿಯೊ ವಿಶ್ಲೇಷಣೆಯ ವರದಿಗಳನ್ನು ನೀಡುವ ವೇದಿಕೆಗಳು ಮಾಡುತ್ತಿವೆ.



ಹಿಂದಿನ ಸಂಚಿಕೆಯಲ್ಲಿ ತಿಳಿಸಿರುವಂತೆ, ಪೇಟಿಎಂ ಮತ್ತಿತರ ಆ್ಯಪ್‌ಗಳಲ್ಲಿನ ಈ ಸೌಲಭ್ಯವನ್ನು ಬಳಸಿ ತಮ್ಮ ಹಣವು ಯಾವ ಕಂಪನಿಗಳ ಷೇರುಗಳ ಖರೀದಿಗೆ ವಿನಿಯೋಗ ಆಗಿದೆ ಎಂಬುದರ ವಿವರ ಪಡೆಯಬಹುದು. ಉದಾಹರಣೆಗೆ ಹೂಡಿಕೆದಾರರೊಬ್ಬರು ಮೂರು ಫಂಡ್‌ಗಳಲ್ಲಿ ಹಣ ತೊಡಗಿಸಿದ್ದಾರೆ ಎಂದಾದರೆ, ಆ ಮೂರೂ ಫಂಡ್‌ಗಳ ಮೂಲಕ ಆಗಿರುವ ಹೂಡಿಕೆಯನ್ನು, ಹೂಡಿಕೆಯು ಯಾವ ಷೇರುಗಳಲ್ಲಿ ಎಷ್ಟು ಪ್ರಮಾಣದಲ್ಲಿ ಆಗಿದೆ ಎಂಬುದನ್ನು ಈ ಸೌಲಭ್ಯ ವಿವರವಾಗಿ ತಿಳಿಸುತ್ತದೆ.

ಉದಾಹರಣೆಯಾಗಿ ನೀಡಿರುವ ಹೂಡಿಕೆದಾರ ಇದುವರೆಗೆ ಒಟ್ಟು ₹10 ಲಕ್ಷವನ್ನು ವಿವಿಧ ಮ್ಯೂಚುವಲ್ ಫಂಡ್‌ಗಳ ಮೂಲಕ ತೊಡಗಿಸಿದ್ದಾನೆ ಎಂದಾದರೆ, ಆ ಮೊತ್ತದಲ್ಲಿ ನಿರ್ದಿಷ್ಟ ಕಂಪನಿಯ ಷೇರುಗಳ ಖರೀದಿಗೆ ವಿನಿಯೋಗ ಆದ ಹಣದ ಪ್ರಮಾಣ ಎಷ್ಟು ಎಂಬುದು ಗೊತ್ತಾಗುತ್ತದೆ.

ಅದೇ ಹೂಡಿಕೆದಾರ ನೇರವಾಗಿ ಷೇರುಗಳಲ್ಲಿ ಹಣ ತೊಡಗಿಸುವವ ಆಗಿದ್ದರೆ, ಈ ಮಾಹಿತಿ ಪಡೆಯುವುದರಿಂದ ಒಂದು ಪ್ರಯೋಜನ ಇದೆ. ತಾನು ಮ್ಯೂಚುವಲ್ ಫಂಡ್ ಮೂಲಕ ಮಾಡಿರುವ ಹೂಡಿಕೆಯು ನಿರ್ದಿಷ್ಟ ಕಂಪನಿಯೊಂದರಲ್ಲಿ ದೊಡ್ಡ ಪ್ರಮಾಣದಲ್ಲಿ ವಿನಿಯೋಗ ಆಗಿದ್ದರೆ, ಆ ಕಂಪನಿಯ ಷೇರುಗಳನ್ನು ನೇರವಾಗಿ ತಾನು ಇನ್ನಷ್ಟು ಖರೀದಿಸಬೇಕೇ ಬೇಡವೇ ಎಂಬುದನ್ನು ಆತ ನಿರ್ಧರಿಸಲು ಈ ಮಾಹಿತಿಯು ನೆರವಾಗುತ್ತದೆ.

ಬ್ರೋಕರೇಜ್ ಮಾತು

ಯುಟಿಐ ಎಎಂಸಿ

ದೇಶದಲ್ಲಿ ಮ್ಯೂಚುವಲ್ ಫಂಡ್‌ಗಳ ಸೇವೆ ಒದಗಿಸುವ ಪ್ರಮುಖ ಕಂಪನಿಗಳ ಪೈಕಿ ಒಂದಾಗಿರುವ ಯುಟಿಐ ಎಎಂಸಿ ಷೇರು ಮೌಲ್ಯವು ₹1,550ಕ್ಕೆ ತಲುಪಬಹುದು ಎಂದು ಬ್ರೋಕರೇಜ್ ಸಂಸ್ಥೆ ಮೋತಿಲಾಲ್ ಓಸ್ವಾಲ್ ಹೇಳಿದೆ.

ಕ್ವಾಂಟ್ ಫಂಡ್ ಹಾಗೂ ಮಲ್ಟಿ–ಕ್ಯಾಪ್ ಫಂಡ್ ಆರಂಭಿಸುವ ಮೂಲಕ ಯುಟಿಐ ಎಎಂಸಿ ಕಂಪನಿಯು ತನ್ನಲ್ಲಿ ಲಭ್ಯವಿರುವ ಹಣಕಾಸು ಉತ್ಪನ್ನಗಳ ಸಂಖ್ಯೆಯನ್ನು ಹೆಚ್ಚಿಸಿದೆ. ಈ ಫಂಡ್‌ಗಳಲ್ಲದೆ ಇತರ ಫಂಡ್‌ಗಳ ಆಯ್ಕೆಯನ್ನೂ ಕಂಪನಿಯು ಹೂಡಿಕೆದಾರರಿಗೆ ನೀಡುತ್ತಿದೆ. ಕಂಪನಿಯ ತ್ರೈಮಾಸಿಕ ಸರಾಸರಿ ಆಸ್ತಿ ನಿರ್ವಹಣಾ ಪ್ರಮಾಣವು ಶೇ 17ರಷ್ಟು ಬೆಳವಣಿಗೆ ಸಾಧಿಸಿದೆ. ಎಸ್‌ಐಪಿ ಹೆಚ್ಚಳ ಹಾಗೂ ಪ್ಯಾಸಿವ್ ಹೂಡಿಕೆಗಳ ಏರಿಕೆಯು ಇದಕ್ಕೆ ಒಂದು ಕಾರಣ ಎಂದು ಬ್ರೋಕರೇಜ್ ಸಂಸ್ಥೆ ವಿವರಿಸಿದೆ.

ಕಂಪನಿಯು ದೇಶದ ಟಾಪ್–30 ನಗರಗಳ ಆಚೆಗಿನ ಪ್ರಮುಖ ಮೂವತ್ತು ನಗರ–ಪಟ್ಟಣಗಳಲ್ಲಿ ವಿಸ್ತರಣೆ ಕಾಣುವುದನ್ನು ಮುಂದುವರಿಸಿದೆ ಎಂದು ಮೋತಿಲಾಲ್ ಓಸ್ವಾಲ್ ಹೇಳಿದೆ. ಬುಧವಾರದ ವಹಿವಾಟಿನ ಅಂತ್ಯಕ್ಕೆ ಯುಟಿಐ ಎಎಂಸಿ ಷೇರು ಮೌಲ್ಯವು ₹1,255.30 ಆಗಿತ್ತು.

(ಬ್ರೋಕರೇಜ್ ಸಂಸ್ಥೆಗಳು ನೀಡುವ ಮಾಹಿತಿ, ವಿವರಕ್ಕೆ ಪತ್ರಿಕೆ ಹೊಣೆಯಲ್ಲ)

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ದಿಕ್ಸೂಚಿ ನಿಮಗಿಷ್ಟ ಆಗಿದೆಯೇ? ನಿಮ್ಮ ಅನಿಸಿಕೆಯನ್ನು ಇಲ್ಲಿ ದಾಖಲಿಸಿ

ಎಸ್ಸೆಸ್ಸೆಲ್ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

ಇಂಗ್ಲಿಷ್

Second Language ENGLISH
Unit-2 PROSE
There's a Girl by the Tracks!

Task-2: Use the above words meaningfully to fill in the blanks in the following sentences. You can change the form of the word if required.

1. Five of us …….. ourselves into the back seats.
Ans: squeezed
2. English people love to…….. about the weather.
Ans: chat
3. Arun …... Shaila close and wiped away her tears.
Ans: held
4. I haven't ……….to Steve about all this.
Ans: talked
5. All club members have been ……….to attend the annual meeting.
Ans: appealed
6. Sudha ………………. over her shoulder.
Ans: glanced
7. The thief has ……… her purse and ran away.
Ans: snatched
8. Would you mind going to ……..………. the kids from school?
Ans: bring
9. Veena ………. me to fetch water.
Ans: gazed
10. Many people are unable to ……….. the unhappiness they feel.
Ans: Utter

Look at these sentences used in the text, as also the phrases underlined.

*. 'Who can I call?' asked Baleshwar fearing she would black out once more. (para - 13)
*A nurse helped him to take the woman in.(Para-12)
* Dinesh was wrapping up his day's work when his phone rang. (Para - 14)

Look at the underlined words. Their meanings are different from the ordinary meanings of each separate word. For example **black out** means lose consciousness, **take the woman in** means **admite the women** and **wrapping up** means **closing the business**.

Task 3: A paragraph is given below based on the text. Some words are underlined. Substitute these words with the phrases and idioms making use of the clues given in brackets with necessary changes or additions.

Baleshwar Mishra was a bold young man. Even when his life was at risk (face-to-face……death), he never had a second thought. Rather he determined (make….mind) to save the life of the girl. He was doing all he could do, while others stood watching him silently (tongue tie). None supported (back…..up) except a tempo truck driver. After a while, he carried the girl to a hospital and forced (arm twist) the duty doctor to admit the girl. "What can we make out from this incident?" Some people like Baleshwar remain undisturbed (keep cool) in moments of crisis.

Ans Baleshwar Mishra was a bold young man. Even when he was face-to-face with death, he never had a second thought. Rather he made up his mind to save the life of the girl. He was doing all he could do, while others stood watching him tongue-tied. None backed him up except a tempo truck driver. After a while, he carried the girl to a hospital and arm -twisted the duty doctor to admit the girl. What can we make out from this incident? Some people like Baleshwar remain undisturbed keep their cool in moments of crisis.

Listen and comprehend

Task -1 : Listen carefully to the reading of the following passage and take notes by drawing and filling information in the flow-chart. If required, the teacher will read the passage twice.

The boy was studing in
1
He was given ⇩
2
The Last question was ⇩
3
The Cleaning woman appeared ⇩
4 | 5 | and 6
The name of the Cleaning woman was ⇩
7

Ans:-

The boy was studying in
↓
1. Nursing School
He was give
↓
2. a pop quiz
The last question was
↓
3. What is the first name of the woman who cleans the school?
The cleaning woman appeared
↓
4. Take 5. dark - haired and 6. in her 50s
The name of the cleaning woman was...
↓
7. Dimple

(Contd…..)

Biology

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

REPRODUCTION

Human Reproduction

Multiple Choice questions:- *(….Contd)*

32. Fertilizins are emitted by
A) Immature eggs B) Mature eggs
C) Sperms D) Polar bodies

33. During cleavage, what is true about cells?
A) Nucleocytoplasmic ratio remains unchanged
B) Size does not increase
C) There is less consumption of oxygen
D) The division is like meiosis.

34. Eye lens is formed from
A) Ectoderm B) Mesoderm
C) Endoderm
D) Ectoderm and mesoderm

35. Extrusion of second polar body from egg nucleus occurs
A) After entry of sperm before completion of fertilization
B) After completion of fertilization
C) Before entry of sperm
D) Without any relation of sperm entry

36. Termination of gastrulation is indicated by
A) Obliteration of blastocoels
B) Obliteration of archenteron
C) Closure of blastopore
D) Closure of neural tube

37. Which one is primary sex organ?
A) Scrotum B) penis
C) Testis D) Prostate

38. At the end of first meiotic division, male germ cell differentiates into
A) Secondary spermatocyte
B) Primary spermatocyte
C) Spermatogonium
D) spermatid

39. Extra-embryonic membranes of the mammalian embryo are divided from
A) Inner cell mass B) Trophoblast
C) Formative cells
D) Follicle cells

40. What is true about cleavage in fertilized egg of humans?
A) Meroblastic
B) Starts when egg reaches uterus
C) Starts in fallopian tubes
D) It is identical to normal mitosis

41. Which one is produced by mesoderm?
A) Heart and notochord
B) Heart and brain
C) Spinal cord and notochord
D) Brain and notochord

42. In a mammalian sperm, spirally arranged mitochondria around an axial filament occurs in
A) Middle B) Head
C) End piece of tail
D) Principal piece of tail

43. First step in activation of ovum during process of fertilization is
A) Formation of fertilization membrane
B) Fertilizin - antifertilizin reaction
C) Penetration of sperm in ovum
D) Formation of fertilization cone

44. A mature sperm has
A) A pair of flagella
B) A nucleus, an acrosome and a centriole
C) A nucleus, an acrosome, a pair of centrioles
D) A nucleus, an acrosome, a pair of centriole and a tail

45. Ovulation occurs under the influence of
A) LH B) FSH
C) Estrogen D) Progesterone

46. Somatic chromosome number is 40. What shall be chromosome number in the cells of seminiferous tubules?
A) 40 B) 20
C) 10 D) 40 and 20

47. In 28 day human ovarian cycle, ovulation occurs on
A) Day 1 B) Day 5
C) Day 14 D) Day 28

48. Part of sperm involved in penetrating egg membrane is
A) Tail B) Acrosome
C) Allosome D) Autosome

49. Yellow corpus luteum occurs in a mammal in
A) Heart to initiate heart beat
B) Skin to function as pain receptor
C) Brain and connects cerebral hemispheres
D) Ovary for secretion of progesterone

50. Which one develops from endodermis?
A) Nervous system, urinary bladdery & eye
B) Liver, connective tissue and heart
C) Thymus, spinal cord and brain
D) Lever, pancreas and thymus/thyroid.

51. Fertilization is fusion of
A) Diploid spermatozoan with diploid ovum to form diploid zygote
B) Haploid spermatozoan with diploid ovum to form diploid zygote
C) Diploid spermatozoan with haploid ovum to form diploid zygote
D) Haploid spermatozoan with haploid ovum to form diploid zygote.

52. Prostate gland is present
A) On ureter B) On kidney
C) On testis D) around urethra

53. Prostate gland produces a secretion for
A) Attracting sperms
B) Stimulating sperm activity
C) Inhibiting sperm activity
D) None of the above

54. Corpus luteum develops from
A) Oocyte B) Nephrostome
C) Graafian follicle D) None of these

55. Germinal epithelium of ovary has
A) cuboidal cells B) columnar cells
C) squamous cells D) stratified cells

(Contd……..)

ಮೂವರು ಪ್ರಮುಖ ನಕ್ಸಲರ ಹತ್ಯೆ

ಆಂಧ್ರ–ಒಡಿಶಾ ರಾಜ್ಯಗಳ ಗಡಿ ಭಾಗದಲ್ಲಿ ಭದ್ರತಾ ಪಡೆಗಳಿಂದ ಕಾರ್ಯಾಚರಣೆ

ಪ್ರಜಾವಾಣಿ ವಾರ್ತೆ



ಹೈದರಾಬಾದ್: ಆಂಧ್ರಪ್ರದೇಶ–ಒಡಿಶಾ ಗಡಿ ಭಾಗದಲ್ಲಿರುವ ಅಲ್ಲೂರಿ ಸೀತಾ ರಾಮರಾಜು ಜಿಲ್ಲೆಯಲ್ಲಿ ಬುಧವಾರ ಮೂವರು ಪ್ರಮುಖ ನಕ್ಸಲರನ್ನು ಭದ್ರತಾಪಡೆಗಳು ಹೊಡೆದುರುಳಿಸಿವೆ. ಈ ನಕ್ಸಲರ ಬಗ್ಗೆ ಸುಳಿವು ನೀಡಿದವರಿಗೆ ₹25 ಲಕ್ಷ ಬಹುಮಾನವನ್ನೂ ಸರ್ಕಾರ ಈ ಹಿಂದೆ ಘೋಷಿಸಿತ್ತು.

ನಕ್ಸಲರ ಕೇಂದ್ರ ಸಮಿತಿ ನಾಯಕ ಗಜರ್ಲಾ ರವಿ ಅಲಿಯಾಸ್ ಉದಯ್ ಬಿರುಸನ್ನು ಹತ್ಯೆ ಮಾಡಲಾಗಿದೆ. ಜತೆಗೆ ಆಂಧ್ರ–ಒಡಿಶಾ ಗಡಿ ವಿಶೇಷ ವಲಯ ಸಮಿತಿಯ ಸದಸ್ಯೆ ವೆಂಕಟ ರವಿ ಲಕ್ಷ್ಮಿ ಚೈತನ್ಯ ಅಲಿಯಾಸ್ ಅರುಣಾ ಹಾಗೂ ಮತ್ತೊಬ್ಬ ಸದಸ್ಯ ಅಂಜು ಎಂಬುವರನ್ನು ಎನ್‌ಕೌಂಟರ್ ಮಾಡಲಾಗಿದೆ. ಘಟನಾ ಸ್ಥಳದಿಂದ 3 ಎಕೆ–47 ರೈಫಲ್‌ಗಳನ್ನು ಭದ್ರತಾ ಸಿಬ್ಬಂದಿ ವಶಪಡಿಸಿಕೊಂಡಿದ್ದಾರೆ.

ಉದಯ್ ಬಗ್ಗೆ ಸುಳಿವು ನೀಡಿದವರಿಗೆ ₹25 ಲಕ್ಷ, ಅರುಣಾ ಬಗ್ಗೆ ಸುಳಿವು ನೀಡಿದವರಿಗೆ ₹20 ಲಕ್ಷ ಬಹುಮಾನವನ್ನು ಸರ್ಕಾರ ಘೋಷಿಸಿತ್ತು. ಬುಧವಾರ ಗುಪ್ತಚರ ಮಾಹಿತಿಗಳನ್ನು ಆಧರಿಸಿ ನಡೆಸಿದ ಶೋಧ ಕಾರ್ಯಾಚರಣೆ ವೇಳೆ ನಕ್ಸಲರು ಹಾಗೂ ಭದ್ರತಾ ಸಿಬ್ಬಂದಿ ನಡುವೆ ಗುಂಡಿನ ಚಕಮಕಿ ನಡೆದಿದ್ದು, ಈ ಮೂವರನ್ನು ಹತ್ಯೆಗೈಯ್ಯಲಾಗಿದೆ.

ನಕ್ಸಲ್ ಚಲಪತಿಯ ಪತ್ನಿ ಅರುಣಾ: ಒಡಿಶಾ–ಛತ್ತೀಸಗಢ ಗಡಿ ಭಾಗದಲ್ಲಿ ಜನವರಿಯಲ್ಲಿ ನಡೆದ ಎನ್‌ಕೌಂಟರ್‌ನಲ್ಲಿ ಹತ್ಯೆಗೀಡಾದ ಪ್ರಮುಖ ನಕ್ಸಲ್ ನಾಯಕ ಚಲಪತಿ ರಾವ್ ಅಲಿಯಾಸ್ ರಾಮಚಂದ್ರ ರೆಡ್ಡಿಯ ಪತ್ನಿಯೇ ಈಗ ಹತ್ಯೆಗೀಡಾಗಿರುವ ಅರುಣಾ. 2018ರಲ್ಲಿ ನಡೆದಿದ್ದ, ಅರಕು ಮಾಜಿ ಶಾಸಕ ಕಿಡರು ಸರ್ವೇಶ್ವರ್ ರಾವ್ ಹತ್ಯೆ ಹಾಗೂ ಮಾಜಿ ಶಾಸಕ ಸಿವೇರಿ ಸೋಮ ಅವರ ಹತ್ಯೆ ಪ್ರಕರಣದಲ್ಲಿ ಅರುಣಾ ಭಾಗಿಯಾಗಿದ್ದಳು ಎನ್ನಲಾಗಿದೆ.

ಮುಖ್ಯಾಂಶಗಳು
- ನಕ್ಸಲರ ಬಗ್ಗೆ ಸುಳಿವು ಕೊಟ್ಟವರಿಗೆ ಬಹುಮಾನ ಘೋಷಿಸಿದ್ದ ಸರ್ಕಾರ
- ಘಟನಾ ಸ್ಥಳದಿಂದ ಶಸ್ತ್ರಾಸ್ತ್ರಗಳ ವಶ
- ಕೆಲ ರಾಜಕೀಯ ನಾಯಕರ ಹತ್ಯೆಯಲ್ಲಿ ಭಾಗಿಯಾಗಿದ್ದ ನಕ್ಸಲರು

'ನಕ್ಸಲ್ ಚಟುವಟಿಕೆ ಶೇ 83ರಷ್ಟು ಇಳಿಕೆ'

2010ಕ್ಕೆ ಹೋಲಿಸಿದರೆ ದೇಶದಲ್ಲಿ ನಕ್ಸಲ್ ಚಟುವಟಿಕೆಯು ಶೇ 83ರಷ್ಟು ಇಳಿಕೆಯಾಗಿದೆ ಎಂದು ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ಬಂಡಿ ಸಂಜಯ್ ಕುಮಾರ್ ಹೇಳಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರ ಸ್ಥಿರ ಆಡಳಿತ ಹಾಗೂ ಕಾರ್ಯತಂತ್ರದಿಂದ ಇದು ಸಾಧ್ಯವಾಗಿದೆ ಎಂದೂ ಅವರು ಶ್ಲಾಘಿಸಿದ್ದಾರೆ.

ಹರಿಯಾಣದ ಮಾನೇಸರ್‌ನಲ್ಲಿರುವ ರಾಷ್ಟ್ರೀಯ ಭದ್ರತಾ ಪಡೆ (ಎನ್‌ಎಸ್‌ಜಿ) ಕ್ಯಾಂಪಸ್‌ಗೆ ಸಚಿವ ಬುಧವಾರ ಭೇಟಿ ನೀಡಿದ್ದರು. ಈ ವೇಳೆ ಮಾತನಾಡಿದ ಅವರು, 'ನಕ್ಸಲ್ ಚಟುವಟಿಕೆಗಳನ್ನು ಬೇರು ಸಹಿತ ಕಿತ್ತೊಗೆಯಲು ಸರ್ಕಾರ ಮುಂದಾಗಿದೆ. 2010ಕ್ಕೆ ಹೋಲಿಸಿದರೆ ನಕ್ಸಲ್ ಚಟುವಟಿಕೆಗಳ ಪ್ರಮಾಣ ಶೇ 83ರಷ್ಟು ಹಾಗೂ ಈ ಸಂಬಂಧಿತ ಸಾವುಗಳ ಪ್ರಮಾಣ ಶೇ 85ರಷ್ಟು ಕಡಿಮೆಯಾಗಿದೆ. 2026ರ ಮಾರ್ಚ್ ವೇಳೆಗೆ ನಕ್ಸಲ್ ಮುಕ್ತ ಭಾರತದ ನಿರ್ಮಾಣಕ್ಕೆ ನಾವು ಬದ್ಧರಾಗಿದ್ದೇವೆ. ಇದು ಕೇವಲ ನಿರ್ಣಯವಲ್ಲ, ಚಳವಳಿ' ಎಂದೂ ಹೇಳಿದ್ದಾರೆ.

ಮಣಿಪುರ: ಮೂವರು ಬಂಡುಕೋರರ ಬಂಧನ

ಇಂಫಾಲ್ (ಪಿಟಿಐ): ಸುಲಿಗೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮಣಿಪುರದ ವಿವಿಧ ಪ್ರದೇಶಗಳಿಂದ ಮಂಗಳವಾರ ಮೂವರು ಬಂಡುಕೋರರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಬುಧವಾರ ತಿಳಿಸಿದ್ದಾರೆ.

ಬಿಷ್ಣುಪುರ ಜಿಲ್ಲೆಯ ನಿಂಗ್‌ಥೌಖೋಂಗ್ ಖಾ ಖುನೌ ಪ್ರದೇಶದಿಂದ ಪಿಡಬ್ಲ್ಯುಜಿ ಸಂಘಟನೆಯ ಹೋಮ್‌ದ್ರಾಮ್ ಜಾಯ್ ಸಿಂಗ್ (51) ಹಾಗೂ ಮೈಬಾಮ್ ಮೆಮ್ಮಾದೇವಿ (49) ಎಂಬುವರನ್ನು ಬಂಧಿಸಲಾಗಿದೆ. ಅವರಿಂದ ಪಿಸ್ತೂಲ್ ಹಾಗೂ ಖಾಲಿ ಮ್ಯಾಗಜಿನ್ ವಶಪಡಿಸಿಕೊಳ್ಳಲಾಗಿದೆ.

ಕೆಸಿಪಿ (ಎಂಸಿಪಿಎಲ್) ಸಂಘಟನೆಯ ಯುಮ್ನಾಮ್ ಜಿನಿಶಾ (22) ಎನ್ನುವ ಮಹಿಳೆಯನ್ನು ಪೂರ್ವ ಇಂಫಾಲ್ ಜಿಲ್ಲೆಯಲ್ಲಿ ಬಂಧಿಸಿರುವುದಾಗಿ ತಿಳಿಸಿದ್ದಾರೆ.

ಕಾನೂನುಬಾಹಿರವಾಗಿ ಶಸ್ತ್ರಾಸ್ತ್ರಗಳನ್ನು ಹೊಂದಿದ್ದ ಆರೋಪದಲ್ಲಿ ಒಬ್ಬ ವ್ಯಕ್ತಿಯನ್ನು ಹಾಗೂ ಪುಬಲಾ ಗ್ರಾಮದಲ್ಲಿ ಬೆಂಕಿ ಅವಘಡ ನಡೆದಿದೆ ಎಂದು ಸಾಮಾಜಿಕ ಜಾಲತಾಣದಲ್ಲಿ ವದಂತಿ ಹಬ್ಬಿಸಿದ ಆರೋಪದಲ್ಲಿ ಒಬ್ಬ ವ್ಯಕ್ತಿಯನ್ನು ಬಂಧಿಸಿರುವುದಾಗಿಯೂ ಮಾಹಿತಿ ನೀಡಿದ್ದಾರೆ.

ಶುಭಾಂಶು ಶುಕ್ಲಾ ಅಂತರಿಕ್ಷಯಾನ 22ಕ್ಕೆ


ಶುಭಾಂಶು

ನವದೆಹಲಿ (ಪಿಟಿಐ): ಭಾರತೀಯ ಗಗನಯಾತ್ರಿ ಶುಭಾಂಶು ಶುಕ್ಲಾ ಅವರ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ (ಐಎಸ್‌ಎಸ್) ಕಳುಹಿಸುವ ಮಹತ್ವಾಕಾಂಕ್ಷೆಯ 'ಆಕ್ಸಿಯಂ–4 ಮಿಷನ್' ಉಡಾವಣೆಯನ್ನು ಜೂನ್ 22ಕ್ಕೆ ಮುಂದೂಡಲಾಗಿದೆ ಎಂದು ಆಕ್ಸಿಯಂ ಸ್ಪೇಸ್ ಬುಧವಾರ ಪ್ರಕಟಿಸಿದೆ.

ಈ ಮೊದಲು, ಫ್ಲಾರಿಡಾದಲ್ಲಿರುವ ನಾಸಾದ ಕೆನಡಿ ಬಾಹ್ಯಾಕಾಶ ಕೇಂದ್ರದಿಂದ ಜೂನ್ 19ರಂದು ಸ್ಪೇಸ್ ಎಕ್ಸ್ ಫಾಲ್ಕನ್–9 ರಾಕೆಟ್ ಬಳಸಿ, ಗಗನನೌಕೆಯ ಉಡ್ಡಯನ ಮಾಡಲು ನಿರ್ಧರಿಸಲಾಗಿತ್ತು.

ಅಂತರ ರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿನ ರಷ್ಯಾಕ್ಕೆ ಸಂಬಂಧಿಸಿದ ಪ್ರಯೋಗಾಲಯದಲ್ಲಿ ಇತ್ತೀಚೆಗೆ ಕೆಲ ದುರಸ್ತಿ ಕಾರ್ಯಗಳನ್ನು ಕೈಗೊಳ್ಳಲಾಗಿತ್ತು. ಈ ದುರಸ್ತಿಯ ಪರಿಶೀಲನೆ ನಡೆಸಲು ರಷ್ಯಾ ಬಾಹ್ಯಾಕಾಶ ವಿಜ್ಞಾನಿಗಳಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಶುಭಾಂಶು ಶುಕ್ಲಾ ಅವರ ಬಾಹ್ಯಾಕಾಶಯಾನ ಮುಂದೂಡಲು ನಿರ್ಧರಿಸಲಾಗಿದೆ ಎಂದು ಆಕ್ಸಿಯಂ ಸ್ಪೇಸ್ ತಿಳಿಸಿದೆ.

ಮುನೀರ್–ಟ್ರಂಪ್ ಭೋಜನ ದೊಡ್ಡ ಹಿನ್ನಡೆ: ಕಾಂಗ್ರೆಸ್

ಪ್ರಜಾವಾಣಿ ವಾರ್ತೆ

ನವದೆಹಲಿ (ಪಿಟಿಐ): ಪ್ರಧಾನಿ ಮೋದಿ ಅವರು ವಿದೇಶ ಪ್ರವಾಸದಿಂದ ಹಿಂದಿರುಗಿದ ಕೂಡಲೇ ಸರ್ವ ಪಕ್ಷಗಳ ಸಭೆ ಕರೆಯಬೇಕು ಎಂದು ಕಾಂಗ್ರೆಸ್ ಬುಧವಾರ ಒತ್ತಾಯಿಸಿದೆ.

ಪಾಕಿಸ್ತಾನದ ಸೇನಾ ಮುಖ್ಯಸ್ಥ ಅಸೀಮ್ ಮುನೀರ್ ಅವರೊಂದಿಗೆ ಟ್ರಂಪ್ ಅವರ ಭೋಜನಕೂಟ ಏರ್ಪಡಿಸಿರುವುದು 'ದೊಡ್ಡ ಹಿನ್ನಡೆ' ಎಂದು ಕಾಂಗ್ರೆಸ್ ಟೀಕಿಸಿದೆ. ದೂರವಾಣಿ ಸಂಭಾಷಣೆ ಸಂದರ್ಭದಲ್ಲೇ ಭಾರತದ ಅಸಮಾಧಾನವನ್ನು ಟ್ರಂಪ್ ಅವರಿಗೆ ತಿಳಿಸಬೇಕಿತ್ತು ಎಂದು ಆಗ್ರಹಿಸಿದೆ.

'ಭಾರತ–ಪಾಕಿಸ್ತಾನ ನಡುವಿನ ಕದನ ವಿರಾಮಕ್ಕೆ ವ್ಯಾಪಾರ ಒಪ್ಪಂದವನ್ನು ಸಾಧನವನ್ನಾಗಿ ಬಳಸಿಕೊಳ್ಳುವ ಟ್ರಂಪ್ ಅವರ ನಡೆಯನ್ನು ಮೋದಿ ಅವರು ಸಂಸತ್ತಿನಲ್ಲಿ ಖಂಡಿಸಬೇಕು' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಆಗ್ರಹಿಸಿದ್ದಾರೆ.

'ಪಾಕಿಸ್ತಾನ ಫೀಲ್ಡ್ ಮಾರ್ಷಲ್ ಮುನೀರ್ ಅವರ ಪ್ರಚೋದನಕಾರಿ ಹಾಗೂ ಸ್ವೀಕಾರಾರ್ಹವಲ್ಲದ ಹೇಳಿಕೆಗಳಿಂದಾಗಿ ಪಹಲ್ಗಾಮ್‌ನಲ್ಲಿ ಉಗ್ರರ ದಾಳಿ ನಡೆದಿದೆ. ಸರ್ಕಾರದ ಮುಖ್ಯಸ್ಥರಲ್ಲದ ಸೇನಾ ಪಡೆಯ ವ್ಯಕ್ತಿಯನ್ನು ಟ್ರಂಪ್ ಊಟಕ್ಕೆ ಆಹ್ವಾನಿಸಿದ್ದಾರೆ. ಇದು ಭಾರತಕ್ಕೆ ದೊಡ್ಡ ಹಿನ್ನಡೆ' ಎಂದಿದ್ದಾರೆ.

ಸುಳ್ಳಿನ ಮುಖವಾಡ ಕಳಚಿದೆ: ಬಿಜೆಪಿ

'ಆಪರೇಷನ್ ಸಿಂಧೂರ' ಕುರಿತು ಪ್ರಧಾನಿ ಮೋದಿ, ಡೊನಾಲ್ಡ್ ಟ್ರಂಪ್ ಅವರೊಂದಿಗೆ ನಡೆಸಿದ ಸಂಭಾಷಣೆಯು ಕಾಂಗ್ರೆಸ್‌ನ ಸುಳ್ಳುಗಳ ಮುಖವಾಡ ಕಳಚಿದೆ' ಎಂದು ಬಿಜೆಪಿ ಟೀಕಿಸಿದೆ.

'ಇದನ್ನು ನಂಬಿದ್ದರೆ, ಕಾಂಗ್ರೆಸ್ ಪಕ್ಷವು 'ಪಾಕಿಸ್ತಾನದ ಪಾಲುದಾರ' ಎಂದೇ ಪರಿಗಣಿಸಬೇಕಾಗುತ್ತದೆ' ಎಂದು ಹೇಳಿದೆ.

'ಭಾರತಕ್ಕೆ ಮೂರನೇ ವ್ಯಕ್ತಿಯ ಮಧ್ಯಸ್ಥಿಕೆ ಅಗತ್ಯವಿಲ್ಲ ಹಾಗೂ ಅದನ್ನು ಒಪ್ಪುವುದಿಲ್ಲ ಎಂದು ಮೋದಿ ಅವರು ಟ್ರಂಪ್ ಅವರಿಗೆ ನೇರವಾಗಿ ಹೇಳಿರುವುದನ್ನು ಕಾಂಗ್ರೆಸ್ ಹಾಗೂ ಅದರ ಟ್ರೋಲ್ ಪಡೆ ಅರಗಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ' ಎಂದು ಬಿಜೆಪಿ ಐಟಿ ವಿಭಾಗದ ಮುಖ್ಯಸ್ಥ ಅಮಿತ್ ಮಾಳವೀಯ ಹೇಳಿದ್ದಾರೆ.

ಭಾರತ ಮಧ್ಯಸ್ಥಿಕೆ ಒಪ್ಪಲ್ಲ: ಮೋದಿ

ಒಂದನೇ ಪುಟದಿಂದ..

ಪಹಲ್ಗಾಮ್‌ನಲ್ಲಿನ ಉಗ್ರರ ದಾಳಿಗೆ ಪ್ರತ್ಯುತ್ತರವಾಗಿ ಭಾರತ 'ಆಪರೇಷನ್ ಸಿಂಧೂರ' ಆರಂಭಿಸಿದ ಸಂದರ್ಭದಲ್ಲಿ, ಭಾರತ ಮತ್ತು ಪಾಕಿಸ್ತಾನ ನಡುವಿನ ಕದನ ವಿರಾಮ ಕುರಿತು ಟ್ರಂಪ್ ಅವರು ಮೇ 10ರಂದು ಮೊದಲು ಘೋಷಿಸಿದ್ದರು.

'ಕದನ ವಿರಾಮಕ್ಕೆ ಒಪ್ಪಿಕೊಳ್ಳದಿದ್ದಲ್ಲಿ ಎರಡೂ ದೇಶಗಳೊಂದಿಗೆ ವ್ಯಾಪಾರ ನಿಲ್ಲಿಸುವುದಾಗಿ ಬೆದರಿಕೆ ಒಡ್ಡಿದ್ದೆ. ಈ ಮೂಲಕ ಉಭಯ ದೇಶಗಳ ನಡುವೆ ಕದನ ವಿರಾಮಕ್ಕೆ ನಾನು ಮಧ್ಯಸ್ಥಿಕೆ ವಹಿಸಿದ್ದೆ' ಎಂದು ಟ್ರಂಪ್ ಆಗಿನಿಂದ ಹೇಳುತ್ತಲೇ ಇದ್ದಾರೆ.

'ಕದನ ವಿರಾಮಕ್ಕೆ ಸಂಬಂಧಿಸಿ ಘಟನಾವಳಿಗಳಲ್ಲಿ ಯಾವುದೇ ಮಟ್ಟದಲ್ಲಿ, ಭಾರತ ಮತ್ತು ಅಮೆರಿಕ ನಡುವಿನ ವ್ಯಾಪಾರ ಅಥವಾ ಭಾರತ–ಪಾಕಿಸ್ತಾನ ನಡುವೆ ಮಧ್ಯಸ್ಥಿಕೆ ಕುರಿತಂತೆ ಚರ್ಚೆ ನಡೆದಿಲ್ಲ ಎಂಬುದನ್ನು ಟ್ರಂಪ್ ಅವರಿಗೆ ಮೋದಿ ಸ್ಪಷ್ಟವಾಗಿ ಮನವರಿಕೆ ಮಾಡಿದ್ದಾರೆ' ಎಂದು ಮಿಸ್ರಿ ಹೇಳಿದ್ದಾರೆ.

'ಏಪ್ರಿಲ್ 22ರಂದು ಪಹಲ್ಗಾಮ್‌ನಲ್ಲಿ ಉಗ್ರರ ದಾಳಿ ನಡೆದ ನಂತರ, ಭಾರತವು ಭಯೋತ್ಪಾದನೆ ವಿರುದ್ಧ ದೃಢವಾದ ಕ್ರಮ ತೆಗೆದುಕೊಳ್ಳಲಿದೆ ಎಂಬುದನ್ನು ಜಗತ್ತಿಗೇ ಸಾರಿ ಹೇಳಿದೆ. ಪಾಕಿಸ್ತಾನದಿಂದ ನಡೆಯುವ ಯಾವುದೇ ಆಕ್ರಮಣಕಾರಿ ಕೃತ್ಯಕ್ಕೆ ಭಾರತವು ಪ್ರಬಲವಾದ ಪ್ರತ್ಯುತ್ತರ ನೀಡಲಿದೆ ಎಂಬುದನ್ನು ಸಹ ಮೋದಿ ಸ್ಪಷ್ಟಪಡಿಸಿದ್ದಾರೆ' ಎಂದು ಮಿಸ್ರಿ ತಿಳಿಸಿದ್ದಾರೆ.

ಭೇಟಿ: ಉಭಯ ನಾಯಕರ ಸಮ್ಮತಿ

'ಕೆನಡಾದಿಂದ ಹಿಂದಿರುಗುವಾಗ ಅಮೆರಿಕಕ್ಕೆ ಭೇಟಿ ನೀಡುವಂತೆ ಅಮೆರಿಕ ಅಧ್ಯಕ್ಷ ಟ್ರಂಪ್ ಮನವಿ ಮಾಡಿದರು. ಆದರೆ, ಪೂರ್ವ ನಿಗದಿತ ಕಾರ್ಯಕ್ರಮ ಇರುವುದರಿಂದ ಭೇಟಿಯಾಗಲು ಸಾಧ್ಯವಾಗುತ್ತಿಲ್ಲ ಎಂದು ಮೋದಿ ತಿಳಿಸಿದರು. ಮುಂದಿನ ದಿನಗಳಲ್ಲಿ ಉಭಯ ನಾಯಕರು ಭೇಟಿಯಾಗಲು ಸಮ್ಮತಿಸಿದ್ದಾರೆ' ಎಂದು ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ ಹೇಳಿದ್ದಾರೆ.

ಭಾರತ ಕೆನಡಾ ಒಪ್ಪಿಗೆ

ನವದೆಹಲಿ/ಕೆನಾನಸ್ಕಿಸ್ (ಪಿಟಿಐ): ಪರಸ್ಪರರ ಹೈಕಮಿಷನರ್‌ಗಳನ್ನು ಕರೆಸಿಕೊಳ್ಳುವ ಮೂಲಕ ಉಭಯ ದೇಶಗಳ ನಡುವಿನ ರಾಜತಾಂತ್ರಿಕ ಸಂಬಂಧವನ್ನು ಮರುಸ್ಥಾಪನೆ ಮಾಡುವುದಕ್ಕೆ ಭಾರತ ಮತ್ತು ಕೆನಡಾ ಬುಧವಾರ ಸಮ್ಮತಿಸಿದವು. ಪ್ರಧಾನಿ ನರೇಂದ್ರ ಮೋದಿ ಹಾಗೂ ಕೆನಡಾ ಪ್ರಧಾನಿ ಮಾರ್ಕ್ ಕಾರ್ನಿ ಅವರು ಮಾತುಕತೆ ಬಳಿಕ ಇದಕ್ಕೆ ಸಮ್ಮತಿಸಿದ್ದಾರೆ.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಸತ್ಯವಂತಿಕೆ ಅನ್ನೋದು ಇರಲೂ ಬೇಕು; ತೋರಲೂ ಬೇಕು.

–ಮಾಸ್ತಿ ವೆಂಕಟೇಶ ಅಯ್ಯಂಗಾರ್

ಸಂಪಾದಕೀಯ

ಬೈಕ್ ಟ್ಯಾಕ್ಸಿ ನಿಷೇಧ ಸರ್ಕಾರದ ಕ್ರಮ ಅನುಚಿತ

ರಾಜ್ಯ ಸರ್ಕಾರವು ಹೈಕೋರ್ಟ್ ಆದೇಶಕ್ಕೆ ಅನುಗುಣವಾಗಿ ಬೈಕ್ ಟ್ಯಾಕ್ಸಿ ಸೇವೆಗಳ ಮೇಲೆ ನಿಷೇಧ ಹೇರಿದೆ. ಆದರೆ ಸರ್ಕಾರದ ಈ ಕ್ರಮವು ಹಲವು ಪ್ರಶ್ನೆಗಳನ್ನು ಹುಟ್ಟುಹಾಕಿದೆ. ಕಾನೂನಿನ ಮಿತಿಗಳು ಮತ್ತು ಈ ಟ್ಯಾಕ್ಸಿ ಸೇವೆಗಳನ್ನು ಪಡೆಯುವವರ ಸುರಕ್ಷತೆಯನ್ನು ಸರ್ಕಾರವು ಕಾರಣವಾಗಿ ನೀಡಿದೆ. ಆದರೆ, ಬೆಂಗಳೂರಿನಂತಹ ಸಂಚಾರ ದಟ್ಟಣೆಯ ನಗರಗಳಲ್ಲಿ ಹೊಸ ಬಗೆಯ ಸಂಚಾರ ವ್ಯವಸ್ಥೆಯನ್ನು ಒಪ್ಪಿಕೊಳ್ಳಲು ಸರ್ಕಾರಕ್ಕೆ ಮನಸ್ಸು ಇಲ್ಲದಿರುವುದು ಈ ನಿಷೇಧದ ಹಿಂದಿನ ಕಾರಣ ಎಂಬಂತೆ ಕಾಣುತ್ತಿದೆ. ಬೈಕ್ ಟ್ಯಾಕ್ಸಿ ಸೇವೆ ಒದಗಿಸಲು ಅನುವಾಗುವಂತೆ, ದ್ವಿಚಕ್ರ ವಾಹನಗಳನ್ನು ಸಾರಿಗೆ ವಾಹನಗಳು ಎಂದು ನೋಂದಾಯಿಸಲು ಅವಕಾಶ ನೀಡಬೇಕು ಎಂಬ ಸೂಚನೆ ನೀಡುವಂತೆ ಕೋರಿ ಉಬರ್, ಓಲಾ, ರ್‍ಯಾಪಿಡೋದಂತಹ ಕಂಪನಿಗಳು 2022ರಲ್ಲಿ ಹೈಕೋರ್ಟ್ ಮೊರೆ ಹೋದವು. ಆದರೆ ಸಾರಿಗೆ ಇಲಾಖೆಯು ಈ ಬಗೆಯ ಸೇವೆಗಳನ್ನು ಕಾನೂನುಬಾಹಿರ ಎಂದು ಹೇಳಿತ್ತು. ವೈಯಕ್ತಿಕ ಬಳಕೆಯ ಉದ್ದೇಶಕ್ಕೆ ನೋಂದಣಿ ಆಗಿರುವ ದ್ವಿಚಕ್ರ ವಾಹನಗಳನ್ನು ವಾಣಿಜ್ಯ ಉದ್ದೇಶಕ್ಕೆ ಬಳಸಲು ಅವಕಾಶ ಇಲ್ಲ ಎಂಬ ಕಾರಣವನ್ನು ಇಲಾಖೆ ನೀಡಿತ್ತು. ಅರ್ಜಿಗಳನ್ನು ಹೈಕೋರ್ಟ್‌ನ ಏಕಸದಸ್ಯ ಪೀಠ ಹಾಗೂ ವಿಭಾಗೀಯ ಪೀಠವು ವಜಾಗೊಳಿಸಿದ್ದವು. ಬೈಕ್ ಟ್ಯಾಕ್ಸಿ ಸೇವೆಗಳ ಬಗ್ಗೆ ನೀತಿ ರೂಪಿಸುವಂತೆ ಸರ್ಕಾರಕ್ಕೆ ಸೂಚಿಸಲು ಪೀಠಗಳು ನಿರಾಕರಿಸಿದ್ದವು. ಅಗತ್ಯ ಮಾರ್ಗಸೂಚಿ ರೂಪಿಸಲು ಸರ್ಕಾರವು ಒಲವು ತೋರಿದ್ದರೆ ಬೈಕ್ ಟ್ಯಾಕ್ಸಿ ಸೇವೆ ಒದಗಿಸಲು ಅನುವು ಮಾಡಿಕೊಡುವ ಬಗ್ಗೆ ಪರಿಗಣಿಸಬಹುದು ಎಂದು ಹಂಗಾಮಿ ಮುಖ್ಯ ನ್ಯಾಯಮೂರ್ತಿ ವಿ. ಕಾಮೇಶ್ವರ ರಾವ್ ನೇತೃತ್ವದ ಪೀಠವು ಹೇಳಿತ್ತು. ಆದರೆ ರಾಜ್ಯ ಸರ್ಕಾರವು ತನ್ನ ನಿಲುವನ್ನು ಸ್ಪಷ್ಟಪಡಿಸಿತ್ತು. ನೀತಿ ರೂಪಿಸಲು ಅದಕ್ಕೆ ಮನಸ್ಸಿಲ್ಲ.



ರಾಜ್ಯ ಸರ್ಕಾರದ ದೂರದೃಷ್ಟಿ ಇಲ್ಲದ ನಡೆಯು ಹೊಸತನಕ್ಕೆ ಅವಕಾಶ ಕಲ್ಪಿಸುತ್ತಿಲ್ಲ. ಸಂಕುಚಿತ ಆಲೋಚನೆ ಬಿಟ್ಟು, ವಾಸ್ತವವಾದಿ ಧೋರಣೆ ಹೊಂದಿರುವ ಕಾನೂನಿನ ಚೌಕಟ್ಟನ್ನು ರೂಪಿಸಬೇಕು

ಬೈಕ್ ಟ್ಯಾಕ್ಸಿ ಸೇವೆಗಳ ಮೇಲಿನ ನಿಷೇಧವು ಈಗ ಪೂರ್ಣ ಪ್ರಮಾಣದಲ್ಲಿ ಜಾರಿಗೆ ಬಂದಿದೆ. ಇದರಿಂದಾಗಿ ಅಂದಾಜು ಒಂದು ಲಕ್ಷ ಬೈಕ್ ಟ್ಯಾಕ್ಸಿ ‘ಕ್ಯಾಪ್ಟನ್’ಗಳಿಗೆ ಉದ್ಯೋಗ ಇಲ್ಲದಂತಾಗಿದೆ. ಈ ಸೇವೆಗಳನ್ನು ಒದಗಿಸುತ್ತಿದ್ದವರು ಪ್ರತಿವರ್ಷ ಎಂಟು ಕೋಟಿ ಟ್ರಿಪ್‌ಗಳನ್ನು ನಿರ್ವಹಿಸುತ್ತಿದ್ದರು ಎಂದು ವರದಿಗಳು ಹೇಳುತ್ತವೆ. ಆಟೊರಿಕ್ಷಾ ಚಾಲಕರು ಗ್ರಾಹಕರಿಗೆ ಹಲವು ಸಂದರ್ಭಗಳಲ್ಲಿ ಸೇವೆ ಒದಗಿಸಲು ನಿರಾಕರಿಸುತ್ತಿರುವ ಈ ಹೊತ್ತಿನಲ್ಲಿ ಬೈಕ್ ಟ್ಯಾಕ್ಸಿ ಸೇವೆಗಳು ನಗರ ಸಾರಿಗೆಯ ಭವಿಷ್ಯ ಎಂಬಂತೆ ಕಾಣುತ್ತಿದ್ದವು. ಅವು ಕಡಿಮೆ ವೆಚ್ಚದಲ್ಲಿ, ಕಡಿಮೆ ಸಮಯದಲ್ಲಿ ಸೇವೆ ಒದಗಿ ಸುತ್ತಿದ್ದವು. ಬೈಕ್ ಟ್ಯಾಕ್ಸಿ ಸೇವೆಗಳನ್ನು ನೀಡುವುದಕ್ಕೆ ನಿಯಮಗಳ ಚೌಕಟ್ಟು ಸರಿಯಾಗಿ ಇಲ್ಲ, ವಿಶೇಷವಾಗಿ ಮಹಿಳಾ ಪ್ರಯಾಣಿಕರ ಸುರಕ್ಷತೆ, ವಿಮಾ ಸೌಲಭ್ಯದ ವಿಚಾರದಲ್ಲಿ ಸಮಸ್ಯೆಗಳು ಇವೆ ಎಂದು ಸರ್ಕಾರ ಹೇಳಿರುವುದರಲ್ಲಿ ಹುರುಳಿದೆ. ಹೀಗಿದ್ದರೂ ಕಾನೂನು ರೂಪಿಸುವುದರಿಂದ ಇದಕ್ಕೆ ಪರಿಹಾರ ಕಂಡುಕೊಳ್ಳಬಹುದು. ನಿಷೇಧ ವಿಧಿಸುವುದು ಸರಿಯಾದ ಕ್ರಮ ಆಗುವುದಿಲ್ಲ. ಪರವಾನಗಿ ನೀಡುವುದಕ್ಕೆ ನಿಯಮಗಳನ್ನು ರೂಪಿಸುವುದು, ಸೇವೆಗಳನ್ನು ಒದಗಿಸುವವರಿಗೆ ಕಡ್ಡಾಯವಾಗಿ ತರಬೇತಿ ನೀಡುವುದು, ದ್ವಿಚಕ್ರ ವಾಹನಗಳನ್ನು ವಾಣಿಜ್ಯ ಉದ್ದೇಶಕ್ಕೆ ಬಳಸುವಾಗ ವಿಮಾ ಸೌಲಭ್ಯ ಲಭ್ಯವಾಗುವಂತೆ ಮಾಡುವುದು ಹಾಗೂ ಸುರಕ್ಷತೆಯ ವಿಚಾರದಲ್ಲಿ ಕಟ್ಟುನಿಟ್ಟಿನ ನಿಯಮಗಳನ್ನು ಜಾರಿಗೆ ತರುವುದರಿಂದ ಸರ್ಕಾರ ವ್ಯಕ್ತಪಡಿಸಿರುವ ಕಳವಳಗಳು ನಿವಾರಣೆ ಆಗಬಹುದು. ದ್ವಿಚಕ್ರ ವಾಹನಗಳು ‘ಬಾಡಿಗೆ ವಾಹನ’ ಎಂಬ ವ್ಯಾಖ್ಯಾನದ ಅಡಿಯಲ್ಲಿ ಬರುತ್ತವೆ ಎಂದು ಕೇಂದ್ರ ಸರ್ಕಾರ ಸ್ಪಷ್ಟಪಡಿಸಿದೆ, ಆ ಮೂಲಕ ಅದು ಅಗತ್ಯ ನಿಯಮಗಳನ್ನು ರೂಪಿಸುವುದಕ್ಕೆ ರಾಜ್ಯಗಳಿಗೆ ಅನುವು ಮಾಡಿಕೊಟ್ಟಿದೆ. ಹೀಗಿದ್ದರೂ ಇದು ‘ಪಾಲಿಸಲೇಬೇಕಾದ’ ಮಾರ್ಗಸೂಚಿ ಅಲ್ಲ ಎಂಬ ನಿಲುವನ್ನು ರಾಜ್ಯ ಸರ್ಕಾರ ತಾಳಿದೆ.

ರಾಜ್ಯ ಸರ್ಕಾರವು ಪ್ರತಿಗಾಮಿ ನಡೆಯನ್ನು ಇರಿಸಿದೆ. ಸಾರಿಗೆ ಸೌಲಭ್ಯಗಳ ವಿಚಾರದಲ್ಲಿ ಹೆಚ್ಚುತ್ತಿರುವ ಅಗತ್ಯಗಳ ಬಗ್ಗೆ ಸರ್ಕಾರ ನಿರ್ಲಕ್ಷ್ಯ ತಾಳಿರುವುದಷ್ಟೇ ಅಲ್ಲದೆ, ಈ ಸೇವೆಗಳನ್ನು ನೆಚ್ಚಿಕೊಂಡಿದ್ದ ಸಹಸ್ರಾರು ಮಂದಿಗೆ ಜೀವನೋಪಾಯವನ್ನು ಸರ್ಕಾರ ನಿರಾಕರಿಸಿದೆ. ಬೈಕ್ ಟ್ಯಾಕ್ಸಿಗಳಿಗೆ ಕಡಿಮೆ ಸ್ಥಳಾವಕಾಶ ಇದ್ದರೆ ಸಾಕು, ಅವು ಸೋಲುತ್ತಿರುವ ನಮ್ಮ ಸಾರ್ವಜನಿಕ ಸಾರಿಗೆ ವ್ಯವಸ್ಥೆಯು ಒದಗಿಸದೇ ಇರುವ ಸೇವೆಗಳನ್ನು ಒದಗಿಸುತ್ತವೆ. ಸರ್ಕಾರದ ದೂರದೃಷ್ಟಿ ಇಲ್ಲದ ನಡೆಯು ಹೊಸತನಕ್ಕೆ ಅವಕಾಶ ಕಲ್ಪಿಸುತ್ತಿಲ್ಲ. ಈಗ ಬೈಕ್ ಟ್ಯಾಕ್ಸಿ ಸೇವೆಗಳ ಮೇಲೆ ಹೇರಿರುವ ನಿಷೇಧವು ಕಾನೂನಿನ ಪ್ರಕಾರ ಸರಿಯಾಗಿಯೇ ಇರಬಹುದು. ಆದರೆ ಅದು ನ್ಯಾಯಸಮ್ಮತವೇ? ಅದಕ್ಕಿಂತ ಹೆಚ್ಚಾಗಿ, ಈ ಕ್ರಮವು ವಿವೇಕಯುತವಾದುದೇ? ರಾಜ್ಯ ಸರ್ಕಾರವು ಸಂಕುಚಿತ ಮನಃಸ್ಥಿತಿಯಿಂದ ಆಲೋಚನೆ ಮಾಡುವುದನ್ನು ಬಿಡಬೇಕು. ಆಧುನಿಕ, ಒಳಗೊಳ್ಳುವ ಮತ್ತು ವಾಸ್ತವವಾದಿ ಧೋರಣೆ ಹೊಂದಿರುವ ಕಾನೂನಿನ ಚೌಕಟ್ಟನ್ನು ರೂಪಿಸಬೇಕು. ಹಿಂದಿನ ಕಾಲದ ನೀತಿಗಳನ್ನು ಇಟ್ಟುಕೊಂಡು ಭವಿಷ್ಯದ ನಗರವನ್ನು ಕಟ್ಟಲು ಸಾಧ್ಯವಿಲ್ಲ.

ಚುಟುಕು / ಜಾಲತಾಣ



ಭೀತಿ ಸೃಷ್ಟಿಸಬೇಡಿ...

ಭಾರತೀಯ ವಿಮಾನಯಾನವು ಸುರಕ್ಷಿತವಾಗಿಲ್ಲ ಎಂದು ಯಾರಾದರು ಹೇಳಿರುವುದನ್ನು ಕೇಳಿದ್ದೀರಾ? ಸುರಕ್ಷತೆಗೆ ಸಂಬಂಧಿಸಿದಂತೆ ಭಾರತವು ಅಂತರ ರಾಷ್ಟ್ರೀಯ ನಾಗರಿಕ ವಿಮಾನಯಾನ ಸಂಸ್ಥೆಯ ‘ಎ’ ದರ್ಜೆಯ ರ್‍ಯಾಂಕಿಂಗ್ ಪಡೆದಿದೆ. ಅಮೆರಿಕವೂ ಇದೇ ಮಾನ್ಯತೆ ಹೊಂದಿದೆ. ಏರ್ ಇಂಡಿಯಾ ವಿಮಾನ ಅವಘಡದ ಈ ಸಂದರ್ಭದಲ್ಲಿ ಮುನ್ನೆಚ್ಚರಿಕೆ ಕ್ರಮ ವಹಿಸಬೇಕಿದೆ. ಬೊಟ್ಟು ಮಾಡುವುದು ಅಥವಾ ಭೀತಿ ಸೃಷ್ಟಿಸುವುದು ಸರಿಯಲ್ಲ...

ರಾಜಶೇಖರ್, ಪತ್ರಕರ್ತ, ‘ಎಕ್ಸ್’ನಿಂದ

ಕಿಡಿನುಡಿ



ಇಡೀ ದೇಶಕ್ಕೆ ಮಾದರಿಯಾಗಿದ್ದ ಕರ್ನಾಟಕದ ಲೋಕಾಯುಕ್ತ ಸಂಸ್ಥೆಯನ್ನು ಜೆಡಿಎಸ್, ಬಿಜೆಪಿ ಹಾಗೂ ಕಾಂಗ್ರೆಸ್ ಸೇರಿಕೊಂಡು ಕಳೆದ 15 ವರ್ಷಗಳಲ್ಲಿ ಹಳ್ಳ ಹಿಡಿಸಿವೆ...

ರವಿ ಕೃಷ್ಣಾರೆಡ್ಡಿ, ಅಧ್ಯಕ್ಷ, ಕರ್ನಾಟಕ ರಾಷ್ಟ್ರ ಸಮಿತಿ

25 ವರ್ಷಗಳ ಹಿಂದೆ

ಸೋಮವಾರ, 19-6-2000

- **ಸರ್ಕಿಟ್ ಪೀಠ ಪ್ರಸ್ತಾವಕ್ಕೆ ತಿರಸ್ಕಾರ: ಇಂದು ಬಂದ್**

ಹುಬ್ಬಳ್ಳಿ, ಜೂನ್ 18– ಅವಳಿ ನಗರದಲ್ಲಿ ಹೈಕೋರ್ಟ್ ಸರ್ಕಿಟ್ ಪೀಠ ಆರಂಭಿಸುವ ರಾಜ್ಯ ಸರ್ಕಾರದ ಪ್ರಸ್ತಾವವನ್ನು ಹುಬ್ಬಳ್ಳಿ ಮತ್ತು ಧಾರವಾಡ ನಗರಗಳ ವಕೀಲರ ಸಂಘಗಳು ಸಾರಾಸಗಟಾಗಿ ತಿರಸ್ಕರಿಸಿವೆ.

ಪೂರ್ಣ ಪ್ರಮಾಣದ ಹೈಕೋರ್ಟ್ ಪೀಠಕ್ಕಾಗಿ ಚಳವಳಿಯನ್ನು ಮುಂದುವರಿಸಲು ಎರಡೂ ವಕೀಲರ ಸಂಘಗಳ ಸಭೆ ನಡೆಯಿತು. ನಾಳೆ ನಡೆಯಲಿರುವ ಹುಬ್ಬಳ್ಳಿ– ಧಾರವಾಡ ಅವಳಿನಗರ ಬಂದ್ ಯಶಸ್ವಿಗೊಳಿಸಲು ವ್ಯಾಪಕ ಚರ್ಚೆ, ಸಮಾಲೋಚನೆ ನಡೆದವು.

75 ವರ್ಷಗಳ ಹಿಂದೆ

ಸೋಮವಾರ, 19-6-1950

- **ಭೂತ ಉಚ್ಚಾಟನೆಗೆ ರಣ ಚಿಕಿತ್ಸೆ**

ಜಮ್ಮು, ಜೂನ್ 18– ಜಮ್ಮುವಿನ ಮಂತ್ರವೈದ್ಯರು ಭೂತ– ಪಿಶಾಚಿಗಳ ಉಚ್ಚಾಟನಾ ಚಿಕಿತ್ಸಾಲಯವೊಂದನ್ನು ತೆರೆದಿದ್ದಾರೆ.

ದೆವ್ವ ಬಿಟ್ಟು ಹೋಯಿತೆಂದು ಚಿಕಿತ್ಸಕರು ಸಾರುವವರೆಗೂ, ರೋಗಿಗಳನ್ನು ಮಣ್ಣಿನ ಮಡಕೆ ಮೇಲೆ ಕೂರಿಸಿ, ದಿನವೆಲ್ಲ ಬುಗುರಿಯಂತೆ ತಿರುಗಿಸಲಾಗುವುದು. ಈ ಚಿಕಿತ್ಸಾ ಕಾಲದಲ್ಲಿ ಚಿತ್ರಹಿಂಸೆಗೆ ಒಳಗಾಗುವವರು, ಆ ಶರೀರದಲ್ಲಿ ಅಡಗಿ ಕುಳಿತಿರುವ ದೆವ್ವವೇ ಹೊರತು ಮಾನವ ಶರೀರವಲ್ಲ ಎಂದು ಈ ಮಾಂತ್ರಿಕರ ನಂಬುಗೆ.

- **ದಕ್ಷಿಣ ಆಫ್ರಿಕಾಕ್ಕೆ ಕಾಮನ್‌ವೆಲ್ತಿನಲ್ಲಿ ಸ್ಥಾನ ಸಲ್ಲದು**

ಜೊಹಾನ್ಸ್‌ಬರ್ಗ್, ಜೂನ್ 18– ತನ್ನ ಧೋರಣೆಯನ್ನು ಬದಲಿಸಿ, ಬಿಳಿಯರಲ್ಲದ ಜನರ ಮೇಲೆ ಎಸಗುತ್ತಿರುವ ಅನ್ಯಾಯಗಳನ್ನು ತಪ್ಪಿಸಿ, ತಿದ್ದಿಕೊಳ್ಳದಿದ್ದರೆ, ದಕ್ಷಿಣ ಆಫ್ರಿಕಾವನ್ನು ಕಾಮನ್‌ವೆಲ್ತ್ ರಾಷ್ಟ್ರ ಕೂಟದಿಂದ ಹೊರದೂಡಬೇಕೆಂದು ಟ್ರಾನ್ಸ್‌ವಾಲ್ ಭಾರತೀಯ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಕಾಮನ್‌ವೆಲ್ತ್ ದೇಶಗಳ ಎಲ್ಲಾ ಪ್ರಧಾನಿಗಳಿಗೂ ತಂತಿ ಕಳಿಸಿದೆ.

ತೆಂಬಾ: ಟೆಸ್ಟ್ ಕ್ರಿಕೆಟ್ ಬೆಳ್ಳಿಚುಕ್ಕಿ



ವಿಶ್ಲೇಷಣೆ

ಗಿರೀಶ ದೊಡ್ಡಮನಿ

‘ಆಫ್ರಿಕಾದ ಕಪ್ಪು ಜನಾಂಗದ ಕ್ರಿಕೆಟರ್ ಎಂದಷ್ಟೇ ನನ್ನ ಹೆಸರು ಇತಿಹಾಸದ ಪುಟದಲ್ಲಿ ಉಳಿಯಬಾರದು. ಅದನ್ನು ಮೀರಿ ಬೆಳೆದವ ಎಂದು ದಾಖಲಾಗಬೇಕು...’

ವಿಶ್ವ ಟೆಸ್ಟ್ ಕ್ರಿಕೆಟ್ ಚಾಂಪಿಯನ್‌ಷಿಪ್ (ಡಬ್ಲ್ಯುಟಿಸಿ) ಗೆದ್ದ ದಕ್ಷಿಣ ಆಫ್ರಿಕಾ ತಂಡದ ನಾಯಕ ತೆಂಬಾ ಬವುಮಾ ಅವರ ಭಾವುಕ ನುಡಿಗಳಿವು. ಅವರ ಈ ಮಾತಿನ ಹಿಂದೆ ಹಲವು ಭಾವಗಳಿವೆ. ತಾವು ಜನಿಸಿದ ಜನಾಂಗವು ತಲೆಮಾರುಗಳಿಂದ ಅನುಭವಿಸಿದ ತಾರತಮ್ಯದ ನೋವು, ಅವಮಾನ ಮತ್ತು ಹೋರಾಟದ ಹಾದಿಯ ಭಾವಗಳು ಅವು. ಇವೆಲ್ಲವನ್ನೂ ಮೀರಿ ಜಗತ್ತಿಗೆ ತಮ್ಮ ಸಾಮರ್ಥ್ಯ ತೋರುವ ತೆಂಬಾ ಛಲವೇ ದಕ್ಷಿಣ ಆಫ್ರಿಕಾ ತಂಡಕ್ಕೆ ವಿಶ್ವ ಕಿರೀಟ ತಂದುಕೊಟ್ಟಿದೆ.

ಕಡುಹಸಿರು ಬಣ್ಣದ ಕೋಟು, ತಲೆಗೂ ಅದೇ ಬಣ್ಣದ ಕ್ಯಾಪ್ ಧರಿಸಿಕೊಂಡು, ಕೈಯಲ್ಲಿ ಮಿರಿ ಮಿರಿ ಮಿಂಚುವ ‘ಐಸಿಸಿ ಗದೆ’ ಹಿಡಿದ ತೆಂಬಾ ‘ಕ್ರಿಕೆಟ್ ಕಾಶಿ’ ಲಾರ್ಡ್ಸ್‌ನಲ್ಲಿ ಕಪ್ಪುವರ್ಣೀಯರ ಆಶಾಕಿರಣವಾಗಿ ಹೊರಹೊಮ್ಮಿದರು. ನೂರಾರು ವರ್ಷಗಳ ಕಾಲ ತಮ್ಮ ಜನಾಂಗವನ್ನು ದಾಸ್ಯದ ಸಂಕೋಲೆಯಲ್ಲಿ ಬಿಗಿದಿಟ್ಟ ಶ್ವೇತವರ್ಣೀಯರ ನೆಲದಲ್ಲಿಯೇ ಟೆಸ್ಟ್ ಕ್ರಿಕೆಟ್ ಲೋಕದ ಸಾಮ್ರಾಟನಾಗಿ ಮೆರೆಯುವುದೆಂದರೆ ಸಾಮಾನ್ಯವೇ?

ಡಬ್ಲ್ಯುಟಿಸಿ ಫೈನಲ್‌ನಲ್ಲಿ ಆಸ್ಟ್ರೇಲಿಯಾದಂತಹ ಬಲಾಢ್ಯ ತಂಡವನ್ನು ಮಣಿಸಿದ್ದು ಕೂಡ ಮಹಾಸಾಧನೆಯೇ ಸರಿ. ಸಮಸಮಾಜದ ಪ್ರತಿಪಾದಕ ನೆಲ್ಸನ್ ಮಂಡೇಲಾ ಅವರ ನಾಡಿನ ‘ವಾಮನಮೂರ್ತಿ’ ತೆಂಬಾ ಈ ಎತ್ತರಕ್ಕೆ ಬೆಳೆದಿದ್ದು ಒಂದಿಡೀ ಜನಾಂಗದ ಯಶೋಗಾಥೆಯನ್ನು ಹೇಳುತ್ತದೆ ಎಂಬುದರಲ್ಲಿ ಅನುಮಾನವೇ ಇಲ್ಲ. ದಕ್ಷಿಣ ಆಫ್ರಿಕಾ ತಂಡದ ಮೊದಲ ಕಪ್ಪುವರ್ಣೀಯ ಹಾಗೂ ಎರಡನೇ ಬಿಳಿಯೇತರ ನಾಯಕ ಎಂಬ ಹೆಗ್ಗಳಿಕೆ ಅವರದ್ದು. 2006ರಲ್ಲಿ ನಾಯಕರಾಗಿದ್ದ ಆಶ್ವೆಲ್ ಪ್ರಿನ್ಸ್ ಶ್ವೇತವರ್ಣೀಯರಾಗಿರಲಿಲ್ಲ. ಅವರು ಕೂಡ ತಂಡದೊಳಗಿನ ‘ವರ್ಣಭೇದ’ ಬಿಸಿಯನ್ನು ಎದುರಿಸಿದ್ದವರು.

‘ಬ್ಲ್ಯಾಕ್ ಕೋಟಾ’ ನಾಯಕ ಎಂಬ ಮೂದಲಿಕೆಯನ್ನೂ ತೆಂಬಾ ಅನುಭವಿಸಿದ್ದಾರೆ. 2014ರಲ್ಲಿ ಅವರು ದಕ್ಷಿಣ ಆಫ್ರಿಕಾ ತಂಡಕ್ಕೆ ಪದಾರ್ಪಣೆ ಮಾಡಿದರು. 70ರ ದಶಕದಲ್ಲಿ ವರ್ಣಭೇದ ತಾರತಮ್ಯದ ಕಾರಣ ದಕ್ಷಿಣ ಆಫ್ರಿಕಾ ತಂಡವನ್ನು ನಿಷೇಧಿಸಲಾಗಿತ್ತು. 1991ರಿಂದ ನಿಷೇಧ ತೆರವಾದ ಮೇಲೆ ತಂಡವು ಅಂತರ ರಾಷ್ಟ್ರೀಯ ಕ್ರಿಕೆಟ್ ಆಡುತ್ತಿದೆ.

ಆದರೆ ಆ ದೇಶದ ಬಹುಸಂಖ್ಯಾತರಾಗಿರುವ ಕಪ್ಪು ಜನಾಂಗದವರ ಪೈಕಿ ಇಲ್ಲಿಯವರೆಗೆ ಬರೀ 20 ಆಟಗಾರರಷ್ಟೇ ಪುರುಷರ ತಂಡವನ್ನು ಪ್ರತಿನಿಧಿಸಿದ್ದಾರೆ. ಅದರಲ್ಲೂ ಬ್ಯಾಟರ್‌ಗಳಾಗಿ ಆಡಿದವರು ಮೂವರು ಮಾತ್ರ. 2006ರಲ್ಲಿ ಲೂಟ್ಸ್ ಬಾಸ್‌ಮನ್ ಅವರು ಏಕದಿನ ತಂಡವನ್ನು ಪ್ರತಿನಿಧಿಸಿದ್ದರು. ಅವರ ನಂತರ ಖಾಯಾ ಝೋಂಡೊ ಅವರಿಗೆ ಕೇವಲ 5 ಟೆಸ್ಟ್‌ಗಳಲ್ಲಿ ಆಡುವ ಅವಕಾಶ ಸಿಕ್ಕಿತ್ತು. ಇವರನ್ನು ಬಿಟ್ಟರೆ ಉಳಿದವರೆಲ್ಲರೂ ಬೌಲರ್‌ಗಳೇ. ‘ಬ್ಯಾಟರ್‌ಗಳೇ ಶ್ರೇಷ್ಠ’ ಎಂಬ ಧೋರಣೆಯಿಂದ ಬಿಳಿಯರೇ ಹೆಚ್ಚು ಬ್ಯಾಟಿಂಗ್ ಮಾಡಿದ ಪರಿಣಾಮವೂ ಇದಾಗಿದೆ.

ಅದಕ್ಕೆ ಕಾರಣವೆಂದರೆ, ಬೌಲಿಂಗ್ ಕೌಶಲಗಳು ಮತ್ತು ದೇಹದಾರ್ಢ್ಯವು ಇಲ್ಲಿಯ ಜನರಲ್ಲಿ ಸಹಜವಾಗಿಯೇ ಮೇಳೈಸಿವೆ. ಆದ್ದರಿಂದ ಹೆಚ್ಚು ತರಬೇತಿಯ ಅಗತ್ಯವಿಲ್ಲ. ಆದರೆ, ಬ್ಯಾಟಿಂಗ್ ಕಲಿಯಲು ಪ್ರತಿಷ್ಠಿತ ಕ್ಲಬ್‌ಗಳಲ್ಲಿ ತರಬೇತಿಗೆ ಹೋಗಬೇಕು. ಅದಕ್ಕಾಗಿ ಬಹಳಷ್ಟು ದುಡ್ಡು ಖರ್ಚು ಮಾಡಬೇಕು. ಆದರೆ, ಆರ್ಥಿಕ ಸಬಲತೆ ಇರುವ ಕಪ್ಪುವರ್ಣದವರ ಕುಟುಂಬಗಳು ಕಡಿಮೆ. ಬ್ಯಾಟರ್‌ಗಳು ಹೆಚ್ಚು ಸಂಖ್ಯೆಯಲ್ಲಿ ಬರದಿರಲು ಇದೂ ಒಂದು ಕಾರಣ ಎಂದು ಕೆಲ ವರ್ಷಗಳ ಹಿಂದೆ ದಿಗ್ಗಜ ಬ್ಯಾಟರ್ ಹಾಶೀಂ ಆಮ್ಲಾ ಹೇಳಿದ್ದರು.

ಈಗ ತೆಂಬಾ ಬವುಮಾ ಬ್ಯಾಟರ್ ಆಗಿಯೂ ಯಶಸ್ವಿಯಾಗಿರುವುದು ದಕ್ಷಿಣ ಆಫ್ರಿಕಾದಲ್ಲಿ ಹೊಸ ಅಲೆ ಸೃಷ್ಟಿಯಾಗಿದೆ. ಡಬ್ಲ್ಯುಟಿಸಿ ಫೈನಲ್‌ನಲ್ಲಿ ಏಡನ್ ಮರ್ಕರಂ ಜೊತೆಗೆ ಅವರ ಜೊತೆಯಾಟ ತಂಡದ ಯಶಸ್ಸಿನಲ್ಲಿ ಮಹತ್ವದ ಪಾತ್ರ ವಹಿಸಿತು. ಎರಡು ಇನಿಂಗ್ಸ್ ಸೇರಿ ಒಟ್ಟು 102 ರನ್ ಗಳಿಸಿದರು. ಅವರ ಪ್ರೇರಣೆಯಿಂದ ಬ್ಯಾಟರ್‌ಗಳಾಗುವ ಕನಸು ಕಾಣುವ ಹುಡುಗರ ಸಂಖ್ಯೆ ಹೆಚ್ಚುತ್ತಿದೆ.

ತೆಂಬಾ ಅವರು 2014ರಲ್ಲಿ ರಾಷ್ಟ್ರೀಯ ತಂಡಕ್ಕೆ ಪದಾರ್ಪಣೆ ಮಾಡಿದ್ದರು. ಆಗ ತಂಡದಲ್ಲಿ ಎಬಿ ಡಿವಿಲಿಯರ್ಸ್, ಡೇವಿಡ್ ಮಿಲ್ಲರ್, ಫಾಫ್ ಡುಪ್ಲೆಸಿ, ಕ್ವಿಂಟನ್ ಡಿಕಾಕ್ ಅವರಂತಹ ಖ್ಯಾತನಾಮರು ಮಿಂಚುತ್ತಿದ್ದರು. ಅವರ ನಡುವೆ ತಮ್ಮ ಜಾಗ ಉಳಿಸಿಕೊಳ್ಳಲು ತೆಂಬಾ ಪಟ್ಟ ಶ್ರಮ ಅಷ್ಟಿಷ್ಟಲ್ಲ. ಬೆಂಚ್‌ನಲ್ಲಿ ಕಾಲ ಕಳೆದಿದ್ದೇ ಹೆಚ್ಚು. ಆದರೆ, 2016ರಲ್ಲಿ ಇಂಗ್ಲೆಂಡ್ ಎದುರಿನ ಟೆಸ್ಟ್ ಪಂದ್ಯದಲ್ಲಿ ಅವರ ಶತಕದ ಆಟಕ್ಕೆ ಮನಸೋಲದವರೇ ಇಲ್ಲ. ಟೆಸ್ಟ್ ಶತಕ ದಾಖಲಿಸಿದ ದಕ್ಷಿಣ ಆಫ್ರಿಕಾದ ಪ್ರಥಮ ಕಪ್ಪುವರ್ಣದ ಬ್ಯಾಟರ್ ಎಂಬ ಹೆಗ್ಗಳಿಕೆ ಅವರದು.

ತಂಡದಲ್ಲಿ ಶ್ವೇತವರ್ಣೀಯರಲ್ಲದ ಆರು ಆಟಗಾರರು ಇರುವುದು ಕಡ್ಡಾಯ, ಇಬ್ಬರು ಕಪ್ಪುಜನಾಂಗದವರು ಇರಬೇಕು ಎಂಬ ನಿಯಮ 2016ರಲ್ಲೇ ಜಾರಿಗೆ ಬಂದಿತು. ಇದಕ್ಕೆ ಬಹಳಷ್ಟು ವಿರೋಧಗಳೂ ವ್ಯಕ್ತವಾದವು. ಎಷ್ಟರ ಮಟ್ಟಿಗೆ ಎಂದರೆ, 2024ರಲ್ಲಿ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಆಡಿದ ತಂಡದಲ್ಲಿ ಬರೀ ಒಬ್ಬ ಕಪ್ಪುವರ್ಣೀಯ ಆಟಗಾರ ಕಗಿಸೊ ರಬಾಡಗೆ ಮಾತ್ರ ಸ್ಥಾನ ನೀಡಲಾಗಿತ್ತು. ಕೊನೆಯ ಕ್ಷಣದಲ್ಲಿ ಲುಂಗಿ ಎನ್‌ಗಿಡಿ ಅವರನ್ನು ಟ್ರಾವೆಲ್ ರಿಸರ್ವ್ ಆಗಿ ಘೋಷಿಸಲಾಯಿತು. ಉಳಿದಂತೆ ಶ್ವೇತವರ್ಣೀಯರಲ್ಲದ ಕೇಶವ್ ಮಹಾರಾಜ್, ರೀಜಾ ಹೆನ್ರಿಕ್ಸ್, ಬಿಜಾರ್ನ್ ಫಾರ್ಚೂನ್, ತಬ್ರೇಜ್ ಶಮ್ಸಿ ಮತ್ತು ಒಟ್ನೀಲ್ ಬಾರ್ತಮನ್ ಅವರನ್ನು ಸೇರಿಸಲಾಗಿತ್ತು. ಇದು ಬಹಳಷ್ಟು ಚರ್ಚೆಗೆ ಕಾರಣವಾಗಿತ್ತು. ಇದೆಲ್ಲದರ ನಡುವೆ ತೆಂಬಾ ಟೆಸ್ಟ್ ತಂಡದ ನಾಯಕರಾದಾಗ ಬಹಳಷ್ಟು ಜನರ ಹುಬ್ಬೇರಿದ್ದವು. ಸಾಮಾಜಿಕ ಜಾಲತಾಣಗಳಲ್ಲಿ ಅವರನ್ನು ಹಂಗಿಸುವ ಮೀಮ್‌ಗಳು ಹರಿದಾಡಿದ್ದವು. ಆದರೆ ಈಗ ಅದೇ ಸಾಮಾಜಿಕ ಜಾಲತಾಣ ತೆಂಬಾಗೆ ಬಹುಪರಾಕ್ ಹೇಳತೊಡಗಿವೆ. ಇದಲ್ಲವೇ ಸಾಧನೆಯೆಂದರೆ?

ದಕ್ಷಿಣ ಆಫ್ರಿಕಾ ತಂಡವು ‘ವಿಶ್ವ ಟೆಸ್ಟ್ ಕ್ರಿಕೆಟ್ ಚಾಂಪಿಯನ್‌ಷಿಪ್’ ಗೆಲ್ಲುವಲ್ಲಿ ತೆಂಬಾ ಬವುಮಾ ಪಾತ್ರ ಮಹತ್ವದ್ದು. ಅವರ ಸಾಧನೆ, ಆಟದ ಅಂಗಳದಲ್ಲಿ ದೊರೆತ ಗೆಲುವು ಮಾತ್ರವಲ್ಲದೆ, ಕಪ್ಪುವರ್ಣೀಯರ ಹೋರಾಟಕ್ಕೆ ಸಂದ ಯಶಸ್ಸೂ ಹೌದು. ಅವರ ಯಶಸ್ಸು ದಕ್ಷಿಣ ಆಫ್ರಿಕಾಕ್ಕೆ ಸೀಮಿತವಲ್ಲ. ಜಿಂಬಾಬ್ವೆ ಮತ್ತು ಕೆನ್ಯಾ ತಂಡಗಳಿಗೂ ತೆಂಬಾ ಪ್ರೇರಣೆಯಾಗಬಲ್ಲರು

ತೆಂಬಾ ಅವರ ಯಶಸ್ಸು ಬರೀ ದಕ್ಷಿಣ ಆಫ್ರಿಕಾಕ್ಕೆ ಮಾತ್ರ ಸೀಮಿತವಲ್ಲ. ವೆಸ್ಟ್ ಇಂಡೀಸ್ ತಂಡಕ್ಕೂ ಪ್ರೇರಣೆಯಾಗಬೇಕು. ಬ್ರಿಟಿಷರು ಪರಿಚಯಿಸಿದ ಈ ಆಟವನ್ನು ದಶಕಗಳ ಹಿಂದೆ ಅಕ್ಷರಶಃ ಆಳಿದವರು ವಿಂಡೀಸ್ ತಂಡದವರು. ಏಕದಿನ ಕ್ರಿಕೆಟ್‌ನಲ್ಲಿ ಮೊದಲೆರಡೂ ವಿಶ್ವಕಪ್ ಗೆದ್ದವರು. 90ರ ದಶಕದವರೆಗೂ ಟೆಸ್ಟ್ ಮತ್ತು ಏಕದಿನ ಮಾದರಿಯಲ್ಲಿ ತಂಡವು ಬಲಶಾಲಿಯಾಗಿತ್ತು. ಕ್ಲೈವ್ ಲಾಯ್ಡ್ ಅವರಿಂದ ಕ್ರಿಸ್ ಗೇಲ್‌ವರೆಗೂ ಹಲವು ದಿಗ್ಗಜರನ್ನು ನೀಡಿದ ದೇಶ ಇದು. ಆದರೆ ನಂತರದಲ್ಲಿ ಕ್ಷೀಣವಾಯಿತು. ಈಗಂತೂ ವಿಶ್ವಕಪ್ ಟೂರ್ನಿಗಳಲ್ಲಿ ಅರ್ಹತೆ ಗಿಟ್ಟಿಸಲೂ ಸಾಧ್ಯವಾಗದಷ್ಟು ಸೊರಗಿದೆ. ದಕ್ಷಿಣ ಆಫ್ರಿಕಾ ಯಶಸ್ಸು ಕೆರಿಬಿಯನ್ ದ್ವೀಪಗಳಲ್ಲಿ ಪ್ರೇರಣೆಯ ಗಾಳಿಯಾಗಿ ಬೀಸಬಹುದೇ ಎಂದು ಕಾದು ನೋಡಬೇಕಷ್ಟೇ. ಈ ಹಾದಿಯಲ್ಲಿ ಜಿಂಬಾಬ್ವೆ ಮತ್ತು ಕೆನ್ಯಾ ತಂಡಗಳಿಗೂ ತೆಂಬಾ ಪ್ರೇರಣೆಯಾಗಬಹುದು.

ಇನ್ನೊಂದೆಡೆ ಭಾರತ ಕ್ರಿಕೆಟ್ ತಂಡದ ಹೊಸ ಪರ್ವ ಆರಂಭವಾಗಲಿದೆ. ಯುವ ನಾಯಕ ಶುಭಮನ್ ಗಿಲ್ ನಾಯಕತ್ವದ ತಂಡವು ಇದೇ 20ರಿಂದ ಇಂಗ್ಲೆಂಡ್‌ನಲ್ಲಿ ಐದು ಪಂದ್ಯಗಳ ಟೆಸ್ಟ್ ಸರಣಿ ಆಡಲು ಸಿದ್ಧವಾಗಿದೆ. ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ ಮತ್ತು ಆರ್. ಅಶ್ವಿನ್ ನಿವೃತ್ತಿ ಘೋಷಿಸಿರುವ ಕಾರಣ ತಂಡದಲ್ಲಿ ಯುವ ಆಟಗಾರರಿಗೆ ಅವಕಾಶ ಸಿಕ್ಕಿದೆ. ತಮ್ಮ ಸಾಮರ್ಥ್ಯ ಸಾಬೀತು ಮಾಡುವುದರ ಜೊತೆಗೆ, 18 ವರ್ಷಗಳ ನಂತರ ಇಂಗ್ಲೆಂಡ್ ನೆಲದಲ್ಲಿ ಟೆಸ್ಟ್ ಸರಣಿ ಜಯದ ಕನಸು ನನಸು ಮಾಡಬೇಕಾದ ಗುರಿಯೂ ಅವರ ಮುಂದಿದೆ.

ಕನ್ನಡಿಗ ಕೆ.ಎಲ್. ರಾಹುಲ್, ಎಂಟು ವರ್ಷಗಳ ನಂತರ ಭಾರತ ತಂಡಕ್ಕೆ ಮರಳಿರುವ ಕರುಣ್ ನಾಯರ್, ಗಾಯದ ಸಮಸ್ಯೆಯ ಮಧ್ಯೆಯೂ ಬ್ಯಾಟರ್‌ಗಳಿಗೆ ದುಃಸ್ವಪ್ನವಾಗಿರುವ ಜಸ್‌ಪ್ರೀತ್ ಬೂಮ್ರಾ, ವೃತ್ತಿಜೀವನದ ಸಂಧ್ಯಾಕಾಲದಲ್ಲಿರುವ ರವೀಂದ್ರ ಜಡೇಜ ಅವರು ತಂಡದಲ್ಲಿರುವ ಹೆಚ್ಚು ಅನುಭವಿ ಆಟಗಾರರು. ಯಶಸ್ವಿ ಜೈಸ್ವಾಲ್, ಸಾಯಿ ಸುದರ್ಶನ್, ಧ್ರುವ್ ಜುರೇಲ್, ಅಭಿಮನ್ಯು ಈಶ್ವರನ್, ರಿಷಭ್ ಪಂತ್, ನಿತೀಶ್ ರೆಡ್ಡಿ ಹಾಗೂ ಪ್ರಸಿದ್ಧಕೃಷ್ಣ ಅವರಿಗೆ ತಾವು ದೂರ ಓಟದ ಕುದುರೆಗಳು ಎಂಬುದನ್ನು ಸಾಬೀತುಪಡಿಸುವ ಸಂದರ್ಭವೂ ಇದಾಗಿದೆ. ಇಂಗ್ಲೆಂಡ್ ನೆಲದಲ್ಲಿ ಭಾರತ ಇದುವರೆಗೆ 3 ಬಾರಿ ಮಾತ್ರ ಸರಣಿ ಗೆಲುವಿನ ಸಿಹಿ ಉಂಡಿದೆ.

ಇಂಗ್ಲೆಂಡ್‌ನಲ್ಲಿ ಆಡುವ ಭಾರತ ತಂಡವು ಎದುರಾಳಿ ಬಳಗದ 11 ಆಟಗಾರರ ಸವಾಲಿನ ಜೊತೆಗೆ ಅಲ್ಲಿಯ ಹವಾಮಾನ, ಕಟುವಾದ ಮೂದಲಿಕೆ, ವ್ಯಂಗ್ಯಗಳ ಮೂಲಕ ಕೆಣಕುವ ಪ್ರೇಕ್ಷಕರು, ಕಾಲೆಳೆಯುವ ಸ್ಥಳೀಯ ಮಾಧ್ಯಮಗಳೆಲ್ಲವನ್ನೂ ಎದುರಿಸಬೇಕು. ಅದಕ್ಕಾಗಿ ಗಟ್ಟಿಯಾದ ಮನೋಬಲ ಬೇಕು. ಇವೆಲ್ಲದರ ಪರಿಚಯ ಇರುವ ಮುಖ್ಯ ಕೋಚ್ ಗೌತಮ್ ಗಂಭೀರ್ ಅವರಿಗೂ ಈ ಸರಣಿ ‘ಟೆಸ್ಟ್’ ಆಗಲಿದೆ ಎಂಬುದರಲ್ಲಿ ಅನುಮಾನವೇ ಇಲ್ಲ. ಸ್ವಾತಂತ್ರ್ಯಪೂರ್ವದಲ್ಲಿಯೇ ಇಂಗ್ಲಿಷರಿಗೆ ಕ್ರಿಕೆಟ್‌ನಲ್ಲಿ ‘ಪಾಠ’ ಕಲಿಸಿದ ದಲಿತ ಆಟಗಾರ ಬಾಲೂ ಪಲ್ವಂಕರ್, ಇಂಗ್ಲೆಂಡ್, ಆಸ್ಟ್ರೇಲಿಯಾ ತಂಡಗಳ ವಿರುದ್ಧ ದಿಟ್ಟವಾಗಿ ಆಡುವುದು ಹೇಗೆಂದು ತೋರಿಸಿಕೊಟ್ಟ ಕರ್ನಲ್ ಸಿ.ಕೆ. ನಾಯ್ಡು, ಮನ್ಸೂರ್ ಅಲಿಖಾನ್ ಪಟೌಡಿ, ಅಜಿತ್ ವಾಡೇಕರ್, ಬಿ.ಎಸ್. ಚಂದ್ರಶೇಖರ್, ಎರ್ರಪಳ್ಳಿ ಪ್ರಸನ್ನ, ಕಪಿಲ್ ದೇವ್, ಮಹೇಂದ್ರಸಿಂಗ್ ಧೋನಿ, ವಿರಾಟ್ ಕೊಹ್ಲಿ ಹಾಗೂ ರೋಹಿತ್ ಶರ್ಮಾ ಅವರೆಲ್ಲರ ಯಶೋಗಾಥೆಗಳೂ ಭಾರತಕ್ಕೆ ದಾರಿದೀಪವಾಗಬಲ್ಲವು.

ಇಲ್ಲಿಯವರೆಗೆ ಆಗಿರುವ ಮೂರು ಆವೃತ್ತಿಗಳ ಪೈಕಿ ಮೊದಲೆರಡರಲ್ಲಿ ಭಾರತ ರನ್ನರ್ಸ್ ಅಪ್ ಆಗಿತ್ತು. ಅದರಲ್ಲಿ ಒಂದು ಸಲ ವಿರಾಟ್ ಮತ್ತು ಮತ್ತೊಂದು ಬಾರಿ ರೋಹಿತ್ ನಾಯಕರಾಗಿದ್ದರು. ಹೋದ ಸಲ ರೋಹಿತ್ ನಾಯಕತ್ವ ತಂಡವು ಫೈನಲ್ ಪ್ರವೇಶಿಸುವಲ್ಲಿ ವಿಫಲವಾಗಿತ್ತು. ಇದೀಗ ಡಬ್ಲ್ಯುಟಿಸಿ ನಾಲ್ಕನೇ ಆವೃತ್ತಿಯಲ್ಲಿ ಭಾರತ ಆಡುತ್ತಿರುವ ಮೊದಲ ಸರಣಿ ಇದಾಗಿದ್ದು, ಐದು ಟೆಸ್ಟ್‌ಗಳನ್ನು ಆಡಲಿದೆ. ಆ ಮೂರು ಆವೃತ್ತಿಗಳಲ್ಲಿ ಆಡಿರುವ ಅನುಭವ ಗಿಲ್ ಅವರಿಗೆ ಇದೆ.

ಉಪನಾಯಕ ರಿಷಭ್ ಪಂತ್ ಅವರಿಗೆ ವಿದೇಶಿ ನೆಲದಲ್ಲಿ ಮಿಂಚಿದ ಚೆಂದದ ನೆನಪುಗಳಿವೆ. ಬೂಮ್ರಾ ಎಂಬ ‘ವಿಕೆಟ್ ಯಂತ್ರದ’ ಬಲ ತಂಡಕ್ಕಿದೆ. ಹೋದ ವರ್ಷ ಆಸ್ಟ್ರೇಲಿಯಾದಲ್ಲಿ ಮಿಂಚಿದ್ದ ನಿತೀಶ್ ಕುಮಾರ್ ರೆಡ್ಡಿ, ವೇಗಿ ಪ್ರಸಿದ್ಧಕೃಷ್ಣ ಮತ್ತು ಸ್ಪಿನ್ನರ್ ಕುಲದೀಪ್ ಯಾದವ್ ಅವರಿಗೆ ತಮ್ಮ ಪ್ರತಿಭೆಯನ್ನು ಪಣಕ್ಕೊಡ್ಡುವ ಸುವರ್ಣಾವಕಾಶವಾಗಿದೆ. ಉತ್ತಮ ಆರಂಭ ಯಶಸ್ವಿ ಮುಕ್ತಾಯಕ್ಕೆ ಮುನ್ನುಡಿಯಾಗಬಲ್ಲದು.

ವಾಚಕರ ವಾಣಿ

ಹಿಂದಿ ಹೇರಿಕೆ ಬೇಡ

ಮಹಾರಾಷ್ಟ್ರದಲ್ಲಿ 1ರಿಂದ 5ನೇ ತರಗತಿವರೆಗೆ ಹಿಂದಿ ಕಲಿಕೆಯನ್ನು ಕಡ್ಡಾಯ ಮಾಡಿದ್ದರ ವಿರುದ್ಧ ಪ್ರತಿಭಟನೆ ನಡೆಯುತ್ತಿದೆ. ಗುಜರಾತ್, ಅಸ್ಸಾಂನಲ್ಲಿ ಇಲ್ಲದ ಕಡ್ಡಾಯ ಹಿಂದಿ ಕಲಿಕೆಯು ಮಹಾರಾಷ್ಟ್ರದಲ್ಲಿ ಏಕೆ ಎನ್ನುವುದು ಅಲ್ಲಿನವರ ಪ್ರಶ್ನೆ. ಹಾಗೆ ನೋಡಿದರೆ ಮರಾಠಿ ಮತ್ತು ಹಿಂದಿ ಲಿಪಿ ಎರಡೂ ಒಂದೇ. ಅದು ದೇವನಾಗರಿ. ಆದರೆ, ಬರೆಯುವಲ್ಲಿ ಮತ್ತು ಮಾತನಾಡುವಲ್ಲಿ ಬಹಳಷ್ಟು ವ್ಯತ್ಯಾಸವಿದೆ. ಇದು ಮಕ್ಕಳಿಗೆ ಗೊಂದಲ ಉಂಟು ಮಾಡುತ್ತದೆ ಎಂಬುದು ಮರಾಠಿಗರ ಆಕ್ಷೇಪ.

ಪ್ರತಿಭಟನೆ ತೀವ್ರಗೊಂಡಿದ್ದರಿಂದ ಎಚ್ಚೆತ್ತುಕೊಂಡ ಅಲ್ಲಿನ ಸರ್ಕಾರ ಮೂರನೇ ಭಾಷೆಯಾಗಿ ಹಿಂದಿ ಕಲಿಕೆ ಕಡ್ಡಾಯವಲ್ಲ. ಭಾರತದ ಯಾವುದೇ ಭಾಷೆಯನ್ನು ಆಯ್ಕೆ ಮಾಡಿಕೊಳ್ಳಬಹುದಾಗಿದೆ ಎಂದು ಹೊಸ ಆದೇಶ ಹೊರಡಿಸಿದೆ.

ಕನ್ನಡಕ್ಕೆ ಸಂಪೂರ್ಣ ಭಿನ್ನವಾದ ಹಿಂದಿಯನ್ನು ರಾಜ್ಯದ ಶಾಲೆಗಳಲ್ಲಿ ಕಲಿಸಲಾಗುತ್ತಿದೆ. ಇದು ಮಕ್ಕಳ ಒಟ್ಟಾರೆ ಕಲಿಕೆ ಮೇಲೆ ಪರಿಣಾಮ ಬೀರುತ್ತಿದೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಹಿಂದಿ ವಿಷಯದಲ್ಲಿ ಹಲವು ವಿದ್ಯಾರ್ಥಿಗಳು ಅನುತ್ತೀರ್ಣರಾಗುತ್ತಿದ್ದಾರೆ. ಸರ್ಕಾರವು ದ್ವಿಭಾಷಾ ಸೂತ್ರ ಅಳವಡಿಸಿಕೊಂಡು ಕನ್ನಡ ಮತ್ತು ಇಂಗ್ಲಿಷ್ ಕಲಿಕೆಗಷ್ಟೇ ಒತ್ತು ನೀಡುವುದು ಸಮಂಜಸ ಎನಿಸುತ್ತದೆ.

ವೆಂಕಟೇಶ ಮಾಚಕನೂರ, ಧಾರವಾಡ

ಲೋಕಾಯುಕ್ತ: ವಿಶ್ವಾಸಾರ್ಹತೆ ಉಳಿಸಿ

ಲೋಕಾಯುಕ್ತ ಅಧಿಕಾರಿಗಳ ಹೆಸರಿನಲ್ಲಿ ನಿವೃತ್ತ ಹೆಡ್ ಕಾನ್‌ಸ್ಟೆಬಲ್ ಮತ್ತು ಪೊಲೀಸ್ ವರಿಷ್ಠಾಧಿಕಾರಿಯೊಬ್ಬರು, ಸರ್ಕಾರಿ ಅಧಿಕಾರಿಗಳನ್ನು ಬೆದರಿಸಿ ಕೋಟ್ಯಂತರ ರೂಪಾಯಿ ವಸೂಲಿ ಮಾಡಿರುವುದು ವರದಿಯಾಗಿದೆ (ಪ್ರ.ವಾ., ಜೂನ್ 18). ಈ ಪ್ರಕರಣವು ಬೇಲಿಯೇ ಎದ್ದು ಹೊಲ ಮೇಯ್ದ ಗಾದೆಯನ್ನು ನೆನಪಿಸುತ್ತದೆ. ಐಪಿಎಸ್ ಅಧಿಕಾರಿಯೇ ಇಂತಹ ಕೃತ್ಯಕ್ಕೆ ಇಳಿದರೆ ಜನಸಾಮಾನ್ಯರು ನ್ಯಾಯಕ್ಕಾಗಿ ಯಾರ ಮೊರೆ ಹೋಗಬೇಕು ಎಂಬುದು ಅರ್ಥವಾಗುವುದಿಲ್ಲ. ಈ ಪ್ರಕರಣವು ಲೋಕಾಯುಕ್ತ ಸಂಸ್ಥೆಯಲ್ಲಿ ಎಲ್ಲವೂ ಸರಿಯಿಲ್ಲ ಎಂಬುದರತ್ತ ಬೊಟ್ಟು ಮಾಡುತ್ತದೆ. ತನ್ನ ವಿಶ್ವಾಸಾರ್ಹತೆ ಉಳಿಸಿಕೊಳ್ಳಲು ತನ್ನನ್ನು ತಾನು ಮೊದಲು ಸ್ವಚ್ಛಗೊಳಿಸಿಕೊಳ್ಳುವತ್ತ ಹೆಜ್ಜೆ ಇಡುವ ತುರ್ತಿದೆ.

ತಿಪ್ಪೂರು ಪುಟ್ಟೇಗೌಡ, ಬೆಂಗಳೂರು

ಕೆಎಂಎಫ್ ಧೋರಣೆ ಸರಿಯಲ್ಲ

ಬೆಂಗಳೂರು ಮೆಟ್ರೊ ರೈಲು ನಿಗಮವು (ಬಿಎಂಆರ್‌ಸಿಎಲ್) ‘ನಮ್ಮ ಮೆಟ್ರೊ’ದ 10 ನಿಲ್ದಾಣಗಳಲ್ಲಿ ಹಾಲಿನ ಉತ್ಪನ್ನಗಳ ಮಾರಾಟಕ್ಕೆ ಮಳಿಗೆ ತೆರೆಯಲು ಜಾಗತಿಕ ಮಟ್ಟದಲ್ಲಿ ಟೆಂಡರ್ ಕರೆದಿತ್ತು. ಗುಜರಾತ್ ಸಹಕಾರ ಹಾಲು ಮಾರುಕಟ್ಟೆ ಒಕ್ಕೂಟವು (ಜಿಸಿಎಂಎಂಎಫ್) ಈ ಟೆಂಡರ್ ಪಡೆದಿದೆ. ಒಕ್ಕೂಟವು ಈಗಾಗಲೇ ಕೆಲವು ನಿಲ್ದಾಣಗಳಲ್ಲಿ ತನ್ನ ‘ಅಮೂಲ್’ ಬ್ರ್ಯಾಂಡ್‌ನ ಮಳಿಗೆ ತೆರೆಯಲು ಸಿದ್ಧತೆ ನಡೆಸಿದೆ. ಆದರೆ, ಟೆಂಡರ್ ಪ್ರಕ್ರಿಯೆಯಲ್ಲಿ ಕೆಎಂಎಫ್ ಭಾಗವಹಿಸಿರಲಿಲ್ಲ ಎಂಬ ಮಾತು ನಿಜವೇ ಆಗಿದ್ದರೆ ಅದು ಅತ್ಯಂತ ನಿರ್ಲಕ್ಷ್ಯದ ಧೋರಣೆ ಎನಿಸಿಕೊಳ್ಳುತ್ತದೆ. ಬ್ರ್ಯಾಂಡ್ ಮೌಲ್ಯ ವಿಸ್ತರಿಸಿಕೊಳ್ಳುವಲ್ಲಿ ಕೆಎಂಎಫ್ ಆಡಳಿತ ತೋರಿರುವ ಈ ನಿರ್ಲಕ್ಷ್ಯ ಅಕ್ಷಮ್ಯವಾದುದು.

ಜಿ.ಪಿ. ದಯಾನಂದ, ಬೆಂಗಳೂರು

ಅತಿಥಿ ಶಿಕ್ಷಕರ ನೇಮಕ ಗೊಂದಲ

ರಾಜ್ಯ ಸರ್ಕಾರವು ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕರ ಕೊರತೆ ನೀಗಿಸಲು ಪ್ರಾಥಮಿಕ ಶಾಲೆಗಳಿಗೆ 34,000 ಹಾಗೂ ಪ್ರೌಢಶಾಲೆಗಳಿಗೆ 6,000 ಅತಿಥಿ ಶಿಕ್ಷಕರ ನೇಮಕಕ್ಕೆ ಆದೇಶ ಹೊರಡಿಸಿದೆ. ಆದರೆ, ಶಿಕ್ಷಕರ ನೇಮಕವು ವಿಷಯವಾರು ಹಾಗೂ ಮೆರಿಟ್ ಆಧಾರದ ಮೇಲೆ ನಡೆಯುತ್ತಿಲ್ಲ. ಸರ್ಕಾರದ ಆದೇಶವನ್ನು ಬಿಇಒಗಳು ಗಾಳಿಗೆ ತೂರಿ ನೇಮಕ ಮಾಡುತ್ತಿದ್ದಾರೆ. ಶಾಸಕರು ಮೂಗು ತೂರಿಸುತ್ತಿದ್ದಾರೆ ಎಂಬ ಆರೋಪಗಳಿವೆ. ಈ ಬೆಳವಣಿಗೆಯು ಮುಖ್ಯ ಶಿಕ್ಷಕರಿಗೆ ನುಂಗಲಾರದ ತುತ್ತಾಗಿದೆ. ಮುಖ್ಯಮಂತ್ರಿ ಮಧ್ಯಪ್ರವೇಶಿಸಿ ಈ ಹಸ್ತಕ್ಷೇಪಕ್ಕೆ ಕಡಿವಾಣ ಹಾಕಬೇಕಿದೆ. ಮೆರಿಟ್ ಆಧಾರದ ಮೇಲೆ ನೇಮಕಕ್ಕೆ ಕ್ರಮ ವಹಿಸಬೇಕಿದೆ.

ಮಹಾಂತೇಶ್, ಧಾರವಾಡ

ಪ್ಲಾಸ್ಟಿಕ್ ಬಳಕೆಗೆ ಕಡಿವಾಣ ಹಾಕಿ

ರಾಜ್ಯದಲ್ಲಿ ಪ್ಲಾಸ್ಟಿಕ್ ಬಾಟಲ್ ತ್ಯಾಜ್ಯ ನಿಯಂತ್ರಣಕ್ಕಾಗಿ ಬಾಟಲ್‌ಗಳ ಉತ್ಪಾದಕರು ಮರು ಖರೀದಿಸುವ ಹೊಣೆಗಾರಿಕೆ ನಿರ್ವಹಿಸುತ್ತಿರುವ ಬಗ್ಗೆ ನಿಗಾ ವಹಿಸಲು ಜಿಲ್ಲಾ ಮಟ್ಟದ ಮೇಲ್ವಿಚಾರಣಾ ಸಮಿತಿ ರಚನೆಗೆ ಸರ್ಕಾರ ಮುಂದಾಗಿರುವುದು ಸ್ವಾಗತಾರ್ಹ (ಪ್ರ.ವಾ., ಜೂನ್ 18). ಪ್ಲಾಸ್ಟಿಕ್‌ನಿಂದ ಅನೇಕ ಪ್ರಯೋಜನಗಳಿವೆ. ಇದರಿಂದ ಬದುಕು ಸುಲಭವಾಗಿರುವುದು ನಿಜ. ಆದರೆ, ಇದನ್ನು ಸರಿಯಾಗಿ ನಿರ್ವಹಣೆ ಮಾಡದಿದ್ದರೆ ಪರಿಸರಕ್ಕೆ ಮಾರಕವಾಗಲಿದೆ.

ಮೊದಲಿಗೆ ನಾವೇ ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆ ಮಾಡಬೇಕಿದೆ. ಗ್ರಾಮೀಣ ಹಾಗೂ ನಗರ ಪ್ರದೇಶದಲ್ಲಿ ಈ ಬಗ್ಗೆ ಅರಿವು ಮೂಡಿಸಬೇಕಿದೆ.

ಮಹೇಂದ್ರ ಟಿ.ಎಂ., ಶಂಕರಘಟ್ಟ

ಸುಳ್ಳು ಸುದ್ದಿಗೆ ಕಡಿವಾಣ ಬೇಕು

ಇತ್ತೀಚಿನ ದಿನಗಳಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಸುದ್ದಿ ಹರಡುವಿಕೆ ಉಲ್ಬಣಿಸಿದೆ. ರಾಜಕಾರಣಿಗಳ ಅವಹೇಳನ ಮತ್ತು ಕೋಮು ಸೌಹಾರ್ದ ಹಾಳು ಮಾಡುವ ಪೋಸ್ಟ್‌ಗಳ ಸಂಖ್ಯೆ ಹೆಚ್ಚಾಗುತ್ತಿದೆ. ಇದಕ್ಕಾಗಿ ಜಾಲ ತಾಣಿಗರು ಕೃತಕ ಬುದ್ಧಿಮತ್ತೆ ತಂತ್ರಜ್ಞಾನವನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಸುಳ್ಳು ಸುದ್ದಿಗಳಿಗೆ ಕಡಿವಾಣ ಹಾಕುವುದಾಗಿ ಈ ಹಿಂದೆ ರಾಜ್ಯ ಸರ್ಕಾರ ಹೇಳಿತ್ತು. ಸಾಮಾಜಿಕ ಮಾಧ್ಯಮಗಳಲ್ಲಿ ಅಪಪ್ರಚಾರ ಮಾಡುವವರ ವಿರುದ್ಧ ಪೊಲೀಸರು ಸ್ವಯಂ ಪ್ರೇರಿತವಾಗಿ ದೂರು ದಾಖಲಿಸಿಕೊಂಡು ಕಾನೂನು ಕ್ರಮ ಕೈಗೊಳ್ಳಬೇಕಿದೆ.

ಜಿ. ನಾಗೇಂದ್ರ ಕಾವೂರು, ಸಂಡೂರು

ಚುರುಮುರಿ



ಎಲ್ಲೆಲ್ಲೂ ಗುಂಡಿ!

• ಚಂದ್ರಕಾಂತ ವಡ್ಡು

‘ನನ್ನ ಮಗ ಬೆಳಿಗ್ಗೆ ಕ್ಯಾಮೆರಾ ಹಿಡಿದುಕೊಂಡು ಹೊರಗೆ ಹೋದ...’, ತಿಂಗಳೇಶನ ಮಾತಿನಲ್ಲಿ ಪುತ್ರನ ಬಗ್ಗೆ ದೂರು ಇತ್ತೋ, ಹೆಮ್ಮೆ ಇತ್ತೋ ಗೊತ್ತಾಗಲಿಲ್ಲ.

‘ಸೂರ್ಯೋದಯದ ಸೀನು ಸೆರೆ ಹಿಡಿಯಲು ಹೋಗಿರ್ತಾನೆ’.

‘ಅಪ್ಪನಿಗೆ ಕ್ಯಾಮೆರಾ ತೋರಿಸಿ ಹೊಸಕೋಟೆ ಬಿರಿಯಾನಿ ಬಾರಿಸಲು ಹೋಗಿರಬಹುದು...’

ಬೈಟು ಬಳಗದವರು ಸಿಪ್ಪು ಹೀರುತ್ತಾ ಹೇಳಿದರು. ಕಪ್ಪೊಳಗೆ ಅರ್ಧ ಕಾಫಿ, ಕಣ್ಣೊಳಗೆ ‘ಕಪ್ಪು ನಮ್ಮದೇ’ ಎಂಬ ಗರ್ವ! ‘ಎಲ್ಲೆಲ್ಲೂ ಗುಂಡಿ ಫೋಟೊ ತೆಗೆಯಲು ಹೋಗಿರಬಹುದಲ್ಲವೇ...?’

‘ಅಯ್ಯೋ... ಬೆಂಗಳೂರಿನ ರಸ್ತೆಗುಂಡಿಗಳ ಕಥೆ ಒತ್ತಟ್ಟಿಗಿರಲಿ, ಎಷ್ಟೋ ಕೋಟಿ ತೆರಿಗೆ ಹಣ ತಿಂದು ಅವು ಮುಚ್ಚಿಕೊಳ್ಳುತ್ತವೆ. ರಾಜಕಾರಣಿಗಳು ತಮ್ಮ ಎದುರಾಳಿಗಳನ್ನು ಬೀಳಿಸಲು ತೋಡುವ ಗುಂಡಿಗಳು ಒಂದಾ ಎರಡಾ...’

‘ಅದಕ್ಕೆಂದೇ ನಮ್ಮ ಬಂಡೆಕುಮಾರ, ಹೈಕಮಾಂಡಿನ ಅಶ್ವಶಕ್ತಿಗಿಂತ ಲೋ–ಕಮಾಂಡಿನ ಜನಶಕ್ತಿ ಮಿಗಿಲು ಎಂದು ಸೈಕಲ್ ಏರಿದ್ದಾರೆ’.

‘ವಿಧಾನಸೌಧದ ಗುಂಡಿಗಳಿಲ್ಲದ ಆವರಣದಲ್ಲಿ ಸೈಕಲ್ ತುಳಿಯೋದು ಅದ್ಯಾವ ದೊಡ್ಡ ಸಾಹಸ...?’

‘ವಿಧಾನಸೌಧದ ರಸ್ತೆಯಲ್ಲಿ ತೋಡಿದ ಗುಂಡಿಗಳು ಮಾಮೂಲು ರಸ್ತೆಗುಂಡಿಗಳಂತೆ ಕಣ್ಣಿಗೆ ಕಾಣುವುದಿಲ್ಲ, ಕ್ಯಾಮೆರಾ ಕ್ಲಿಕ್ಕಿಗೂ ಸಿಕ್ಕುವುದಿಲ್ಲ. ಅವುಗಳಿಗೆ ಯಾರನ್ನು ಎಲ್ಲಿ ಯಾವಾಗ ಹೇಗೆ ಕೆಡವಬೇಕೆಂಬ ಮರ್ಮ ತಿಳಿದಿರುತ್ತದೆ’.

‘ಹೌದು... ಬೀಳಿಸುವ ಗುಂಡಿ ಯಾವ ರೂಪದಲ್ಲೂ ಎದುರಾಗಬಹುದು. ಕೈಬೀಸುತ್ತಾ ವಿಧಾನಸೌಧ ಸುತ್ತ ಪೆಡಲ್ ತುಳಿದ ಬಂಡೆಕುಮಾರ ಇನ್ನೇನು ಮೆಟ್ಟಿಲ ಮೇಲೆ ಕಾಲಿಟ್ಟು ನಿಲ್ಲಬೇಕು ಎನ್ನುವಾಗ ಕುಸಿಯಲಿಲ್ಲವೇ?’

‘ಕೆಲವೊಮ್ಮೆ ತಾವು ತೋಡಿದ ಗುಂಡಿಯಲ್ಲಿ ತಾವೇ ಬೀಳುವುದುಂಟು, ಲೋಕಾಯುಕ್ತ ಎಸ್‌.ಪಿ. ಬಿದ್ದಂತೆ’.

‘ಸಾಹಿತಿಗಳ ಸರ್ವನಾಶಕ್ಕೆ ಕೈಗೊಂಡಿರುವ ಮಹಾಕಾಳಿ ಹೋಮದಲ್ಲಿ ಗೋಚರ–ಅಗೋಚರ ಗುಂಡಿಗಳ ವಿನಾಶವನ್ನೂ ಸೇರಿಸಬಹುದೇ...?’ ತಿಂಗಳೇಶ ಮುಗಿಸಿದ.

ಸಂಗತ

ವಿದ್ಯಾರ್ಥಿ ಜೀವನ, ಆಗಲಿ ನಂದನ

ಶಿಕ್ಷಣ ಹಾಗೂ ಬದುಕಿನ ಅರ್ಥವೇ ತಿಳಿಯದಂತೆ ವಿದ್ಯಾರ್ಥಿಗಳನ್ನು ರೂಪಿಸುತ್ತಿದ್ದೇವೆ. ಮೇಲ್ವಿಚಾರಣೆ ಇಲ್ಲದ ಸ್ವಾತಂತ್ರ್ಯ ಅಪಾಯಕಾರಿ ಎನ್ನುವುದನ್ನು ಮರೆತಿದ್ದೇವೆ

• ಎಲ್ಲಪ್ಪ ಜಿ.

ಶಿಕ್ಷಣದ ಮಹತ್ವ ಕುರಿತು ಯೋಚಿಸುವಾಗ, ಒಂದೇ ಕಾಲೇಜಿನಲ್ಲಿ ನಡೆದ ಎರಡು ಪ್ರಸಂಗಗಳು ನೆನಪಾಗುತ್ತವೆ. ಅಂತಿಮ ಪದವಿ ಪರೀಕ್ಷೆಯ ಕೊನೆಯ ದಿನ, ಪರೀಕ್ಷೆ ಪ್ರಾರಂಭವಾಗುವ ಮುಂಚೆ ವಿದ್ಯಾರ್ಥಿಯೊಬ್ಬ ಬಣ್ಣದ ಪುಡಿಗಳ ಪ್ಯಾಕೆಟ್‌ಗಳನ್ನು ತಂದು ಕಾಲೇಜಿನ ಜವಾನನ ಕೈಯಲ್ಲಿ ಕೊಟ್ಟ. ಕುತೂಹಲದಿಂದ ವಿಚಾರಿಸಿದೆ. ‘ಪರೀಕ್ಷೆ ಮುಗಿದ ನಂತರ ವಿದ್ಯಾರ್ಥಿಗಳು ಬಣ್ಣ ಹಚ್ಚಿಕೊಂಡು ಖುಷಿಪಡುತ್ತಾರೆ’ ಎನ್ನುವ ವಿಷಯ ತಿಳಿಯಿತು. ಸಂಭ್ರಮದ ಆಚರಣೆಯ ಹೊಸ ಸ್ವರೂಪ ಎಂದುಕೊಂಡೆ.

ಪರೀಕ್ಷೆ ಮುಗಿದ ಸೂಚಕವಾಗಿ ಫೈನಲ್ ಬೆಲ್ ಆಗುತ್ತಿದ್ದಂತೆ, ವಿದ್ಯಾರ್ಥಿಗಳು ಜೇನುಹುಳುಗಳಂತೆ ಕಾಲೇಜು ಆವರಣದಲ್ಲಿ ಸೇರಿಕೊಂಡರು. ಅಷ್ಟರಲ್ಲಿ, ಡಿಜೆ ವ್ಯವಸ್ಥೆಯ ಟ್ರ್ಯಾಕ್ಟರ್‌ವೊಂದು ಮೈದಾನಕ್ಕೆ ಬಂತು. ಹಾಡಿನ ಭೋರ್ಗರೆತ, ಪಟಾಕಿಗಳ ಸಿಡಿತ ಮೊಳಗತೊಡಗಿತು. ವಿದ್ಯಾರ್ಥಿಗಳು ಬಣ್ಣ ಎರಚುತ್ತಾ ಕುಣಿಯಲಾರಂಭಿಸಿದರು. ಟ್ರ್ಯಾಕ್ಟರ್ ಅನ್ನು ವೃತ್ತಾಕಾರವಾಗಿ ಓಡಿಸಿದರು. ಅದಾದ ನಂತರ, ತೆಂಗಿನಕಾಯಿ ಮೇಲೆ ಕರ್ಪೂರ ಹಚ್ಚಿ, ಕಾಲೇಜಿನ ಮೆಟ್ಟಿಲುಗಳಿಗೆ ಒಡೆಯುವುದರೊಂದಿಗೆ ವಿದ್ಯಾರ್ಥಿಗಳ ಸಂಭ್ರಮಾಚರಣೆ ಕೊನೆಗೊಂಡಿತು.

ವಿದ್ಯಾರ್ಥಿಗಳ ಸಂಭ್ರಮಾಚರಣೆ ಬಗ್ಗೆ ನಾನು ಅಚ್ಚರಿಯಲ್ಲಿ ಮುಳುಗಿದ್ದಾಗಲೇ ಮತ್ತೂ ಆಶ್ಚರ್ಯದ ವಿಷಯವೊಂದು ತಿಳಿಯಿತು. ಸಂಭ್ರಮದ ಕೇಂದ್ರವಾಗಿ, ಟ್ರ್ಯಾಕ್ಟರ್ ಚಾಲನೆ ಮಾಡಿದ ವಿದ್ಯಾರ್ಥಿಯು ತನ್ನ ನಾಲ್ಕನೇ ಸೆಮಿಸ್ಟರ್‌ನಲ್ಲಿ ಬಹುತೇಕ ವಿಷಯಗಳನ್ನು ಉಳಿಸಿಕೊಂಡಿದ್ದ. ಆ ವಿದ್ಯಾರ್ಥಿಯ ಪದವಿ ಇನ್ನೂ ಪೂರ್ಣಗೊಂಡಿರಲಿಲ್ಲ. ಆದರೂ ಪದವಿ ಪ್ರಮಾಣ ಪತ್ರ ಕೈಸೇರಿದಂತೆ ಆತನೇ ಎಲ್ಲರಿಗಿಂತ ಮುಂದಾಗಿ ಕುಣಿಯುತ್ತಿದ್ದ. ಕಾಲೇಜಿನಿಂದ ಹೊರಗೆ ಬಂದ ಕ್ಷಣದಿಂದ ಬದುಕಿನ ಬಹುದೊಡ್ಡ ಪರೀಕ್ಷೆಯೊಂದು ಶುರುವಾಗುತ್ತದೆ ಎನ್ನುವ ಅರಿವು ಕೆಲವು ವಿಷಯಗಳನ್ನು ಉಳಿಸಿಕೊಂಡ ವಿದ್ಯಾರ್ಥಿಗಾಗಲೀ, ಅವರ ಸಂಗಡಿಗರಿಗಾಗಲೀ ಇದ್ದಂತಿರಲಿಲ್ಲ.



ಮತ್ತೊಂದು ಪ್ರಸಂಗದಲ್ಲಿ, ಪರೀಕ್ಷೆ ಶುರುವಾಗುವ ಮುನ್ನ ಬಹುತೇಕ ವಿದ್ಯಾರ್ಥಿಗಳು ಮೊಬೈಲ್ ಫೋನ್ ನೋಡುತ್ತಾ ಕಾಲ ಕಳೆಯುತ್ತಿದ್ದರು. ಒಬ್ಬ ವಿದ್ಯಾರ್ಥಿ ಮಾತ್ರ ಗುಂಪಿನಿಂದ ದೂರವುಳಿದು ತನ್ನ ಪಾಡಿಗೆ ತಾನು ಓದಿನಲ್ಲಿ ಮಗ್ನನಾಗಿದ್ದ.

‘ನಿನ್ನ ಸ್ನೇಹಿತರೆಲ್ಲ ಆರಾಮಾಗಿದ್ದಾರೆ. ನೀನು ಮಾತ್ರ ಕೊನೆಯ ಕ್ಷಣದಲ್ಲೂ ಓದುತ್ತಿರುವೆ. ಯಾಕೆ?’ ಎಂದೆ. ಆ ಹುಡುಗ ಹೇಳಿದ: ‘ನನ್ನ ಇಂದಿನ ಸ್ಥಿತಿಗೆ ಓದುವುದರ ಹೊರತು ಬೇರೆ ದಾರಿ ಇಲ್ಲ. ಅವರಿಗೆ ನಾಳಿನ ಚಿಂತೆ ಇಲ್ಲ. ಅಪ್ಪ, ಅಮ್ಮ ಚೆನ್ನಾಗಿ ಸಂಪಾದನೆ ಮಾಡಿದ್ದು, ಅವರಲ್ಲಿ ಅನೇಕರು ಯಾರದೋ ಬಲವಂತಕ್ಕೆ ಕಾಲೇಜಿಗೆ ಬರುತ್ತಿದ್ದಾರೆ. ನನ್ನದು ಬಡ ಕುಟುಂಬ. ಓದಿನ ಮೂಲಕವೇ ನಾನು ನನ್ನ ಅಸ್ತಿತ್ವ ಕಂಡುಕೊಳ್ಳಬೇಕಿದೆ’. ಆ ವಿದ್ಯಾರ್ಥಿಯ ಮಾತು ಕೇಳಿದಾಗ, ಆತನಿಗೆ ಶಿಕ್ಷಣದ ಮಹತ್ವ ಹಾಗೂ ಬದುಕು ಅರ್ಥವಾಗಿದೆ ಎನ್ನಿಸಿತು. ಭಾಸನ ‘ಪ್ರತಿಮಾ ನಾಟಕ’ದಲ್ಲಿ ಒಂದು ಸನ್ನಿವೇಶ ಬರುತ್ತದೆ. ಭರತ ಪ್ರತಿಮಾ ಗೃಹವನ್ನು ಪ್ರವೇಶ ಮಾಡುವಾಗ, ಅಲ್ಲಿರುವ ಪ್ರತಿಮೆಗಳನ್ನು ಒಂದೊಂದಾಗಿ ನೋಡುತ್ತಾ ಬರುತ್ತಾನೆ. ದಶರಥನ ಪ್ರತಿಮೆ ಕಾಣಿಸಿದಾಗ, ಭರತ ಅದನ್ನು ಸ್ವಲ್ಪ ಹೊತ್ತು ದಿಟ್ಟಿಸಿ ನೋಡಿ, ‘ಬದುಕಿರುವವರ ಪ್ರತಿಮೆಗಳನ್ನೂ ಇಲ್ಲಿ ನಿಲ್ಲಿಸುತ್ತಾರೆಯೇ?’ ಎಂದು ಪ್ರತಿಮಾ ಗೃಹದಲ್ಲಿನ ನೌಕರನನ್ನು ಪ್ರಶ್ನಿಸುತ್ತಾನೆ. ‘ಇಲ್ಲ’ ಎನ್ನುವ ಉತ್ತರ ಅವನಿಗೆ ಎದುರಾಗುತ್ತದೆ. ಅಲ್ಲಿಯವರೆಗೂ ತಿಳಿಯದ ದಶರಥನ ಸಾವಿನ ವಿಷಯ ಭರತನಿಗೆ ತಿಳಿಯುವ ಸಂದರ್ಭವದು. ಮಗನಿಗೆ ತಂದೆಯ ಸಾವಿನ ವಿಷಯವನ್ನು ನೇರವಾಗಿ ಹೇಳದ ಆ ಪ್ರಸಂಗವನ್ನು ಕವಿ ಅಪೂರ್ವ ಕೌಶಲದಿಂದ ನಿಭಾಯಿಸಿದ್ದಾನೆ.

ಭಾಸನ ನಾಟಕದಲ್ಲಿನ ಪ್ರತಿಮೆಗಳಿಗೆ ಜೀವವಿಲ್ಲ. ನಮ್ಮ ವಿದ್ಯಾರ್ಥಿಗಳು ಜೀವಂತ ಪ್ರತಿಮೆಗಳು. ಸಮಾಜ ಎನ್ನುವ ಪ್ರತಿಮಾ ಗೃಹದಲ್ಲಿ ವಿದ್ಯಾರ್ಥಿಗಳು ಸೃಜನಶೀಲವಾಗಿ ತಮ್ಮ ಅಸ್ತಿತ್ವ ಕಂಡುಕೊಳ್ಳಬೇಕಾಗಿದೆ. ಅವರ ಜೀವಂತಿಕೆ ಬಗ್ಗೆ ಸಮಾಜ ಪ್ರಶ್ನಿಸುವ ಪರಿಸ್ಥಿತಿ ಬರಬಾರದು. ಹಾಗಾದರೆ, ವಿದ್ಯಾರ್ಥಿಗಳನ್ನು ಜೀವಂತ ಪ್ರತಿಮೆಗಳನ್ನಾಗಿ ರೂಪಿಸುವವರು ಯಾರು? ಬೋಧಕರು, ಪೋಷಕರು ಹಾಗೂ ಸಮಾಜದಲ್ಲಿ ಭಾಸ ಕವಿಯ ಪಾತ್ರವನ್ನು ವಹಿಸುವವರು ಯಾರು? ವಿದ್ಯಾರ್ಥಿಗಳನ್ನು ಸೃಜನಶೀಲವಾಗಿ ರೂಪಿಸುವ ಹೊಣೆ ಹೊತ್ತವರು ಪರಸ್ಪರ ನಂಬಿಕೆ ಮತ್ತು ವಿಶ್ವಾಸದ ಕೊರತೆಯಲ್ಲಿ ಬದುಕುತ್ತಿದ್ದಾರೆ. ಕಾಲವನ್ನು ಆರೋಪಿಯನ್ನಾಗಿ ಮಾಡುವ ಮೂಲಕ ತಮ್ಮ ಹೊಣೆಗಾರಿಕೆಯಿಂದ ನುಣುಚಿಕೊಳ್ಳುತ್ತಿದ್ದಾರೆ.

ಮೊಬೈಲ್ ಫೋನ್ ವ್ಯಸನ ಮತ್ತು ಸ್ವಯಂ ಶಿಸ್ತಿನ ಕೊರತೆಯ ಕಾರಣದಿಂದಾಗಿ ವಿದ್ಯಾರ್ಥಿಗಳು ತಮ್ಮ ವಿದ್ಯಾರ್ಥಿ ಜೀವನದ ಉದ್ದೇಶವನ್ನೇ ಮರೆತಿದ್ದಾರೆ. ಈ ಮಕ್ಕಳು ಮೇಲ್ವಿಚಾರಣೆ ಇಲ್ಲದ ಅತಿಯಾದ ಸ್ವಾತಂತ್ರ್ಯದ ಫಲಾನುಭವಿಗಳು. ಮಹಾಭಾರತದ ಧೃತರಾಷ್ಟ್ರ ಮತ್ತು ಗಾಂಧಾರಿ ನಮ್ಮ ಪೋಷಕರಿಗೆ ಮಾದರಿ ಆಗಬಾರದು. ಹುಟ್ಟು ಕುರುಡನಾದ ಧೃತರಾಷ್ಟ್ರನನ್ನು ಕಂಡು ಗಾಂಧಾರಿಯು ಸ್ವಯಂ ಕುರುಡುತನ ಅನುಭವಿಸುತ್ತಾಳೆ. ಈ ಕುರುಡ ದಂಪತಿ ಮಕ್ಕಳ ಬೆಳವಣಿಗೆಯನ್ನೇ ಕಾಣದೆ, ಅವರನ್ನು ಮೇಲ್ವಿಚಾರಣೆ ಮಾಡದೆ ಸೋಲುತ್ತಾರೆ. ಈ ಪೌರಾಣಿಕ ಕಥನ ಚರಿತ್ರೆಯಲ್ಲಿ ಮತ್ತೆ ಮತ್ತೆ ಮರುಕಳಿಸಿದೆ, ವರ್ತಮಾನದಲ್ಲೂ ಜೀವಂತವಾಗಿದೆ.

‘ಕರಿಯನಿತ್ತಡೆ ಒಲ್ಲೆ, ಸಿರಿಯನಿತ್ತಡೆ ಒಲ್ಲೆ, ಹಿರಿದಪ್ಪ ರಾಜ್ಯವನಿತ್ತಡೆ ಒಲ್ಲೆ, ನಿಮ್ಮ ಶರಣರ ಸೂಳ್ನುಡಿಯ ಒಂದರಗಳಿಗೆ ಇತ್ತಡೆ ನಿಮ್ಮನಿತ್ತೆ ಕಾಣಾ ರಾಮನಾಥ!’ ಎನ್ನುವ ಜೇಡರ ದಾಸಿಮಯ್ಯನ ವಚನ ವಿದ್ಯಾರ್ಥಿಗಳಿಗೆ ದಾರಿದೀಪ ಆಗಬೇಕು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಮುಂಗಾರು ಪ್ರವಾಸ ಬೇಡ ದುಸ್ಸಾಹಸ

ರಾಜ್ಯದಲ್ಲಿ ಮುಂಗಾರು ಮಳೆ ಬಿರುಸು ಪಡೆದಿದೆ. ಸಮುದ್ರದಲ್ಲಿ ಅಲೆಗಳ ಉಬ್ಬರ ಹೆಚ್ಚಾಗಿದೆ. ಮಳೆಗಾಲದಲ್ಲಿ ಜೀವಕಳೆ ಪಡೆಯುವ ಜಲಪಾತಗಳು, ನದಿ, ಹಳ್ಳ, ತೊರೆಗಳು, ಅಬ್ಬರಿಸುವ ಸಮುದ್ರವನ್ನು ಕಣ್ತುಂಬಿಕೊಳ್ಳಲು ಪ್ರವಾಸಿಗರು, ಬೆಟ್ಟ ಹತ್ತುವುದಕ್ಕೆ ಚಾರಣಿಗರು ಬಯಸುವುದು ಸಾಮಾನ್ಯ. ಮಳೆಗಾಲದಲ್ಲಿ ಅಪಾಯಕಾರಿ ಪ್ರವಾಸಿ ತಾಣಗಳ ಭೇಟಿಗೆ ಸ್ಥಳೀಯ ಆಡಳಿತಗಳು ನಿರ್ಬಂಧ ವಿಧಿಸುತ್ತವೆ. ಹಾಗಿದ್ದರೂ, ಆಡಳಿತದ ಕಣ್ತಪ್ಪಿಸಿ ತಾಣಗಳಿಗೆ ಭೇಟಿ ಕೊಡುವವರು ಇದ್ದಾರೆ. ಮಳೆಗಾಲದಲ್ಲಿ ಪ್ರವಾಸ ಕೈಗೊಳ್ಳುವುದು ಸೂಕ್ತವೇ? ಪ್ರವಾಸ ಹೊರಟರೆ ವಹಿಸಬೇಕಾದ ಎಚ್ಚರಿಕೆಗಳೇನು? ವಿವರ ಇಲ್ಲಿದೆ

ಪ್ರಜಾವಾಣಿ ವಾರ್ತೆ

ಘಟನೆ 1: ಕೆಲವು ದಿನಗಳ ಹಿಂದೆ ಉಡುಪಿ ಜಿಲ್ಲೆಯ ಮರವಂತೆ ಬೀಚ್‌ಗೆ ಗೋವಾ ಮತ್ತು ಬೆಂಗಳೂರಿನಿಂದ ಬಂದಿದ್ದ ಪ್ರವಾಸಿಗರು ಸಮುದ್ರ ಅಲೆಗಳ ಸೆಳೆತಕ್ಕೆ ಸಿಲುಕಿದ್ದರು. ಜೀವರಕ್ಷಕ ಸಿಬ್ಬಂದಿ ಮತ್ತು ಸಾರ್ವಜನಿಕರ ನೆರವಿನಿಂದ ಅವರನ್ನು ರಕ್ಷಣೆ ಮಾಡಿದ್ದರು.

ಘಟನೆ 2: ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ಬಲ್ಲಾಳರಾಯನದುರ್ಗ ಮತ್ತು ಬಂಡಾಜೆ ಜಲಪಾತಕ್ಕೆ ಚಾರಣ ಹೋಗಿದ್ದ ಚಿತ್ರದುರ್ಗದಿಂದ ಬಂದಿದ್ದ 10 ವಿದ್ಯಾರ್ಥಿಗಳ ತಂಡವೊಂದು ಗೂಗಲ್ ಮ್ಯಾಪ್ ನಂಬಿ ಚಾರಣ ಹೊರಟು ಕಾಡಿನಲ್ಲಿ ದಾರಿ ತಪ್ಪಿತ್ತು. ಕೊನೆಗೆ ಪೊಲೀಸರು, ಅಗ್ನಿಶಾಮಕ, ಅರಣ್ಯ ಸಿಬ್ಬಂದಿ ಹಾಗೂ ಸ್ಥಳೀಯರು ಬಸವಳಿದಿದ್ದ ವಿದ್ಯಾರ್ಥಿಗಳನ್ನು ರಕ್ಷಿಸಿದ್ದರು.

ಘಟನೆ 3: ಕೊಡಗು ಜಿಲ್ಲೆಯ ಹಾರಂಗಿ ಜಲಾಶಯದಿಂದ ಹೆಚ್ಚಿನ ಪ್ರಮಾಣದಲ್ಲಿ ನೀರು ಬಿಟ್ಟಾಗ ಜಲಾಶಯದ ಕೆಳಭಾಗದ ಸೇತುವೆಯ ಮೇಲೆ ನೀರು ಹರಿಯುತ್ತಿತ್ತು. ಕಳೆದ ವರ್ಷ ಆಗಸ್ಟ್‌ನಲ್ಲಿ ಪ್ರವಾಸಿಗರೊಬ್ಬರು ಇಲ್ಲಿ ಸೆಲ್ಫಿ ತೆಗೆದುಕೊಳ್ಳುವಾಗ ಆಯತಪ್ಪಿ ನೀರಿಗೆ ಬಿದ್ದು ಮೃತಪಟ್ಟಿದ್ದರು.

ಘಟನೆ 4: ಇದು 2019ರಲ್ಲಿ ನಡೆದ ಘಟನೆ. ಭಾರಿ ಮಳೆಯಾಗುತ್ತಿದ್ದ ಆಗಸ್ಟ್ ತಿಂಗಳಲ್ಲಿ ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕಿನ ಕಲ್ಲತ್ತಿಗಿರಿ ಜಲಪಾತದ ಅಂಗಣದಲ್ಲಿರುವ ವೀರಭದ್ರ ದೇವಸ್ಥಾನಕ್ಕೆ ಸುಮಾರು 35 ಪ್ರವಾಸಿಗರು ತೆರಳಿದ್ದರು. ಮಳೆಯಿಂದಾಗಿ ಮೈದುಂಬಿದ್ದ ಜಲಪಾತವು ಏಕಾಏಕಿ ರೌದ್ರಾವತಾರ ತಾಳಿ ಭೋರ್ಗರೆಯಲು ಆರಂಭಿಸಿತು. ದೇವಾಲಯದಲ್ಲಿದ್ದ ಪ್ರವಾಸಿಗರು ಅಪಾಯದಲ್ಲಿ ಸಿಲುಕಿದ್ದರು. ನಂತರ ಸ್ಥಳೀಯರು ಅವರನ್ನು ರಕ್ಷಿಸಿದರು.



ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕಿನ ಕಲ್ಲತ್ತಿಗಿರಿ ಜಲಪಾತ ಪ್ರದೇಶದಲ್ಲಿ ಪ್ರವಾಸಿಗರ ದಂಡು

- ಇವು ಕೆಲವು ನಿದರ್ಶನಗಳಷ್ಟೆ. ಇಂತಹ ಹಲವು ಘಟನೆಗಳನ್ನು ಪಟ್ಟಿ ಮಾಡಬಹುದು.

ಈ ಅಂಕಿ ಅಂಶ ಗಮನಿಸಿ: ಕಾವೇರಿ ನದಿ ಹರಿಯುವ ಮಂಡ್ಯ ಜಿಲ್ಲೆಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ 'ಬಲಮುರಿ' ಮತ್ತು ಮಳವಳ್ಳಿ ತಾಲ್ಲೂಕಿನ 'ಮುತ್ತತ್ತಿ' ಪ್ರವಾಸಿ ತಾಣಗಳು ಮಳೆಗಾಲದಲ್ಲಿ 'ಸಾವಿನ ವಲಯ'ಗಳಾಗಿ ಅಪಾಯದ ಕರೆಗಂಟೆ ಬಾರಿಸುತ್ತಿವೆ. ಆರು ವರ್ಷಗಳಲ್ಲಿ ಬಲಮುರಿಯಲ್ಲಿ 32 ಮಂದಿ ಮತ್ತು ಮುತ್ತತ್ತಿ ಬಳಿಯ ಕಾವೇರಿ ನದಿಯಲ್ಲಿ 30 ಮಂದಿ ಮೃತಪಟ್ಟಿದ್ದಾರೆ. ಇವರಲ್ಲಿ ಯುವಜನರೇ ಹೆಚ್ಚಿದ್ದಾರೆ.

ಮಳೆಗಾಲದಲ್ಲಿ ಪ್ರವಾಸಿ ತಾಣಗಳಲ್ಲಿ ಅಪಾಯವನ್ನೂ ಲೆಕ್ಕಿಸದೆ ಪ್ರವಾಸಿಗರು ಮಾಡುವ ದುಸ್ಸಾಹಸವು ಅವರನ್ನು ಅಪಾಯಕ್ಕೆ ಸಿಲುಕಿಸುತ್ತಿದೆ. ಸೆಲ್ಫಿ ತೆಗೆಯುವ, ರೀಲ್ಸ್ ಮಾಡುವ ಹುಚ್ಚು, ಹಲವು ಸಂದರ್ಭಗಳಲ್ಲಿ ಪ್ರವಾಸಿಗರ ಜೀವವನ್ನು ಬಲಿ ತೆಗೆದುಕೊಳ್ಳುತ್ತಿದೆ.

ವಿಪರೀತ ಎನ್ನುವಷ್ಟು ಮಳೆ ಇದ್ದರೆ ಪ್ರವಾಸ/ಚಾರಣದ ಯೋಜನೆಯನ್ನೇ ಕೈಬಿಡುವುದು ಸೂಕ್ತ. ಅಪಾಯಕಾರಿ ಸ್ಥಳಗಳನ್ನು ಭೇಟಿ ನೀಡುವುದಕ್ಕೆ ಆಯ್ಕೆ ಮಾಡಿಕೊಳ್ಳಲೇ ಬಾರದು. ಒಂದು ವೇಳೆ ತೆರಳಿದರೂ ಸ್ಥಳೀಯ ಆಡಳಿತ ನೀಡುವ ಎಚ್ಚರಿಕೆಯನ್ನು ಪಾಲಿಸಬೇಕು ಎಂಬ ಸಲಹೆಯನ್ನು ನೀಡುತ್ತಾರೆ ಪ್ರವಾಸ ನಿರ್ವಾಹಕರು ಮತ್ತು ಪ್ರವಾಸ ಮಾರ್ಗದರ್ಶಕರು.

ಮಾಹಿತಿ: ವಿವಿಧ ಬ್ಯೂರೊಗಳಿಂದ



ಹಾಸನ ಜಿಲ್ಲೆ ಮೂಕನಮನೆ ಜಲಪಾತ ಪ್ರದೇಶದ ಬಂಡೆಯ ಮೇಲೆ ಪ್ರವಾಸಿಗರು ಕುಳಿತಿದ್ದರು. ಸದ್ಯ ಇಲ್ಲಿಗೆ ಪ್ರವಾಸಿಗರನ್ನು ನಿರ್ಬಂಧಿಸಲಾಗಿದೆ

ಗರಿಷ್ಠ ಎಚ್ಚರಿಕೆ ಬೇಕು



ಜಲಪಾತ, ನದಿ, ತೊರೆ ಝರಿಗಳು ಮೈತುಂಬಿದ ಸಂದರ್ಭದಲ್ಲಿ ಅದರ ಹತ್ತಿರ ಹೋಗುವುದು ಯಾವಾಗಲೂ ಅಪಾಯಕಾರಿ. ಮಳೆಗಾಲದಲ್ಲಿ ಬಹಳಷ್ಟು ಜಲಪಾತಗಳ ಭೇಟಿಗೆ ಜಿಲ್ಲಾಡಳಿತಗಳು ನಿರ್ಬಂಧ ವಿಧಿಸುತ್ತವೆ. ಮಳೆಗಾಲದಲ್ಲಿ ದೊಡ್ಡ ಬೆಟ್ಟ ಗುಡ್ಡಗಳ ಚಾರಣವೂ ಸುರಕ್ಷಿತವಲ್ಲ. ಸಮುದ್ರಗಳು ಕೂಡ ಪ್ರಕ್ಷುಬ್ಧವಾಗಿರುವುದರಿಂದ ಬೀಚ್‌ಗಳಿಗೆ ಭೇಟಿ ನೀಡಿದರೂ, ನೀರಿಗೆ ಇಳಿಯಲೇಬಾರದು. ನಮಗೆ ಹೆಚ್ಚು ಪರಿಚಿತವಲ್ಲದ ರಸ್ತೆಗಳಲ್ಲಿ ದ್ವಿಚಕ್ರ ವಾಹನಗಳಲ್ಲಿ ಸಂಚಾರ ಮಾಡುವುದು ಅಪಾಯಕಾರಿ. ಜಲಪಾತ, ಅಣೆಕಟ್ಟು, ಕೆರೆ ನದಿ ಸೇರಿದಂತೆ ಇತರ ಜಲಮೂಲಗಳಿಗೆ ಭೇಟಿ ನೀಡಲು ಅನುಮತಿ ಇದ್ದರೂ ಜನರು ದೂರದಿಂದ ನಿಂತುಕೊಂಡು ಅದರ ಸೌಂದರ್ಯವನ್ನು ಸವಿಯಬೇಕು. ಅಪಾಯಕಾರಿ ಸ್ಥಳಗಳಿಗೆ ಮಳೆಗಾಲದಲ್ಲಿ ಪ್ರವಾಸ ಹೋಗುವ ಯೋಜನೆಯನ್ನೇ ಹಾಕಿಕೊಳ್ಳಬಾರದು ಎಂಬುದು ನನ್ನ ಸಲಹೆ

ಪುಟ್ಟಹೊನ್ನೇಗೌಡ, ಬೆಂಗಳೂರಿನ ಚಾರಣ–ಸುತ್ತಾಟ ತಂಡದ ನಿರ್ವಾಹಕ

ಸುಂದರ, ಬಲು ಅಪಾಯಕರ



ಪಶ್ಚಿಮ ಘಟ್ಟ ಶ್ರೇಣಿಯ ಕಡಿದಾದ ಪ್ರದೇಶದಲ್ಲಿರುವ ಜಲಪಾತದಿಂದ ಸುಮಾರು 50 ಮೀ. ದೂರದವರೆಗೂ ನೀರು ಚಿಮ್ಮುತ್ತಿರುತ್ತದೆ. ಹಾಗಾಗಿ ಅಲ್ಲಿನ ಬಂಡೆಕಲ್ಲುಗಳು ಪಾಚಿಗಟ್ಟಿರುತ್ತವೆ. ಜಾರುವ ಬಂಡೆಕಲ್ಲುಗಳ ಮೇಲೆ ಕಾಲಿಡುವಾಗ ಬಹಳ ಎಚ್ಚರ ಬೇಕು. ಸ್ಥಳೀಯರಿಗೆ ಈ ಅಪಾಯದ ಅಂದಾಜು ಇರುತ್ತದೆ. ದೂರದ ಊರುಗಳಿಂದ ಬರುವ ಪ್ರವಾಸಿಗರು ಧುಮ್ಮಿಕ್ಕುವ ನೀರನ್ನು ಕಂಡಾಗ ಖುಷಿಯಿಂದ ಮೈಮರೆಯುತ್ತಾರೆ. ಅಪಾಯಕ್ಕೆ ತಮ್ಮನ್ನು ಒಡ್ಡಿಕೊಳ್ಳುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನ ಬಂಡಾಜೆ, ಎರ್ಮಾಯಿ, ದಿಡುಪೆ–ಆನಡ್ಕ, ಕಲ್ಲುಗುಂಡಿ ಮೊದಲಾದ ಜಲಪಾತಗಳು, ಉಡುಪಿ ಜಿಲ್ಲೆಯ ಹೆಬ್ರಿ ತಾಲ್ಲೂಕಿನ ಕೂಡ್ಲು, ಒನಕೆ ಅಬ್ಬಿ ಜಲಪಾತಗಳು, ಕುಂದಾಪುರ ತಾಲ್ಲೂಕಿನ ಕೊಡಚಾದ್ರಿ ಬಳಿಯ ಆನೆ ಝರಿ, ಅರಸಿನಗುಂಡಿ, ಹಿಡ್ಲುಮನೆ ಜಲಪಾತಗಳು, ಕುದುರೆಮುಖ ಸಮೀಪದ ಬ್ರಹ್ಮರಗುಂಡಿ, ಹನುಮನ ಗುಂಡಿ ಮೊದಲಾದ ಜಲಪಾತಗಳಿಗೆ ಜೋರು ಮಳೆಯಾಗುವಾಗ ಭೇಟಿ ನೀಡುವುದು ಅಪಾಯಕರ. ಈ ಜಲಪಾತಗಳಿಗೆ ಸಾಗುವ ಕಾಡು ದಾರಿಯ ಜಾಡೂ ಅಷ್ಟೇ ಸವಾಲಿನದು

ದಿನೇಶ್ ಹೊಳ್ಳ, ಚಾರಣಿಗ, ಮಂಗಳೂರು

ಅಪಾಯಕಾರಿ ತಾಣಗಳು

ದಕ್ಷಿಣ ಕನ್ನಡ ಜಿಲ್ಲೆಯ ಕೆಲವು ಪ್ರವಾಸಿ ತಾಣಗಳು ಮಳೆಗಾಲದಲ್ಲಿ ಅಪಾಯಕಾರಿಯಾಗಿ ಪರಿವರ್ತನೆಯಾಗುತ್ತವೆ.

ಬಂಡಾಜೆ ಜಲಪಾತ: ಬೆಳ್ತಂಗಡಿ ತಾಲ್ಲೂಕಿನ ಉಜಿರೆಯಿಂದ 25 ಕಿ.ಮೀ ದೂರದಲ್ಲಿ ಈ ಜಲಪಾತವಿದೆ. ಸೋಮಂತಡ್ಕ ಕಡಿರುದ್ಯಾವರ ಮಾರ್ಗವಾಗಿ ಈ ಜಲಪಾತ ತಲುಪಲು 10 ಕಿ.ಮೀ ಚಾರಣ ಮಾಡಬೇಕು. ಕೆಲವರು ಈ ಜಲಪಾತದ ಮೇಲ್ಭಾಗಕ್ಕೆ ಹತ್ತುವ ಸಾಹಸ ಮಾಡುತ್ತಾರೆ. ಜಾರು ಬಂಡೆ ಕಲ್ಲುಗಳಿಂದ ಕೂಡಿದ ಇದರ ತಳ ಭಾಗವೂ ಅಪಾಯಕಾರಿ. ಅನೇಕರು ಜಾರಿ ಬಿದ್ದು ಪ್ರಾಣ ಕಳೆದುಕೊಂಡ ಉದಾಹರಣೆಗಳಿವೆ. ಸದ್ಯಕ್ಕೆ ಇಲ್ಲಿಗೆ ಪ್ರವೇಶ ನಿಷೇಧವಿದೆ.



ಬಂಡಾಜೆ ಜಲಪಾತ

ಗಡಾಯಿಕಲ್ಲು: ಸಮುದ್ರ ಮಟ್ಟದಿಂದ 1,788 ಅಡಿ ಎತ್ತರದಲ್ಲಿರುವ ಗಡಾಯಿಕಲ್ಲು ಬೆಳ್ತಂಗಡಿಯಿಂದ 8 ಕಿ.ಮೀ ದೂರದಲ್ಲಿದೆ. ಜಮಾಲಾಬಾದ್ ಹಾಗೂ ನರಸಿಂಹಗಡ ಎಂಬ ಹೆಸರೂ ಇದೆ. ಇದರ ಮೇಲೆ ಕೋಟೆ ಇದೆ. ಕುದುರೆಮುಖ ರಾಷ್ಟ್ರೀಯ ಉದ್ಯಾನದ ವ್ಯಾಪ್ತಿಯ ನಡ ಗ್ರಾಮದಲ್ಲಿರುವ ಈ ಬೆಟ್ಟವನ್ನು ಹತ್ತಲು ಅರಣ್ಯ ಇಲಾಖೆಯ ಅನುಮತಿ ಕಡ್ಡಾಯ. ಬೆಳಿಗ್ಗೆ 6ರಿಂದ ಸಂಜೆ 6ರವರೆಗೆ ಮಾತ್ರ ಇಲ್ಲಿ ಚಾರಣಕ್ಕೆ ಅವಕಾಶ. ಈ ಬೆಟ್ಟದ ತುದಿಯನ್ನು ತಲುಪಲು 2,800ಕ್ಕೂ ಹೆಚ್ಚು ಮೆಟ್ಟಿಲುಗಳನ್ನು ಹತ್ತಬೇಕು. ಮಳೆಗಾಲದಲ್ಲಿ ಮೆಟ್ಟಿಲುಗಳಲ್ಲೇ ನೀರು ಹರಿಯುತ್ತದೆ. ಒದ್ದೆಯಾದರೆ ಜಾರುತ್ತವೆ. ಸದ್ಯ ಚಾರಣಕ್ಕೆ ನಿಷೇಧವಿದೆ.



ಸೆಲ್ಫಿ ಗೀಳು: ಪ್ರಾಣಕ್ಕೆ ಕುತ್ತು


ಉಡುಪಿ ಜಿಲ್ಲೆಯಲ್ಲಿ ಹಲವು ಬೀಚ್‌ಗಳಿದ್ದರೂ ಮಲ್ಪೆ ಮತ್ತು ತ್ರಾಸಿ ಮರವಂತೆ ಬೀಚ್‌ಗಳಿಗೆ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡುತ್ತಾರೆ. ಕೆಲವು ಪ್ರವಾಸಿಗರು ಮಳೆಗಾಲದಲ್ಲಿ ಇಲ್ಲಿ ಹುಚ್ಚಾಟ ಮೆರೆಯುತ್ತಾರೆ. ಮಳೆಗಾಲ ಆರಂಭವಾಗುತ್ತಿದ್ದಂತೆ ಜಿಲ್ಲೆಯ ಪ್ರಮುಖ ಬೀಚ್‌ಗಳಲ್ಲಿ ತಡೆಬೇಲಿ ಹಾಕಲಾಗುತ್ತದೆ. ಆದರೂ ತಡೆಬೇಲಿ ಇಲ್ಲದ ಕಡೆಗಳಲ್ಲಿ ಪ್ರವಾಸಿಗರು ನೀರಿಗಿಳಿಯುವ ಪ್ರಯತ್ನ ಮಾಡುತ್ತಾರೆ; ಕಡಲ್ಕೊರೆತ ತಡೆಯಲು ಹಾಕಿರುವ ಬಂಡೆಗಳ ಮೇಲೆ ನಿಂತು ಸೆಲ್ಫಿ ತೆಗೆಯುವ ಸಾಹಸಕ್ಕೆ ಇಳಿಯುತ್ತಾರೆ. ಮಲ್ಪೆ ಬೀಚ್‌ನ ಪರಿಸ್ಥಿತಿಯೂ ಭಿನ್ನವಾಗಿಲ್ಲ.

ತ್ರಾಸಿ ಮರವಂತೆ ಬೀಚ್‌ನಲ್ಲಿ ಈಚೆಗೆ ಅಲೆಗಳ ಸೆಳೆತಕ್ಕೆ ಸಿಲುಕಿದ್ದ ಪ್ರವಾಸಿಗರನ್ನು ಜೀವರಕ್ಷಕ ಸಿಬ್ಬಂದಿ ರಕ್ಷಿಸಿದ್ದರು

ಎಚ್ಚರ ತಪ್ಪಿದರೆ ಅಪಾಯ

ಬಳ್ಳಾರಿ ಜಿಲ್ಲೆಯ ಪ್ರಮುಖ ಪ್ರವಾಸಿ ತಾಣ ಸಂಡೂರು. 'ಸಿ ಸಂಡೂರು' ಪಾಯಿಂಟ್ ಅತ್ಯಂತ ಜನಪ್ರಿಯ. ಇಲ್ಲಿ ಸೆಲ್ಫಿ ತೆಗೆಯಲು ಹೋಗಿ ಹಲವರು ಕಾಲು ಜಾರಿ ಬಿದ್ದಿದ್ದಾರೆ. ಇದೇ ಸಂಡೂರಿನ ದಟ್ಟ ಅರಣ್ಯದ ಮಧ್ಯದಲ್ಲಿ ಬರುವ, ಅಂಕಮ್ಮನಾಳ್ ಗ್ರಾಮದ 'ದುಮುಕು' ಜಲಪಾತ ನೋಡಲೂ ಪ್ರವಾಸಿಗರು ತೆರಳುತ್ತಾರೆ. ದುರ್ಗಮ ಹಾದಿಯಲ್ಲಿ ನಡೆದೇ ಇಲ್ಲಿಗೆ ತಲುಪಬೇಕು. ಒಂದು ವೇಳೆ ದಾರಿ ತಪ್ಪಿದರೆ ಕಾಡಿನಿಂದ ಹೊರಬರಲು ಸಾಧ್ಯವೇ ಆಗುವುದಿಲ್ಲ.


ಸಂಡೂರಿನ ಆಕರ್ಷಕ ತಾಣ ನಾರಿಹಳ್ಳ ಜಲಾಶಯವು ಭೀಮತೀರ್ಥ ಸಮೀಪದ 'ವ್ಯೂ ಪಾಯಿಂಟ್'ವೊಂದರಿಂದ ವಿಹಂಗಮವಾಗಿ ಕಾಣುತ್ತದೆ. ಈ ಜಾಗ ತಲುಪಲು ದುರ್ಗಮ ಹಾದಿಯಲ್ಲೇ ಹೋಗಬೇಕು. ಈ ಹಾದಿಯಲ್ಲೂ ಎಚ್ಚರದಿಂದ ಇರಬೇಕಾಗುತ್ತದೆ. ಇಲ್ಲವಾದರೆ, ಕಾಲು ಜಾರಿ ಅವಘಡ ಖಚಿತ.



ಸಂಡೂರಿನ ನಾರಿಹಳ್ಳ ಜಲಾಶಯದ ನೋಟ

ಗೋಕಾಕ ಜಲಪಾತ ಸದ್ಯ ನಿರ್ಬಂಧ

ಗೋಕಾಕ ಜಲಪಾತ ಕಣ್ತುಂಬಿಕೊಳ್ಳಲು ದೇಶದ ವಿವಿಧೆಡೆಯಿಂದ ಪ್ರವಾಸಿಗರ ದಂಡೇ ಹರಿದುಬರುತ್ತದೆ. ಇಲ್ಲಿ ಮಳೆಗಾಲದಲ್ಲಿ 186 ಅಡಿ ಎತ್ತರದಿಂದ ನೀರು ಧುಮ್ಮಿಕ್ಕುತ್ತದೆ. ಜಲಪಾತದ ಸೊಬಗು ಸವಿಯಲು ಬರುತ್ತಿದ್ದವರ ಪೈಕಿ ಹಲವು ಯುವಕ–ಯುವತಿಯರು ಅಪಾಯ ಲೆಕ್ಕಿಸದೆ ಜಲಪಾತದ ಅಂಚಿಗೆ ಹೋಗಿ ನಿಲ್ಲುತ್ತಿದ್ದರು. ಬೃಹತ್ ಬಂಡೆಗಳ ಕಂದಕಕ್ಕೆ ಇಳಿದು ಫೋಟೊ ಮತ್ತು ಸೆಲ್ಫಿ ತೆಗೆಯುವ ಸಾಹಸ ಮಾಡುತ್ತಿದ್ದರು. ಇಂಥ ಸಾಹಸದ ವೇಳೆ, ಕೆಲವು ಪ್ರವಾಸಿಗರು ಪ್ರಾಣ ಕಳೆದುಕೊಂಡಿದ್ದರು. ಹಾಗಾಗಿ ಗೋಕಾಕ ಜಲಪಾತದ ಅಪಾಯಕಾರಿ ಸ್ಥಳಗಳಲ್ಲಿ ಈಗ ಪ್ರವಾಸಿಗರಿಗೆ ಪ್ರವೇಶ ನಿರ್ಬಂಧಿಸಲಾಗಿದೆ. ಅಪಾಯಕಾರಿ ಸ್ಥಳದಲ್ಲಿ ಸೆಲ್ಫಿ ತೆಗೆಯುವುದನ್ನು ನಿಷೇಧಿಸಲಾಗಿದೆ. ಬ್ರಿಟಿಷ್ ಕಾಲದಲ್ಲಿ ನಿರ್ಮಿಸಿದ್ದ ತೂಗುಸೇತುವೆ ಹಳೆಯದಾದ ಕಾರಣ, ಅದರ ಮೇಲೆ ಸಂಚಾರ ನಿಷೇಧಿಸಲಾಗಿದೆ.



ಗೋಕಾಕ ಜಲಪಾತದಲ್ಲಿ ಫೋಟೊ ತೆಗೆಸಿಕೊಳ್ಳಲು ಇತ್ತೀಚೆಗೆ ಅಪಾಯಕಾರಿ ಕಂದರಕ್ಕೆ ಇಳಿದಿದ್ದ ಯುವಕರು

ಅವಕಾಶವಿಲ್ಲ

ಉತ್ತರ ಕನ್ನಡ ಜಿಲ್ಲೆಯಲ್ಲಿ ಮಳೆಗಾಲದಲ್ಲಿ ಸೃಷ್ಟಿಯಾಗುವ ನೂರಾರು ಜಲಪಾತಗಳನ್ನು ವೀಕ್ಷಿಸಲು ಬರುವ ಪ್ರವಾಸಿಗರು ಹೆಚ್ಚು. ಈ ಬಾರಿ ಹಲವು ಕಡೆಗಳಲ್ಲಿ ಭೂಕುಸಿತ ನಡೆದಿರುವುದರಿಂದ ಜಲಪಾತಗಳು, ಅರಣ್ಯದ ನಡುವೆ ಇರುವ ಯಾಣದಂತಹ ಪ್ರವಾಸಿ ತಾಣಗಳಿಗೆ ಸಾರ್ವಜನಿಕರ ಪ್ರವೇಶ ನಿರ್ಬಂಧಿಸಲಾಗಿದೆ.

ನುಸುಳುವಿಕೆ ನಿರಾತಂಕ: ಖಾನಾಪುರ ತಾಲ್ಲೂಕಿನಲ್ಲಿ 12 ಜಲಪಾತಗಳಿವೆ. ಅದರಲ್ಲೂ ಭೀಮಗಡ ಅಭಯಾರಣ್ಯದಲ್ಲಿನ ಐದು ಜಲಪಾತಗಳು ಪ್ರವಾಸಿಗರ ಮೆಚ್ಚಿನ ತಾಣಗಳಾಗಿವೆ. ಪ್ರವೇಶ ನಿಷೇಧವಿದ್ದರೂ ಅರಣ್ಯ ಪ್ರದೇಶದಲ್ಲಿ ಪ್ರವಾಸಿಗರು ನಿರಾತಂಕವಾಗಿ ನುಸುಳುತ್ತಾರೆ. ಇದರೊಂದಿಗೆ ದಟ್ಟ ಅರಣ್ಯದಲ್ಲಿ ಜೀಪು ಮತ್ತಿತರ ವಾಹನ ತರುವುದು, ಡ್ರೋನ್ ಹಾರಿಸುವುದು, ಬೆಂಕಿ ಹಚ್ಚಿ ಅಡುಗೆ ಮಾಡುವುದು ನಡೆದೇ ಇದೆ. ಇದರಿಂದ ವನ್ಯಜೀವಿಗಳಿಗೆ ಕುತ್ತು ಬರುತ್ತಿದ್ದು, ಪರಿಸರವಾದಿಗಳಿಂದ ಆಕ್ಷೇಪ ವ್ಯಕ್ತವಾಗಿದೆ.

ಸುರಕ್ಷತೆಗಿಲ್ಲ ಆದ್ಯತೆ



ಮೈಸೂರು ಜಿಲ್ಲೆ ಚುಂಚನಕಟ್ಟೆ (ಧನುಷ್ಕೋಟಿ) ಜಲಪಾತದ ಅಪಾಯಕಾರಿ ಸ್ಥಳದಲ್ಲಿ ನಿಂತು ಫೋಟೊ ತೆಗೆಯುತ್ತಿದ್ದರು

ಪ್ರವಾಸಿ ತಾಣಗಳಿಗೆ ಹೆಸರಾಗಿರುವ ಕೊಡಗು ಜಿಲ್ಲೆಯ ಚೇಲಾವರ ಜಲಪಾತ ಸೇರಿದಂತೆ ಬಹುತೇಕ ಜಲಪಾತ ಪ್ರದೇಶಗಳಲ್ಲಿ ಸುರಕ್ಷತೆ ಇಲ್ಲ. ಚೇಲಾವರದಲ್ಲಿ ಹಲವು ಮಂದಿ ಮೃತಪಟ್ಟಿದ್ದಾರೆ. ಇರ್ಪು ಜಲಾಶಯದಲ್ಲಿ ಪ್ರವೇಶದ್ವಾರದಲ್ಲಿ ಮಾತ್ರ ಭದ್ರತೆ ಇದೆ. ಪ್ರವಾಸಿಗರು ಬಂಡೆಗಳ ಮೇಲೆ ನಿಂತು ಅಪಾಯಕಾರಿ ಸ್ಥಳದಲ್ಲಿ ಫೋಟೊ, ವಿಡಿಯೊ ತೆಗೆದುಕೊಳ್ಳುತ್ತಾರೆ.

ಮಾಂದಲ್ ಪಟ್ಟಿಗೆ ಹೋಗುವ ರಸ್ತೆ ಅಪಾಯಕಾರಿಯಾಗಿದೆ. ವಾಹನ ಚಾಲನೆ ಕಡುಕಷ್ಟ. ಕೋಟೆ, ಅಬ್ಬಿಫಾಲ್ಸ್‌ನಲ್ಲಿ ಹೆಚ್ಚಿನ ಪೊಲೀಸ್ ಭದ್ರತೆ ಇಲ್ಲ.

ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನ ಕಾವೇರಿ ನದಿಯ ಪಾತ್ರದಲ್ಲಿ ಈಜಲು, ಮೋಜು ಮಾಡಲು ಹೋಗಿ ಹಾಗೂ ಭರಚುಕ್ಕಿ ಜಲಪಾತದ ಅಪಾಯಕಾರಿ ಸ್ಥಳಗಳಲ್ಲಿ ಸೆಲ್ಫಿ ತೆಗೆದುಕೊಳ್ಳಲು ಹೋಗಿ ಪ್ರವಾಸಿಗರು ಬಲಿಯಾಗುತ್ತಿದ್ದಾರೆ. 2022ರಿಂದ 2025ರ ಮೇವರೆಗೂ 28 ಮಂದಿ ಜೀವ ಕಳೆದುಕೊಂಡಿದ್ದಾರೆ.

ಜಲಪಾತ ವೀಕ್ಷಣೆ ಮಾಡಿದ ಬಳಿಕ ಬರುವ ಮಾರ್ಗಮಧ್ಯೆ ಇರುವ ದರ್ಗಾ, ಶಿವನಸಮುದ್ರ, ವೆಸ್ಲಿ ಸೇತುವೆ ಹಾಗೂ ಸಮೂಹ ದೇವಾಲಯಗಳ ಸುತ್ತಮುತ್ತ ಹರಿಯುವ ಕಾವೇರಿ ನದಿಯಲ್ಲಿ ಈಜಲು ಹೋಗಿ ನೀರಿನ ಸೆಳೆತಕ್ಕೆ ಸಿಲುಕಿ ಬಲಿಯಾಗುತ್ತಿದ್ದಾರೆ. ಈ ಪ್ರದೇಶದಲ್ಲಿ ಭದ್ರತಾ ವ್ಯವಸ್ಥೆ ಸಮರ್ಪಕವಾಗಿಲ್ಲ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಹಿರಿಯ ನಾಗರಿಕರಿಗೆ ದೇಶದಾದ್ಯಂತ ವಿಮಾನ, ರೈಲು, ಬಸ್‌ಗಳಲ್ಲಿ 2025ರ ಜೂನ್ 15ರಿಂದ ಉಚಿತ ಪ್ರಯಾಣದ ಯೋಜನೆಯನ್ನು ಕೇಂದ್ರ ಸರ್ಕಾರವು ಜಾರಿಗೆ ತಂದಿದೆ ಎಂದು ಹಲವು ವೆಬ್‌ಸೈಟ್‌ಗಳಲ್ಲಿ ಸುದ್ದಿ ಪ್ರಕಟವಾಗಿದೆ. ಅದನ್ನು ಅನೇಕರು ಫೇಸ್‌ಬುಕ್, ಎಕ್ಸ್ ಸೇರಿದಂತೆ ವಿವಿಧ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.



15 ರಿಂದ ಹಿರಿಯ ನಾಗರಿಕರಿಗೆ ಉಚಿತ "ಯಾತ್ರೆ"

Translated with Google Lens

ಕೇಂದ್ರ ಸರ್ಕಾರವು ಯೋಜನೆ ಜಾರಿಗೊಳಿಸಿದ್ದರೆ, ಮಾಧ್ಯಮ ಪ್ರಕಟಣೆ ನೀಡುತ್ತದೆ. ಇಲ್ಲವೇ ಅವುಗಳ ವೆಬ್‌ಸೈಟ್‌ಗಳಲ್ಲಿ ಈ ಬಗ್ಗೆ ಮಾಹಿತಿ ನೀಡಲಾಗುತ್ತದೆ. ಆದರೆ, ನಿರ್ದಿಷ್ಟ ಪದಗಳ ಮೂಲಕ ಗೂಗಲ್ ಸರ್ಚ್ ಮಾಡಿದಾಗ, ಹಿರಿಯ ನಾಗರಿಕರಿಗೆ ಉಚಿತ ಪ್ರಯಾಣದ ಯೋಜನೆ ಜಾರಿ ಬಗ್ಗೆ ಕೇಂದ್ರ ಸರ್ಕಾರ ಯಾವುದೇ ಆದೇಶ/ಪ್ರಕಟಣೆ ನೀಡಿದ ಬಗ್ಗೆ ವರದಿಗಳು ಕಂಡುಬರಲಿಲ್ಲ; ಸಂಬಂಧಪಟ್ಟ ವೆಬ್‌ಸೈಟ್‌ಗಳಲ್ಲೂ ಈ ಕುರಿತ ಮಾಹಿತಿ ಸಿಗಲಿಲ್ಲ. ಜತೆಗೆ, ರೈಲ್ವೆ ಇಲಾಖೆ, ಏರ್ ಇಂಡಿಯಾ ಸೇರಿದಂತೆ ಸಂಬಂಧಪಟ್ಟ ಸಂಸ್ಥೆಗಳನ್ನು ಸಂಪರ್ಕಿಸಿದಾಗ ಅಂಥ ಯಾವ ಯೋಜನೆಯನ್ನೂ ಜಾರಿಗೊಳಿಸಿಲ್ಲ ಎಂದು ಅವು ಸ್ಪಷ್ಟನೆ ನೀಡಿದವು. ಯಾವುದೇ ಆಧಾರ ಇಲ್ಲದೇ ಕೆಲವರು ಸುಳ್ಳು ಸುದ್ದಿಯನ್ನು ಹರಡುತ್ತಿದ್ದಾರೆ ಎಂದು ಫ್ಯಾಕ್ಟ್‌ಲಿ ಫ್ಯಾಕ್ಟ್‌ಚೆಕ್ ವರದಿ ತಿಳಿಸಿದೆ.

ಪದಬಂಧ 6078


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ದೇವ ಪೂಜಾ ತಂತ್ರವನ್ನು ತಿಳಿಸುವ ಶಾಸ್ತ್ರ (3)
3.ತಾರೀಕು ಇಲ್ಲಿ ನಮೂದಾಗಿದೆ (3)
4.ಬಿಡದಿ ಬಳಿಯಲ್ಲಿರುವ ಹೆಂಡತಿ (3)
6.ಕ್ರೀಡೆಗೊಂದು ಪರ್ಯಾಯ ಪದ (2)
7.ತಿರುಗಿದ್ದಾಗ ವನದಲ್ಲಿ ಹೊಸದು ಕಂಡಿದೆ (2)
9.ಹಾವು ವಾಸಮಾಡುವ ಸ್ಥಳ (2)
13.ಈತ ಮದುವೆಯಾಗುತ್ತಿರುವ ಗಂಡು (2)
14.ಬಾಗಿಲಿಗೆ ಹಾಕುವ ಕೊಂಡಿ (3)
15.ಜೋಪಾನ ಎಂದು ಹೀಗೆನ್ನಿ (3)
16.ನಗರದಲ್ಲಿ ಬಾರಿಸಿದ ಚರ್ಮವಾದ್ಯ (3)

ಮೇಲಿಂದ ಕೆಳಕ್ಕೆ

1.ಆಳು ಹೊಡೆದುಕೊಂಡು ಬಂದಿರುವ ಹಸು (3)
2.ಮಾತೆ ಮತ್ತೆ ಮತ್ತೆ ತೋರುವ ಪ್ರೀತಿ (3)
3.ದಿಟ್ಟತನದಿಂದ ನುಡಿದ ಸತ್ಯ (2)
5.ಇಪ್ಪತ್ನಾಲ್ಕು ಗಂಟೆಗಳ ಕಾಲ (2)
6.ಉದ್ದವಾದ ತೋಳು (5)
8.ಬಣ್ಣಗುಂದುವಿಕೆಯನ್ನು ಹೀಗೂ ಹೇಳುತ್ತಾರೆ (5)
10.ತಿರುಗಿದ ಮನಸ್ಸು (2)
11.ಮುದ್ರೆ ಒತ್ತುವುದು (3)
12.ಹಳೆಯ ಸಾಮಾನುಗಳನ್ನು ಮಾರುವ ಸ್ಥಳ (3)
13.ವರ್ತಮಾನದಲ್ಲೇ ನೋಡುತ್ತಿರುವ ಅರಣ್ಯ (2)



6077ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಗೊರವಂಕ 3.ಬಾಲರವಿ 5.ವಿಫಲ 6.ಕೆಸರು 8.ಗೈರತ್ತು 9.ಅರ್ಚಕ 10.ರಿವಾಜು 12.ಕಲಹ 14.ಕಡಿವಾಣ 15.ಸೆರೆಮನೆ

ಮೇಲಿಂದ ಕೆಳಕ್ಕೆ: 1.ಗೊರಕೆ 2.ಕವಿ 3.ಬಾಲ 4.ವಿಪತ್ತು 7.ರುದ್ರನಾಟಕ 8.ಗೈರುಹಾಜರಿ 9.ಅಷ್ಟಕ 11.ಜುಲ್ಮಾನೆ 12.ಕಣ 13.ಹಸೆ

ಸುಡೊಕು 6462

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

7	5			1			8	
		6			9			7
4			7				9	6
	7			2	1			8
	6	4	9		8		7	
8		1				9		4
	8			9			4	
1		2				7		3
	4		1		7		2	

6461 ಸುಡೊಕು

5	2	1	4	7	3	9	6	8
7	9	8	6	1	2	3	4	5
4	6	3	5	9	8	7	2	1
1	4	9	2	3	5	6	8	7
2	3	7	1	8	6	4	5	9
8	5	6	7	4	9	2	1	3
6	7	5	9	2	1	8	3	4
3	1	4	8	6	7	5	9	2
9	8	2	3	5	4	1	7	6

ಬಿಡುಗಡೆ

ನುಡಿ ಬೆಳಗು — ಪಿ.ಚಂದ್ರಿಕಾ



ಓದು, ಅಧ್ಯಯನ, ನಿರಂತರವಾದ ಚರ್ಚೆಗಳು, ಅಪಾರವಾದ ಕುತೂಹಲವನ್ನು ಕೊನೆಯವರೆಗೂ ಉಳಿಸಿಕೊಂಡು ತಾವು ಅಂದುಕೊಂಡಿದ್ದನ್ನು ಸಾಧ್ಯಮಾಡಿದ ಡಾ.ಸರ್ವೆಪಲ್ಲಿ ರಾಧಾಕೃಷ್ಣನ್ ಅವರು ನಾಡು ಕಂಡ ಅದ್ಭುತ ಶಿಕ್ಷಕ. 'ಶಿಕ್ಷಣ ಸ್ವಾಭಿಮಾನವನ್ನು ಆತ್ಮವಿಶ್ವಾಸವನ್ನು ಹೆಚ್ಚಿಸಬೇಕು, ಈ ನಿಟ್ಟಿನಲ್ಲಿ ನೆಲದ ಜ್ಞಾನ ಬಹುದೊಡ್ಡದು. ಬುದ್ಧ ಬಸವಾದಿ ತತ್ವಜ್ಞಾನಿಗಳು ಜಗತ್ತಿಗೆ ಬಿಟ್ಟುಹೋದ ಬೆಳಕು ಅಮೂಲ್ಯ' ಎಂದು ವಿಶ್ವಕ್ಕೆ ತೋರಿದ ಮಹನೀಯರು. ಅವರ ಮಾತುಗಳನ್ನು ಕೇಳಲಿಕ್ಕೆ ವಿದ್ಯಾರ್ಥಿಯಾಗಿದ್ದಾಗ ಮೈಸೂರಿಗೆ ಹೋಗುತ್ತಿದ್ದೆ ಎಂದು ನಾಡಿನ ಪ್ರಜ್ಞಾವಂತ ರಾಜಕಾರಣಿ ಎಸ್.ನಿಜಲಿಂಗಪ್ಪನವರು ತಮ್ಮ ಸಂದರ್ಶನವೊಂದರಲ್ಲಿ ನೆನಪಿಸಿಕೊಳ್ಳುತ್ತಾರೆ. ಅವರ ಶಿಷ್ಯರಾಗಬೇಕೆಂದು ಹಂಬಲಿಸುತ್ತಿದ್ದ ವಿದ್ಯಾರ್ಥಿಗಳು ಅಪಾರ.

'ಭಾರತದ ನೆಲದಲ್ಲಿ ಬರಿಯ ಅಧ್ಯಾತ್ಮ ಅಲ್ಲ, ಜ್ಞಾನದ ಬಹುದೊಡ್ಡ ಭಂಡಾರವೇ ಅಡಗಿದೆ. ಅದು ಜಗತ್ತಿಗೆ ಬೇಕಿದೆ' ಎಂದು ನಂಬಿದವರು ರಾಧಾಕೃಷ್ಣನ್. ಅವರನ್ನು ವಿದ್ಯಾರ್ಥಿಯೊಬ್ಬ ಕೇಳಿದನಂತೆ, 'ನೀವೇಕೆ ಆಕ್ಸ್‌ಫರ್ಡ್‌ಗೆ ಓದಲಿಕ್ಕೆ ಹೋಗಲಿಲ್ಲ'. ಆಗ ಆಕ್ಸ್‌ಫರ್ಡ್‌ನಲ್ಲಿ ಓದುವುದು, ಭಾರತದಲ್ಲಿನ ಬ್ರಿಟಿಷರ ಆಧಿಪತ್ಯ, ಪಶ್ಚಿಮದ ಮೋಹ ಎಲ್ಲವೂ ಸೇರಿ ಅಲ್ಲಿಂದ ಪದವಿ ತೆಗೆದುಕೊಳ್ಳುವುದು ಎಂದರೆ ಆ ಕಾಲದಲ್ಲಿ ಬಹಳ ಘನತೆಯ ವಿಷಯವಾಗಿತ್ತು. ಅಂಥ ಅವಕಾಶವನ್ನು ಯಾರೂ ತಪ್ಪಿಸಿಕೊಳ್ಳುತ್ತಿರಲಿಲ್ಲ. ಆದರೆ ರಾಧಾಕೃಷ್ಣನ್ ನಗುತ್ತಾ ಹೇಳಿದರು, 'ನಾನು ಆಕ್ಸ್‌ಫರ್ಡ್‌ಗೆ ಹೋಗುತ್ತೇನೆ. ಕಲಿಯಲು ಅಲ್ಲ. ಕಲಿಸಲು'. ಅವರ ಆ ಮಾತುಗಳು ಸುಮ್ಮನೆ ಹುಟ್ಟಿದ್ದಲ್ಲ, ಅದು ಬರಿಯ ಮಾತೂ ಆಗಿರಲಿಲ್ಲ. ಮುಂದೆ ಬರಿಯ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಒಂದೇ ಅಲ್ಲ; ಪಶ್ಚಿಮದ ಎಲ್ಲ ದೇಶಗಳಲ್ಲೂ ಅವರು ಉಪನ್ಯಾಸಗಳನ್ನು ಕೊಟ್ಟರು. ಅಷ್ಟೇ ಅಲ್ಲ, ಅಂತರರಾಷ್ಟ್ರೀಯ ಪ್ರಸಿದ್ಧಿ ಪಡೆದ 'ಮೈಂಡ್' ಪತ್ರಿಕೆ ಇವರ ಲೇಖನಗಳನ್ನು ಪ್ರಕಟಿಸಿತು.

ಒಮ್ಮೆ ರಾಧಾಕೃಷ್ಣನ್ ಅವರನ್ನು ಕ್ಯಾಲಿಫೋರ್ನಿಯಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಗೆ ಒಂದು ವಾರದ ಉಪನ್ಯಾಸಕ್ಕಾಗಿ ಹೋದಾಗ ಅಲ್ಲೊಬ್ಬ ಅಮೆರಿಕದ ವಿದ್ಯಾರ್ಥಿ ಕೇಳಿದನಂತೆ, 'ನಿಮ್ಮ ನಂಬಿಕೆಯಂತೆ ಪ್ರಪಂಚವನ್ನು ಮುಕ್ತಗೊಳಿಸುವ ಸಂದೇಶ ಭಾರತದ್ದಾಗಿದ್ದರೆ ಬ್ರಿಟಿಷರಿಂದ ಯಾಕೆ ಮುಕ್ತರಾಗಲಿಲ್ಲ' ಎಂದು. ಅದಕ್ಕೆ ಅವರು ನಗುತ್ತಾ, 'ಏಸು ತನ್ನನ್ನು ತಾನು ಮುಕ್ತಗೊಳಿಸಲು ಹುಟ್ಟಿದನೇ' ಎಂದು ಪ್ರಶ್ನಿಸಿದರಂತೆ. ಆ ಅಮೆರಿಕದ ವಿದ್ಯಾರ್ಥಿ, 'ಏಸು ದೇವದೂತ. ಪಾಪದ ಛಾಯೆಯೂ ಇಲ್ಲದವನು. ಅವನಿಗೆ ಎಂಥ ಮುಕ್ತಿ? ಜಗತ್ತಿನ ಉದ್ಧಾರಕ್ಕಾಗಿ ಅವನ ಜನನವಾಯಿತು' ಎಂದನಂತೆ. 'ಏಸು ಉಳಿದವರನ್ನು ಮುಕ್ತಗೊಳಿಸಲು ಹುಟ್ಟಿದ ಎನ್ನುವುದನ್ನು ನೀವು ನಂಬುತ್ತೀರಿ ಎಂದಾದರೆ, ಭಾರತದ ಜ್ಞಾನವು ಜಗತ್ತಿನ ಅಜ್ಞಾನವನ್ನು ಮುಕ್ತಗೊಳಿಸಲಿಕ್ಕೆ ಇದೆ ಎನ್ನುವುದನ್ನು ನಂಬಲೇಬೇಕು' ಎಂದು ಬೈಬಲ್‌ನಿಂದಲೇ ಉದಾಹರಣೆಗಳನ್ನು ತೆಗೆದುಕೊಂಡು ಪಾಶ್ಚಾತ್ಯದ ಮನಸ್ಸಿನಲ್ಲಿ ಭಾರತೀಯ ತತ್ವವನ್ನು ಅರ್ಥ ಮಾಡಿಸುತ್ತಾರೆ. ಬಿಡುಗಡೆ ಎಂದರೆ ಅದು ದೈಹಿಕವಾಗಿ ಮಾತ್ರವಲ್ಲ, ನಾವು ಮಾನಸಿಕವಾಗಿ ದೃಢತೆ ಹೊಂದಬೇಕು. ಗುಲಾಮಿತನದ ಮನಃಸ್ಥಿತಿಯಿಂದ ಹೊರಬಂದರೆ ಅದೇ ಬಿಡುಗಡೆ ಎಂದು ಜಗತ್ತಿಗೆ ತೋರಿದ ಈ ಭಾರತೀಯನಿಗೆ ಬೆಳಗಿನ ನಮಸ್ಕಾರ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

19 ಜೂನ್ 2025 ಗುರುವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಕೃಷ್ಣ ಅಷ್ಟಮಿ ಗಂ. 11-56 ನಕ್ಷತ್ರ: ಉತ್ತರಾಭಾದ್ರ ಗಂ. 23-17 ಯೋಗ: ಆಯುಷ್ಮಾನ್ ಗಂ. 5-24, ಮಿಥುನ ಮಾಸದ 05 ನೇ ದಿನ. ಮಳೆ ನಕ್ಷತ್ರ : ಮೃಗಶಿರ 4 ನೇ ಪಾದ. ರಾಹುಕಾಲ : ಮಧ್ಯಾಹ್ನ 01-30 – 03-00 , ಸೂರ್ಯೋದಯ : 06-08 ಸೂರ್ಯಾಸ್ತ : 06-55, ಮುಸ್ಲಿಂ ದಿನಾಂಕ : 22 ಜುಲ್‌ಹಿಜಾ , ಅದೃಷ್ಟ ಸಂಖ್ಯೆ : 3, 7

ಮೇಷ: ರಾಜಕೀಯದಲ್ಲಿ ಯಾವುದೇ ರೀತಿಯ ಬದಲಾವಣೆ ಸರಿಯಲ್ಲ. ಗೃಹದಲ್ಲಿ ಶುಭ, ಮಂಗಳ ಕಾರ್ಯಗಳ ಚಟುವಟಿಕೆಗಳು ತೋರಿ ಬರುವವು. ದಿನದ ಖರ್ಚು ವೆಚ್ಚಗಳು ಹೆಚ್ಚಿರಲಿವೆ.

ವೃಷಭ: ಹೆಸರಾಂತ ವ್ಯಕ್ತಿಗಳನ್ನು ಭೇಟಿ ಮಾಡುವ ಅವಶ್ಯಕತೆ ಇದ್ದಲ್ಲಿ ಫಲಿಸುವ ಸಾಧ್ಯತೆಗಳಿವೆ. ಚಿನ್ನ–ಬೆಳ್ಳಿ ಮಾರಾಟಗಾರರಿಗೆ ಹೆಚ್ಚಿನ ಲಾಭ ಇರುತ್ತದೆ. ಲಲಿತಕಲಾ ಕ್ಷೇತ್ರದಲ್ಲಿರುವವರಿಗೆ ಸಾಧನೆಗೆ ಅವಕಾಶವಿದೆ.

ಮಿಥುನ: ಬ್ಯಾಂಕ್ ಮತ್ತು ನ್ಯಾಯಾಂಗ ಕ್ಷೇತ್ರದಲ್ಲಿರುವ ವ್ಯಕ್ತಿಗಳಿಗೆ ಚಾಣಾಕ್ಷತನದಿಂದ ಹೆಗ್ಗಳಿಕೆಗೆ ಪಾತ್ರರಾಗುತ್ತೀರಿ. ಅನಿರೀಕ್ಷಿತ ದೂರದ ಪ್ರಯಾಣ ಮಾಡುವ ಸಾಧ್ಯತೆಗಳಿವೆ.

ಕರ್ಕಾಟಕ: ಮೇಲಧಿಕಾರಿಗಳೊಂದಿಗೆ ಹೊಸ ಯೋಜನೆ ಕುರಿತು ಗಹನವಾದ ಚರ್ಚೆ ನಡೆಯುವ ಸಾಧ್ಯತೆಗಳಿವೆ. ಚರ್ಚೆ ನಿಮಗೆ ಅನುಕೂಲವಾಗುತ್ತದೆ. ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಪರಿಶ್ರಮದಿಂದ ಉತ್ತಮ ಫಲ ಕಾಣುವಿರಿ.

ಸಿಂಹ: ಸರಕು ಸಾಗಾಣೆದಾರರಿಗೆ ಆದಾಯದಲ್ಲಿ ಹೆಚ್ಚಳ ಕಂಡುಬಂದರೂ, ಕಾರ್ಯದ ಒತ್ತಡದಿಂದ ವೃತ್ತಿಯಲ್ಲಿ ನಿರಾಶೆಯಾಗುವುದು. ಬೃಹತ್ ವಾಹನವನ್ನು ಖರೀದಿಸುವವರಿಗೆ ಇದು ಸೂಕ್ತ ಸಮಯವವಲ್ಲ.

ಕನ್ಯಾ: ಮನೆಗೆ ಬರುವ ವ್ಯಕ್ತಿಯೊಂದಿಗೆ ನೂತನ ವಿಷಯಗಳನ್ನು ವಿನಿಮಯ ಮಾಡಿಕೊಳ್ಳುವಿರಿ. ಮಾಡಿದ ಪಾಪದ ಫಲ ಅನುಭವಕ್ಕೆ ಬರಲಿದೆ. ಸರಿ–ತಪ್ಪುಗಳ ಅರಿವಿಲ್ಲದೆ ಪ್ರಶ್ನಿಸಿಕೊಳ್ಳುವ ಸಮಯ ಎದುರಾಗುವುದು.

ತುಲಾ: ಜನರ ಜತೆ ನಗು-ನಗುತ್ತಾ ಬೆರೆಯುವ ವರ್ತನೆಯಿಂದ ಪ್ರೀತಿ ಗಳಿಸುವಿರಿ. ಬೋಧಕರು ವರ್ಗಾವಣೆಗಾಗಿ ಮಾಡಿದ ಭಾರಿ ಪ್ರಯತ್ನ ವ್ಯರ್ಥವಾಗುವ ಸಂಭವವಿದೆ.

ವೃಶ್ಚಿಕ: ವೃತ್ತಿಯಲ್ಲಿ ಬೇಜವಾಬ್ದಾರಿತನ ತೋರಿದರೆ ಕೆಲಸಕ್ಕೆ ಪೂರ್ಣವಿರಾಮ ಸಿಗಬಹುದು. ಕೆಲಸದಲ್ಲಿ ಗಮನ ಮತ್ತು ಹೆಚ್ಚಿನ ಜವಾಬ್ದಾರಿ ಇರಲಿ. ಅಪರೂಪದ ತಿಂಡಿ ತಿನಿಸುಗಳು ಪ್ರಾಪ್ತಿಯಾಗಲಿವೆ.

ಧನು: ಸ್ಪಷ್ಟ ನಿರ್ಧಾರವನ್ನು ಮಾಡಿದ ವಿಚಾರವನ್ನು ಪುನಃ ಮತ್ತೊಮ್ಮೆ ಯೋಚಿಸಲು ಅವಕಾಶಗಳು ಒದಗಿಬರುತ್ತವೆ. ಬದಲಾವಣೆಯ ಅವಶ್ಯಕತೆ ಇರುವುದಿಲ್ಲ. ಪಶ್ಚಾತ್ತಾಪ ಪಡುವಂಥ ತಪ್ಪುಗಳು ನಡೆಯಲಿವೆ.


ಮಕರ: ಎದುರಾಗಿರುವ ಸಮಸ್ಯೆಗಳನ್ನು ಬಗೆಹರಿಸಿಕೊಂಡು ಅವಕಾಶಗಳನ್ನು ಉಪಯೋಗಿಸಿಕೊಳ್ಳಿರಿ. ಯಶಸ್ಸಿನ ಹೊಸ ಮಾರ್ಗಗಳ ಅರಿವಾಗುವುದು. ಸ್ವಪ್ರಯತ್ನದೊಂದಿಗೆ ದೈವ ಬಲವೂ ಇರುತ್ತದೆ.

ಕುಂಭ: ನೌಕರಿಯ ಅಥವಾ ಸಂಪಾದನೆಯ ಯೋಚನೆಯನ್ನು ಬಿಟ್ಟು ಉನ್ನತ ಓದಿನೆಡೆಗೆ ಗಮನ ನೀಡುವುದು ಉತ್ತಮ. ಅವಿವಾಹಿತರಿಗೆ ಕಂಕಣ ಬಲದ ಯೋಗವಿದ್ದು ಮಾತುಕತೆಯಿಂದ ದಿನ ನಿಗದಿಯಾಗುವುದು.

ಮೀನ: ವಿದೇಶದಲ್ಲಿ ನೆಲೆಸಿರುವವರಿಗೆ ಸ್ವಸ್ಥಾನದಲ್ಲಿ ಇರುವಂಥ ಪೋಷಕರ ಬಗ್ಗೆ ತಲೆಬಿಸಿಯಾಗುತ್ತದೆ. ಗೃಹ ವಿನ್ಯಾಸಗಾರರಿಗೆ ಹಾಗೂ ಒಳಾಂಗಣ ವಿನ್ಯಾಸಗಾರರಿಗೆ ಅವಕಾಶಗಳು ದೊರೆಯಲಿವೆ.

ವಿನಿಮಯ ದರ: ಡಾಲರ್ 86.43 | ಪೌಂಡ್ 116.45 | ಯುರೊ 99.48 | ಯೆನ್ (100ಕ್ಕೆ) 60

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	24,853
ಇಂದಿನ ಅಂತ್ಯ:	24,812
ದಿನದ ಗರಿಷ್ಠ:	24,750
↓	41

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	100 ಕ್ಕೆ	₹585
	12 ಕ್ಕೆ	₹78
ಮೈಸೂರು:	100 ಕ್ಕೆ	₹590

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹222-562
ದ್ವಿತಳಿ (ಬಿ.ವಿ)	₹388-683

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹195
ಆರ್‌ಎಸ್‌ಎಸ್-5	₹189
ಗುಡ್ ಲಾಟ್	₹178

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹27,200
ಎಸಿ	₹15,120
ಆರ್‌ಪಿ	₹20,500
ಆರ್‌ಸಿ	₹10,550

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹12500-16000
ಬೆಂಗಳೂರು	₹20000-24000
ತುಮಕೂರು	₹2100-23500

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1410 (1410)
ಸೋಯಾ (ರಿಫೈನ್ಡ್)	₹1200 (1210)
ಸೂರ್ಯಕಾಂತಿ (ರಿಫೈನ್ಡ್)	₹1350 (1350)
ಪಾಮೋಲಿನ್	₹1200 (1200)

ಈರುಳ್ಳಿ ಧಾರಣೆ (ಪ್ರತಿ ಕ್ವಿಂಟಾಲ್) ಬೆಂಗಳೂರು

ದೊಡ್ಡ	₹1,500-2,000
ಮಧ್ಯಮ	₹1,000-1,500
ಸಣ್ಣ	₹500-1,000

ಅಡಿಕೆ ಧಾರಣೆ

ಕುಮಟಾ		ಸಿದ್ದಾಪುರ		ಶಿರಸಿ	
ಚಾಲಿ	38109-42598	ಗೊರಬಲು	17009-30589	ರಾಶಿ	39099-44899
ಚಿಪ್ಪು	23569-29089	ರಾಶಿ	47009-57599	ತಟ್ಟಿಬೆಟ್ಟೆ	29100-30100
ಕೋಕ	5509-19269	ಸರಕು	62000-93540		
ಫ್ಯಾಕ್ಟರಿ	4010-23800	ಬಿಳಿಗೋಟು	23900-29869	ಬೆಟ್ಟೆ	28989-37699
ಹೊಸಚಾಲಿ	35001-42129	ಚಾಲಿ	33599-40099	ಬಿಳಿಗೋಟು	20619-32299
ಶಿವಮೊಗ್ಗ		ಕೋಕ	16099-24689	ಚಾಲಿ	34299-42699
ಬೆಟ್ಟೆ	50009-58619	ಕೆಂಪುಗೋಟು	18900-23399	ಕೆಂಪುಗೋಟು	16199-22709
				ರಾಶಿ	41518-48099

ಫಾಸ್ಟ್‌ಟ್ಯಾಗ್: ವಾರ್ಷಿಕ ಪಾಸ್

ಆಗಸ್ಟ್ 15ರಿಂದ ಎಲ್ಲರಿಗೂ ಲಭ್ಯ, ಸಚಿವ ನಿತಿನ್ ಗಡ್ಕರಿ ಮಾಹಿತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಷ್ಟ್ರೀಯ ಹೆದ್ದಾರಿಗಳಲ್ಲಿ ಸುಲಲಿತ ಪ್ರಯಾಣಕ್ಕೆ ಅನುವು ಮಾಡಿಕೊಡಲು ಕೇಂದ್ರ ಸರ್ಕಾರವು ಆಗಸ್ಟ್ 15ರಿಂದ ಫಾಸ್ಟ್‌ಟ್ಯಾಗ್ ಆಧಾರಿತ ವಾರ್ಷಿಕ ಪಾಸ್ ಜಾರಿಗೊಳಿಸಲಿದೆ ಎಂದು ಹೆದ್ದಾರಿ ಹಾಗೂ ರಸ್ತೆ ಸಾರಿಗೆ ಸಚಿವ ನಿತಿನ್ ಗಡ್ಕರಿ ಬುಧವಾರ ಪ್ರಕಟಿಸಿದ್ದಾರೆ.

ಫಾಸ್ಟ್‌ಟ್ಯಾಗ್ ಕಾರ್ಡ್‌ಗಳನ್ನು ಪದೇ ಪದೇ ರೀಚಾರ್ಜ್ ಮಾಡುವ ಅಥವಾ ಹೆದ್ದಾರಿ ಶುಲ್ಕ ವಸೂಲಿ ಕೇಂದ್ರಗಳಲ್ಲಿ ನಗದು ಬಳಸಿ ಶುಲ್ಕ ಪಾವತಿಸುವ ಅಗತ್ಯವಿಲ್ಲದೆ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಸುಗಮ ಪ್ರಯಾಣಕ್ಕೆ ಈ ವ್ಯವಸ್ಥೆ ಅನುವು ಮಾಡಿಕೊಡುತ್ತದೆ ಎಂದು ಗಡ್ಕರಿ ಅವರು 'ಎಕ್ಸ್'ನಲ್ಲಿ ತಿಳಿಸಿದ್ದಾರೆ.

ಈಗಾಗಲೇ ಫಾಸ್ಟ್‌ಟ್ಯಾಗ್ ಹೊಂದಿರುವವರು ಹೊಸ ಫಾಸ್ಟ್‌ಟ್ಯಾಗ್ ಖರೀದಿಸುವ ಅಗತ್ಯವಿಲ್ಲ ಎಂದು ಸಚಿವಾಲಯ ಸ್ಪಷ್ಟಪಡಿಸಿದೆ.

'ವಾರ್ಷಿಕ ಪಾಸ್ ಅನ್ನು ನಿಮ್ಮಲ್ಲಿರುವ ಫಾಸ್ಟ್‌ಟ್ಯಾಗ್‌ನಲ್ಲಿ ಸಕ್ರಿಯಗೊಳಿಸಬಹುದು. ಆದರೆ, ಫಾಸ್ಟ್‌ಟ್ಯಾಗ್ ಎಲ್ಲ ಅರ್ಹತಾ ಮಾನದಂಡಗಳನ್ನು ಪೂರೈಸಿರಬೇಕು (ಅಂದರೆ, ಅದನ್ನು ವಾಹನದ ವಿಂಡ್‌ಶೀಲ್ಡ್‌ನಲ್ಲಿ ಸರಿಯಾಗಿ ಅಂಟಿಸಿರಬೇಕು, ವಾಹನ ನೋಂದಣಿ ಸಂಖ್ಯೆಗೆ ಲಿಂಕ್ ಮಾಡಿರಬೇಕು, ಕಪ್ಪುಪಟ್ಟಿಗೆ ಸೇರಿರಬಾರದು ಇತ್ಯಾದಿ)' ಎಂದು ಸಚಿವಾಲಯ ತಿಳಿಸಿದೆ.

ರಸ್ತೆ ಸಾರಿಗೆ ಸಚಿವಾಲಯದ 2024ರ ವರ್ಷಾಂತ್ಯದ ಮಾಹಿತಿ ಪ್ರಕಾರ, 2024 ಡಿಸೆಂಬರ್ 1ರವರೆಗೆ 10.1 ಕೋಟಿಗೂ ಹೆಚ್ಚು ಫಾಸ್ಟ್‌ಟ್ಯಾಗ್‌ಗಳನ್ನು ನೀಡಲಾಗಿದೆ.

'ಹೊಸ ಕ್ರಮವು 60 ಕಿ.ಮೀ ವ್ಯಾಪ್ತಿಯೊಳಗೆ ಇರುವ ಟೋಲ್ ಪ್ಲಾಜಾಗಳಿಗೆ ಸಂಬಂಧಿಸಿದ ದೀರ್ಘಕಾಲೀನ ಸಮಸ್ಯೆಗಳನ್ನು ಬಗೆಹರಿಸುತ್ತದೆ. ಸುಲಭ ವಹಿವಾಟಿನ ಮೂಲಕ ಟೋಲ್ ಪಾವತಿಗಳನ್ನು ಸರಳಗೊಳಿಸುತ್ತದೆ' ಎಂದು ಗಡ್ಕರಿ ತಿಳಿಸಿದ್ದಾರೆ.

ಈಗ ನಿರ್ದಿಷ್ಟ ಟೋಲ್ ಪ್ಲಾಜಾ ಮೂಲಕ ಆಗಾಗ ಹಾದುಹೋಗುವ ವಾಹನಗಳಿಗೆ ಮಾಸಿಕ ಪಾಸ್‌ಗಳು ಲಭ್ಯವಿವೆ. ತಿಂಗಳಿಗೆ ₹340 ಮತ್ತು ವಾರ್ಷಿಕವಾಗಿ ₹4,080 ಪಾವತಿಸಿ ಈ ಪಾಸ್ ಪಡೆಯಬಹುದು. ರಾಷ್ಟ್ರೀಯ ಹೆದ್ದಾರಿ ಶುಲ್ಕ ಪ್ಲಾಜಾದಲ್ಲಿ ಫಾಸ್ಟ್‌ಟ್ಯಾಗ್ ಮೂಲಕ ಸರಾಸರಿ ದೈನಂದಿನ ಟೋಲ್ ಸಂಗ್ರಹವು ₹200 ಕೋಟಿಯಷ್ಟಿದೆ.

ಫಾಸ್ಟ್‌ಟ್ಯಾಗ್ ಪಾಸ್: ಹೇಗೆ ಬಳಕೆ?

- **ವಾರ್ಷಿಕ ಪಾಸ್ ಮೊತ್ತ:** ₹3 ಸಾವಿರ
- **ಯಾವಾಗ ಜಾರಿ?:** ಆಗಸ್ಟ್ 15ರಿಂದ
- **ಯಾವೆಲ್ಲ ವಾಹನಗಳಿಗೆ?:** ಕಾರುಗಳು, ಜೀಪುಗಳು ಹಾಗೂ ವ್ಯಾನ್‌ಗಳಂತಹ ವಾಣಿಜ್ಯೇತರ ಖಾಸಗಿ ವಾಹನಗಳಿಗೆ. ವಾಣಿಜ್ಯ ವಾಹನಗಳಲ್ಲಿ ಬಳಸಿದರೆ ಪಾಸ್ ನಿಷ್ಕ್ರಿಯಗೊಳ್ಳಲಿದೆ.
- **ಪಾಸ್ ಬಳಸಿ ಎಲ್ಲಿ ಪ್ರಯಾಣಿಸಬಹುದು?:** ರಾಷ್ಟ್ರೀಯ ಹೆದ್ದಾರಿ ಹಾಗೂ ರಾಷ್ಟ್ರೀಯ ಎಕ್ಸ್‌ಪ್ರೆಸ್‌ವೇಗಳಲ್ಲಿ ಬಳಸಬಹುದು. ರಾಜ್ಯ ಸರ್ಕಾರಗಳು ಅಥವಾ ಸ್ಥಳೀಯ ಸಂಸ್ಥೆಗಳು ನಿರ್ವಹಿಸುವ ಎಕ್ಸ್‌ಪ್ರೆಸ್‌ವೇಗಳು, ರಾಜ್ಯ ಹೆದ್ದಾರಿಗಳು ಇತ್ಯಾದಿಗಳಲ್ಲಿನ ಪ್ಲಾಜಾಗಳಲ್ಲಿ ಪಾಸ್ ಅನ್ವಯವಾಗದು.
- **ಎಷ್ಟು ಸಲ ಪ್ರಯಾಣ ಮಾಡಬಹುದು?:** ಪಾಸ್ ಸಕ್ರಿಯಗೊಳಿಸಿದ ದಿನಾಂಕದಿಂದ ಒಂದು ವರ್ಷದವರೆಗೆ ಅಥವಾ 200 ಟ್ರಿಪ್‌ಗಳವರೆಗೆ – ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ. 200 ಟ್ರಿಪ್‌ಗಳ ಮಿತಿ ದಾಟಿದ ನಂತರ ಪಾಸ್ ಅನ್ನು ರೀಚಾರ್ಜ್ ಮಾಡಬಹುದು. ಶುಲ್ಕ ಪ್ಲಾಜಾವನ್ನು ಒಂದು ಸಾಲ ದಾಟಿದರೆ ಅದನ್ನು ಒಂದು ಟ್ರಿಪ್ ಎಂದು ಪರಿಗಣಿಸಲಾಗುತ್ತದೆ. ಒಂದು ಸುತ್ತಿನ ಪ್ರಯಾಣವನ್ನು ಎರಡು ಟ್ರಿಪ್‌ಗಳಾಗಿ ಪರಿಗಣಿಸಲಾಗುತ್ತದೆ.
- **ಪಾಸ್ ಎಲ್ಲಿ ಖರೀದಿ ಮಾಡಬೇಕು?:** ರಾಜ್‌ಮಾರ್ಗ್ ಯಾತ್ರಾ ಅಪ್ಲಿಕೇಷನ್ ಹಾಗೂ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯದ ವೆಬ್‌ಸೈಟ್‌ಗಳಲ್ಲಿ ಲಿಂಕ್ ಮೂಲಕ.
- **ಫಾಸ್ಟ್‌ಟ್ಯಾಗ್ ಹೊಂದಿರುವವರು ಹೊಸದಾಗಿ ಫಾಸ್ಟ್‌ಟ್ಯಾಗ್ ಖರೀದಿಸುವ ಅಗತ್ಯ ಇದೆಯೇ?** ಇಲ್ಲ. ವಾಹನ ಚಾಲಕರು ಹೊಸದಾಗಿ ಫಾಸ್ಟ್‌ಟ್ಯಾಗ್ ಖರೀದಿಸುವ ಅಗತ್ಯ ಇಲ್ಲ. ಈಗಿರುವ ಫಾಸ್ಟ್‌ಟ್ಯಾಗ್ ಮೂಲಕ ವಾರ್ಷಿಕ ಪಾಸ್ ಪಡೆಯಬಹುದು.
- **ಬೇರೆ ವಾಹನಗಳಿಗೆ ಈ ಪಾಸ್ ವರ್ಗಾವಣೆ ಮಾಡಬಹುದೇ?:** ಇದಕ್ಕೆ ಅವಕಾಶ ಇಲ್ಲ.
- **ವಾರ್ಷಿಕ ಪಾಸ್ ಪಡೆಯುವುದು ಕಡ್ಡಾಯವೇ?:** ಕಡ್ಡಾಯವೇನಲ್ಲ. ವಾಹನ ಸವಾರರು ಫಾಸ್ಟ್ ಟ್ಯಾಗ್ ಬಳಸಿ ಹೆದ್ದಾರಿಗಳ ಮೂಲಕ ಪ್ರಯಾಣ ಮಾಡಬಹುದು.

'ಪಾಕ್ ವಿರುದ್ಧ ಕ್ರಮ ಕೈಗೊಳ್ಳಿ'

ಕೆನಾನಸ್ಕಿಸ್ (ಕೆನಡಾ) (ಪಿಟಿಐ): 'ಗಡಿಯಾಚೆಗಿನ ಭಯೋತ್ಪಾದನೆಗೆ ಕುಮ್ಮಕ್ಕು ನೀಡುತ್ತಿರುವ ಪಾಕಿಸ್ತಾನದ ವಿರುದ್ಧ ಜಿ–7 ರಾಷ್ಟ್ರಗಳು ಕ್ರಮ ತೆಗೆದುಕೊಳ್ಳಬೇಕು' ಎಂದು ಪ್ರಧಾನಿ ನರೇಂದ್ರ ಮೋದಿ ಬುಧವಾರ ಪ್ರತಿಪಾದಿಸಿದರು.

ಜಿ–7 ರಾಷ್ಟ್ರಗಳ ಶೃಂಗಸಭೆಯಲ್ಲಿ ಮಾತನಾಡಿದ ಅವರು, 'ಭಯೋತ್ಪಾದನೆ ನಮ್ಮ ಮುಂದಿರುವ ದೊಡ್ಡ ಸವಾಲು. ಇದರ ಬಗ್ಗೆ ಕಣ್ಮುಚ್ಚಿ ಕೂರುವುದು ಮಾನವೀಯತೆಗೆ ಎಸಗುವ ದ್ರೋಹವಾಗುತ್ತದೆ' ಎಂದು ಅವರು ಪಾಕಿಸ್ತಾನ ವಿರುದ್ಧವಾಗ್ದಾಳಿ ನಡೆಸಿದರು.

'ಏಪ್ರಿಲ್ 22ರಂದು ಪಹಲ್ಗಾಮ್‌ನಲ್ಲಿ ನಡೆದ ದಾಳಿಯು ಪ್ರತಿಯೊಬ್ಬ ಭಾರತೀಯನ ಆತ್ಮ, ಅಸ್ಮಿತೆ ಹಾಗೂ ಘನತೆ ಮೇಲೆ ನಡೆದ ದಾಳಿಯಾಗಿದೆ. ಜಾಗತಿಕ ಶಾಂತಿ, ಸಮೃದ್ಧಿಗಾಗಿ ನಮ್ಮ ಚಿಂತನೆ ಮತ್ತು ನೀತಿಗಳು ಸ್ಪಷ್ಟವಾಗಿರಬೇಕು. ಭಯೋತ್ಪಾದನೆಯನ್ನು ಬೆಂಬಲಿಸುವ ಯಾವುದೇ ರಾಷ್ಟ್ರವನ್ನು ತನ್ನ ಕೃತ್ಯಕ್ಕೆ ತಕ್ಕ ಬೆಲೆತರುವಂತೆ ಮಾಡಬೇಕು' ಎಂದರು.

'ಒಂದು ಕಡೆ ನಮ್ಮ ಆದ್ಯತೆ–ಹಿತಾಸಕ್ತಿಗೆ ಧಕ್ಕೆ ತಂದವರ ವಿರುದ್ಧ ನಾವು ನಿರ್ಬಂಧಗಳನ್ನು ಹೇರುತ್ತಿದ್ದರೆ, ಮತ್ತೊಂದೆಡೆ ಭಯೋತ್ಪಾದನೆಗೆ ಬಹಿರಂಗವಾಗಿಯೇ ಉತ್ತೇಜನ ನೀಡುತ್ತಿರುವ ರಾಷ್ಟ್ರಕ್ಕೆ ಸನ್ಮಾನಗಳು ಸಲ್ಲುತ್ತಿವೆ' ಎಂದ ಅವರು. ಭಯೋತ್ಪಾದನೆ ವಿರುದ್ಧದ ನೀತಿಯಲ್ಲಿ ದ್ವಂದ್ವ ಇರಕೂಡದು' ಎಂದರು.

'ಮಾತುಕತೆ, ರಾಜತಾಂತ್ರಿಕತೆಯೇ ಪರಿಹಾರ'

ಝಾಗ್ರೆಬ್ (ಪಿಟಿಐ): 'ಸಮಸ್ಯೆ ಮತ್ತು ಪರಿಹಾರ ಎರಡೂ ಯುದ್ಧಭೂಮಿಯಿಂದಲೇ ಬರಲಾಗದು. ಮಾತುಕತೆ ಮತ್ತು ರಾಜತಾಂತ್ರಿಕತೆ ಮೂಲಕವೇ ಪರಿಹಾರ ಕಂಡುಕೊಳ್ಳಬೇಕಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಕ್ರೊಯೇಷಿಯಾ ಪ್ರವಾಸ ಕೈಗೊಂಡಿರುವ ಅವರು ಅಲ್ಲಿನ ಅಧ್ಯಕ್ಷ ಆ್ಯಂಡ್ರೆಜ್ ಪ್ಲೆಂಕೋವಿಕ್ ಅವರೊಂದಿಗೆ ಬುಧವಾರ ಮಾತುಕತೆ ನಡೆಸಿದರು. ಬಳಿಕ ಪತ್ರಿಕಾ ಹೇಳಿಕೆ ನೀಡಿದ್ದು, 'ಯೂರೋಪ್ ಇರಲಿ, ಏಷ್ಯಾ ಇರಲಿ ಎಲ್ಲ ಪ್ರದೇಶಗಳ ಸಮಸ್ಯೆಗೂ ಮಾತುಕತೆ, ರಾಜತಾಂತ್ರಿಕತೆಯೇ ಪರಿಹಾರ ಆಗಬೇಕು' ಎಂದಿದ್ದಾರೆ.

ಬೆಳ್ಳಿ ಧಾರಣೆ ₹1 ಸಾವಿರ ಏರಿಕೆ

ನವದೆಹಲಿ (ಪಿಟಿಐ): ಚಿನಿವಾರ ಪೇಟೆಯಲ್ಲಿ ಬುಧವಾರ ಬೆಳ್ಳಿ ದರವು ಕೆ.ಜಿಗೆ ₹1 ಸಾವಿರ ಹೆಚ್ಚಳವಾಗಿ, ₹1,08,200ರಂತೆ ಮಾರಾಟವಾಗಿದೆ.

ಸುದ್ದಿ 2 ನಿಮಿಷ

'ಯುಪಿಎಸ್ ನೌಕರರಿಗೆ ನಿವೃತ್ತಿ, ಮರಣ ಗ್ರ್ಯಾಚ್ಯುಟಿ ಸೌಲಭ್ಯ'


ನವದೆಹಲಿ (ಪಿಟಿಐ): ಏಕೀಕೃತ ಪಿಂಚಣಿ ಯೋಜನೆ (ಯುಪಿಎಸ್) ವ್ಯಾಪ್ತಿಯ ಕೇಂದ್ರ ಸರ್ಕಾರದ ಎಲ್ಲ ನೌಕರರು ಹಳೆ ಪಿಂಚಣಿ ಯೋಜನೆಯಲ್ಲಿ (ಒಪಿಎಸ್) ಇದ್ದ ನಿವೃತ್ತಿ ಮತ್ತು ಮರಣ ಗ್ರ್ಯಾಚ್ಯುಟಿ ಸೌಲಭ್ಯ ಪಡೆಯಬಹುದು ಎಂದು ಕೇಂದ್ರ ಸಿಬ್ಬಂದಿ, ಸಾರ್ವಜನಿಕ ದೂರು ಮತ್ತು ಪಿಂಚಣಿ ಖಾತೆ ರಾಜ್ಯ ಸಚಿವ ಜಿತೇಂದ್ರ ಸಿಂಗ್ ಬುಧವಾರ ಹೇಳಿದ್ದಾರೆ.

ಈ ಕ್ರಮವು ಸರ್ಕಾರಿ ನೌಕರರ ಗಮನಾರ್ಹವಾದ ಬೇಡಿಕೆಯೊಂದಕ್ಕೆ ಸ್ಪಂದಿಸಿದೆ ಎಂದು ಅವರು ಹೇಳಿದ್ದಾರೆ. ಸಚಿವಾಲಯದ 11 ವರ್ಷಗಳ ಪಯಣದ ಬಗ್ಗೆ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡುವಾಗ ಈ ವಿವರ ನೀಡಿದ್ದಾರೆ.

ಸಿಬ್ಬಂದಿ ಸಚಿವಾಲಯದ ಅಧೀನದ ಪಿಂಚಣಿ ಮತ್ತು ಪಿಂಚಣಿದಾರರ ಅಭಿವೃದ್ಧಿ ಇಲಾಖೆಯು ಬುಧವಾರ ಆದೇಶವೊಂದನ್ನು ಹೊರಡಿಸಿದೆ.

'ನೌಕರರು ಸೇವೆಯಲ್ಲಿದ್ದ ಅವಧಿಯಲ್ಲಿ ಮೃತಪಟ್ಟರೆ ಒಪಿಎಸ್ ಸೌಲಭ್ಯಕ್ಕೆ ಮರಳುವ ಅವಕಾಶವನ್ನು ಈ ಆದೇಶವು ಒದಗಿಸಿದೆ. ಇದು ನೌಕರರು ಬಯಸಿದ್ದ ಸ್ಪಷ್ಟನೆಯನ್ನು ಒದಗಿಸಿದೆ' ಎಂದು ಇಲಾಖೆಯ ಕಾರ್ಯದರ್ಶಿ ವಿ. ಶ್ರೀನಿವಾಸ್ ತಿಳಿಸಿದ್ದಾರೆ.

ಸರ್ಕಾರದ ಈ ಕ್ರಮವನ್ನು ಅಖಿಲ ಭಾರತ ಎನ್‌ಪಿಎಸ್ ನೌಕರರ ಒಕ್ಕೂಟದ ಅಧ್ಯಕ್ಷ ಮಂಜೀತ್ ಸಿಂಗ್ ಪಟೇಲ್ ಸ್ವಾಗತಿಸಿದ್ದಾರೆ. ಯುಪಿಎಸ್ ಅಡಿಯಲ್ಲಿ ಮರಣ ಮತ್ತು ನಿವೃತ್ತಿ ಗ್ರ್ಯಾಚ್ಯುಟಿ ಸೌಲಭ್ಯವನ್ನು ಒದಗಿಸಿರುವುದು ನೌಕರರಲ್ಲಿನ ತಪ್ಪುಕಲ್ಪನೆಗಳನ್ನು ನಿವಾರಿಸುತ್ತದೆ ಎಂದು ಹೇಳಿದ್ದಾರೆ.



ಯುಪಿಎಸ್ ಸೌಲಭ್ಯ ಪಡೆದಿರುವ ನೌಕರರು ಸೇವಾವಧಿಯಲ್ಲಿ ಮೃತಪಟ್ಟರೆ, ಅಂಗವೈಕಲ್ಯಕ್ಕೆ ತುತ್ತಾದರೆ ಅವರಿಗೆ ಒಪಿಎಸ್ ಸೌಲಭ್ಯ ಸಿಗುವಂತೆ ಮಾಡಿರುವುದು ನ್ಯಾಯ ಒದಗಿಸುವ ಕೆಲಸ ಎಂದು ಪಟೇಲ್ ಅಭಿಪ್ರಾಯಪಟ್ಟಿದ್ದಾರೆ.

'ನೈಜ ಜಿಡಿಪಿ ಪ್ರಗತಿ ಶೇ 6.5ರಷ್ಟು'

ಕೋಲ್ಕತ್ತ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದಲ್ಲಿ ದೇಶದ ನೈಜ ಜಿಡಿಪಿ ಬೆಳವಣಿಗೆ ಶೇಕಡ 6.5ಕ್ಕಿಂತ ಹೆಚ್ಚಾಗಬಹುದು ಎಂದು ಕ್ರೆಡಿಟ್ ರೇಟಿಂಗ್ಸ್ ಸಂಸ್ಥೆ ಐಸಿಆರ್‌ಎ ಬುಧವಾರ ತಿಳಿಸಿದೆ.

ಇದೇ ಅವಧಿಯಲ್ಲಿ ಒಟ್ಟು ಮೌಲ್ಯ ವರ್ಧನೆಯ (ಜಿವಿಎ) ಪ್ರಗತಿ ಶೇ 6.3ರಷ್ಟಾಗುವ ನಿರೀಕ್ಷೆಯಿದೆ ಎಂದು ತನ್ನ ಮುನ್ನೋಟದಲ್ಲಿ ಹೇಳಿದೆ.

ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ) ಆಧಾರಿತ ಚಿಲ್ಲರೆ ಹಣದುಬ್ಬರ ಶೇ 4.2ರಷ್ಟು ಮತ್ತು ಸಗಟು ಹಣದುಬ್ಬರ ಶೇ 2.7ಕ್ಕಿಂತ ಹೆಚ್ಚಬಹುದು. ವಿತ್ತೀಯ ಕೊರತೆಯು ಜಿಡಿಪಿಯ ಶೇ 4.4ರಷ್ಟು ಮತ್ತು ಚಾಲ್ತಿ ಖಾತೆ ಕೊರತೆಯು ಶೇ (–)1ರಷ್ಟು ಇರಲಿದೆ ಎಂದು ಅದು ಅಂದಾಜಿಸಿದೆ.

ಜಲಾಶಯಗಳಲ್ಲಿ ನೀರಿನ ಸಂಗ್ರಹ ವಾಡಿಕೆಗಿಂತ ಹೆಚ್ಚಿದೆ. ಹಿಂಗಾರು ಬೆಳೆಯಿಂದಾಗಿ ಹಣದ ಹರಿವು ಹೆಚ್ಚಿದೆ. ಹೀಗಾಗಿ, ಗ್ರಾಮೀಣ ಪ್ರದೇಶದಲ್ಲಿ ಬೇಡಿಕೆ ಸದೃಢವಾಗಿರುವ ನಿರೀಕ್ಷೆ ಇದೆ ಎಂದು ತಿಳಿಸಿದೆ.

ಮುಂದಿನ ದಿನಗಳಲ್ಲಿ ದೇಶದ ವ್ಯಾಪಾರ ಸರಕುಗಳ ರಫ್ತು ಇಳಿಕೆಯಾಗಬಹುದು. ಸೇವಾ ರಫ್ತು ಹೆಚ್ಚಳವಾಗುವ ಸಾಧ್ಯತೆ ಇದೆ ಎಂದು ತಿಳಿಸಿದೆ.

ಎಪಿರಾಕ್‌ನಿಂದ ₹1,500 ಕೋಟಿ ಹೂಡಿಕೆ: ಸಚಿವ ಪಾಟೀಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗಣಿಗಾರಿಕೆ ಮತ್ತು ಬೃಹತ್ ನಿರ್ಮಾಣ ಕಾಮಗಾರಿಗಳಲ್ಲಿ ಬಳಕೆಯಾಗುವ ಯಂತ್ರೋಪಕರಣ ತಯಾರಿಸುವ ಸ್ವೀಡನ್‌ನ ಎಪಿರಾಕ್ ಕಂಪನಿಯು ರಾಜ್ಯದಲ್ಲಿ ₹1,500 ಕೋಟಿ ಹೂಡಿಕೆ ಮಾಡಲಿದೆ' ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಹೇಳಿದ್ದಾರೆ.

ಬಂಡವಾಳ ಆಕರ್ಷಣೆಗಾಗಿ ಸ್ವೀಡನ್ ಪ್ರವಾಸದಲ್ಲಿರುವ ಅವರು ಅಲ್ಲಿನ ಉದ್ಯಮಿಗಳ ಜತೆಗಿನ ಸಭೆಯ ನಂತರ ಮಾಹಿತಿ ಹಂಚಿಕೊಂಡಿದ್ದಾರೆ.

'ಎಪಿರಾಕ್‌ನ ಸಂಶೋಧನೆ ಮತ್ತು ಅಭಿವೃದ್ಧಿ (ಆರ್ ಆ್ಯಂಡ್ ಡಿ) ಕೇಂದ್ರವು ಬೆಂಗಳೂರಿನಲ್ಲಿ ಈಗಾಗಲೇ ಕಾರ್ಯನಿರ್ವಹಿಸುತ್ತಿದ್ದು, ಅಲ್ಲಿ 500 ಉದ್ಯೋಗಿಗಳು ಕಾರ್ಯನಿರ್ವಹಿಸುತ್ತಿದ್ದಾರೆ' ಎಂದಿದ್ದಾರೆ.

'ಆರ್ ಆ್ಯಂಡ್ ಡಿ ಕೇಂದ್ರ ಹಾಗೂ ಕಾರ್ಯ-ಚಟುವಟಿಕೆ ವಿಸ್ತರಣೆಗೆ ಕಂಪನಿಯು ಪ್ರಸಕ್ತ ಆರ್ಥಿಕ ವರ್ಷದಲ್ಲೇ ₹500 ಕೋಟಿ ಹೂಡಿಕೆ ಮಾಡಲಿದೆ. 2030ರ ವೇಳೆಗೆ ಇನ್ನೂ ₹1,000 ಕೋಟಿ ಹೂಡಿಕೆ ಮಾಡಲಿದೆ' ಎಂದು ಮಾಹಿತಿ ನೀಡಿದ್ದಾರೆ.

ಆಹಾರ ಸಂಸ್ಕರಣೆ ಮತ್ತು ಪ್ಯಾಕೇಜಿಂಗ್ ಕ್ಷೇತ್ರದ ದೈತ್ಯ ಕಂಪನಿ 'ಟೆಟ್ರಾ ಪ್ಯಾಕ್'ನ ಮುಖ್ಯಸ್ಥರ ಜತೆ ಸಚಿವ ಪಾಟೀಲ ಅವರು ರಾಜ್ಯದಲ್ಲಿ ಹೂಡಿಕೆ ಮತ್ತು ಪಾಲುದಾರಿಕೆಗೆ ಇರುವ ಅವಕಾಶಗಳ ಬಗ್ಗೆ ಚರ್ಚಿಸಿದರು. ವೈಮಾಂತರಿಕ್ಷ ಮತ್ತು ರಕ್ಷಣಾ ವಲಯದ ತಯಾರಿಕಾ ಕಂಪನಿ 'ಎಸ್‌ಎಬಿ'ಯ ಸಿಇಒ ಕ್ರಿಸ್ಟಿಯನ್ ಹೆಡೆಲಿನ್ ಜತೆ ಮಾತುಕತೆ ನಡೆಸಿದ್ದು, ರಾಜ್ಯದಲ್ಲಿ ವಿನ್ಯಾಸ ಕೇಂದ್ರ ಸ್ಥಾಪನೆ ಬಗ್ಗೆ ಚರ್ಚಿಸಿದ್ದಾರೆ ಎಂದು ಅವರ ಹೇಳಿದ್ದಾರೆ.

ಮುಂಬೈ ಧಾರಣೆ (ಶೇಂಗಾ)

18-06-2025	
ಜಾವಾ 70/80(ಹೊಸ)	9700-9800
ಜಾವಾ 80/90(ಹೊಸ)	9200-9300
ದಪ್ಪ ಮಧ್ಯಪ್ರದೇಶ (ಹೊಸ)	7700-7800
ದಪ್ಪ ಗುಜರಾತ್ (ಹೊಸ)	8000-8100
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1420 (1420)
ಒಂದು ವಾರದ ಡೆಲಿವರಿ	1415 (1415)
ಪಾಮ್ ವಾರದ ಡೆಲಿವರಿ	1198 (1198)
ಸೂರ್ಯಕಾಂತಿ ಎಣ್ಣೆ ಕಚ್ಚಾ	1280 (1280)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	99,250 (98,850)
ಬೆಳ್ಳಿ ಕೆ.ಜಿಗೆ	1,09,500 (1,09,300)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಶರಣಾಗುವ ಮಾತೇ ಇಲ್ಲ: ಟ್ರಂಪ್‌ಗೆ ಖಮೇನಿ ತಿರುಗೇಟು

ದುಬೈ (ಎಪಿ): 'ಬೇಷರತ್ತಾಗಿ ಶರಣಾಗಬೇಕು' ಎಂಬ ಅಮೆರಿಕದ ಕರೆಯನ್ನು ಇರಾನ್ ಪರಮೋಚ್ಚ ನಾಯಕ ಆಯತೊಲ್ಲಾ ಅಲಿ ಖಮೇನಿ ಬುಧವಾರ ಸಾರಾಸಗಟಾಗಿ ತಿರಸ್ಕರಿಸಿದ್ದಾರೆ.

ಇರಾನ್ ಮೇಲೆ ಇಸ್ರೇಲ್ ನಡೆಸುತ್ತಿರುವ ದಾಳಿಗಳಲ್ಲಿ ಅಮೆರಿಕ ಮಧ್ಯಪ್ರವೇಶಿಸಿದ್ದೇ ಆದಲ್ಲಿ, ಅದು ಆ ಎರಡು ದೇಶಗಳಿಗೆ ಸರಿಪಡಿಸಲು ಸಾಧ್ಯವಾಗದ ಹಾನಿ ಉಂಟು ಮಾಡಲಿದೆ ಎಂದೂ ಖಮೇನಿ ಎಚ್ಚರಿಸಿದ್ದಾರೆ.

ಖಮೇನಿ ಅವರ ಈ ಹೇಳಿಕೆ ಇರುವ ವಿಡಿಯೊವನ್ನು ಸರ್ಕಾರಿ ಒಡೆತನದ ಸುದ್ದಿವಾಹಿನಿ ಪ್ರಸಾರ ಮಾಡಿದೆ.

ರಾಜಧಾನಿ ಟೆಹರಾನ್ ಮೇಲೆ ದಾಳಿ: ಇರಾನ್‌ನಿಂದಲೂ ಪ್ರತಿದಾಳಿ

ಇಸ್ರೇಲ್ –ಇರಾನ್ ಸಂಘರ್ಷ ತೀವ್ರ

ದುಬೈ (ಎಪಿ): ಇರಾನ್ ರಾಜಧಾನಿ ಟೆಹರಾನ್ ಮೇಲೆ ಇಸ್ರೇಲ್ ಬುಧವಾರ ಮುಂಜಾನೆಯೂ ವೈಮಾನಿಕ ದಾಳಿ ನಡೆಸಿದೆ. ಇದಕ್ಕೆ ಪ್ರತಿಯಾಗಿ ಇರಾನ್ ಕೂಡಾ ಇಸ್ರೇಲ್ ಮೇಲೆ ಸಣ್ಣಪ್ರಮಾಣದಲ್ಲಿ ಕ್ಷಿಪಣಿ ದಾಳಿ ನಡೆಸಿದೆ.

ಇರಾನ್ ಮತ್ತು ಇಸ್ರೇಲ್ ನಡುವಿನ ಸಂಘರ್ಷ ಆರನೇ ದಿನವೂ ಮುಂದುವರಿದಿದ್ದು, ಬುಧವಾರದ ದಾಳಿಯಲ್ಲಿ ಯಾವುದೇ ಪ್ರಾಣ ಹಾನಿ ಸಂಭವಿಸಿಲ್ಲ.

ಪ್ರಮುಖ ಬೆಳವಣಿಗೆಗಳು

- ಇರಾನ್ ಯುರೇನಿಯಂ ಶುದ್ಧೀಕರಣ ಘಟಕ ಮತ್ತು ಕ್ಷಿಪಣಿಯ ಬಿಡಿಭಾಗಗಳ ತಯಾರಿಕಾ ಕೇಂದ್ರವನ್ನು ನಾಶಪಡಿಸಲಾಗಿದೆ ಎಂದು ಇಸ್ರೇಲ್ ಸೇನೆ ತಿಳಿಸಿದೆ.
- ದೇಶದ ಪ್ರಮುಖ ರೇಡಾರ್ ವ್ಯವಸ್ಥೆಗೆ ಹಾನಿಯಾಗಿದೆ ಎಂದು ಇರಾನ್ ಹೇಳಿದೆ
- ಟೆಹರಾನ್‌ನ ಸುತ್ತಮುತ್ತಲಿರುವ ಇರಾನ್‌ನ ಪರಮಾಣು ಯೋಜನೆಗೆ ಸಂಬಂಧಿಸಿದ ಸ್ಥಳಗಳನ್ನು ಇಸ್ರೇಲ್ ನಾಶಪಡಿಸಿದೆ ಎಂದು ಅಂತರರಾಷ್ಟ್ರೀಯ ಅಣುಶಕ್ತಿ ಏಜೆನ್ಸಿ (ಐಎಇಎ) ದೃಢಪಡಿಸಿದೆ.
- ವಿಮಾನಗಳಿಗೆ ತೈಲ ಪೂರೈಸುವ ಟ್ಯಾಂಕರ್‌ಗಳು ಮತ್ತು ಸಿ17 ಯುದ್ಧವಿಮಾನಗಳನ್ನು ಅಮೆರಿಕವು ರಾತ್ರೋರಾತ್ರಿ ಪ್ರೆಸ್ಟ್‌ವಿಕ್, ಸ್ಕಾಟ್ಲೆಂಡ್ ಮತ್ತು ಇಟಲಿಯಲ್ಲಿನ ಯುರೋಪ್ ವಾಯುನೆಲೆಗಳಿಗೆ ಕಳುಹಿಸಿದೆ ಎಂದು 'ಆರೋರಾ ಇಂಟೆಲ್' ತಿಳಿಸಿದೆ. 12 ಎಫ್–16 ಯುದ್ಧವಿಮಾನಗಳನ್ನು ಅಮೆರಿಕವು ಇಟಲಿಯ ವಾಯುನೆಲೆಯಿಂದ ಸೌದಿ ಅರೇಬಿಯಾದ ವಾಯುನೆಲೆಗೆ ಮಂಗಳವಾರ ಸ್ಥಳಾಂತರಿಸಿದೆ ಎಂದು ವರದಿ ಮಾಡಿದೆ
- ಮಧ್ಯಪ್ರಾಚ್ಯದಲ್ಲಿ ಉಂಟಾಗಿರುವ ಉದ್ವಿಗ್ನತೆಯನ್ನು ಶೀಘ್ರದಲ್ಲಿ ಶಮನಗೊಳಿಸುವಂತೆ ಚೀನಾದ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರು ಕರೆ ನೀಡಿದ್ದಾರೆ.

'ಆಪರೇಷನ್ ಸಿಂಧು' ಆರಂಭ

ನವದೆಹಲಿ (ಪಿಟಿಐ): ಸಂಘರ್ಷ ಪೀಡಿತ ಇರಾನ್‌ನಿಂದ ಭಾರತೀಯರನ್ನು ಸುರಕ್ಷಿತವಾಗಿ ಕರೆತರಲು ಭಾರತವು ಬುಧವಾರ 'ಆಪರೇಷನ್ ಸಿಂಧು' ಕಾರ್ಯಾಚರಣೆ ಆರಂಭಿಸಿದೆ.

ಈ ಕಾರ್ಯಾಚರಣೆಯ ಮೊದಲ ಭಾಗವಾಗಿ 'ಉತ್ತರ ಇರಾನ್‌ನಿಂದ 110 ಭಾರತೀಯ ವಿದ್ಯಾರ್ಥಿಗಳನ್ನು ವಿಶೇಷ ವಿಮಾನದ ಮೂಲಕ ಭಾರತಕ್ಕೆ ಕರೆತರಲಾಗುತ್ತಿದೆ. ವಿದ್ಯಾರ್ಥಿಗಳು ಗುರುವಾರ ನಸುಕಿನಲ್ಲಿ ನವದೆಹಲಿಗೆ ಬಂದಿಳಿಯಲಿದ್ದಾರೆ' ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಹೇಳಿದೆ.

'4 ಸಾವಿರಕ್ಕಿಂತ ಹೆಚ್ಚಿನ ಭಾರತೀಯರು ಇರಾನ್‌ನಲ್ಲಿ ನೆಲೆಸಿದ್ದಾರೆ. ಇವರಲ್ಲಿ ಅರ್ಧಕ್ಕಿಂತ ಹೆಚ್ಚಿನವರು ವಿದ್ಯಾರ್ಥಿಗಳು. 'ವಿದೇಶದಲ್ಲಿರುವ ಭಾರತೀಯರ ಭದ್ರತೆ ಮತ್ತು ಸುರಕ್ಷತೆಯೇ ದೇಶದ ಆದ್ಯತೆಯಾಗಿದೆ. ಇರಾನ್‌ನಲ್ಲಿರುವ ಭಾರತೀಯರು, ದೇಶಕ್ಕೆ ಮರಳಲು ತುರ್ತು ಸಹಾಯವಾಣಿ ಮೂಲಕ ಟೆಹರಾನ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿ ಸಂಪರ್ಕಿಸಬಹುದು. ನವದೆಹಲಿಯಲ್ಲೂ ಸಹಾಯವಾಣಿ ಪ್ರಾರಂಭಿಸಲಾಗಿದೆ' ಎಂದು ಸಚಿವಾಲಯ ಹೇಳಿದೆ.

ಗಾಯಗೊಂಡಿರುವ ಕೆಲವು ಭಾರತೀಯ ವಿದ್ಯಾರ್ಥಿಗಳು, ಟೆಹರಾನ್‌ನ ಕೇಶವಾರ್ಜ್ ಪ್ರದೇಶದಲ್ಲಿ ವೈದ್ಯಕೀಯ ವಿದ್ಯಾರ್ಥಿಗಳ ವಸತಿ ಗೃಹವೊಂದರಲ್ಲಿ ಆಶ್ರಯ ಪಡೆದಿದ್ದು, ಸುರಕ್ಷಿತ ಸ್ಥಳಾಂತರ ಎದುರು ನೋಡುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಚಿಕ್ಕಬಳ್ಳಾಪುರ ಜಿಲ್ಲೆಯ ಗ್ರಾಮದಲ್ಲಿ ಇರಾನ್ ಧರ್ಮಗುರು ಹೆಸರಿನ ಆಸ್ಪತ್ರೆ

ಇರಾನ್‌ನಲ್ಲಿ ಯುದ್ಧ; ಅಲೀಪುರದಲ್ಲಿ ತಲ್ಲಣ

• ಡಿ.ಎಂ.ಕುರ್ಕೆ ಪ್ರಶಾಂತ್

ಚಿಕ್ಕಬಳ್ಳಾಪುರ: ಇರಾನ್ ನೆಲದಲ್ಲಿ ಯುದ್ಧ ತೀವ್ರವಾಗುತ್ತಿದ್ದರೆ ಇತ್ತ ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನ ಅಲೀಪುರ ಗ್ರಾಮಸ್ಥರಲ್ಲಿ ದುಗುಡ ಹೆಚ್ಚಾಗುತ್ತದೆ.

ಅಲೀಪುರ ಮತ್ತು ಇರಾನ್ ನಡುವೆ ಹಲವು ದಶಕಗಳ ಕಳ್ಳು ಬಳ್ಳಿಯ ಸಂಬಂಧ ಇದೆ. ಇರಾನ್‌ನಲ್ಲಿ ಅಲೀಪುರದ ನೂರಕ್ಕೂ ಹೆಚ್ಚು ಜನರು, ವಿದ್ಯಾರ್ಥಿಗಳು ನೆಲೆಸಿದ್ದಾರೆ. ಹಾಗಾಗಿ ಈ ಗ್ರಾಮದ ಜನರಿಗೆ ಇರಾನ್ ಒಡನಾಟ, ಬಾಂಧವ್ಯ ಹೆಚ್ಚು.

ಇರಾನ್ ಮತ್ತು ಇಸ್ರೇಲ್ ಯುದ್ಧದ ಕ್ಷಣ, ಕ್ಷಣದ ಮಾಹಿತಿ, ಬೆಳವಣಿಗೆಗಳು ಈ ಗ್ರಾಮದ ಜನರನ್ನು ತಲುಪುತ್ತವೆ. ಕ್ಷಿಪಣಿ ದಾಳಿ ವೇಳೆ ಅಲ್ಲಿ ಮೊಳಗುವ ಸೈರನ್ ಶಬ್ದ ಮೊಬೈಲ್ ಕರೆಯ ಮೂಲಕ ಅಲೀಪುರದಲ್ಲೂ ಪ್ರತಿಧ್ವನಿ ಸುತ್ತದೆ. ಅಲ್ಲಿ ಕ್ಷಿಪಣಿ ಬಿದ್ದರೆ ಇಲ್ಲಿ ಹೃದಯ ಬಡಿತ ಹೆಚ್ಚಾಗುತ್ತದೆ. ಇರಾನ್‌ನಲ್ಲಿರುವ ಗ್ರಾಮಸ್ಥರು ಸುರಕ್ಷಿತವಾಗಿರಲಿ. ಅವರಿಗೆ ಏನೂ ಆಗದಿರಲಿ ಎಂದು ಗ್ರಾಮದಲ್ಲಿ ನಿತ್ಯ ಪ್ರಾರ್ಥನೆ ನಡೆಯುತ್ತವೆ.

ವೈದ್ಯಕೀಯ ಶಿಕ್ಷಣ, ಧಾರ್ಮಿಕ ಶಿಕ್ಷಣದ ಕಾರಣಕ್ಕೆ ಅಲೀಪುರದ ಶಿಯಾ ಮುಸ್ಲಿಮರಿಗೆ ಇರಾನ್ ಅಚ್ಚುಮೆಚ್ಚಿನ ತಾಣ. 20 ಸಾವಿರ ಜನಸಂಖ್ಯೆಯ ಅಲೀಪುರದಲ್ಲಿ ಶಿಯಾ ಮುಸ್ಲಿಮರದ್ದೇ ಪ್ರಾಬಲ್ಯ. ಇರಾನ್ ತಮ್ಮ ಪವಿತ್ರ ಧಾರ್ಮಿಕ ಭೂಮಿ ಎನ್ನುವ ಪೂಜ್ಯ ಭಾವನೆ ಇಲ್ಲಿನ ಜನರದ್ದು. ಅಯಾತೊಲ್ಲಾ ಖಮೇನಿ ಧಾರ್ಮಿಕ ಆದೇಶಗಳನ್ನು ಚಾಚೂ ತಪ್ಪದೆ ಪಾಲಿಸುವ ದೊಡ್ಡ ವರ್ಗವೇ ಇಲ್ಲಿದೆ.



ಗೌರಿಬಿದನೂರು ತಾಲ್ಲೂಕಿನ ಅಲೀಪುರಕ್ಕೆ ಇರಾನ್ ಪರಮೋಚ್ಚ ನಾಯಕ ಅಯಾತೊಲ್ಲಾ ಅಲಿ ಖಮೇನಿ 1986ರಲ್ಲಿ ಭೇಟಿ ನೀಡಿದ ಸಂದರ್ಭದಲ್ಲಿ ಸೆರೆ ಹಿಡಿದ ಚಿತ್ರ (ಸಂಗ್ರಹ ಚಿತ್ರ)



ಅಲೀಪುರದಲ್ಲಿರುವ ಇರಾನ್ ಧಾರ್ಮಿಕ ಗುರು ಆಯತೊಲ್ಲಾ ಇಮಾಮ್ ಖಮೇನಿ ಹೆಸರಿನ ಆಸ್ಪತ್ರೆ

ಅಲೀಪುರಕ್ಕೆ ಬಂದಿದ್ದ ಖಮೇನಿ

ಅಯಾತೊಲ್ಲಾ ಖಮೇನಿ 1986ರಲ್ಲಿ ಅಲೀಪುರಕ್ಕೆ ಭೇಟಿ ನೀಡಿದ್ದರು. ಇದು ಇರಾನ್ ಮತ್ತು ಅಲೀಪುರದ ಬಾಂಧವ್ಯಕ್ಕೆ ಸಾಕ್ಷಿ. ಖಮೇನಿ ಗುರು ಇರಾನ್ ಧಾರ್ಮಿಕ ನಾಯಕ ಅಯಾತೊಲ್ಲಾ ಇಮಾಮ್ ಖಮೇನಿ ಹೆಸರಲ್ಲಿ ಅಲೀಪುರದಲ್ಲಿ ಆಸ್ಪತ್ರೆ ಇದೆ. ಇದರ ಉದ್ಘಾಟನೆಗಾಗಿಯೇ ಖಮೇನಿ ಗ್ರಾಮಕ್ಕೆ ಬಂದಿದ್ದರು.

'ಅಲೀಪುರದ ವರ್ತಕರು ಚಿನ್ನಾಭರಣ, ವಜ್ರ, ಹರಳು ವ್ಯಾಪಾರ ಮಾಡುತ್ತಾರೆ. ಆದರೆ ಇರಾನ್ ಜತೆ ವ್ಯಾಪಾರಕ್ಕಿಂತ ಧಾರ್ಮಿಕ ಸಂಬಂಧ ಗಾಢವಾಗಿ ಬೆಸೆದುಕೊಂಡಿದೆ. ಏಕೆಂದರೆ ಶಿಯಾ ಮುಸ್ಲಿಮರ ಪ್ರಮುಖ ಧಾರ್ಮಿಕ ಸ್ಥಳ ಮಶದ್ ಇರಾನ್‌ನಲ್ಲಿದೆ' ಎಂದು ಗ್ರಾಮದ ಶಫೀಕ್ 'ಪ್ರಜಾವಾಣಿ'ಗೆ ತಿಳಿಸಿದರು.


ಧಾರ್ಮಿಕ ಅಧ್ಯಯನಕ್ಕಾಗಿ ಗ್ರಾಮದ 50ಕ್ಕೂ ಹೆಚ್ಚು ಮಂದಿ ಇರಾನ್‌ನಲ್ಲಿ ನೆಲೆಸಿದ್ದಾರೆ. 15 ವಿದ್ಯಾರ್ಥಿಗಳು ವೈದ್ಯಕೀಯ ವ್ಯಾಸಂಗ ಮಾಡುತ್ತಿದ್ದಾರೆ. ಪ್ರತಿದಿನ ಕರೆ ಮಾಡಿ ಬಂಧು, ಬಾಂಧವರ ಯೋಗಕ್ಷೇಮ ವಿಚಾರಿಸುತ್ತಾರೆ ಎಂದರು.

'ನಾವು ಚಿಕ್ಕವರಾಗಿದ್ದಾಗ ಖಮೇನಿ ಅವರು ನಮ್ಮ ಊರಿಗೆ ಭೇಟಿ ನೀಡಿದ್ದರು. ಆಗಲೇ ಅಲೀಪುರವನ್ನು ಬೇಬಿ ಆಫ್ ಇರಾನ್ ಎನ್ನುತ್ತಿದ್ದರು' ಎಂದು ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಸಂಸ್ಥೆ ಅಧ್ಯಕ್ಷ, ಅಲೀಪುರದ ಆರಿ ಅಸ್ಕಿಲ್ ತಿಳಿಸಿದರು.

‘ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ’ದ ಮೂರನೇ ಆವೃತ್ತಿಯ ಸಮಾರಂಭ ಜೂನ್ 27ರಂದು ನಡೆಯಲಿದೆ. 19 ವಿಭಾಗಗಳಲ್ಲಿ ಪ್ರಶಸ್ತಿಗೆ ನಾಮನಿರ್ದೇಶನಗೊಂಡವರ ಹೆಸರುಗಳನ್ನು, ನಾಮನಿರ್ದೇಶನಗೊಂಡ ಸಿನಿಮಾಗಳ ಪಟ್ಟಿಯನ್ನು ಈಗಾಗಲೇ ಪ್ರಕಟಿಸಲಾಗಿದೆ. ಇದೀಗ ‘ವರ್ಷದ ಅತ್ಯುತ್ತಮ ಚಿತ್ರ’ವನ್ನು ಪರಿಚಯಿಸುವ ಸಮಯ. ಇನ್ನಷ್ಟು ಮಾಹಿತಿಗಳಿಗಾಗಿ ವೆಬ್‌ಸೈಟ್ ನೋಡಿ. https://www.prajavani.net/cinesamman/season3

‘ವರ್ಷದ ಅತ್ಯುತ್ತಮ ಚಿತ್ರ’ ಕಣದಲ್ಲಿ...

ಶಾಖಾಹಾರಿ



ಸಂದೀಪ್ ಸುಂಕದ್ ನಿರ್ದೇಶನದ ಈ ಸಿನಿಮಾ ಭಿನ್ನವಾದ ಶೀರ್ಷಿಕೆಯಿಂದಲೇ ಸೆಳೆದಿತ್ತು. ನಟರಾದ ರಂಗಾಯಣ ರಘು ಹಾಗೂ ಗೋಪಾಲಕೃಷ್ಣ ದೇಶಪಾಂಡೆ ಅವರು ಹೊಸಬರ ಜೊತೆಗೂಡಿ ಚಿತ್ರಕ್ಕೆ ಇಂಬು ನೀಡಿದ್ದರು. ಅವರ ನಟನೆಯ ಪಯಣಕ್ಕೂ ಈ ಸಿನಿಮಾ ಹೊಸ ತಿರುವು ನೀಡಿತ್ತು. ತಮ್ಮ ಚೊಚ್ಚಲ ಚಿತ್ರದಲ್ಲೇ ನಾಟಕದ ಒಂದೆಳೆಯನ್ನು ಹಿಡಿದು ಭಿನ್ನವಾದ ಒಂದು ಕಥಾಲೋಕವನ್ನು ಸೃಷ್ಟಿಸಿ ಜಿಹ್ವಾನಂದ ನೀಡಿದ್ದರು ಸಂದೀಪ್ ಸುಂಕದ್. ‘ಸುಬ್ಬಣ್ಣ’ನ ‘ದುರ್ಗಾ ಪ್ರಸಾದ್’ ಎಂಬ ಸಣ್ಣ ಶುದ್ಧ ಶಾಕಾಹಾರಿ ಹೋಟೆಲ್‌ನಲ್ಲಿ ನಡೆಯುವ ಘಟನೆಗಳೇ ಚಿತ್ರದ ಕಥಾಹಂದರ. ಒಂದು ಅಚ್ಚುಕಟ್ಟಾದ ಸಿನಿಮಾ ನೀಡಿ, ಆರಂಭಿಕ ಹೆಜ್ಜೆಯಲ್ಲೇ ಸಿದ್ಧಸೂತ್ರದ ಸಿನಿಮಾ ಜಗತ್ತಿನಿಂದ ಹೊರಗುಳಿದು ಪ್ರಬುದ್ಧತೆ, ನಿರ್ದೇಶನದ ಮೇಲಿನ ಬದ್ಧತೆ ತೋರಿದ್ದರು ಸಂದೀಪ್. ಚಿತ್ರದ ಹಾಡುಗಳು, ಛಾಯಾಚಿತ್ರಗ್ರಹಣ ಸಿನಿಮಾ ಯಶಸ್ಸಿನಲ್ಲಿ ಪ್ರಮುಖ ಭಾಗವಾಗಿತ್ತು.

ರೂಪಾಂತರ



ಮಿಥಿಲೇಶ್ ಎಡವಲತ್ ನಿರ್ದೇಶನದ ಈ ಚಿತ್ರಕ್ಕೆ ರಾಜ್ ಬಿ.ಶೆಟ್ಟಿ ಸಂಭಾಷಣೆ ಮತ್ತು ಹೆಚ್ಚುವರಿ ಚಿತ್ರಕಥೆ ಬರೆದಿದ್ದರು. ಭಾವನೆಗಳಿಗೆ, ಸಂದೇಶಕ್ಕೆ, ರೂಪಾಂತರಗೊಳ್ಳುವ ಪ್ರಕ್ರಿಯೆ; ಘಟನೆಗಳಿಗಷ್ಟೇ ಆದ್ಯತೆ ನೀಡಿ ಕೆತ್ತಿದ ಈ ಸಿನಿಮಾವು ಬರವಣಿಗೆಯ ಶಕ್ತಿ ಪ್ರದರ್ಶಿಸಿತ್ತು. ಈ ಬರವಣಿಗೆಯೂ ನವೀನವಾಗಿತ್ತು. ನಾಲ್ಕು ಕಥೆಗಳ ಗುಚ್ಛವಾದರೂ ಅದನ್ನು ಪೋಣಿಸಿದ ರೀತಿ ಭಿನ್ನರೂಪ ನೀಡಿತ್ತು. ರಾಜ್ ಬರೆದ ‘ಕಿತ್ತಾಳೆ..’ ಹಾಡು ಅರ್ಥಗರ್ಭಿತವಾಗಿತ್ತು. ರಾಜ್ ಬಿ.ಶೆಟ್ಟಿ, ಲೇಖಾ ನಾಯ್ಡು, ಸೋಮಶೇಖರ್ ಬೋಳೆಗಾಂವ್, ಹನುಮಕ್ಕ ಜೋಡಿಯ ನಟನೆ ಈ ಚಿತ್ರದ ಕಥೆಯ ಬೆನ್ನೆಲುಬು. ಸಂಕಲನ ಈ ಚಿತ್ರದಲ್ಲಿ ಮುಖ್ಯ ಪಾತ್ರ ವಹಿಸಿತ್ತು.

ಕೃಷ್ಣಂ ಪ್ರಣಯ ಸಖಿ



ಶ್ರೀನಿವಾಸ ರಾಜು ನಿರ್ದೇಶನದ ಈ ಸಿನಿಮಾ ಬಿಡುಗಡೆ ಮುನ್ನವೇ ತನ್ನ ಹಾಡುಗಳಿಂದಲೇ ಜನರನ್ನು ತಲುಪಿತ್ತು. ವಿ.ನಾಗೇಂದ್ರ ಪ್ರಸಾದ್ ಹಾಗೂ ಅರ್ಜುನ್ ಜನ್ಯ ಕಾಂಬಿನೇಷನ್‌ನಲ್ಲಿ ಮೂಡಿಬಂದಿದ್ದ ‘ದ್ವಾಪರ’ ಹಾಗೂ ‘ಚಿನ್ನಮ್ಮ’ ಹಾಡುಗಳು ಈ ಚಿತ್ರದ ಯಶಸ್ಸಿನ ಭಾಗವಾಗಿತ್ತು. ಗಣೇಶ್, ಮಾಳವಿಕ ನಾಯರ್, ಶರಣ್ಯ ಶೆಟ್ಟಿ, ಸಾಧು ಕೋಕಿಲ ಮುಖ್ಯಭೂಮಿಕೆಯಲ್ಲಿದ್ದ ಈ ಸಿನಿಮಾ ಗುಣಮಟ್ಟದಲ್ಲಿ ಹಾಗೂ ರಿಚ್‌ನೆಸ್‌ನಲ್ಲಿ ಉತ್ಕೃಷ್ಟವಾಗಿ ಮೂಡಿಬಂದಿತ್ತು. ಗಣೇಶ್ ಹಾಗೂ ಸಾಧು ಕೋಕಿಲ ಅವರ ಕಾಮಿಡಿ ಟೈಮಿಂಗ್ ಈ ಸಿನಿಮಾದ ಪ್ರಮುಖ ಅಂಶ. ನಿರ್ದೇಶನ ಹಾಗೂ ಗಣೇಶ್ ಅವರ ಸಿನಿಮಾಗಳಲ್ಲಿ ಕಾಣಸಿಗುವ ಫ್ಯಾಮಿಲಿ ಎಂಟರ್‌ಟೈನರ್ ಅಂಶಗಳು ಸಿನಿಮಾದ ಯಶಸ್ಸಿಗೆ ಕಾರಣವಾದವು.

ಶಿವಮ್ಮ ಯರೇಹಂಚಿನಾಳ



ಬೂಸಾನ್ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ‘ನ್ಯೂ ಕರೆಂಟ್ಸ್’ ವಿಭಾಗದಲ್ಲಿ ಪ್ರಶಸ್ತಿ ಪಡೆದ, ರಿಷಬ್ ಶೆಟ್ಟಿ ನಿರ್ಮಾಣದ ಸಿನಿಮಾವಿದು. ‘ಕಥಾಸಂಗಮ’ ಸಿನಿಮಾದಲ್ಲಿ ಏಳು ಕಥೆಗಳಲ್ಲಿ ಒಂದು ಕಥೆ ಬರೆದಿದ್ದ ಜೈಶಂಕರ್ ಆರ್ಯರ್ ಈ ಸಿನಿಮಾ ನಿರ್ದೇಶಿಸಿದ್ದರು. ಸಿನಿಮಾಗಾಗಿ ಇಡೀ ಊರಿನ ಜನರಿಗೇ ನಟನೆಯ ತರಬೇತಿ ನೀಡಿ, ದೃಶ್ಯಗಳು ನೈಜವಾಗಿ ಇರುವಂತೆ ಚಿತ್ರವನ್ನು ಸೆರೆಹಿಡಿಯಲಾಗಿತ್ತು. ಚಿತ್ರದಲ್ಲಿ ಮಣ್ಣಿನ, ಭಾಷೆಯ ಸೊಗಡು ಅಡಕವಾಗಿದೆ. ಶರಣಮ್ಮ ಚೆಟ್ಟಿ ಮುಖ್ಯಭೂಮಿಕೆಯಲ್ಲಿರುವ ಈ ಚಿತ್ರದಲ್ಲಿ ಗ್ರಾಮೀಣ ಜನರ ವ್ಯವಹಾರದ ಕೌಶಲ, ಆತ್ಮವಿಶ್ವಾಸದ ಕಥೆಯಿದೆ. ಗ್ರಾಮೀಣ ಜಗತ್ತಿನ ಪ್ರತಿನಿಧಿಯಾಗಿ ಪ್ರೇಕ್ಷಕರ ಎದುರಿಗೆ ಬರುವ ಶಿವಮ್ಮ ಚೈನ್ ಮಾರ್ಕೆಟಿಂಗ್ ಕೂಪದ ಕಥೆ ಹೇಳಿದ್ದಾರೆ.

ಹದಿನೇಳೆಂಟು



ಕಾಲೇಜು ವಿದ್ಯಾರ್ಥಿಗಳಿಬ್ಬರ ಖಾಸಗಿ ಕ್ಷಣದ ವಿಡಿಯೊ ವೈರಲ್ ಆಗಿ, ನಂತರ ಈ ವಿವಾದ ಜಾತಿ ಸಮಸ್ಯೆಗೆ ತಿರುಗುವ ವಿಶಿಷ್ಟ ಕಥೆಯನ್ನು ಹೊಂದಿರುವ ಚಿತ್ರವಿದು. ನಿರ್ದೇಶಕ ಪೃಥ್ವಿ ಕೊಣನೂರು ತಮ್ಮ ಹಿಂದಿನ ಸಿನಿಮಾಗಳಂತೆ ಇಲ್ಲಿಯೂ ವಿಭಿನ್ನವಾದ ನಿರೂಪಣೆಯಿಂದಲೇ ಚಿತ್ರವನ್ನು ಗಟ್ಟಿಯಾಗಿ ನಿಲ್ಲಿಸಿದ್ದಾರೆ. ಹದಿಹರೆಯದವರ ಸಮಸ್ಯೆಗಳನ್ನು ಬಹಳ ನೈಜವಾಗಿ ಹೇಳಿರುವುದು ಈ ಸಿನಿಮಾದ ಹೆಚ್ಚುಗಾರಿಕೆ. ಎಲ್ಲರ ನಟನೆಯೂ ಬಹಳ ಸಹಜತೆಯಿಂದ ಕೂಡಿದೆ. ಸಾಕಷ್ಟು ಚಿತ್ರೋತ್ಸವಗಳಿಗೆ ಆಯ್ಕೆಗೊಂಡು ಪ್ರಶಸ್ತಿ ಪಡೆದ ಚಿತ್ರ ಬೆಂಗಳೂರು ಅಂತರರಾಷ್ಟ್ರೀಯ ಚಿತ್ರೋತ್ಸವದಲ್ಲಿಯೂ ಎರಡನೇ ಬಹುಮಾನ ಪಡೆದಿತ್ತು.

ಕುಬುಸ



ಕುಂ.ವೀರಭದ್ರಪ್ಪ ಅವರ ಕಥೆ ಆಧರಿಸಿದ ಸಿನಿಮಾವಿದು. ರಘು ರಾಮಚರಣ್ ಹೂವಿನಹಡಗಲಿ ನಿರ್ದೇಶನದ ಚಿತ್ರದಲ್ಲಿ ನಟರಾಜ್ ಭಟ್ ನಾಯಕನಾಗಿ ಕಾಣಿಸಿಕೊಂಡಿದ್ದರು. ಗ್ರಾಮೀಣ ಭಾಗದಲ್ಲಿ ಕಲ್ಲು ಒಡೆದು ಜೀವನ ಸಾಗಿಸುವ ತಾಯಿ, ತನ್ನ ಮಗನನ್ನು ದೂರದ ಊರಿನಲ್ಲಿ ಓದಿಸುತ್ತಾಳೆ. ನಗರಕ್ಕೆ ಕಾಲೇ ಇಡದ ತಾಯಿ ಬಸ್ಸು ಕೂಡ ಹತ್ತಿರುವುದಿಲ್ಲ. ಮಗನಿಗೆ ಕೆಲಸ ಸಿಕ್ಕ ಬಳಿಕ ಅಮ್ಮನನ್ನು ನಗರಕ್ಕೆ ಕರೆದುಕೊಂಡು ಬರುತ್ತಾನೆ. ಮೊದಲಿನಿಂದಲೂ ‘ಕುಬುಸ’ ಧರಿಸಿ ಅಭ್ಯಾಸವಿರದ ಆಕೆ ನಗರಕ್ಕೆ ಬಂದಾಗ ಹೇಗೆಲ್ಲ ಜನರಿಂದ ಮುಜುಗರಕ್ಕೆ ಒಳಗಾಗುತ್ತಾಳೆ ಎಂಬ ವಿಭಿನ್ನ ಕಥೆಯನ್ನು ಹೊಂದಿರುವ ಚಿತ್ರ ಒಂದಷ್ಟು ಚಿತ್ರೋತ್ಸವಗಳಲ್ಲಿ ಗಮನ ಸೆಳೆದಿತ್ತು. ಜೋಗತಿ ಮಂಜಮ್ಮ ಈ ಚಿತ್ರದಲ್ಲಿ ವಿಶೇಷ ಪಾತ್ರವೊಂದರಲ್ಲಿ ಕಾಣಿಸಿಕೊಂಡಿದ್ದಾರೆ.

ಕೆರೆಬೇಟೆ



ಮಲೆನಾಡಿನ ವಿಶಿಷ್ಟವಾದ ‘ಕೆರೆಬೇಟೆ’ ಆಚರಣೆಯೊಂದಿಗೆ ಅಲ್ಲಿನ ಪಾತ್ರಗಳನ್ನು ಪರಿಚಯಿಸುತ್ತ, ಬದುಕನ್ನು ಕಟ್ಟಿಕೊಡುವ ಕಥೆ ಹೊಂದಿರುವ ಚಿತ್ರವಿದು. ಚಿತ್ರದ ನಾಯಕ ನಾಗ ಕಳ್ಳನಾಟ ಕುಯ್ದಿದ್ದಕ್ಕೆ ಜೈಲಿಗೂ ಹೋಗಿ ಬಂದಿರುತ್ತಾನೆ. ಮೈ-ಮನಸ್ಸಿನ ತುಂಬ ರೋಷಾವೇಶವನ್ನೇ ತುಂಬಿಕೊಂಡಿರುವ ನಾಗನ ಬದುಕಿಗೆ ಮೀನಾ ಬರುತ್ತಾಳೆ. ನಂತರ ಇದೊಂದು ಜಾತಿ ಬಲೆಯೊಳಗಿನ ಪ್ರೇಮಕಥೆಯಾಗಿ ಬದಲಾಗುತ್ತದೆ. ನಾಗನಾಗಿ ನಾಯಕ ಗೌರಿಶಂಕರ್ ಮೀನಾಳಾಗಿ ಬಿಂದು ನಟನೆ ಗಮನ ಸೆಳೆಯುತ್ತದೆ. ಸುತ್ತಲಿನ ಪರಿಸರ, ಸಂಗೀತ, ಶಬ್ದ ವಿನ್ಯಾಸ, ಕಥೆಯ ನಿರೂಪಣೆಯಿಂದಾಗಿ ಸಿನಿಮಾ ಗಮನ ಸೆಳೆದಿತ್ತು. ರಾಜ್‌ಗುರು ಈ ಚಿತ್ರದ ನಿರ್ದೇಶಕ.

ಬ್ಲಿಂಕ್



ಭಿನ್ನ ಕಥೆಯಿಂದಲೇ ಗಮನ ಸೆಳೆದ ಚಿತ್ರವಿದು. ಟೈಮ್ ಟ್ರಾವೆಲಿಂಗ್ ಕುರಿತ ಸಿನಿಮಾ. ಇಲ್ಲಿ ಕಥಾನಾಯಕ ಅಪೂರ್ವ ಟೈಮ್ ಟ್ರಾವೆಲಿಂಗ್‌ನಲ್ಲಿ ಸಿಲುಕಿಕೊಂಡು ಭೂತ-ವರ್ತಮಾನ-ಭವಿಷ್ಯದ ನಡುವೆ ಸಂಚರಿಸುತ್ತಾನೆ. ತನ್ನ ಹುಟ್ಟಿನ ಕುರಿತ ಅನೇಕ ಸತ್ಯಗಳನ್ನು ತಿಳಿದುಕೊಳ್ಳುತ್ತಾನೆ. ತನ್ನ ಬದುಕಿನಲ್ಲಿ ಹಿಂದೆ ನಡೆದ ಘಟನೆಗಳನ್ನು ಸರಿ ಮಾಡಲು ಹೇಗೆಲ್ಲ ಒದ್ದಾಡುತ್ತಾನೆ ಎಂಬುದೇ ಚಿತ್ರದ ಕಥೆ. ಅಪೂರ್ವನಾಗಿ ದೀಕ್ಷಿತ್ ಶೆಟ್ಟಿ ನಟನೆ ನೆನಪಿನಲ್ಲಿ ಉಳಿಯುವಂತೆ ಇತ್ತು. ಚೊಚ್ಚಲ ನಿರ್ದೇಶಕನಾಗಿ, ವಿಭಿನ್ನ ನಿರೂಪಣೆಯೊಂದಿಗೆ ಶ್ರೀನಿಧಿ ಬೆಂಗಳೂರು ಅವರ ಕೆಲಸ ಗಮನ ಸೆಳೆದಿತ್ತು. ಚಿತ್ರದ ಛಾಯಾಚಿತ್ರಗ್ರಹಣ, ಸಂಕಲನ ಮತ್ತು ಸಂಗೀತ ಸಂಯೋಜನೆಗೆ ಪ್ರೇಕ್ಷಕರಿಂದ ಮೆಚ್ಚುಗೆ ವ್ಯಕ್ತವಾಗಿತ್ತು.

ಚಿಟಿಕೆ ಸುದ್ದಿ

ವಿಮಾನ ದುರಂತ ಕ್ಲೇಮ್ ಇತ್ಯರ್ಥಕ್ಕೆ ಸಮಸ್ಯೆ



ಅಹಮದಾಬಾದ್ (ಪಿಟಿಐ): ಅಹಮದಾಬಾದ್ ವಿಮಾನ ದುರಂತದಲ್ಲಿ ಮೃತಪಟ್ಟವರ ವಿಮಾ ಕ್ಲೇಮ್‌ಗಳನ್ನು ಇತ್ಯರ್ಥಪಡಿಸುವ ವಿಚಾರದಲ್ಲಿ ವಿಮಾ ಕಂಪನಿಗಳಿಗೆ ಹೊಸ ಸಮಸ್ಯೆಗಳು ಎದುರಾಗಿವೆ.

ವಿಮಾ ಪಾಲಿಸಿ ಹೊಂದಿದ್ದವರಷ್ಟೇ ಅಲ್ಲದೆ ಅವರು ನಾಮನಿರ್ದೇಶನ ಮಾಡಿದ್ದವರೂ ಮೃತಪಟ್ಟಿರುವುದು ಕಂಪನಿಗಳಿಗೆ ಸಮಸ್ಯೆ ತಂದಿತ್ತಿದೆ. ದುರಂತದಲ್ಲಿ ಇಡೀ ಕುಟುಂಬ ಜೀವ ಕಳೆದುಕೊಂಡ ನಿದರ್ಶನವೂ ಇದೆ.

ಮೃತ ಪ್ರಯಾಣಿಕರಿಗೆ ಹಾಗೂ ವಿಮಾನವು ಅಪ್ಪಳಿಸಿದ ಕಟ್ಟಡದಲ್ಲಿ ಇದ್ದು ಜೀವ ಕಳೆದುಕೊಂಡವರಿಗೆ ವಿಮಾ ಸೌಲಭ್ಯ ನೀಡುವಲ್ಲಿ ವಿಳಂಬ ಆಗಬಾರದು ಎಂದು ಭಾರತೀಯ ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರವು ಹೇಳಿದೆ.

ಇದರ ಅನ್ವಯ, ದೇಶದ ಪ್ರಮುಖ ವಿಮಾ ಕಂಪನಿಗಳು ಅಹಮದಾಬಾದ್ ಸಿವಿಲ್ ಆಸ್ಪತ್ರೆಯಲ್ಲಿ ಸಹಾಯಕೇಂದ್ರ ಆರಂಭಿಸಿವೆ.

ಕಂಪನಿಯೊಂದರ ನಿರ್ದೇಶಕ ಹಾಗೂ ಅವರು ನಾಮನಿರ್ದೇಶನ ಮಾಡಿದ್ದ ಪತ್ನಿ ಅಪಘಾತದಲ್ಲಿ ಮೃತಪಟ್ಟಿದ್ದಾರೆ ಎಂದು ಇಫ್ಕೊ ಟೋಕಿಯೊ ವಿಮಾ ಕಂಪನಿಯ ಅಧಿಕಾರಿ ಮನ್‌ಪ್ರೀತ್ ಸಿಂಗ್ ಸಭರ್ವಾಲ್ ಹೇಳಿದ್ದಾರೆ. ಇದೇ ಬಗೆಯ ಪರಿಸ್ಥಿತಿಯು ಟಾಟಾ ಎಐಎ ವಿಮಾ ಕಂಪನಿಗೂ ಎದುರಾಗಿದೆ.

ಸೋನಮ್ ಕುಟುಂಬಸ್ಥರ ವಿಚಾರಣೆ

ಇಂದೋರ್ (ಪಿಟಿಐ): ಉದ್ಯಮಿ ರಾಜಾ ರಘುವಂಶಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ, ಪ್ರಮುಖ ಆರೋಪಿಯಾಗಿರುವ ಅವರ ಪತ್ನಿ ಸೋನಮ್ ಅವರ, ಇಂದೋರ್‌ನ ಗೋವಿಂದ ನಗರದ ತವರು ಮನೆಗೆ ಭೇಟಿ ನೀಡಿದ ಮೇಘಾಲಯ ಪೊಲೀಸರು, ಅವರ ಕುಟುಂಬಸ್ಥರನ್ನು ವಿಚಾರಣೆಗೆ ಒಳಪಡಿಸಿದರು.

ಇಂದೋರ್ ಮೂಲಕ ಉದ್ಯಮಿ ರಾಜಾ ರಘುವಂಶಿ, ಪತ್ನಿ ಸೋನಮ್ ಜತೆ ಮೇಘಾಲಯಕ್ಕೆ ಮಧುಚಂದ್ರಕ್ಕೆ ಬಂದಿದ್ದಾಗ ಮೇ 23ರಂದು ಕೊಲೆಯಾಗಿದ್ದರು.

‘ಮೇಘಾಲಯ ಪೊಲೀಸರು ತಮ್ಮನ್ನೂ ಸೇರಿ ಕಟುಂಬಸ್ಥರ ಬಳಿ ಸೋನಮ್ ಅವರ ನಡವಳಿಕೆ ಕುರಿತು ಮಾಹಿತಿ ಸಂಗ್ರಹಿಸಿದರು’ ಎಂದು ವಿಚಾರಣೆ ಬಳಿಕ ಸೋನಮ್ ಅವರ ಸಹೋದರ ಗೋವಿಂದ್ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದರು.

ಏರ್ ಇಂಡಿಯಾ ಸಂಚಾರ ವ್ಯತ್ಯಯ

ಅಹಮದಾಬಾದ್ ವಿಮಾನ ಪತನ ಘಟನೆ ನಂತರ 83 ವಿಮಾನಗಳ ಹಾರಾಟ ರದ್ದು

ಮುಖ್ಯಾಂಶಗಳು
- ದೆಹಲಿಯಲ್ಲಿ ಭಾರಿ ಮಳೆ ವಿಮಾನಗಳ ಹಾರಾಟದ ಮಾರ್ಗ ಬದಲಾವಣೆ
- ತೊಂದರೆಗೊಳಗಾದ ಪ್ರಯಾಣಿಕರಿಗೆ ಹೋಟೆಲ್ ಸೌಲಭ್ಯ

ಮುಂಬೈ (ಪಿಟಿಐ): ಹವಾಮಾನ ವೈಪರೀತ್ಯ, ಕಾರ್ಯಾಚರಣೆ ಸಂಬಂಧಿತ ಕಾರಣ ಇತ್ಯಾದಿಯಿಂದಾಗಿ ಮಂಗಳವಾರ ಮತ್ತು ಬುಧವಾರ ಏರ್ ಇಂಡಿಯಾದ ಕೆಲ ವಿಮಾನಗಳ ಹಾರಾಟ ರದ್ದಾಗಿದ್ದರೆ, ಕೆಲವು ವಿಮಾನಗಳು ಮಾರ್ಗ ಬದಲಿಸಿದ್ದವು.

ಕಾರ್ಯಾಚರಣೆ ಸಂಬಂಧಿತ ಕಾರಣಗಳಿಂದಾಗಿ ಮುಂಬೈ-ಲಖನೌ ವಿಮಾನದ ಸಂಚಾರವನ್ನು ಜೂನ್ 17ರಂದು ರದ್ದು ಮಾಡಲಾಗಿತ್ತು. ನಿರ್ವಹಣೆ ಸಂಬಂಧಿತ ಕಾರಣದಿಂದ ಟೊರಾಂಟೊ-ದೆಹಲಿ ಮತ್ತು ದುಬೈ-ದೆಹಲಿ ವಿಮಾನದ ಹಾರಾಟವನ್ನು ಬುಧವಾರ ರದ್ದು ಮಾಡಲಾಯಿತು ಎಂದು ಸಂಸ್ಥೆಯ ವಕ್ತಾರರು ತಿಳಿಸಿದರು.

ದೆಹಲಿಯಲ್ಲಿ ಭಾರಿ ಮಳೆ ಆಗುತ್ತಿದೆ. ವಿಮಾನಗಳ ಹಾರಾಟದ ಮಾರ್ಗ ಕೂಡ ಬದಲಾವಣೆ ಮಾಡಲಾಗಿದೆ. ಅಲ್ಲದೆ ಪರ್ಯಾಯ ಮಾರ್ಗದಲ್ಲಿ ಸಾಗುವ ವಿಮಾನಗಳು ತಡವಾಗಿ ತಲುಪುತ್ತಿವೆ. ವಿಮಾನಗಳ ಸಂಚಾರ ರದ್ದುಪಡಿಸಲು ಇವೆಲ್ಲ ಕಾರಣಗಳಾಗಿವೆ ಎಂದು ವಿಮಾನಯಾನ ಸಂಸ್ಥೆ ತಿಳಿಸಿದೆ.

ವಿಮಾನ ಸಂಚಾರ ರದ್ದುಗೊಂಡಿರುವುದರಿಂದ ತೊಂದರೆಗೊಳಗಾದ ಪ್ರಯಾಣಿಕರಿಗೆ ಹೋಟೆಲ್ ಸೌಲಭ್ಯ ಒದಗಿಸಲಾಗಿದೆ. ಪ್ರಯಾಣ ರದ್ದು ಮಾಡಿದ ಪ್ರಯಾಣಿಕರಿಗೆ ಪೂರ್ಣ ಪ್ರಮಾಣದಲ್ಲಿ ಹಣ ಹಿಂದಿರುಗಿಸಲಾಗುವುದು ಎಂದು ಅದು ಹೇಳಿದೆ.

ಏರ್ ಇಂಡಿಯಾ ಸಂಸ್ಥೆಯು ಮಂಗಳವಾರ 7, ಬುಧವಾರ 3 ಅಂತರರಾಷ್ಟ್ರೀಯ ವಿಮಾನಗಳ ಸಂಚಾರವನ್ನು ರದ್ದು ಮಾಡಿತ್ತು. ಇದರೊಂದಿಗೆ ಅಹಮದಾಬಾದ್‌ನಲ್ಲಿ ನಡೆದ ವಿಮಾನ ಪತನದ ಬಳಿಕ ಸಂಸ್ಥೆಯು ಸುಮಾರು 83 ವಿಮಾನಗಳ ಹಾರಾಟವನ್ನು ರದ್ದು ಮಾಡಿದಂತಾಗಿದೆ.

ದೆಹಲಿಗೆ ಮರಳಿದ ವಿಮಾನ

ಮುಂಬೈ: ಇಂಡೊನೇಷ್ಯಾದ ಬಾಲಿ ವಿಮಾನ ನಿಲ್ದಾಣದ ಸಮೀಪ ಜ್ವಾಲಾಮುಖಿ ಸ್ಫೋಟಗೊಂಡ ಕಾರಣ, ದೆಹಲಿ-ಬಾಲಿ ಏರ್ ಇಂಡಿಯಾ ವಿಮಾನವು ಮಾರ್ಗ ಬದಲಿಸಿ ರಾಷ್ಟ್ರ ರಾಜಧಾನಿ ದೆಹಲಿಗೆ ಬುಧವಾರ ಬಂದಿಳಿಯಿತು ಎಂದು ವಿಮಾನಯಾನ ಸಂಸ್ಥೆ ಹೇಳಿಕೆ ಮೂಲಕ ತಿಳಿಸಿದೆ.

ವಾರಾಣಸಿಯಲ್ಲಿ ಇಳಿದ ವಿಮಾನ

ವಾರಾಣಸಿ: ದೆಹಲಿಯಲ್ಲಿ ಪ್ರತಿಕೂಲ ಹವಾಮಾನ ಇರುವುದರಿಂದ ಬಾಲಿ-ದೆಹಲಿ ಏರ್ ಇಂಡಿಯಾ ವಿಮಾನವು ಮಾರ್ಗ ಬದಲಿಸಿ ವಾರಾಣಸಿಯ ಲಾಲ್ ಬಹದ್ದೂರ್ ಶಾಸ್ತ್ರಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿಯಿತು.

‘ದೆಹಲಿಯಲ್ಲಿ ಪ್ರತಿಕೂಲ ಹವಾಮಾನ ಇರುವುದರಿಂದ ಗೋಚರತೆ ಕಡಿಮೆ ಇತ್ತು. ಇಂಥ ಸಂದರ್ಭದಲ್ಲಿ ವಿಮಾನವನ್ನು ಲ್ಯಾಂಡ್ ಮಾಡುವುದು ಸುರಕ್ಷಿತವಲ್ಲದ ಕಾರಣ ಎಐ 2146 ವಿಮಾನದ ಮಾರ್ಗವನ್ನು ಬದಲಿಸಲಾಯಿತು’ ಎಂದು ವಾರಾಣಸಿ ವಿಮಾನ ನಿಲ್ದಾಣದ ನಿರ್ದೇಶಕ ಪುನೀತ್ ಗುಪ್ತಾ ತಿಳಿಸಿದರು.

ವಿಮಾನ ಹಾರಾಟ ಶೇ 15ರಷ್ಟು ಕಡಿತ

ಮುಂಬೈ (ಪಿಟಿಐ): ಅಹಮದಾಬಾದ್ ವಿಮಾನ ದುರಂತದ ಬೆನ್ನಲ್ಲೇ, ಏರ್‌ಇಂಡಿಯಾವು ಬೋಯಿಂಗ್ ಡ್ರೀಮ್‌ಲೈನರ್ ಸೇರಿದಂತೆ ಕೆಲವು ದೊಡ್ಡ ಗಾತ್ರದ, ಅಂತರರಾಷ್ಟ್ರೀಯ ವಿಮಾನಗಳ ಹಾರಾಟವನ್ನು ಜುಲೈ ಮಧ್ಯಭಾಗದ ವರೆಗೆ ಶೇ 15ರಷ್ಟು ಕಡಿತಗೊಳಿಸಿದೆ.

‘ಹೆಚ್ಚುವರಿ ಸುರಕ್ಷತಾ ತಪಾಸಣೆ ದೃಷ್ಟಿಯಿಂದ ದೊಡ್ಡ ದೇಹಗಾತ್ರದ ಕೆಲವು ವಿಮಾನಗಳ ಹಾರಾಟವನ್ನು ಕಡಿಮೆ ಮಾಡಲಾಗಿದೆ’ ಎಂದು ಏರ್ ಇಂಡಿಯಾ ಪ್ರಕಟಣೆ ತಿಳಿಸಿದೆ.

170 ಮಂದಿ ಮೃತದೇಹ ಹಸ್ತಾಂತರ

ಏರ್ ಇಂಡಿಯಾ ವಿಮಾನ ದುರಂತ; 208 ಮಂದಿ ಗುರುತು ಪತ್ತೆ

ಅಹಮದಾಬಾದ್ (ಪಿಟಿಐ): ಏರ್ ಇಂಡಿಯಾ ವಿಮಾನ ದುರಂತದಲ್ಲಿ ಮೃತಪಟ್ಟ 208 ಮಂದಿಯ ಗುರುತು ಪತ್ತೆಯಾಗಿದ್ದು, 32 ಮಂದಿ ವಿದೇಶಿಗರೂ ಸೇರಿದಂತೆ 170 ಜನರ ಮೃತದೇಹಗಳನ್ನು ಕುಟುಂಬಸ್ಥರಿಗೆ ಹಸ್ತಾಂತರಿಸಲಾಗಿದೆ.

‘ಭೀಕರ ವಿಮಾನ ಅವಘಡದಲ್ಲಿ ಮೃತದೇಹಗಳು ಗುರುತಿಸಲಾಗದಷ್ಟು ಸುಟ್ಟು ಕರಕಲಾಗಿವೆ. ಉಳಿದವರ ಗುರುತು ಪತ್ತೆಗೆ ಡಿಎನ್‌ಎ ತಾಳೆ ನೋಡುವ ಪ್ರಕ್ರಿಯೆ ಚಾಲ್ತಿಯಲ್ಲಿದೆ’ ಎಂದು ಅಹಮದಾಬಾದ್ ಸಿವಿಲ್ ಆಸ್ಪತ್ರೆ ವೈದ್ಯಕೀಯ ಸೂಪರಿಂಟೆಂಡೆಂಟ್ ರಾಕೇಶ್ ಜೋಶಿ ತಿಳಿಸಿದರು.

ಕುಟುಂಬಸ್ಥರಿಗೆ ಹಸ್ತಾಂತರಿಸಲಾದ 138 ಭಾರತೀಯರ ಮೃತದೇಹಗಳ ಪೈಕಿ, 134 ಮಂದಿ ವಿಮಾನದ ಪ್ರಯಾಣಿಕರಾಗಿದ್ದರೆ, ನಾಲ್ವರು ಘಟನಾ ಸ್ಥಳದಲ್ಲಿದ್ದ ದುರ್ದೈವಿಗಳು ಎಂದು ಹೇಳಿದರು.

ವಿಮಾನ ಪತನದ ಸಂದರ್ಭದಲ್ಲಿ ಗಾಯಗೊಂಡು 71 ಮಂದಿ ಆಸ್ಪತ್ರೆಗೆ ದಾಖಲಾಗಿದ್ದರು. ಈ ಪೈಕಿ ಏಳು ಮಂದಿ ಮಾತ್ರ ಅಹಮದಾಬಾದ್ ಸರ್ಕಾರಿ ಆಸ್ಪತ್ರೆಯಲ್ಲಿಯೇ ಚಿಕಿತ್ಸೆ ಪಡೆಯುತ್ತಿದ್ದಾರೆ. 12 ಮಂದಿ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಚಿಕಿತ್ಸೆ ಸಂದರ್ಭದಲ್ಲಿ ಮೂರು ಮಂದಿ ಮೃತಪಟ್ಟಿದ್ದಾರೆ ಎಂದು ಮಾಹಿತಿ ನೀಡಿದರು.



ವಿಮಾನ ದುರಂತದಲ್ಲಿ ಬದುಕುಳಿದ ಏಕೈಕ ಪ್ರಯಾಣಿಕ ವಿಶ್ವಾಸ್ ಕುಮಾರ್ ರಮೇಶ್ ಅವರು ದಿಯುನಲ್ಲಿ ಬುಧವಾರ ನಡೆದ ಸಹೋದರ ಅಜಯ್ ಅವರ ಅಂತ್ಯಸಂಸ್ಕಾರದಲ್ಲಿ ಭಾಗಿಯಾಗಿದ್ದರು –ಪಿಟಿಐ ಚಿತ್ರ

ಆಸ್ಪತ್ರೆಯಿಂದ ಹೊರಬಂದ ವಿಶ್ವಾಸ್

ವಿಮಾನ ದುರಂತದಲ್ಲಿ ಬದುಕುಳಿದ ಏಕೈಕ ಪ್ರಯಾಣಿಕ ವಿಶ್ವಾಸ್ ಕುಮಾರ್ ರಮೇಶ್ ಅವರು ಗುಣಮುಖರಾಗಿದ್ದು, ಅಹಮದಾಬಾದ್‌ನ ಸಿವಿಲ್ ಆಸ್ಪತ್ರೆಯಿಂದ ಬುಧವಾರ ಬಿಡುಗಡೆಗೊಂಡರು.

ಬಳಿಕ ಅವರು ಅವಘಡದಲ್ಲಿ ಮೃತಪಟ್ಟ ಸಹೋದರ ಅಜಯ್ ಅವರ ಅಂತ್ಯಸಂಸ್ಕಾರದಲ್ಲಿ ಭಾಗಿಯಾಗಿದ್ದರು ಎಂದು ಅಧಿಕಾರಿಗಳು ತಿಳಿಸಿದರು.

ವಿಶ್ವಾಸ್ ಮತ್ತು ಅಜಯ್ ಅವರು ಮೂಲತಃ ಕೇಂದ್ರಾಡಳಿತ ಪ್ರದೇಶವಾದ ದಿಯುನವರು. ಕುಟುಂಬಸ್ಥರೊಂದಿಗೆ ಕೆಲ ದಿನ ಕಾಲಕಳೆದ ನಂತರ ಜೂನ್ 12ರಂದು ಏರ್ ಇಂಡಿಯಾ ವಿಮಾನದ ಮೂಲಕ ಲಂಡನ್‌ಗೆ ಮರಳುತ್ತಿದ್ದರು.

ವಿಶ್ವಾಸ್ ಅವರು, ಅಜಯ್ ಅವರ ಪಾರ್ಥಿವ ಶರೀರವನ್ನು ಹೆಗಲ ಮೇಲೆ ಹೊತ್ತು ಚಿತಾಗಾರಕ್ಕೆ ಒಯ್ಯುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಹಿಂದಿ ಭಾಷೆ ಕಡ್ಡಾಯವಲ್ಲ: ಫಡಣವೀಸ್

ಪುಣೆ (ಪಿಟಿಐ): ‘ಮಹಾರಾಷ್ಟ್ರದಲ್ಲಿ ತೃತೀಯ ಭಾಷೆಯಾಗಿ ಹಿಂದಿಯನ್ನು ಕಡ್ಡಾಯವಾಗಿ ಕಲಿಯಬೇಕೆಂಬ ನಿಯಮವನ್ನು ರದ್ದುಪಡಿಸಲಾಗಿದೆ. ಭಾರತದ ಯಾವುದೇ ಭಾಷೆಯನ್ನು ಮೂರನೇ ಭಾಷೆಯಾಗಿ ಕಲಿಯಬಹುದು’ ಎಂದು ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಬುಧವಾರ ಹೇಳಿದರು.

ದೇಹು ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಇಂಗ್ಲಿಷ್‌ನ ವ್ಯಾಪಕ ಪ್ರಚಾರದಿಂದಾಗಿ ಭಾರತೀಯ ಭಾಷೆಗಳು ನಿರ್ಲಕ್ಷ್ಯಕ್ಕೆ ಒಳಗಾಗಿವೆ. ಹೀಗಾಗಿ ಭಾಷೆಗಳ ಕುರಿತ ವಿವಾದ ಅನಗತ್ಯ’ ಎಂದು ಹೇಳಿದರು.

‘ಈ ಹಿಂದೆ ಹಿಂದಿ ಭಾಷೆಯನ್ನು ಕಡ್ಡಾಯ ಮಾಡಿದ್ದೆವು. ಈ ಆದೇಶವನ್ನು ಹಿಂಪಡೆದಿದ್ದು, ಮರಾಠಿ ಕಡ್ಡಾಯ, ಹಿಂದಿ ಐಚ್ಛಿಕವಾಗಿದೆ. ಯಾವುದೇ ಶಾಲೆಯಲ್ಲಿ ಕನಿಷ್ಠ 20 ವಿದ್ಯಾರ್ಥಿಗಳು ಹಿಂದಿ ಹೊರತುಪಡಿಸಿ ಭಾರತೀಯ ಭಾಷೆಗಳನ್ನು ಕಲಿಯಲು ಬಯಸಿದರೆ ಅದಕ್ಕೆ ಅವಕಾಶ ನೀಡಲಾಗುತ್ತದೆ. ಒಬ್ಬ ಶಿಕ್ಷಕರನ್ನೂ ನೇಮಿಸಲಾಗುವುದು. ಅಗತ್ಯ ಬಿದ್ದರೆ ಆನ್‌ಲೈನ್ ಶಿಕ್ಷಣಕ್ಕೂ ಅವಕಾಶ ಕಲ್ಪಿಸಲಾಗುವುದು’ ಎಂದು ಅವರು ತಿಳಿಸಿದರು.



ದೇವೇಂದ್ರ ಫಡಣವೀಸ್

ಮರಾಠಿ ಹಾಗೂ ಇಂಗ್ಲಿಷ್ ಮಾಧ್ಯಮ ಶಾಲೆಗಳಲ್ಲಿ 1ರಿಂದ 5ನೇ ತರಗತಿವರೆಗಿನ ವಿದ್ಯಾರ್ಥಿಗಳಿಗೆ ತೃತೀಯ ಭಾಷೆಯಾಗಿ ಹಿಂದಿಯನ್ನು ಸಾಮಾನ್ಯವಾಗಿ ಕಲಿಸಲಾಗುವುದು ಎಂದು ರಾಜ್ಯ ಸರ್ಕಾರವು ಮಂಗಳವಾರ ಆದೇಶ ಹೊರಡಿಸಿತ್ತು.

15 ದಿನಗಳಲ್ಲಿ ‘ವೋಟರ್ ಐಡಿ’

ನವದೆಹಲಿ (ಪಿಟಿಐ): ಮತದಾರರಿಗೆ ಗುರುತಿನ ಚೀಟಿಗಳನ್ನು (ವೋಟರ್ ಐಡಿ-ಇಪಿಐಸಿ) 15 ದಿನಗಳೊಳಗಾಗಿ ತಲುಪಿಸುವ ವ್ಯವಸ್ಥೆ ಮಾಡುವುದಾಗಿ ಚುನಾವಣಾ ಆಯೋಗವು ಬುಧವಾರ ತಿಳಿಸಿದೆ.

ಇದುವರೆಗೆ ಅರ್ಜಿ ಸಲ್ಲಿಸಿದ ಒಂದು ತಿಂಗಳಿಗೂ ಹೆಚ್ಚು ಅವಧಿಯ ನಂತರ ಮತದಾರರ ಗುರುತಿನ ಚೀಟಿ ತಲುಪುತ್ತಿತ್ತು. ಹೊಸ ವ್ಯವಸ್ಥೆಯನ್ನು ಜಾರಿಗೊಳಿಸಲಾಗಿದ್ದು, ಇನ್ನು ಮುಂದೆ ವಿಳಂಬ ತಪ್ಪಲಿದೆ ಎಂದು ಹೇಳಿದೆ.

ಇಪಿಐಸಿಗೆ ಅರ್ಜಿ ಸಲ್ಲಿಸಿದ ನಂತರದ ಎಲ್ಲ ಹಂತಗಳನ್ನು ಆನ್‌ಲೈನ್‌ನಲ್ಲಿ ಪರಿಶೀಲಿಸಬಹುದಾಗಿದೆ ಎಂದೂ ತಿಳಿಸಿದೆ.

ನೌಕಾಪಡೆಗೆ ‘ಅರ್ನಾಲಾ’ ಸೇರ್ಪಡೆ

ಶತ್ರುಗಳ ದಾಳಿಯನ್ನು ತಡೆಗಟ್ಟಬಹುದಾದ ಜಲಾಂತರ್ಗಾಮಿ

ಪ್ರಜಾವಾಣಿ ವಾರ್ತೆ

ಮುಂಬೈ: ಆತ್ಮನಿರ್ಭರ ನೀತಿಯಡಿ ನಿರ್ಮಾಣಗೊಂಡ ‘ಅರ್ನಾಲಾ’ ಜಲಾಂತರ್ಗಾಮಿಯು ಭಾರತೀಯ ನೌಕಾಪಡೆಗೆ ಬುಧವಾರ ಸೇರ್ಪಡೆಗೊಂಡಿತು.

ಶತ್ರುಗಳ ದಾಳಿಯನ್ನು ತಡೆಗಟ್ಟಬಹುದಾದ ಸಾಮರ್ಥ್ಯ ಹೊಂದಿರುವ ಭಾರತೀಯ ನೌಕಾಪಡೆಯ ಮೊದಲ ಜಲಾಂತರ್ಗಾಮಿ ಇದು. ಶತ್ರು ದೇಶಗಳ ಜಲಾಂತರ್ಗಾಮಿಗಳ ಚಲನವಲನವನ್ನು ಪತ್ತೆಹಚ್ಚುವ ಜೊತೆಗೆ ಅವನ್ನು ತಟಸ್ಥಗೊಳಿಸುವ ದಕ್ಷತೆಯನ್ನು ಹೊಂದಿದೆ.

ಮಹಾರಾಷ್ಟ್ರದ ಪಾಲ್ಘರ್ ಜಿಲ್ಲೆಯ ಐತಿಹಾಸಿಕ ಕೋಟೆಯ ಹೆಸರನ್ನು ಹೊಂದಿರುವ ಈ ಅತ್ಯಾಧುನಿಕ ಜಲಾಂತರ್ಗಾಮಿಯನ್ನು ಕೋಲ್ಕತ್ತ ಮೂಲದ ಗಾರ್ಡನ್ ರೀಚ್ ಶಿಪ್ ಬಿಲ್ಡರ್ಸ್ ಅಂಡ್ ಎಂಜಿನಿಯರ್ಸ್ ಲಿಮಿಟೆಡ್ (ಜಿಆರ್‌ಎಸ್‌ಇ) ನಿರ್ಮಿಸಿದೆ.

ಶತ್ರುಗಳ ಜಲಾಂತರ್ಗಾಮಿ ವಿರೋಧಿ ಕಾರ್ಯಾಚರಣೆಗಳಿಗಾಗಿಯೇ ಡೀಸೆಲ್ ಎಂಜಿನ್ ಹಾಗೂ ವಾಟರ್ ಜೆಟ್‌ನ ಸಂಯೋಜನೆಯೊಂದಿಗೆ ವಿನ್ಯಾಸಗೊಳಿಸಲಾಗಿರುವ ಈ ಯುದ್ಧನೌಕೆಯನ್ನು ವಿಶಾಖಪಟ್ಟಣಂನ ನೌಕಾನೆಲೆಯಲ್ಲಿ ರಕ್ಷಣಾ ಸಿಬ್ಬಂದಿ ಮುಖ್ಯಸ್ಥ (ಸಿಡಿಎಸ್) ಜನರಲ್ ಅನಿಲ್ ಚೌಹಾಣ್ ಸಮ್ಮುಖ ನೌಕಾಪಡೆಗೆ ನಿಯೋಜಿಸಲಾಯಿತು.

ಸುಲ್ತಾನ್ ಮಹಮೂದ್ ಬೆಗಡಾ ಅವರು ಮಹಾರಾಷ್ಟ್ರದ ಕರಾವಳಿಯ ಕೊಂಕಣ ತೀರದಲ್ಲಿರುವ ವಸಯೀ- ವಿರಾರ್ ದ್ವೀಪದಲ್ಲಿ 1516ರಲ್ಲಿ ಕಟ್ಟಿಸಿದ ಕೋಟೆಯಲ್ಲಿ ಮೊಘಲರು, ಮರಾಠರು, ಪೋರ್ಚುಗೀಸರು, ಪೇಶ್ವೆಗಳು ಸೇರಿದಂತೆ ಇತರರು ಆಳ್ವಿಕೆ ನಡೆಸಿದ್ದಾರೆ.



ರಕ್ಷಣಾ ಸಿಬ್ಬಂದಿ ಮುಖ್ಯಸ್ಥ (ಸಿಡಿಎಸ್) ಜನರಲ್ ಅನಿಲ್ ಚೌಹಾಣ್ ಸಮ್ಮುಖ ನೌಕಾಪಡೆಗೆ ಸೇರ್ಪಡೆಗೊಂಡ ‘ಅರ್ನಾಲಾ’ ಜಲಾಂತರ್ಗಾಮಿ –ಪಿಟಿಐ ಚಿತ್ರ

ಮುಖ್ಯಾಂಶಗಳು
- ಆತ್ಮನಿರ್ಭರ ನೀತಿಯಡಿ ನಿರ್ಮಾಣಗೊಂಡ ಜಲಾಂತರ್ಗಾಮಿ
- ಡೀಸೆಲ್ ಎಂಜಿನ್, ವಾಟರ್ ಜೆಟ್ ಸಂಯೋಜನೆ ವಿನ್ಯಾಸ

1,490 ಟನ್ ತೂಕದ ಜಲಾಂತರ್ಗಾಮಿ

77 ಮೀಟರ್ ಉದ್ದ

ತಮಿಳುನಾಡು ಎಡಿಜಿಪಿ ಅಮಾನತು ರಾಜ್ಯ ಸರ್ಕಾರಕ್ಕೆ ‘ಸುಪ್ರೀಂ’ ತರಾಟೆ



ನವದೆಹಲಿ (ಪಿಟಿಐ): ಅಪಹರಣ ಪ್ರಕರಣವೊಂದರ ಸಂಬಂಧ ತಮಿಳುನಾಡಿನ ಐಪಿಎಸ್ ಅಧಿಕಾರಿ, ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕ ಎಚ್.ಎಂ. ಜಯರಾಂ ಅವರ ಅಮಾನತು ಕುರಿತು ಸುಪ್ರೀಂ ಕೋರ್ಟ್, ರಾಜ್ಯ ಸರ್ಕಾರಕ್ಕೆ ತರಾಟೆ ತೆಗೆದುಕೊಂಡಿತು.

ಈ ಮುನ್ನ ಅಧಿಕಾರಿಯನ್ನು ಬಂಧಿಸಲು ಮದ್ರಾಸ್ ಹೈಕೋರ್ಟ್ ಮೌಖಿಕ ಆದೇಶ ನೀಡಿತ್ತು.

‘ಅಧಿಕಾರಿಯನ್ನು ಮಂಗಳವಾರ ವಶಕ್ಕೆ ಪಡೆದಿದ್ದು, ಸಂಜೆ 5 ಗಂಟೆ ವೇಳೆಗೆ ಬಿಡುಗಡೆ ಮಾಡಲಾಯಿತು’ ಎಂದು ನ್ಯಾಯಮೂರ್ತಿಗಳಾದ ಉಜ್ವಲ್ ಭುಯಾನ್, ಮನಮೋಹನ್ ಅವರಿದ್ದ ‘ಸುಪ್ರೀಂ’ ಪೀಠಕ್ಕೆ ತಮಿಳುನಾಡು ಸರ್ಕಾರದ ಪರ ವಕೀಲರು ತಿಳಿಸಿದರು.

‘ಐಪಿಎಸ್ ಅಧಿಕಾರಿಯನ್ನು ಪೊಲೀಸರು ಬಿಡುಗಡೆ ಮಾಡಿದ್ದಾರೆ. ಆದರೆ, ಸರ್ಕಾರ ಅವರನ್ನು ಅಮಾನತು ಮಾಡಿದೆ’ ಎಂದು ಅಧಿಕಾರಿ ಪರ ವಕೀಲರು ಪೀಠಕ್ಕೆ ತಿಳಿಸಿದರು.

‘ಹಿರಿಯ ಅಧಿಕಾರಿಯನ್ನು ಅಮಾನತಿನಲ್ಲಿ ಇಡುವ ಅಗತ್ಯ ಏನಿತ್ತು? ಇಂತಹ ಕ್ರಮಗಳು ನೈತಿಕ ಸ್ಥೈರ್ಯ ಕುಗ್ಗಿಸಲಿದ್ದು, ಆತಂಕ ಮೂಡಿಸುವಂತಹದ್ದಾಗಿದೆ’ ಎಂದು ಪೀಠ ಹೇಳಿತು.

‘ಆರೋಪಿಯ ಹೇಳಿಕೆಯನ್ನೇ ಆಧರಿಸಿ ನನ್ನನ್ನು ಬಂಧಿಸುವಂತೆ ಹೈಕೋರ್ಟ್ ಸೂಚಿಸಿದೆ’ ಎಂದು ವಾದಿಸಿದ್ದ ಅಧಿಕಾರಿ ಸುಪ್ರೀಂ ಕೋರ್ಟ್‌ನ ಮೆಟ್ಟಿಲೇರಿದ್ದರು.

ಪ್ರಕರಣದ ವಿಚಾರಣೆಯನ್ನು ಜೂನ್ 19ಕ್ಕೆ ಮುಂದೂಡಿದ ಸುಪ್ರೀಂ ಪೀಠ, ಈ ಕುರಿತು ಹೆಚ್ಚಿನ ವಿವರಗಳೊಂದಿಗೆ ಅಂದು ಹಾಜರಾಗಲು ಸರ್ಕಾರದ ಪರ ವಕೀಲರಿಗೆ ಸೂಚಿಸಿತು.

ಏಪ್ರಿಲ್ 5ರಂದು ಯುವತಿಯ ಅಪಹರಣ ನಡೆದಿದ್ದು, ಅದಕ್ಕಾಗಿ ಜಯರಾಂ ಅವರ ಅಧಿಕೃತ ವಾಹನ ಬಳಕೆ ಆಗಿತ್ತು ಎಂಬ ಆರೋಪಕ್ಕೆ ಸಂಬಂಧಿಸಿದ ಪ್ರಕರಣ ಇದಾಗಿದೆ.

‘ಪಶ್ಚಿಮ ಬಂಗಾಳ: ನರೇಗಾ ಜಾರಿಗೊಳಿಸಿ’

ಕೋಲ್ಕತ್ತ (ಪಿಟಿಐ): ನರೇಗಾ ಯೋಜನೆಯನ್ನು ಪಶ್ಚಿಮ ಬಂಗಾಳದಲ್ಲಿ ಆ.1ರಿಂದ ಕೆಲವು ಷರತ್ತುಗಳೊಂದಿಗೆ ಮರು ಜಾರಿಗೊಳಿಸುವಂತೆ ಕೋಲ್ಕತ್ತ ಹೈಕೋರ್ಟ್ ಕೇಂದ್ರ ಸರ್ಕಾರಕ್ಕೆ ಆದೇಶಿಸಿದೆ.

ಪಶ್ಚಿಮ ಬಂಗಾಳದ ಪೂರ್ವ ಬರ್ಧಮಾನ್, ಹೂಗ್ಲಿ, ಮಾಲ್ಡಾ ಮತ್ತು ಡಾರ್ಜಲಿಂಗ್ ಜಿಲ್ಲೆಗಳಲ್ಲಿ ‘ನರೇಗಾ’ ಯೋಜನೆಯಡಿ ಅವ್ಯವಹಾರ ನಡೆದಿದೆ ಎಂಬ ಆರೋಪದಡಿ ಇಡೀ ರಾಜ್ಯದಲ್ಲಿ ಈ ಯೋಜನೆಯನ್ನು ಕಳೆದ 3 ವರ್ಷಗಳಿಂದ ತಡೆಹಿಡಿಯಲಾಗಿತ್ತು.

ಗುರುವಾರ • ಜೂನ್ 19, 2025
ಪ್ರಜಾವಾಣಿ

ಭಾರತವನ್ನು ಕಾಡಲಿದೆ ಕೊಹ್ಲಿ ಗೈರು

ಒಡನಾಟ ನೆನಪಿಸಿಕೊಂಡ ಇಂಗ್ಲೆಂಡ್ ನಾಯಕ ಬೆನ್ ಸ್ಟೋಕ್ಸ್

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಟೆಸ್ಟ್ ಕ್ರಿಕೆಟ್‌ನ ಅಪ್ಪಟ 'ರಾಯಭಾರಿ'ಯಾಗಿದ್ದ ಕೊಹ್ಲಿ: ಸ್ಟೋಕ್ಸ್ ಪ್ರಶಂಸೆ
- ವಿರಾಟ್ ವಿರುದ್ಧ ಆಡುವುದೆಂದರೆ ನನಗೆ ಅಪಾರ ಪ್ರೀತಿ
- ಸರಣಿಯಲ್ಲಿ ಕೊಹ್ಲಿ ಇಲ್ಲವೆಂಬುದು ನಾಚಿಕೆ ತರಿಸುತ್ತದೆ: ಬೇಸರ

ಲೀಡ್ಸ್: ಆಧುನಿಕ ಯುಗದ ಟೆಸ್ಟ್ ಕ್ರಿಕೆಟ್ ಕ್ಷೇತ್ರದಲ್ಲಿ ತಮ್ಮದೇ ಛಾಪು ಮೂಡಿಸಿದ ವಿರಾಟ್ ಕೊಹ್ಲಿ ಈಚೆಗಷ್ಟೇ ನಿವೃತ್ತಿ ಘೋಷಿಸಿದ್ದರು. ಟೆಸ್ಟ್ ಕ್ರಿಕೆಟ್‌ನ ಅಪ್ಪಟ 'ರಾಯಭಾರಿ'ಯಾಗಿದ್ದ ಕೊಹ್ಲಿಯ ಗೈರು ಭಾರತ ತಂಡವನ್ನಂತೂ ಅಪಾರವಾಗಿ ಕಾಡಲಿದೆ. ಅಷ್ಟೇ ಅಲ್ಲ; ಎದುರಾಳಿ ತಂಡಗಳಿಗೂ ಕೊಂಚಮಟ್ಟಿಗೆ ಬೇಸರ ಮೂಡಿಸಿದೆ.

ಹೌದು; ಇಂಗ್ಲೆಂಡ್ ಕ್ರಿಕೆಟ್ ತಂಡದ ನಾಯಕ ಬೆನ್ ಸ್ಟೋಕ್ಸ್ ಅವರೇ ಈ ಮಾತು ಹೇಳಿದ್ದಾರೆ.

'ಭಾರತದ ಎದುರಿಗಿನ ಸರಣಿಯು ಅತ್ಯಂತ ಮಹತ್ವದ್ದಾಗಿದೆ. ಇದೊಂದು ಬ್ಲಾಕ್‌ಬಸ್ಟರ್ ಸರಣಿ. ಇಂತಹದೊಂದು ಸರಣಿಯಲ್ಲಿ ಕೊಹ್ಲಿ ಇಲ್ಲವೆಂಬುದು ನಾಚಿಕೆ ತರಿಸುತ್ತದೆ. ಅವರ ಅನುಪಸ್ಥಿತಿಯು ಭಾರತ ತಂಡದ ಹೋರಾಟದ ಕೆಚ್ಚು ಮತ್ತು ಗೆಲುವಿನ ಛಲವನ್ನು ಮಸುಕುಗೊಳಿಸಲಿದೆ' ಎಂದು ಸ್ಟೋಕ್ಸ್ ಹೇಳಿದ್ದಾರೆ. ಸೋನಿ ಸ್ಪೋರ್ಟ್ಸ್ ಆಯೋಜಿಸಿದ್ದ ಮಾಧ್ಯಮ ಸಂವಾದದ ವಿಡಿಯೊದಲ್ಲಿ ಅವರು ಈ ಮಾತು ಹೇಳಿದ್ದಾರೆ.

'ಕೊಹ್ಲಿಯ ಸ್ಪರ್ಧಾತ್ಮಕ ಗುಣ. ಹೋರಾಟದ ಕೆಚ್ಚು ಮತ್ತು ಗೆಲುವಿನ ಹಸಿವು ಅಸಾಧಾರಣ. ಆ ಎಲ್ಲವನ್ನೂ ಭಾರತ ತಂಡವು ಕಳೆದುಕೊಳ್ಳಲಿದೆ. 18 ಸಂಖ್ಯೆಗೆ ಅವರು ದೊಡ್ಡ ಗೌರವ ತಂದುಕೊಟ್ಟರು. ಅವರ ಜೆರ್ಸಿ ಮೇಲೆ 18 ಸಂಖ್ಯೆಯು ಯಾವಾಗಲೂ ನೆನಪಿನಲ್ಲಿ ಉಳಿಯುವಂತದ್ದು. ಆ ಸಂಖ್ಯೆಯ ಪೋಷಾಕನ್ನು ಬಹುಶಃ ಭಾರತ ತಂಡದಲ್ಲಿ ಇನ್ನು ಮುಂದೆ ಯಾರೂ ಧರಿಸುವುದಿಲ್ಲ. ಆದರೆ ಅದರ ಪ್ರಭಾವಳಿ ದೀರ್ಘ ಸಮಯದವರೆಗೆ ಇರಲಿದೆ' ಎಂದು ಬೆನ್ ಹೇಳಿದರು.

'ವಿರಾಟ್ ವಿದಾಯ ಸುದ್ದಿ ತಿಳಿದ ತಕ್ಷಣ ಅವರಿಗೆ ಸಂದೇಶ ಕಳಿಸಿದೆ. ವಿರಾಟ್ ಇಲ್ಲದ ತಂಡದ ಎದುರು ಆಡುವುದು ನಾಚಿಕೆಗೇಡು ಎಂದು ಅದರಲ್ಲಿ ಬರೆದಿದ್ದೆ. ಏಕೆಂದರೆ; ಕೊಹ್ಲಿ ವಿರುದ್ಧ ಆಡುವುದೆಂದರೆ ನನಗೆ ಅಪಾರ ಪ್ರೀತಿ. ನಮ್ಮಿಬ್ಬರ ಮನೋಭಾವವೂ ಹೆಚ್ಚುಕಮ್ಮಿ ಒಂದೇ ತರಹ. ಪಂದ್ಯದಲ್ಲಿ ನಾವಿಬ್ಬರೂ ಮುಖಾಮುಖಿಯಾದರೆ ಸಮರಕ್ಕೆ ಸಮವಾದ ಹೋರಾಟ ಇರುತ್ತಿತ್ತು' ಎಂದು ಸ್ಟೋಕ್ಸ್ ನೆನಪಿಸಿಕೊಂಡರು.



ವಿರಾಟ್ ಕೊಹ್ಲಿ ಮತ್ತು ಬೆನ್ ಸ್ಟೋಕ್ಸ್ ಪಂದ್ಯವೊಂದರಲ್ಲಿ ಮುಖಾಮುಖಿಯಾಗಿದ್ದ ಸಂದರ್ಭ ಪಿಟಿಐ ಸಂಗ್ರಹದಿಂದ

'ನಾಲ್ಕನೇ ಕ್ರಮಾಂಕದಲ್ಲಿ ಗಿಲ್'

ಹೆಡಿಂಗ್ಲೆ (ಪಿಟಿಐ): ಇಂಗ್ಲೆಂಡ್ ಎದುರಿನ ಟೆಸ್ಟ್ ಕ್ರಿಕೆಟ್ ಸರಣಿಯಲ್ಲಿ ನಾಯಕ ಶುಭಮನ್ ಗಿಲ್ ಅವರು ನಾಲ್ಕನೇ ಕ್ರಮಾಂಕದಲ್ಲಿ ಮತ್ತು ತಾವು ಐದನೇ ಕ್ರಮಾಂಕದಲ್ಲಿ ಆಡುವುದಾಗಿ ಭಾರತ ತಂಡದ ಉಪ ನಾಯಕ ರಿಷಭ್ ಪಂತ್ ಬುಧವಾರ ಖಚಿತಪಡಿಸಿದರು.



ರಿಷಭ್ ಪಂತ್

ವಿರಾಟ್ ಕೊಹ್ಲಿ ನಿವೃತ್ತಿಯಿಂದ ತೆರವಾಗಿರುವ ನಾಲ್ಕನೇ ಕ್ರಮಾಂಕಕ್ಕೆ ಹೊಸ ಬ್ಯಾಟರ್ ಕಂಡುಕೊಳ್ಳುವುದು ತಂಡಕ್ಕೆ ಅನಿವಾರ್ಯವಾಗಿತ್ತು. ಈಗ ಈ ಪ್ರಮುಖ ಸ್ಥಾನದಲ್ಲಿ ಗಿಲ್ ಆಡಲಿದ್ದಾರೆ.

'ಮೂರನೇ ಕ್ರಮಾಂಕದಲ್ಲಿ ಯಾರು ಆಡಲಿದ್ದಾರೆ ಎಂಬ ಚರ್ಚೆ ಈಗಲೂ ನಡೆಯುತ್ತಿದೆ. ಆದರೆ ಈಗಿನ ನಿರ್ಧಾರದ ಪ್ರಕಾರ ಶುಭಮನ್ ಅವರು ನಾಲ್ಕನೇ ಮತ್ತು ನಾನು ಐದನೇ ಕ್ರಮಾಂಕಕ್ಕೆ ನಿಗದಿ ಆಗಿದ್ದೇವೆ' ಎಂದು ಅವರು ತಿಳಿಸಿದರು.

ಅನುಭವಿ ವೇಗಿಗಳಾದ ಜೇಮ್ಸ್ ಆ್ಯಂಡರ್ಸನ್ ಮತ್ತು ಸ್ಟುವರ್ಟ್ ಬ್ರಾಡ್ ನಿವೃತ್ತರಾಗಿರುವ ಕಾರಣ ಇಂಗ್ಲೆಂಡ್ ತಂಡವು ಅವರಿಲ್ಲದೇ ಆಡುತ್ತಿದೆ. 'ಇಂಗ್ಲೆಂಡ್ ಬೌಲಿಂಗ್ ಸರದಿಯಲ್ಲಿ ಈ ಇಬ್ಬರು ದಿಗ್ಗಜ ಬೌಲರ್‌ಗಳಿಲ್ಲದಿರುವುದು ನಿರಾಳಭಾವ ಮೂಡಿಸಿದೆ' ಎಂದು ಪಂತ್ ಹೇಳಿದರು.

ಆಡುವ 11ರ ತಂಡ ಪ್ರಕಟಿಸಿದ ಇಂಗ್ಲೆಂಡ್

ಲಂಡನ್ (ಎಎಫ್‌ಪಿ): ಮೊದಲ ಟೆಸ್ಟ್‌ನಲ್ಲಿ ಆಡುವ 11ರ ತಂಡವನ್ನು ಇಂಗ್ಲೆಂಡ್ ಬುಧವಾರ ಅಂತಿಮಗೊಳಿಸಿದೆ. ಉಪನಾಯಕ ಓಲಿ ಪೋಪ್ ಮೂರನೇ ಕ್ರಮಾಂಕಕ್ಕೆ ಮರಳಲಿದ್ದಾರೆ. ಹೀಗಾಗಿ ಜೇಕಬ್ ಬೆಥೆಲ್ ಅವರು ಟೆಸ್ಟ್ ತಂಡದ ಪುನರಾಗಮನಕ್ಕೆ ಕಾಯಬೇಕಾಗಿದೆ.



ಓಲಿ ಪೋಪ್

ಮೂರನೇ ಕ್ರಮಾಂಕಕ್ಕೆ ಪೋಪ್ ಮತ್ತು ಬೆಥೆಲ್ ಮಧ್ಯೆ ಪೈಪೋಟಿಯಿತ್ತು. ಕಳೆದ ನವೆಂಬರ್–ಡಿಸೆಂಬರ್‌ನಲ್ಲಿ ಇಂಗ್ಲೆಂಡ್ ತಂಡದ ನ್ಯೂಜಿಲೆಂಡ್ ಪ್ರವಾಸದಲ್ಲಿ ತಮ್ಮ ಚೊಚ್ಚಲ ಟೆಸ್ಟ್ ಸರಣಿಯಲ್ಲಿ ಬೆಥೆಲ್ ಮೂರು ಅರ್ಧ ಶತಕಗಳನ್ನು ಬಾರಿಸಿ ಗಮನ ಸೆಳೆದಿದ್ದರು.

ಆದರೆ ಪೋಪ್, ಹೋದ ತಿಂಗಳು ಜಿಂಬಾಬ್ವೆ ವಿರುದ್ಧ ನಡೆದ ಟೆಸ್ಟ್ ಪಂದ್ಯದಲ್ಲಿ 171 ರನ್ ಬಾರಿಸಿ ತಮ್ಮ ಉಪಯುಕ್ತತೆ ತೋರಿದ್ದರು. ಐಪಿಎಲ್ (ಆರ್‌ಸಿಬಿ ತಂಡದ ಪರ) ಆಡುತ್ತಿದ್ದ ಕಾರಣ ಬೆಥೆಲ್ ಆ ಟೆಸ್ಟ್‌ನಲ್ಲಿ ಆಡಿರಲಿಲ್ಲ. ನಂತರ ನಡೆದ ವೆಸ್ಟ್ ಇಂಡೀಸ್ ವಿರುದ್ಧ ಸೀಮಿತ ಓವರುಗಳ ಸರಣಿಯಲ್ಲೂ ಬೆಥೆಲ್ ಉತ್ತಮ ಪ್ರದರ್ಶನ ನೀಡಿದ್ದರು.

ಇಂಗ್ಲೆಂಡ್ 11ರ ತಂಡ: ಬೆನ್ ಡಕೆಟ್, ಓಲಿ ಪೋಪ್, ಜೋ ರೂಟ್, ಹ್ಯಾರಿ ಬ್ರೂಕ್, ಬೆನ್ ಸ್ಟೋಕ್ಸ್ (ನಾಯಕ), ಜೇಮಿ ಸ್ಮಿತ್ (ವಿಕೆಟ್ ಕೀಪರ್), ಕ್ರಿಸ್ ವೋಕ್ಸ್, ಬ್ರೈಡನ್ ಕಾರ್ಸ್, ಜೋಶ್ ಟಂಗ್, ಶೋಯೆಬ್ ಬಶೀರ್.

ಭಾರತ ತಂಡವು ಇದೇ 20ರಿಂದ ಇಂಗ್ಲೆಂಡ್‌ನಲ್ಲಿ ಐದು ಪಂದ್ಯಗಳ ಸರಣಿಯನ್ನು ಆಡಲಿದೆ.

ನೇರಪ್ರಸಾರ: ಭಾರತ ಹಾಗೂ ಇಂಗ್ಲೆಂಡ್ ಟೆಸ್ಟ್ ಸರಣಿಯನ್ನು ಸೋನಿ ಸ್ಪೋರ್ಟ್ಸ್ ವಾಹಿನಿಯು ನೇರಪ್ರಸಾರ ಮಾಡಲಿದೆ. ಭಾರತೀಯ ಕಾಲಮಾನದ ಪ್ರಕಾರ ಮ. 3.30ಕ್ಕೆ ಪಂದ್ಯ ಆರಂಭವಾಗಲಿದೆ.

ಶೂಟೌಟ್‌ನಲ್ಲಿ ಗೆದ್ದ ಅರ್ಜೆಂಟೀನಾ

ಪ್ರೊ ಲೀಗ್ ಹಾಕಿ: ನಿಗದಿತ ಅವಧಿಯಲ್ಲಿ 2–2 ಸಮಬಲ

ಲಂಡನ್ (ಪಿಟಿಐ): ಅರ್ಜೆಂಟೀನಾ ವಿರುದ್ಧ ಎಫ್‌ಐಎಚ್ ಮಹಿಳೆಯರ ಪ್ರೊ ಲೀಗ್ ಹಾಕಿ ರಿಟರ್ನ್ ಲೆಗ್ ಪಂದ್ಯದ ನಿಗದಿ ಅವಧಿಯ ಆಟದಲ್ಲಿ ಪ್ರತಿ ಹೋರಾಟ ತೋರಿದ್ದ ಭಾರತ 2–2 ಗೋಲುಗಳಿಂದ ಸಮಮಾಡಿಕೊಂಡಿತ್ತು. ಆದರೆ ಪೆನಾಲ್ಟಿ ಶೂಟೌಟ್‌ನಲ್ಲಿ ಕಳಪೆ ಆಟದಿಂದಾಗಿ 0–2ರಲ್ಲಿ ಸೋಲನುಭವಿಸಬೇಕಾಯಿತು.

ಬುಧವಾರ ನಡೆದ ಈ ಪಂದ್ಯದಲ್ಲಿ ಭಾರತದ ಆಟಗಾರ್ತಿಯರು ಕೆಲವು ಅವಕಾಶಗಳನ್ನು ವ್ಯರ್ಥಪಡಿಸಿಕೊಂಡರು. ಪರಿಣಾಮವಾಗಿ ಯುರೋಪಿಯನ್ ಲೆಗ್‌ನಲ್ಲಿ ಸತತ ನಾಲ್ಕನೇ ಸೋಲು ಕಾಣಬೇಕಾಯಿತು. ಆಸ್ಟ್ರೇಲಿಯಾ ವಿರುದ್ಧ ಎರಡು ಪಂದ್ಯಗಳಲ್ಲಿ ಸೋತಿದ್ದ ಭಾರತ, ಮಂಗಳವಾರ ಅರ್ಜೆಂಟೀನಾ ಎದುರು ಮೊದಲ ಪಂದ್ಯದಲ್ಲಿ 1–4 ರಿಂದ ಪರಾಭವಗೊಂಡಿತ್ತು.

ಭಾರತ ಆರಂಭದಲ್ಲಿ ಆಕ್ರಮಣಕಾರಿಯಾಗಿ ಆಡಿತು. ಮೊದಲ ಕ್ವಾರ್ಟರ್‌ನಲ್ಲಿ ಎರಡು ಪೆನಾಲ್ಟಿ ಕಾರ್ನರ್‌ಗಳೂ ದೊರಕಿದ್ದವು. ಆದರೆ ಒಂದೂ ಗೋಲಾಗಿ ಪರಿವರ್ತನೆಯಾಗಲಿಲ್ಲ. ಎರಡನೇ ಕ್ವಾರ್ಟರ್‌ನಲ್ಲಿ (ಪಂದ್ಯದ 27ನೇ ನಿಮಿಷ) ಅರ್ಜೆಂಟೀನಾ ಆಟಗಾರ್ತಿ ಅಗಸ್ಟಿನಾ ಗೋರ್ಝೆಲನಿ ಅವರು ತಂಡಕ್ಕೆ ಮುನ್ನಡೆ ಒದಗಿಸಿದರು.

ಹತ್ತು ನಿಮಿಷಗಳ ನಂತರ ಆಗಸ್ಟಿನಾ ಮತ್ತೊಮ್ಮೆ ಪೆನಾಲ್ಟಿ ಕಾರ್ನರ್ ಪರಿವರ್ತಿಸುವಲ್ಲಿ ಯಶಸ್ವಿ ಆಗಿ ತಂಡದ ಮುನ್ನಡೆ ಹೆಚ್ಚಿಸಿದರು.

ಆದರೆ ಕೊನೆಯ ಕ್ವಾರ್ಟರ್‌ನಲ್ಲಿ ಭಾರತ ಪ್ರತಿಹೋರಾಟ ತೋರಿತು. 50ನೇ ನಿಮಿಷದಲ್ಲಿ ನವನೀತ್ ಕೌರ್ ಎದುರಾಳಿ ತಂಡದ ಇಬ್ಬರು ರಕ್ಷಣೆ ಆಟಗಾರ್ತಿಯರನ್ನು ವಂಚಿಸಿ ಗೋಲು ಗಳಿಸಿದರು. 56ನೇ ನಿಮಿಷದಲ್ಲಿ ಭಾರತ ತಂಡಕ್ಕೆ ದೊರೆತ ಐದನೇ ಪೆನಾಲ್ಟಿ ಕಾರ್ನರ್‌ನಲ್ಲಿ ದೀಪಿಕಾ ಗೋಲು ಗಳಿಸಿದ್ದರಿಂದ ಸ್ಕೋರ್ 2–2 ಸಮಬಲಗೊಂಡಿತು.

ಆದರೆ ಶೂಟೌಟ್ ಭಾರತದ ಪಾಲಿಗೆ ದುಃಸ್ವಪ್ನವಾಯಿತು. ದೀಪಿಕಾ, ಖುತುಜಾ, ಲಾಲ್ರೆಮ್‌ಸಿಯಾಮಿ ಮತ್ತು ಬಲಜೀತ್ ಕೌರ್ ತಮ್ಮ ಅವಕಾಶಗಳಲ್ಲಿ ಎಡವಿದರು. ಆದರೆ ಅರ್ಜೆಂಟೀನಾ ಪರ ಬ್ರಿಸಾ ಬ್ರುಗೇಸರ್ ಮತ್ತು ಸೋಫಿಯಾ ಕೈರೊ ಗೋಲು ಗಳಿಸಿದರು.

ಭಾರತ ಇದೇ 21ರಂದು ಮುಂದಿನ ಪಂದ್ಯವನ್ನು ಆ್ಯಂಟ್‌ವರ್ಪ್‌ನಲ್ಲಿ ಆಡಲಿದ್ದು, ಆತಿಥೇಯ ಬೆಲ್ಜಿಯಂ ತಂಡವನ್ನು ಎದುರಿಸಲಿದೆ.



ಅರ್ಜೆಂಟೀನಾ ತಂಡದ ಆಟಗಾರ್ತಿಯರ ಸಂಭ್ರಮಾಚರಣೆ 'ಎಕ್ಸ್' ಚಿತ್ರ

ತಾಜಿಕಿಸ್ತಾನಕ್ಕೆ ರೋಚಕ ಜಯ

ನವದೆಹಲಿ (ಪಿಟಿಐ): ಭಾರತ 23 ವರ್ಷದೊಳಗಿನ ಪುರುಷರ ತಂಡವು, ತಾಜಿಕಿಸ್ತಾನದ ತೂರ್ಸುನ್‌ಝೋದಾದಲ್ಲಿ ನಡೆದ ಅಂತರರಾಷ್ಟ್ರೀಯ ಸೌಹಾರ್ದ ಫುಟ್‌ಬಾಲ್ ಪಂದ್ಯದಲ್ಲಿ ಆತಿಥೇಯ ತಂಡದ ವಿರುದ್ಧ 2–3 ಅಂತರದಿಂದ ಪರಾಭವಗೊಂಡಿತು.

ಸುಹೇಲ್ ಅಹಮದ್ ಭಟ್ 34ನೇ ನಿಮಿಷದಲ್ಲಿ ಗೋಲು ಗಳಿಸಿ ಭಾರತಕ್ಕೆ ಆರಂಭಿಕ ಮುನ್ನಡೆ ತಂದುಕೊಟ್ಟರು. ಎದುರಾಳಿ ತಂಡದ ಅನ್ಸೋರ್ ಖಾಬಿಬೊವ್ (59ನೇ ನಿ.) ಗೋಲು ಹೊಡೆದು, ಸಮಬಲ ಸಾಧಿಸಿದರು.

ಭಾರತದ ಪಾರ್ಥಿವ್ ಗೊಗೊಯ್ ಅವರು (85ನೇ ನಿ.) ಆಕರ್ಷಕ ಗೋಲು ಗಳಿಸಿದರು. ಆದರೆ, ತಾಜಿಕಿಸ್ತಾನದ ಮುಹಮ್ಮದ್ ಇಕ್ಬಾಲ್ (90 + 1ನೇ ನಿ.) ಹಾಗೂ ಮುಹಮ್ಮದ್ ಅಲಿ ಅಜೀಜ್ ಬೋಯವ್ (90 + 4ನೇ ನಿ.) ಗೋಲು ಗಳಿಸಿ, ಗೆಲುವು ಕಸಿದುಕೊಂಡರು.

ಕೊಚ್ಚಿ ಟಸ್ಕರ್ಸ್‌ಗೆ ₹538 ಕೋಟಿ ಪರಿಹಾರ ನೀಡಲು ಆದೇಶ

ಮುಂಬೈ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಿಂದ ವಜಾ ಆಗಿರುವ ಕೊಚ್ಚಿ ಟಸ್ಕರ್ಸ್ ತಂಡಕ್ಕೆ ₹538 ಕೋಟಿ ಪರಿಹಾರ ನೀಡಬೇಕು ಎಂದು ಮುಂಬೈ ಹೈಕೋರ್ಟ್ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಗೆ ಸೂಚಿಸಿದೆ.

ಇದೇ ಪ್ರಕರಣದ ಕುರಿತು ನ್ಯಾಯಾಲಯ ಈ ಹಿಂದೆ ನೀಡಿದ್ದ ತೀರ್ಪನ್ನು ಪ್ರಶ್ನಿಸಿ ಬಿಸಿಸಿಐ ಮೇಲ್ಮನವಿ ಸಲ್ಲಿಸಿತ್ತು. ಮಂಗಳವಾರ ಈ ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಆರ್.ಛಾಗ್ಲಾ ತೀರ್ಪು ಪ್ರಕಟಿಸಿದರು.

2011ರ ಐಪಿಎಲ್‌ನಲ್ಲಿ ಕೊಚ್ಚಿ ಟಸ್ಕರ್ಸ್ ತಂಡವು ಆಡಿತ್ತು. ಈ ತಂಡವು ಕೇರಳ ಮೂಲದ ಫ್ರ್ಯಾಂಚೈಸಿ ಆಗಿತ್ತು. ರೆಂಡ್‌ಜೆವಿಒಸ್ ಸ್ಪೋರ್ಟ್ಸ್ ವರ್ಲ್ಡ್ (ಆರ್‌ಎಸ್‌ಡಬ್ಲ್ಯು) ಮತ್ತು ನಂತರ ಕೊಚ್ಚಿ ಕ್ರಿಕೆಟ್ ಪ್ರೈವೇಟ್ ಲಿಮಿಟೆಡ್ (ಕೆಸಿಪಿಎಲ್) ಮಾಲೀಕತ್ವ ವಹಿಸಿದ್ದವು.

ಫ್ರ್ಯಾಂಚೈಸಿಯು ನೀಡಿರುವ ಬ್ಯಾಂಕ್ ಗ್ಯಾರಂಟಿಯ ಬಗ್ಗೆ ಅತೃಪ್ತಿ ವ್ಯಕ್ತಪಡಿಸಿದ್ದ ಬಿಸಿಸಿಐ 2012ರಲ್ಲಿ ತಂಡವನ್ನು ಟೂರ್ನಿಯಿಂದ ವಜಾಗೊಳಿಸಿತ್ತು. ಫ್ರ್ಯಾಂಚೈಸಿಯು ಕೋರ್ಟ್ ಮೆಟ್ಟಿಲೇರಿತ್ತು.

ಕೆಲವು ವರ್ಷಗಳ ನಂತರ ಕೆಸಿಪಿಎಲ್‌ಗೆ ₹384.83 ಕೋಟಿ ಮತ್ತು ಈ ಮೊತ್ತಕ್ಕೆ ಶೇ 18ರಷ್ಟು ಬಡ್ಡಿಯನ್ನು 2011ರಿಂದ ಲೆಕ್ಕಹಾಕಿ ನೀಡಬೇಕು ಎಂದು ಬಿಸಿಸಿಐಗೆ ಸೂಚಿಸಲಾಗಿತ್ತು.

ಚಿಟಿಕೆ ಸುದ್ದಿ

ಹರ್ನಿಯಾ ಚಿಕಿತ್ಸೆ ಇಂಗ್ಲೆಂಡ್‌ಗೆ ಸೂರ್ಯ

ನವದೆಹಲಿ (ಪಿಟಿಐ): ಭಾರತ ಟಿ20 ಕ್ರಿಕೆಟ್ ತಂಡದ ನಾಯಕ ಸೂರ್ಯಕುಮಾರ್ ಯಾದವ್ ಅವರು ಹರ್ನಿಯಾ ಸಂಬಂಧಿ ನೋವಿಗೆ ತಜ್ಞ ವೈದ್ಯರ ಸಲಹೆ ಪಡೆಯಲು ಇಂಗ್ಲೆಂಡ್‌ಗೆ ತೆರಳಿದ್ದಾರೆ. ಅಗತ್ಯಬಿದ್ದಲ್ಲಿ ಶಸ್ತ್ರಚಿಕಿತ್ಸೆಗೆ ಒಳಗಾಗಲಿದ್ದಾರೆ.



33 ವರ್ಷ ವಯಸ್ಸಿನ ಸೂರ್ಯ ಅವರಿಗೆ ಈ ನೋವು ಮುಂಬೈ ಟಿ20 ಲೀಗ್ ವೇಳೆ ಉಲ್ಬಣಗೊಂಡಿತೇ ಎಂಬುದು ಗೊತ್ತಾಗಿಲ್ಲ. 'ಸೂರ್ಯ ಅವರು ಹರ್ನಿಯಾದಿಂದ ಬಳಲುತ್ತಿದ್ದಾರೆ. ಹೊಟ್ಟೆಯ ಕೆಳಗೆ ಬಲಭಾಗದಲ್ಲಿ ನೋವು ಇದೆ. ತಜ್ಞ ಸಲಹೆ ಪಡೆಯಲು ಇಂಗ್ಲೆಂಡ್‌ಗೆ ತೆರಳಿದ್ದಾರೆ. ಅಗತ್ಯಬಿದ್ದಲ್ಲಿ ಅವರು ಶಸ್ತ್ರಚಿಕಿತ್ಸೆಗೂ ಒಳಗಾಗಲಿದ್ದಾರೆ' ಎಂದು ಅವರ ಆಪ್ತಮೂಲವೊಂದು ಪಿಟಿಐಗೆ ತಿಳಿಸಿದೆ.

ನವೀನ್ ಕ್ಲಬ್‌ಗೆ ಜಯ

ಬೆಂಗಳೂರು: ನವೀನ್ ಹಾಕಿ ಕ್ಲಬ್ ತಂಡವು ಇಲ್ಲಿ ನಡೆಯುತ್ತಿರುವ 94ನೇ ತಿರುವಾಂಕೂರ್ ಕಪ್ ಹಾಕಿ ಟೂರ್ನಿಯ ಪಂದ್ಯದಲ್ಲಿ ಜಯಿಸಿತು.



ಬುಧವಾರ ನಡೆದ ಪಂದ್ಯದಲ್ಲಿ ನವೀನ್ ಹಾಕಿ ಕ್ಲಬ್ ತಂಡವು 10–1ರಿಂದ ಸದರ್ನ್ ಅಲ್ಫಾ ಸ್ಪೋರ್ಟ್ಸ್ ವಿರುದ್ಧ ಜಯಿಸಿತು. ನವೀನ್ ತಂಡದ ಭರತ್ ಕುಮಾರ್ (3ನಿ,24ನಿ) ಬೆಳ್ಳಿಯಪ್ಪ (12ನಿ, 13ನಿ, 14ನಿ), ವಿವೇಕ್ (8ನಿ, 10ನಿ), ಆಕಾಶ್ (17ನಿ) ಮತ್ತು ಆಶಿಕ್ (18ನಿ, 45ನಿ) ಗೋಲು ಹೊಡೆದರು. ಅಲ್ಫಾ ತಂಡದ ಸೋಮಣ್ಣ ಅವರು 22ನಿಮಿಷದಲ್ಲಿ ಏಕೈಕ ಗೋಲು ಗಳಿಸಿದರು.

ಇನ್ನೊಂದು ಪಂದ್ಯದಲ್ಲಿ ಡೆಲ್ಲಿ ಪಬ್ಲಿಕ್ ಶಾಲೆಯು 5–0ಯಿಂದ ಸಮಂತ್ ಸ್ಪೋರ್ಟ್ಸ್ ಅಕಾಡೆಮಿ ವಿರುದ್ಧ ಜಯಿಸಿತು.

ಪಟೌಡಿ ಟ್ರೋಫಿ ಮರುನಾಮಕರಣ ವಿಚಿತ್ರ: ಕಪಿಲ್ ದೇವ್ ಅಚ್ಚರಿ

ನವದೆಹಲಿ (ಪಿಟಿಐ): ಭಾರತ ಮತ್ತು ಇಂಗ್ಲೆಂಡ್ ನಡುವಣ ಆಯೋಜನೆಯಾಗುವ ಟೆಸ್ಟ್ ಕ್ರಿಕೆಟ್ ಸರಣಿಯ ಪಟೌಡಿ ಟ್ರೋಫಿಯನ್ನು ಮರುನಾಮಕರಣ ಮಾಡಲು ಹೊರಟಿದ್ದು ಅಚ್ಚರಿ ಮೂಡಿಸಿದೆ. ಇದೊಂದು ವಿಚಿತ್ರ ಎಂದು ಭಾರತ ಕ್ರಿಕೆಟ್ ತಂಡದ ದಿಗ್ಗಜ ಆಲ್‌ರೌಂಡರ್ ಕಪಿಲ್ ದೇವ್ ಹೇಳಿದರು.



ಇದೇ 20ರಿಂದ ಇಂಗ್ಲೆಂಡ್ ಆತಿಥ್ಯ ದಲ್ಲಿ ಸರಣಿ ಆರಂಭವಾಗಲಿದೆ. ಗೆದ್ದವರಿಗೆ ನೀಡುವ ಪಟೌಡಿ ಟ್ರೋಫಿಯನ್ನು ಮರುನಾಮಕರಣ ಮಾಡುವ ಪ್ರಸ್ತಾವ ಇತ್ತು. ಈಗ ಆ್ಯಂಡರ್ಸನ್–ತೆಂಡೂಲ್ಕರ್ ಟ್ರೋಫಿ ಎಂದು ಮರುನಾಮಕರಣ ಮಾಡಲು ನಿರ್ಧರಿಸಲಾಗಿದೆ.

'ಈ ನಿರ್ಧಾರ ಒಂಚೂರು ವಿಚಿತ್ರ ಎನಿಸಿತು. ಹೆಸರು ಬದಲಾವಣೆಯಿಂದ ಏನಾಗುತ್ತದೆ? ಕ್ರಿಕೆಟ್‌ನಲ್ಲಿ ಎಲ್ಲವೂ ನಡೆಯುತ್ತದೆ. ಕ್ರಿಕೆಟ್ ಬದಲಾಗುವುದಿಲ್ಲ. ಅದು ಕ್ರಿಕೆಟ್ ಆಗಿಯೇ ಇರುತ್ತದೆ' ಎಂದು ಇಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಅವರು ಹೇಳಿದರು. 1983ರ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಜಿಂಬಾಬ್ವೆ ಎದುರಿನ ಪಂದ್ಯದಲ್ಲಿ ಕಪಿಲ್ ದೇವ್ ಅವರು ಅಜೇಯ 175 ರನ್ ಹೊಡೆದು 42 ವರ್ಷಗಳು ತುಂಬಿದ ದಿನದ ನೆನಪಿಗಾಗಿ 'ತ್ರಿ ಸಿಕ್ಸ್' ಸಂಸ್ಥೆಯು ಈ ಕಾರ್ಯಕ್ರಮ ಆಯೋಜಿಸಿತ್ತು. ಟನ್‌ಬ್ರಿಜ್‌ನಲ್ಲಿ ನಡೆದಿದ್ದ ಆ ಪಂದ್ಯದಲ್ಲಿ ಭಾರತ ತಂಡವು 17 ರನ್‌ಗಳಿಗೆ 5 ವಿಕೆಟ್ ಕಳೆದುಕೊಂಡಿತ್ತು. ಆಗ ಕ್ರೀಸ್‌ಗೆ ಬಂದಿದ್ದ ಕಪಿಲ್ ಅವರ ಬ್ಯಾಟಿಂಗ್‌ನಿಂದಾಗಿ ತಂಡದ ಮೊತ್ತವು 266 ರನ್ ಆಯಿತು. ನಂತರ ನಡೆದಿದ್ದು ಇತಿಹಾಸದ ಪುಟಗಳಲ್ಲಿ ಬಂಗಾರದ ಅಕ್ಷರಗಳಲ್ಲಿ ದಾಖಲಾಯಿತು. ಆ ವರ್ಷ ಭಾರತ ಟ್ರೋಫಿಗೆ ಮುತ್ತಿಟ್ಟಿತ್ತು.

'ನಾನು ಆಡುವ ದಿನಗಳಲ್ಲಿದ್ದ ಬಹಳಷ್ಟು ಸಲಕರಣೆಗಳನ್ನು ಇಟ್ಟುಕೊಂಡಿಲ್ಲ. ಆದರೆ ಈ ಬ್ಯಾಟ್ ಮಾತ್ರ ನನ್ನ ಬಳಿ ಇದೆ. ಇದು ನನ್ನ ಮಗಳ ಪ್ರೀತಿಯ ಬ್ಯಾಟ್' ಎಂದು ಜಿಂಬಾಬ್ವೆ ಎದುರಿನ ಪಂದ್ಯದಲ್ಲಿ ಬಳಸಿದ್ದ ಬ್ಯಾಟ್ ಪ್ರದರ್ಶಿಸಿದರು.

ಶುಭಮನ್ ಗಿಲ್ ನಾಯಕತ್ವದ ಕುರಿತು ಪ್ರತಿಕ್ರಿಯಿಸಿದ ಅವರು, 'ಯಾವುದೇ ಅತಿಯಾದ ನಿರೀಕ್ಷೆಗಳು ಬೇಡ. ಹೋಗಿ, ಆಡಿ, ನಿಮ್ಮ ಸಾಮರ್ಥ್ಯ ತೋರಿಸಿ. ಅದೇ ಮುಖ್ಯವಾಗುತ್ತದೆ' ಎಂದು ಸಲಹೆ ನೀಡಿದರು.

ಟೆನ್‌ಪಿನ್ ಬೌಲಿಂಗ್: ಆಕಾಶ್, ಗೀತಾ ಮುನ್ನಡೆ

ಬೆಂಗಳೂರು: ಆಕಾಶ್ ಅಶೋಕಕುಮಾರ್ ಮತ್ತು ಗೀತಾ ಪೂಜಾರಿ ಅವರು ಇಲ್ಲಿ ನಡೆಯುತ್ತಿರುವ ಕರ್ನಾಟಕ ರಾಜ್ಯ ರ್‍ಯಾಂಕಿಂಗ್ ಟೆನ್‌ಪಿನ್ ಬೌಲಿಂಗ್ ಟೂರ್ನಿಯಲ್ಲಿ ಕ್ರಮವಾಗಿ ಪುರುಷ ಮತ್ತು ಮಹಿಳಾ ವಿಭಾಗಗಳಲ್ಲಿ ಮುನ್ನಡೆ ಸಾಧಿಸಿದರು.



ಗೀತಾ ಪೂಜಾರಿ

ಅಮೀಬಾ ಬೌಲಿಂಗ್ ಸೆಂಟರ್‌ನಲ್ಲಿ ನಡೆಯುತ್ತಿರುವ ಟೂರ್ನಿಯ ಮೊದಲ ಸುತ್ತಿನಲ್ಲಿ ಆಕಾಶ್ 1198 ಅಂಕ ಗಳಿಸಿ ದರು. ಗೀತಾ 950 ಅಂಕ ಸಂಗ್ರಹಿಸಿದರು.

ಫಲಿತಾಂಶ: ಪುರುಷರು: ಆಕಾಶ್ ಅಶೋಕ್ (1198)–1, ಪರ್ವೇಜ್ ಅಹಮದ್ (1090)–2, ಅನುರಾಗ್ ಪೋದ್ದಾರ್ (1057)–3, ಚಿರಾಗ್ ಕಾಶಿ (1043)–4

ಮಹಿಳೆಯರು: ಗೀತಾ ಪೂಜಾರಿ (950)–1,ಜೆ. ಪ್ರೇಮಲ್ (940)–2, ಹಿತಾಶಾ (934)–3, ಸ್ವಾತಿ ನಾಯಕ್ (962)–4.

ಆಟಗಾರರ ಸಂಭ್ರಮ...



ಭಾರತ ವಾಲಿಬಾಲ್ ತಂಡವು, ಉಜ್ಬೇಕಿಸ್ತಾನದ ರಾಜಧಾನಿ ತಾಷ್ಕೆಂಟ್‌ನಲ್ಲಿ ಇತ್ತೀಚೆಗೆ ನಡೆದ ಮಧ್ಯ ಏಷ್ಯಾ ವಾಲಿಬಾಲ್ ಟೂರ್ನಿಯಲ್ಲಿ 3–1 ಸೆಟ್‌ಗಳಿಂದ ಕಿರ್ಗಿಸ್ತಾನ ತಂಡವನ್ನು ಮಣಿಸಿ ಎರಡನೇ ರನ್ನರ್ಸ್ ಅಪ್ ಕಂಚಿನ ಪದಕ ಪಡೆದುಕೊಂಡಿತು

ಬರ್ಲಿನ್‌ಗೆ ತೆರಳಿದ ಜೂನಿಯರ್ ಪುರುಷರ ಹಾಕಿ ತಂಡ

ನವದೆಹಲಿ (ಪಿಟಿಐ): ಬರ್ಲಿನ್‌ನಲ್ಲಿ ಇದೇ 21ರಿಂದ ನಡೆಯುವ ಚತುಷ್ಕೋನ ಜೂನಿಯರ್ ಪುರುಷರ ಹಾಕಿ ಟೂರ್ನಿಯಲ್ಲಿ ಆಡಲು ಭಾರತ ಯುವ ಹಾಕಿ ತಂಡವು ಬುಧವಾರ ಪ್ರಯಾಣ ಬೆಳೆಸಿತು.

ನಾಯಕ ಅರಿಜಿತ್ ಸಿಂಗ್ ಹುಂಡಲ್ ಹಾಗೂ ಉಪನಾಯಕ ಅಮೀರ್ ಅಲಿ ಸೇರಿದಂತೆ ತಂಡದ ಎಲ್ಲ ಆಟಗಾರರು ಬೆಂಗಳೂರಿನಿಂದ ಬುಧವಾರ ಮುಂಜಾನೆ ಬರ್ಲಿನ್‌ಗೆ ಪ್ರಯಾಣ ಆರಂಭಿಸಿದರು.

'ಇನ್ನು ಕೆಲವೇ ತಿಂಗಳಲ್ಲಿ ಜೂನಿಯರ್ ವಿಶ್ವಕಪ್ ನಡೆಯಲಿದ್ದು, ತಂಡದ ಸಾಮರ್ಥ್ಯ ಪರೀಕ್ಷೆ, ಸಂಯೋಜನೆ ಕಂಡುಕೊಳ್ಳಲು ಮತ್ತು ಸುಧಾರಣೆ ಕಾಣಬೇಕಿರುವ ಕ್ಷೇತ್ರಗಳನ್ನು ತಿಳಿದುಕೊಳ್ಳಲು ಈ ಟೂರ್ನಿಯು ಉತ್ತಮ ಅವಕಾಶವಾಗಿದೆ' ಎಂದು ನಾಯಕ ಅರಿಜಿತ್ ಸಿಂಗ್ ಹುಂಡಲ್ ಪ್ರತಿಕ್ರಿಯಿಸಿದರು.

ಟೆಸ್ಟ್: ಬಾಂಗ್ಲಾ ಬೃಹತ್ ಮೊತ್ತ

ಗಾಲೆ (ಶ್ರೀಲಂಕಾ) (ಎಎಫ್‌ಪಿ): ಬಾಂಗ್ಲಾದೇಶ ತಂಡವು, ಮೊದಲ ಕ್ರಿಕೆಟ್ ಟೆಸ್ಟ್ ಪಂದ್ಯದ ಎರಡನೇ ದಿನವಾದ ಬುಧವಾರವೂ ಶ್ರೀಲಂಕಾ ವಿರುದ್ಧ ಮೇಲುಗೈ ಸಾಧಿಸಿತು. ದಿನದ ಕೊನೆಯ ಅವಧಿಯಲ್ಲಿ ಕೆಲವು ವಿಕೆಟ್‌ಗಳನ್ನು ಕಳೆದುಕೊಂಡರೂ 9 ವಿಕೆಟ್‌ಗೆ 484 ರನ್‌ಗಳ ದೊಡ್ಡ ಮೊತ್ತ ಕಲೆಹಾಕುವಲ್ಲಿ ಬಾಂಗ್ಲಾ ಯಶಸ್ವಿಯಾಯಿತು.

3 ವಿಕೆಟ್‌ಗೆ 292 ರನ್‌ಗಳೊಡನೆ ಎರಡನೇ ದಿನದಾಟ ಮುಂದುವರಿಸಿದ ಬಾಂಗ್ಲಾ ತಂಡ ಬ್ಯಾಟಿಂಗ್ ಪಿಚ್‌ನ ಲಾಭ ಪಡೆದು ಮೊತ್ತ ಬೆಳೆಸಿತು. ಮುಷ್ಫಿಕುರ್ ರಹೀಮ್ (163, 350ಎ, 4x9) ಮತ್ತು ನಜ್ಮುಲ್ ಹುಸೇನ್ ಶಾಂತೊ (148, 279ಎ, 4x15, 6x1) ಅವರ ನಡುವಣ ನಾಲ್ಕನೇ ವಿಕೆಟ್ ಜೊತೆಯಾಟ 264 ರನ್‌ಗಳಿಗೆ ಬೆಳೆಯಿತು.

ನಾಯಕ ಶಾಂತೊ 150 ರನ್‌ಗಳ ಮೈಲಿಗಲ್ಲು ಸಮೀಪಿಸುತ್ತಿದ್ದಾಗ ನಿರ್ಗಮಿಸಿದರು. ಅಸಿತ ಫೆರ್ನಾಂಡೊ ಬೌಲಿಂಗ್‌ನಲ್ಲಿ ಮಿಡ್‌ಆಫ್‌ನಲ್ಲಿ ಕ್ಯಾಚಿತ್ತರು. ಮುಷ್ಫಿಕುರ್ ಜೊತೆ ಸೇರಿಕೊಂಡ ವಿಕೆಟ್ ಕೀಪರ್ ಲಿಟ್ಟನ್ ದಾಸ್ ಬಿರುಸಿನ 90 ರನ್ (123ಎ) ಗಳಿಸಿದರು. ಇವರಿಬ್ಬರ ಜತೆಯಾಟದಲ್ಲಿ 149 ರನ್ ಸೇರಿದವು. ಲಂಕಾದ ಕಳಪೆ ಫೀಲ್ಡಿಂಗ್ ಕೂಡ ಅವರಿಗೆ ನೆರವಾಯಿತು. 9 ಗಂಟೆ ಕ್ರೀಸಿನಲ್ಲಿ ಕಳೆದ ಮುಷ್ಫಿಕುರ್, ಅಸಿತ ಬೌಲಿಂಗ್‌ನಲ್ಲಿ ಎಲ್‌ಬಿ ಬಲೆಗೆ ಬಿದ್ದರು.

ಲಂಚ್ ನಂತರ ಮಳೆಯಿಂದ ಎರಡು ಬಾರಿ ಆಟಕ್ಕೆ ಅಡ್ಡಿ ಆಯಿತು. ಎರಡನೇ ದಿನ 61 ಓವರುಗಳ ಆಟವಷ್ಟೇ ನಡೆಯಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಬಾಂಗ್ಲಾದೇಶ: 151 ಓವರುಗಳಲ್ಲಿ 9 ವಿಕೆಟ್‌ಗೆ 484 (ಮುಷ್ಫಿಕುರ್ ರಹಿಮ್ 163, ನಜ್ಮುಲ್ ಹುಸೇನ್ ಶಾಂತೊ 148, ಲಿಟ್ಟನ್ ದಾಸ್ 90; ಅಸಿತ ಫೆರ್ನಾಂಡೊ 80ಕ್ಕೆ3, ಮಿಲನ್ ರತ್ನಾಯಕೆ 38ಕ್ಕೆ3, ತಿರಿಂದು ರತ್ನಾಯಕೆ 196ಕ್ಕೆ3).

ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಜಯಿಸಿದ್ದ ತೆಂಬಾ ಬವುಮಾ ಪಡೆ

ತವರಿನಲ್ಲಿ ದಕ್ಷಿಣ ಆಫ್ರಿಕಾ ತಂಡಕ್ಕೆ ಸ್ವಾಗತ

ಜೊಹಾನೆಸ್‌ಬರ್ಗ್ (ಎಎಫ್‌ಪಿ): ಲಾರ್ಡ್ಸ್‌ನಲ್ಲಿ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆದ್ದುಕೊಂಡು ಬಂದ ದಕ್ಷಿಣ ಆಫ್ರಿಕಾ ತಂಡ ಬುಧವಾರ ಇಲ್ಲಿನ ವಿಮಾನ ನಿಲ್ದಾಣಕ್ಕೆ ಬಂದಿಳಿದಾಗ ಸಾವಿರಾರು ಮಂದಿ ಕ್ರಿಕೆಟ್ ಪ್ರೇಮಿಗಳು ಸ್ವಾಗತಿಸಿದರು.

ತೆಂಬಾ ಬವುಮಾ ನಾಯಕತ್ವದ ಹರಿಣಗಳ ತಂಡ 5 ವಿಕೆಟ್‌ಗಳಿಂದ ಆಸ್ಟ್ರೇಲಿಯಾ ತಂಡವನ್ನು ಸೋಲಿಸಿ 27 ವರ್ಷಗಳ ನಂತರ ಐಸಿಸಿ ಟ್ರೋಫಿಯೊಂದನ್ನು ಗೆದ್ದುಕೊಂಡಿತ್ತು.

ತಂಪಾದ ವಾತಾವರಣದಲ್ಲಿ ಬವುಮಾ ಮತ್ತು ಮುಖ್ಯ ಕೋಚ್ ಶುಕ್ರಿ ಕೊನ್ರಾಡ್ ಅವರು ಮೊದಲನೆಯವರಾಗಿ ವಿಮಾನ ನಿಲ್ದಾಣದಿಂದ ಹೊರಬಂದಾಗ ಬೆಂಬಲಿಗರು ಹರ್ಷೋದ್ಗಾರಗಳ ಸ್ವಾಗತ ನೀಡಿದರು. ಅವರಿಬ್ಬರೂ ಪ್ರಶಸ್ತಿಯಾದ ರಾಜದಂಡವನ್ನು ಹಿಡಿದಿದ್ದರು.

ಉಳಿದವರೂ ಹೂಗುಚ್ಛಗಳನ್ನು ಸ್ವೀಕರಿಸಿದರು. ಕೆಲವು ಆಟಗಾರರಿಗೆ ಕುಟುಂಬಸದಸ್ಯರು ಆಲಿಂಗನದ ಸ್ವಾಗತ ನೀಡಿದರು. ಆಟಗಾರರು ಈ ವೇಳೆ ಅಭಿಮಾನಿಗಳಿಗೆ ಹಸ್ತಾಕ್ಷರ ನೀಡಿದರು.

ತಂಡದ ಆಟಗಾರರು ನಂತರ ಜೊಹಾನೆಸ್‌ಬರ್ಗ್‌ನಲ್ಲಿರುವ ಕ್ರಿಕೆಟ್ ಸೌತ್ ಆಫ್ರಿಕಾ ಕೇಂದ್ರ ಕಚೇರಿಯಲ್ಲಿ ಮಾಧ್ಯಮಗೋಷ್ಠಿಯಲ್ಲಿ ಭಾಗಿಯಾದರು.

ಮರ್ಕರಂ, ರಬಾಡಗೆ ವಿಶ್ರಾಂತಿ

ಜಿಂಬಾಬ್ವೆ ವಿರುದ್ಧ ಎರಡು ಪಂದ್ಯಗಳ ಟೆಸ್ಟ್ ಸರಣಿಯನ್ನು ಆಡಲಿರುವ ದಕ್ಷಿಣ ಆಫ್ರಿಕಾ ತಂಡವನ್ನು ಬುಧವಾರ ಪ್ರಕಟಿಸಲಾಗಿದ್ದು, ಡಬ್ಲ್ಯುಟಿಸಿ ಗೆಲುವಿನಲ್ಲಿ ಪ್ರಮುಖ ಪಾತ್ರವಹಿಸಿದ ಆರಂಭ ಆಟಗಾರ ಏಡನ್ ಮರ್ಕರಂ ಮತ್ತು ವೇಗದ ಬೌಲರ್ ಕಗಿಸೊ ರಬಾಡ ಅವರಿಗೆ ವಿಶ್ರಾಂತಿ ನೀಡಲಾಗಿದೆ.

ತೆಂಬಾ ಬವುಮಾ ತಂಡವನ್ನು ಮುನ್ನಡೆಸಲಿದ್ದಾರೆ. ಮೊದಲ ಟೆಸ್ಟ್ ಪಂದ್ಯ ಜೂನ್ 28ರಿಂದ ಬುಲಾವಯೊದಲ್ಲಿ ನಡೆಯಲಿದೆ.

ಐದು ಮಂದಿ ಹೊಸಬರು ಅವಕಾಶ ಪಡೆದಿದ್ದಾರೆ. ಇವರಲ್ಲಿ ದಕ್ಷಿಣ ಆಫ್ರಿಕಾ ಎ ತಂಡದಲ್ಲಿ ಆಡಿದ್ದ ಲುಹಾನ್ ಡ್ರೆ ಪ್ರಿಟೋರಿಯಸ್ ಮತ್ತು ಲೆಸೆಗೊ ಸೆನೊಕ್ವಾನೆ ಒಳಗೊಂಡಿದ್ದಾರೆ.



ಲಂಡನ್‌ನ ಲಾರ್ಡ್ಸ್‌ನಲ್ಲಿ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಗೆದ್ದು ಬುಧವಾರ ತವರಿಗೆ ಮರಳಿದ ದಕ್ಷಿಣ ಆಫ್ರಿಕಾ ಆಟಗಾರರಿಗೆ ಭವ್ಯ ಸ್ವಾಗತ ನೀಡಲಾಯಿತು. ಈ ವೇಳೆ ನಾಯಕ ತೆಂಬಾ ಬವುಮಾ ಟ್ರೋಫಿಯಾಗಿ ನೀಡುವ ರಾಜದಂಡವನ್ನು ಹಿಡಿದು ಸಂಭ್ರಮಿಸಿದರು. ಮುಖ್ಯ ಕೋಚ್ ಶುಕ್ರಿ ಕೊನ್ರಾಡ್ ಅವರೂ ಹಾಜರಿದ್ದರು ಎಪಿ/ ಪಿಟಿಐ ಚಿತ್ರ